ಶನಿವಾರ, ಮಾರ್ಚ್ 23, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 83 | ಪುಟ 24

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,831 ▲	22,096 ▲	₹68,450 (ಬೆಂಗಳೂರು) ▼	₹76,000 (ಬೆಂಗಳೂರು) ▼	83.61 ▼

ಸೋಮವಾರದಿಂದ ಆರಂಭ, ಎಸ್ಎಸ್ಎಲ್‌ಸಿ ಜತೆಗೆ ಪರೀಕ್ಷೆ ನಡೆಸುವ ಹೊಣೆ

ಬೋರ್ಡ್ ಪರೀಕ್ಷೆಗೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂ ಕೋರ್ಟ್ ಆದೇಶದಂತೆ ಸ್ಥಗಿತಗೊಂಡಿದ್ದ 5, 8 ಹಾಗೂ 9ನೇ ತರಗತಿಗಳಿಗೆ ಬೋರ್ಡ್‌ಮಟ್ಟದ ಮೌಲ್ಯಾಂಕನ ಪರೀಕ್ಷೆ ನಡೆಸಲು ಹೈಕೋರ್ಟ್ ವಿಭಾಗೀಯ ಪೀಠ ಶುಕ್ರವಾರ ಅಸ್ತು ಎಂದಿದೆ. ಮಾರ್ಚ್ 25ರಿಂದಲೇ ಪರೀಕ್ಷೆಗಳು ಮತ್ತೆ ಆರಂಭವಾಗಲಿವೆ.

ನ್ಯಾಯಪೀಠದ ಆದೇಶ ಹೊರಬೀಳುತ್ತಿದ್ದಂತೆ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಪರೀಕ್ಷೆಗಳ ವೇಳಾ ಪಟ್ಟಿಯನ್ನು ಪ್ರಕಟಿಸಿದೆ.

ಇದೇ ಮಾರ್ಚ್ 25ರಿಂದ ಎಸ್ಎಸ್ಎಲ್‌ಸಿ ವಾರ್ಷಿಕ ಪರೀಕ್ಷೆಗಳು ಆರಂಭವಾಗುತ್ತಿವೆ. ಅದರ ನಡುವೆಯೇ ನಾಲ್ಕು ದಿನಗಳಲ್ಲಿ ಉಳಿದ ವಿಷಯಗಳ ಪರೀಕ್ಷೆ ಪೂರ್ಣಗೊಳಿಸುವ ಹೊಣೆಗಾರಿಕೆಯನ್ನು ಶಿಕ್ಷಕರು ನಿಭಾಯಿಸಬೇಕಿದೆ. ಚುನಾವಣಾ ಕಾರ್ಯಗಳಿಗೂ ಹಲವು ಶಿಕ್ಷಕರು ನಿಯೋಜನೆಗೊಂಡಿದ್ದು, ಇರುವ ಸೀಮಿತ ಸಂಖ್ಯೆಯ ಶಿಕ್ಷಕರೇ ಪರೀಕ್ಷೆಗಳನ್ನು ನಡೆಸುವ ಜವಾಬ್ದಾರಿ ಹೊರಬೇಕಿದೆ.

ಬೋರ್ಡ್ ಪರೀಕ್ಷೆ ವಿರೋಧಿಸಿ ಕೆಲ ಖಾಸಗಿ ಶಾಲಾ ಸಂಘಟನೆಗಳು ಹೈಕೋರ್ಟ್ ಮೊರೆ ಹೋಗಿದ್ದವು. ಸಂಘಟನೆಗಳ ಮನವಿ ಪುರಸ್ಕರಿಸಿದ್ದ ಏಕ ಸದಸ್ಯ ಪೀಠ ಬೋರ್ಡ್ ಪರೀಕ್ಷೆ ರದ್ದುಪಡಿಸಿತ್ತು. ಆ ಆದೇಶಕ್ಕೆ ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ತಡೆ ನೀಡಿತ್ತು. ನಂತರ ಸಂಘಟನೆಗಳು 'ಸುಪ್ರೀಂ' ಮೆಟ್ಟಿಲೇರಿದ್ದವು.

ಇದೇ ಮಾ. 11ರಿಂದ ಆರಂಭವಾಗಿದ್ದ ಬೋರ್ಡ್ ಪರೀಕ್ಷೆಗಳನ್ನು ಸುಪ್ರೀಂ ಕೋರ್ಟ್ ಆದೇಶದಂತೆ ಮಾರ್ಚ್ 13ರಂದು ಸ್ಥಗಿತಗೊಳಿಸಲಾಗಿತ್ತು.

6ನೇ ಪುಟ ನೋಡಿ

ಪರೀಕ್ಷೆ ತಡೆಗೆ ನ್ಯಾಯಪೀಠ ನಕಾರ

ಬೋರ್ಡ್ ಪರೀಕ್ಷೆ ನಡೆಸಲು ಅವಕಾಶ ಕಲ್ಪಿಸಿ ಆದೇಶ ಹೊರಡಿಸಿರುವ ಹೈಕೋರ್ಟ್ ವಿಭಾಗೀಯ ಪೀಠ, ಪರೀಕ್ಷೆಗೆ ತಡೆ ನೀಡಲು ನಿರಾಕರಿಸಿತು.

ಪರೀಕ್ಷೆಗೆ ಸಂಬಂಧಿಸಿ ಏಕಸದಸ್ಯ ಪೀಠದ ಆದೇಶ ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಕೆ.ಸೋಮಶೇಖರ್ ಮತ್ತು ನ್ಯಾಯಮೂರ್ತಿ ಕೆ.ರಾಜೇಶ್ ರೈ ಅವರಿದ್ದ ವಿಭಾಗೀಯ ಪೀಠ ಶುಕ್ರವಾರ ಪುರಸ್ಕರಿಸಿತು.

'ಪರೀಕ್ಷೆ ನಡೆಸಲು ಸರ್ಕಾರ ಹೊರಡಿಸಿರುವ ಎರಡು ಪ್ರತ್ಯೇಕ ಅಧಿಸೂಚನೆಗಳು ಕರ್ನಾಟಕ ಶಿಕ್ಷಣ ಹಕ್ಕು ಕಾಯ್ದೆಯಡಿ ಕಾನೂನು ಬದ್ಧವಾಗಿವೆ. ಹಾಗಾಗಿ, ಅಧಿಸೂಚನೆಗಳನ್ನು ರದ್ದುಪಡಿಸಿ ಏಕಸದಸ್ಯ ಪೀಠ 2024ರ ಮಾರ್ಚ್ 6ರಂದು ಹೊರಡಿಸಿದ ಆದೇಶವನ್ನು ರದ್ದುಪಡಿಸಲಾಗುತ್ತಿದೆ' ಎಂದು ನ್ಯಾಯಪೀಠ ತೀರ್ಪಿನಲ್ಲಿ ಸ್ಪಷ್ಟಪಡಿಸಿದೆ. 'ಸಾಕಷ್ಟು ಮಹತ್ವ ಹೊಂದಿರುವ ಕಾನೂನಾತ್ಮಕ ವಿಚಾರಗಳು ಈ ಪ್ರಕರಣದಲ್ಲಿ ಒಳಗೊಂಡಿರುವ ಕಾರಣ, ವಿಭಾಗೀಯ ನ್ಯಾಯಪೀಠದ ಈ ತೀರ್ಪು ಪ್ರಶ್ನಿಸಿ ಸುಪ್ರಿಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗುವುದು. ಅಲ್ಲಿಯವರೆಗೆ ತೀರ್ಪಿಗೆ ತಡೆ ನೀಡಬೇಕು' ಎಂದು 'ಆರ್‌ಟಿಇ ಮಕ್ಕಳ ಮತ್ತು ಪೋಷಕರ ಸಂಘ', 'ನೋಂದಾಯಿತ ಅನುದಾನ ರಹಿತ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಸಂಘ' (ರುಪ್ಸ) ಹಾಗೂ 'ಅನುದಾನ ರಹಿತ ಮಾನ್ಯತೆ ಪಡೆದ ಶಾಲೆಗಳ ಸಂಘಟನೆ' (ಅವರ್ ಸ್ಕೂಲ್ಸ್) ಪರ ವಕೀಲರು ಕೋರಿದರು.

ಆದರೆ, ಈ ಮನವಿಯನ್ನು ತಿರಸ್ಕರಿಸಿದ ನ್ಯಾಯಪೀಠ, 'ಸುಪ್ರೀಂ ಕೋರ್ಟ್‌ನಲ್ಲಿಯೇ ಈ ತೀರ್ಪಿಗೆ ತಡೆಯಾಜ್ಞೆ ಕೋರಬಹುದು' ಎಂದು ಸೂಚಿಸಿತು.

ಎಸ್ಎಸ್ಎಲ್‌ಸಿ ಪರೀಕ್ಷೆ 25ರಿಂದ

ಎಸ್ಎಸ್ಎಲ್‌ಸಿ ಪರೀಕ್ಷೆಗಳು ಮಾರ್ಚ್ 25ರಿಂದ ಆರಂಭವಾಗಲಿವೆ. ಮಾರ್ಚ್ 25–ಪ್ರಥಮ ಭಾಷೆಗಳಾದ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್ (ಎನ್‌ಸಿಇ ಆರ್‌ಟಿ), ಸಂಸ್ಕೃತ, 27–ಸಮಾಜ ವಿಜ್ಞಾನ, 30–ವಿಜ್ಞಾನ, ರಾಜ್ಯಶಾಸ್ತ್ರ, ಹಿಂದೂಸ್ತಾನಿ, ಕರ್ನಾಟಕ ಸಂಗೀತ, ಏಪ್ರಿಲ್–2 ಗಣಿತ, 3–ಅರ್ಥಶಾಸ್ತ್ರ, ಎಂಜಿನಿಯರಿಂಗ್ ವಿಷಯಗಳು, 4–ತೃತೀಯ ಭಾಷೆಗಳಾದ ಹಿಂದಿ, ಕನ್ನಡ, ಇಂಗ್ಲಿಷ್, ಅರೇಬಿಕ್, ಪರ್ಷಿಯನ್, ಉರ್ದು, ಸಂಸ್ಕೃತ, ಕೊಂಕಣಿ, ತುಳು, ಎನ್‌ಎಸ್‌ಕ್ಯೂಎಫ್ ವಿಷಯಗಳು, 6–ದ್ವಿತೀಯ ಭಾಷೆಗಳಾದ ಇಂಗ್ಲಿಷ್, ಕನ್ನಡ.

ಚಿನಕುರಳಿ

ಪ್ರಕಾಶ್ ಶೆಟ್ಟಿ





ಐಪಿಎಲ್ ಹಬ್ಬ ಚೆನ್ನೈನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಶುಕ್ರವಾರ ಇಂಡಿಯನ್ ಪ್ರೀಮಿಯರ್ ಲೀಗ್ 17ನೇ ಆವೃತ್ತಿಯ ಉದ್ಘಾಟನಾ ಪಂದ್ಯಕ್ಕೆ ಮೊದಲು ಬಾಲಿವುಡ್ ನಟರಾದ ಅಕ್ಷಯ್ ಕುಮಾರ್ ಮತ್ತು ಟೈಗರ್ ಶ್ರಾಫ್ ಅವರು ಹಾಡಿಗೆ ಹೆಜ್ಜೆಹಾಕಿದರು -ಎಎಫ್‌ಪಿ ಚಿತ್ರ

ಕೇಜ್ರಿವಾಲ್‌ಗೆ 28ರವರೆಗೆ ಕಸ್ಟಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಬಂಧನಕ್ಕೆ ಒಳಗಾಗಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ವಿಶೇಷ ನ್ಯಾಯಾಲಯವು ಇದೇ 28ರವರೆಗೆ ಜಾರಿ ನಿರ್ದೇಶನಾಲಯದ (ಇ.ಡಿ) ವಶಕ್ಕೆ ನೀಡಿದೆ.

ಇ.ಡಿ. ಹಾಗೂ ಕೇಜ್ರಿವಾಲ್ ಪರ ವಕೀಲರ ವಾದವನ್ನು ಆಲಿಸಿದ ವಿಶೇಷ ನ್ಯಾಯಾಧೀಶರಾದ ಕಾವೇರಿ ಬವೇಜಾ ಅವರು ಈ ಆದೇಶ ನೀಡಿದರು.

ಇ.ಡಿ. ಕ್ರಮವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ಕೇಜ್ರಿವಾಲ್ ಶುಕ್ರವಾರ ಬೆಳಿಗ್ಗೆ ಹಿಂಪಡೆದರು. ಮಧ್ಯಾಹ್ನ 2 ಗಂಟೆಗೆ ಕೇಜ್ರಿವಾಲ್ ಅವರನ್ನು ರೋಸ್ ಅವೆನ್ಯೂದಲ್ಲಿರುವ ವಿಚಾರಣಾ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. 10 ದಿನ ಕಸ್ಟಡಿಗೆ ನೀಡುವಂತೆ ಇ.ಡಿ. ವಕೀಲರು ಕೋರಿದರು. 'ಅಬಕಾರಿ ನೀತಿ ಹಗರಣದಲ್ಲಿ ಕೇಜ್ರಿವಾಲ್ ಪ್ರಮುಖ ಫಲಾನುಭವಿಯಾಗಿದ್ದು, ಹಲವು ಕೋಟಿ ರೂಪಾಯಿ ಲಂಚ ಪಡೆದಿದ್ದಾರೆ' ಎಂದು ಇ.ಡಿ. ಪರ ವಕೀಲರು ಆರೋಪಿಸಿದರು.

> ಜೈಲಿನಲ್ಲಿರಲಿ ಅಥವಾ ಜೈಲಿನ ಹೊರಗಿರಲಿ ನನ್ನ ಜೀವನವನ್ನು ದೇಶಕ್ಕೆ ಮುಡಿಪಾಗಿಟ್ಟಿದ್ದೇನೆ
> **ಅರವಿಂದ ಕೇಜ್ರಿವಾಲ್,** ದೆಹಲಿ ಸಿ.ಎಂ

ಇದೊಂದು ರಾಜಕೀಯ ಪ್ರೇರಿತ ಬಂಧನ ಎಂದು ಕೇಜ್ರಿವಾಲ್ ಪರ ವಕೀಲರು ವಾದಿಸಿದರು.

ಬಂಧನಕ್ಕೆ ವಿರೋಧ ಪಕ್ಷಗಳು ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದು, ಇದು ಪ್ರಜಾಪ್ರಭುತ್ವದ ಕಗ್ಗೊಲೆ ಎಂದು ಹೇಳಿವೆ.

ಮುಖ್ಯಮಂತ್ರಿ ಸ್ಥಾನಕ್ಕೆ ಕೇಜ್ರಿವಾಲ್ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಪಟ್ಟು ಹಿಡಿದಿದೆ. ದೇಶದ ವಿವಿಧ ಭಾಗಗಳಲ್ಲಿ ಪ್ರತಿಭಟನೆ ನಡೆಸಿದ ಎಎಪಿ ಹಾಗೂ ವಿರೋಧ ಪಕ್ಷಗಳು, 'ಇದೊಂದು ರಾಜಕೀಯ ಪ್ರೇರಿತ ಕ್ರಮ' ಎಂದು ಆರೋಪಿಸಿವೆ.

ಇನ್ನಷ್ಟು ಸುದ್ದಿಗಳು 07

ಏ.6ರಿಂದ ಯುಗಾದಿ ಮಹೋತ್ಸವ

ಬೆಂಗಳೂರು: ಆಂಧ್ರಪ್ರದೇಶದ ಧಾರ್ಮಿಕದತ್ತಿ ಇಲಾಖೆ ಏ.6ರಿಂದ 10ರ ವರೆಗೆ ಶ್ರೀಶೈಲದ ಮಲ್ಲಿಕಾರ್ಜುನ ದೇಗುಲದಲ್ಲಿ ಯುಗಾದಿ ಮಹೋತ್ಸವ ಹಮ್ಮಿಕೊಂಡಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಡಿ. ಪೆದ್ದಿರಾಜು ಅವರು, 'ಒಟ್ಟು ಐದು ದಿನ ಉತ್ಸವ ನಡೆಯಲಿದೆ. ಆರು ಲಕ್ಷ ಮಂದಿ ಭಾಗವಹಿಸುವ ನಿರೀಕ್ಷೆಯಿದೆ. ಉತ್ಸವದ ಅವಧಿಯಲ್ಲಿ ಮಲ್ಲಿಕಾರ್ಜುನ ಸ್ವಾಮಿಯ ಅಲಂಕಾರಿಕ ದರ್ಶನಕ್ಕೆ ಮಾತ್ರ ಅವಕಾಶ ಒದಗಿಸಲಾಗುವುದು. ಸ್ಪರ್ಶ ದರ್ಶನಕ್ಕೆ ಅವಕಾಶ ನೀಡುವುದಿಲ್ಲ. ಹಿಂದಿನ ಹತ್ತು ದಿನಗಳು ನಿರ್ದಿಷ್ಟ ಸಮಯದಲ್ಲಿ ಸ್ಪರ್ಶ ದರ್ಶನ ಮಾಡಬಹುದಾಗಿದೆ. ಈ ಸ್ಪರ್ಶ ದರ್ಶನಕ್ಕೆ ₹500 ನಿಗದಿಪಡಿಸಲಾಗಿದೆ' ಎಂದು ಹೇಳಿದರು.

ನೀರು ಬಳಕೆ ಜಾಗೃತಿಗೆ ಸ್ಪರ್ಧೆ

ಜಲಕ್ಷಾಮದ ವಿರುದ್ಧ ತಂತ್ರಜ್ಞಾನದ ಅಸ್ತ್ರ • ಪಂಚಸೂತ್ರಕ್ಕೆ 'ಗ್ರೀನ್ ಸ್ಟಾರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಜಲದಿನವನ್ನು ವಿನೂತನವಾಗಿ ಆಚರಿಸುವ ಉದ್ದೇಶದಿಂದ, ಬೆಂಗಳೂರು ಜಲಮಂಡಳಿ 'ಗ್ರೀನ್ ಸ್ಟಾರ್ ಚಾಲೆಂಜ್' ಸ್ಪರ್ಧೆ ಆಯೋಜಿಸಿದ್ದು, 30 ದಿನಗಳಲ್ಲಿ ಪಂಚಸೂತ್ರ ಅಳವಡಿಸಿಕೊಂಡ ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳಿಗೆ 'ಗ್ರೀನ್ ಸ್ಟಾರ್' ನೀಡಲಾಗುವುದು ಎಂದು ಜಲಮಂಡಳಿ ಅಧ್ಯಕ್ಷ ಡಾ. ರಾಮಪ್ರಸಾತ್ ಮನೋಹರ್ ತಿಳಿಸಿದರು.

ಶಾಂಗ್ರಿಲಾ ಹೋಟೆಲ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬೆಂಗಳೂರು ಹೋಟೆಲ್ ಮಾಲೀಕರ ಸಂಘದ ಪದಾಧಿಕಾರಿಗಳ ಸಮ್ಮುಖದಲ್ಲಿ ನೀರು ಉಳಿತಾಯ ಮಾಡುವ ಏರಿಯೇಟರ್‌ಗಳನ್ನು ಅಳವಡಿಸುವ ಮೂಲಕ 'ಗ್ರೀನ್ ಸ್ಟಾರ್ ಚಾಲೆಂಜ್'ಗೆ ಚಾಲನೆ ನೀಡಿದರು.

ಪಂಚ ಸೂತ್ರಗಳು: ನೀರಿನ ಉಳಿತಾಯ ಮಾಡುವಂತಹ ತಂತ್ರಜ್ಞಾನ ಅಳವಡಿಕೆ, ಸಂಸ್ಕರಿಸಿದ ನೀರಿನ ಬಳಕೆ ಹೆಚ್ಚಿಸಿಕೊಳ್ಳುವುದು, ಕೊಳವೆಬಾವಿಗಳ ಬಳಕೆಯಲ್ಲಿ ತಂತ್ರಜ್ಞಾನದ ಅಳವಡಿಕೆ, ಮಳೆ ನೀರು ಇಂಗುಗುಂಡಿಗಳನ್ನು ನಿರ್ಮಿಸುವುದು– ಈ ಎಲ್ಲ ಹೊಸ ಅನುಷ್ಠಾನಗಳ ಬಗ್ಗೆ ಗ್ರಾಹಕರು ಹಾಗೂ ಸಿಬ್ಬಂದಿಗೆ ಮಾಹಿತಿಯನ್ನು ಕೊಡುವ ಮೂಲಕ ನೀರಿನ ಉಳಿತಾಯದ ಮಹತ್ವ ಸಾರುವುದು. ಈ ಪಂಚಸೂತ್ರಗಳನ್ನು ಅಳವಡಿಸಿಕೊಂಡರೆ 'ಫೈವ್ ಸ್ಟಾರ್ ಗ್ರೀನ್ ರೇಟಿಂಗ್' ನೀಡಲಾಗುತ್ತದೆ ಎಂದು ರಾಮಪ್ರಸಾದ್ ಘೋಷಿಸಿದರು.

ತಂತ್ರಜ್ಞಾನದ ಅಸ್ತ್ರ: ಬೆಂಗಳೂರು ಹಾಗೂ ನಾಡಿನ ಎಲ್ಲೆಡೆ ಎದುರಾಗಿರುವ ಜಲಕ್ಷಾಮದ ವಿರುದ್ಧ ಹೊಸ ತಂತ್ರಜ್ಞಾನದ ಅಸ್ತ್ರ ಬಳಸುವಂತೆ ಯುವ ವಿಜ್ಞಾನಿಗಳಿಗೆ ಕರೆ ನೀಡಿದರು.

ಭಾರತೀಯ ವಿಜ್ಞಾನ ಸಂಸ್ಥೆ ಆವರಣದಲ್ಲಿರುವ ಸತೀಶ್ ಧವನ್ ಸಭಾಂಗಣದಲ್ಲಿ 'ಬೆಂಗಳೂರು ಎಕೊ ಸಮಿಟ್– 2024' ಉದ್ಘಾಟಿಸಿ ಅವರು ಮಾತನಾಡಿದರು.

'ಯಾವುದೇ ಸಮಸ್ಯೆಯನ್ನು ವೈಜ್ಞಾನಿಕ ಹಾಗೂ ತಾಂತ್ರಿಕವಾಗಿ ಬಗೆಹರಿಸಲು ಸಾಧ್ಯ ಎನ್ನುವ ಆಲೋಚನೆಗೆ ಪುಷ್ಟಿ ನೀಡಿದ್ದು ಈ ಸಂಸ್ಥೆ. ಜನರು ತಮ್ಮ ದೈನಂದಿನ ನೀರಿನ ಬಳಕೆಯಲ್ಲಿ ಆಗಬಹುದಾದ ಅಪವ್ಯಯವನ್ನು ತಪ್ಪಿಸಬೇಕು. ಅಲ್ಲದೆ ಹೊಸ ತಂತ್ರಜ್ಞಾನಗಳ ಬಳಕೆಯ ಮೂಲಕ ಜಲಕ್ಷಾಮವನ್ನು ಪರಿಣಾಮಕಾರಿಯಾಗಿ ಎದುರಿಸಲು ಸಜ್ಜಾಗಬೇಕು' ಎಂದರು.

'ನೀರು ಸೇರಿದಂತೆ ನೈಸರ್ಗಿಕ ಸಂಪನ್ಮೂಲಗಳ ಬಳಕೆಯನ್ನು ಮಿತಗೊಳಿಸುವ ಮೂಲಕ ಮುಂದಿನ ಪೀಳಿಗೆಗೂ ಅವುಗಳು ಲಭ್ಯವಾಗುವ ನಿಟ್ಟಿನಲ್ಲಿ ಜನರು ಜಾಗೃತಗೊಳ್ಳಬೇಕು. ನಗರದಲ್ಲಿ ಅಂತರ್ಜಲದ ಮೇಲಿನ ಅತಿಯಾದ ಅವಲಂಬನೆಯಿಂದಾಗಿ ಅಂತರ್ಜಲ ಮಟ್ಟ ಕುಸಿಯುತ್ತಲೇ ಸಾಗಿದೆ. ನೀರಿನ ಮರುಪೂರಣ ಹೆಚ್ಚಿಸುವಲ್ಲಿ ಯುವ ವಿಜ್ಞಾನಿಗಳು ಹೊಸ ತಂತ್ರಜ್ಞಾನ ಆವಿಷ್ಕರಿಸಬೇಕು' ಎಂದು ಹೇಳಿದರು.



ಶಾಂಗ್ರಿಲಾ ಹೋಟೆಲ್‌ನಲ್ಲಿ ನೀರು ಉಳಿತಾಯ ಮಾಡುವ ಏರಿಯೆಟರ್ ಅಳವಡಿಸಿ ಜಲಮಂಡಳಿ ಅಧ್ಯಕ್ಷ ಡಾ. ರಾಮಪ್ರಸಾತ್ ಮನೋಹರ್ ಅವರು 'ಗ್ರೀನ್ ಸ್ಟಾರ್ ಚಾಲೆಂಜ್' ಸ್ಪರ್ಧೆಗೆ ಚಾಲನೆ ನೀಡಿದರು

'ರೈನ್ ಡ್ಯಾನ್ಸ್': ಹೋಟೆಲ್‌ಗೆ ನೋಟಿಸ್

ಹೋಳಿ ಆಚರಣೆಗೆ ರೈನ್ ಡ್ಯಾನ್ಸ್ ಆಯೋಜಿಸುವುದಾಗಿ ಪ್ರಕಟಿಸಿದ್ದ ಮೈಸೂರು ರಸ್ತೆಯ ಜೆ.ಕೆ. ಗ್ರ್ಯಾಂಡ್ ಅರೇನಾ ಹಾಗೂ ಜಯಮಹಲ್ ಪ್ಯಾಲೆಸ್ ಹೋಟೆಲ್‌ಗಳಿಗೆ ಜಲಮಂಡಳಿ ಅಧಿಕಾರಿಗಳು ಭೇಟಿ ನೀಡಿ 'ರೈನ್ ಡ್ಯಾನ್ಸ್'ಗೆ ಕಾವೇರಿ ಹಾಗೂ ಕೊಳವೆಬಾವಿ ನೀರು ಬಳಸದಂತೆ ನೋಟಿಸ್ ನೀಡಿದರು.

'ಸಾಂಸ್ಕೃತಿಕ ಚಟುವಟಿಕೆ ಆಚರಣೆಗೆ ಯಾವುದೇ ನಿಷೇಧ ಇಲ್ಲ, ಆದರೆ ವಾಣಿಜ್ಯ ಉದ್ದೇಶಕ್ಕಾಗಿ ರೈನ್ ಡ್ಯಾನ್ಸ್ ಹಾಗೂ ಪೂಲ್ ಡ್ಯಾನ್ಸ್ ಆಯೋಜಿಸುವುದರಿಂದ ನೀರು ಪೋಲಾಗುತ್ತದೆ. ಇದನ್ನು ತಡೆಯಬೇಕು' ಎಂದು ಹೋಟೆಲ್ ಸಿಬ್ಬಂದಿಗೆ ಹೇಳಿದರು.

'ಇದಕ್ಕೆ ಪೂರಕವಾಗಿ ಸ್ಪಂದಿಸಿದ ಹೋಟೆಲ್ ಸಿಬ್ಬಂದಿ, ಮಂಡಳಿಯ ನಿರ್ದೇಶನದಂತೆ 'ರೈನ್ ಡ್ಯಾನ್ಸ್ ಹಾಗೂ ಪೂಲ್ ಡ್ಯಾನ್ಸ್ ಮಾಡುವುದಿಲ್ಲ' ಎಂದು ಹೇಳಿದರು' ಎಂದು ಜಲಮಂಡಳಿ ಪ್ರಕಟಣೆ ತಿಳಿಸಿದೆ.

ನೀರಿನ ಸಮಸ್ಯೆ ಇಳಿಕೆ

'ನಗರದ ಹೃದಯ ಭಾಗದಲ್ಲಿ ಹಾಗೂ ಪ್ರಮುಖ ಪ್ರದೇಶಗಳಲ್ಲಿದ್ದ ನೀರಿನ ಸಮಸ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಮೊದಲ ಹಂತದಲ್ಲಿ ಪ್ರತಿನಿತ್ಯ 300ಕ್ಕೂ ಹೆಚ್ಚು ದೂರುಗಳು ದಾಖಲಾಗುತ್ತಿದ್ದವು. ಈಗ ಅವುಗಳ ಸಂಖ್ಯೆ 100ಕ್ಕೆ ಇಳಿದಿದೆ. ಮುಂದಿನ ದಿನಗಳಲ್ಲಿ ಸಮರ್ಪಕ ನೀರು ಸರಬರಾಜು ಮಾಡುವ ಮೂಲಕ ದೂರು ಮತ್ತು ಸಮಸ್ಯೆಗಳ ಪ್ರಮಾಣವನ್ನು ಇನ್ನಷ್ಟು ಕಡಿಮೆ ಮಾಡಲಾಗುತ್ತದೆ' ಎಂದು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಹೇಳಿದರು.

ಸುದ್ದಿ 2 ನಿಮಿಷ

ಭ್ರೂಣ ಹತ್ಯೆ, ಗರ್ಭಪಾತ ತನಿಖಾ ತಂಡ ರಚನೆ

ಬೆಂಗಳೂರು: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಹಾಗೂ ನೆಲಮಂಗಲದಲ್ಲಿ ಭ್ರೂಣ ಹತ್ಯೆ, ಕಾನೂನುಬಾಹಿರ ಗರ್ಭಪಾತ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆಯು ತನಿಖಾ ತಂಡವನ್ನು ರಚಿಸಿದೆ.

'ಇಲಾಖೆಯ ಯೋಜನಾ ನಿರ್ದೇಶಕರ (ಆರ್.ಸಿ.ಎಚ್) ನೇತೃತ್ವದ ತಂಡದಲ್ಲಿ, ವೈದ್ಯಕೀಯ ವಿಭಾಗದ ಉಪನಿರ್ದೇಶಕರು ಹಾಗೂ ಕುಟುಂಬ ಕಲ್ಯಾಣ ವಿಭಾಗದ ಉಪ ನಿರ್ದೇಶಕರು ಇರಲಿದ್ದಾರೆ. ಈ ತಂಡವು ಆಸ್ಪತ್ರೆಗಳು ಹಾಗೂ ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಬೇಕು. ವಾಸ್ತವಾಂಶದ ಬಗ್ಗೆ ತನಿಖೆ ನಡೆಸಿ, ಸೂಕ್ತ ದಾಖಲೆಗಳೊಂದಿಗೆ ವಿವರವಾದ ವರದಿಯನ್ನು ಇದೇ 26ರಂದು ಸಲ್ಲಿಸಬೇಕು ಎಂದು ಇಲಾಖೆ ಆಯುಕ್ತರಾದ ಡಿ. ರಂದೀಪ್ ಸೂಚಿಸಿದ್ದಾರೆ.



ಭ್ರೂಣ ಹತ್ಯೆ ಪ್ರಕರಣ ವರದಿ ಆಡಳಿತಾತ್ಮಕ ಲೋಪ: ಡಿಎಚ್‌ಒ

ದೇವನಹಳ್ಳಿ: ಜಿಲ್ಲೆಯ ನೆಲಮಂಗಲ, ಹೊಸಕೋಟೆಯಲ್ಲಿ ಭ್ರೂಣ ಹತ್ಯೆ, ಗರ್ಭಪಾತ ಪ್ರಕರಣದ ವರದಿ ಸಲ್ಲಿಕೆ ವಿಚಾರವಾಗಿ ಆರೋಗ್ಯ ಇಲಾಖೆ ಅಧಿಕಾರಿಗಳ ಮುಸುಕಿನ ಗುದ್ದಾಟ ಮುಂದುವರಿದಿದೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುನೀಲ್ ಕುಮಾರ್ ಶುಕ್ರವಾರ ಸುದ್ದಿಗೋಷ್ಠಿ ನಡೆಸಿ, 'ನೆಲಮಂಗಲದ ಆಸರೆ ಆಸ್ಪತ್ರೆ, ಹೊಸಕೋಟೆ ಎಸ್‌ಪಿಜೆ ಮತ್ತು ಓವಂ ಆಸ್ಪತ್ರೆ ಪ್ರಕರಣದಲ್ಲಿ ಆಡಳಿತಾತ್ಮಕ ಲೋಪ ಕಂಡು ಬಂದಿರುವುದು ಸತ್ಯ' ಎಂದು ಸ್ಪಷ್ಟಪಡಿಸಿದರು.

ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ.ಎಸ್.ಆರ್.ಮಂಜುನಾಥ್, ಗರ್ಭಧಾರಣೆ ಪೂರ್ವ ಮತ್ತು ಪ್ರಸವ ಪೂರ್ವ ಲಿಂಗ ಪತ್ತೆ ನಿಷೇಧ ಕಾಯ್ದೆ, ಗರ್ಭಾವಸ್ಥೆಯ ವೈದ್ಯಕೀಯ ಕಾಯ್ದೆ (ಎಂಟಿಪಿ) ಅನುಷ್ಠಾನದಲ್ಲಿ ಎಡವಿದ್ದಾರೆ ಎಂದು ದೂರಿದರು.

ಕಾಯ್ದೆ ಅನುಷ್ಠಾನಕ್ಕೆ ಜಿಲ್ಲಾಮಟ್ಟದಲ್ಲಿ ರಚನೆಯಾಗಿರುವ ಸಮಿತಿ ಸದಸ್ಯರ ಉಪಸ್ಥಿತಿಯಲ್ಲಿ ದಾಳಿ ನಡೆಸಿ ಪ್ರಕರಣ ದಾಖಲು ಮಾಡಬೇಕು. ಅದನ್ನು ಸಕ್ಷಮ ಪ್ರಾಧಿಕಾರ ಅಧ್ಯಕ್ಷ, ಜಿಲ್ಲಾಧಿಕಾರಿಗೆ ಸಲ್ಲಿಸಬೇಕು. ಇದ್ಯಾವುದನ್ನು ಡಾ.ಎಸ್.ಆರ್.ಮಂಜುನಾಥ್ ಪಾಲಿಸಿಲ್ಲ ಎಂದು ಆರೋಪಿಸಿದರು.

ಜಿಲ್ಲಾ ಆರೋಗ್ಯ ಇಲಾಖೆಯಲ್ಲಿ ನಡೆಯುತ್ತಿರುವ ವಿದ್ಯಮಾನ ಕುರಿತು ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಎನ್.ಶಿವಶಂಕರ್, 'ಡಿಎಚ್‌ಒ ಹಾಗೂ ಕುಟುಂಬ ಕಲ್ಯಾಣ ಅಧಿಕಾರಿ ನಡುವೆ ಸಮನ್ವಯ ಕೊರತೆ ಎದ್ದು ಕಾಣುತ್ತಿದೆ. ಅದನ್ನು ಸರಿಪಡಿಸಲಾಗುವುದು' ಎಂದರು.

'ಪಾರಿವಾಳಕ್ಕೆ ಆಹಾರ ಹಾಕಿದ್ರೆ ₹ 200 ದಂಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಾರಿವಾಳಗಳಿಗೆ ಆಹಾರ ಹಾಕಿದ್ದಲ್ಲಿ ₹200 ದಂಡ ವಿಧಿಸಲಾಗುವುದು' – ಇಂಥದ್ದೊಂದು ಫಲಕವನ್ನು ರೇಸ್‌ಕೋರ್ಸ್ ರಸ್ತೆಯ (ರೆಬಲ್ ಸ್ಟಾರ್ ಎಂ.ಎಚ್. ಅಂಬರೀಶ್ ರಸ್ತೆ) ಜಂಕ್ಷನ್‌ನಲ್ಲಿ ಅಳವಡಿಸಲಾಗಿದೆ. ಇದಕ್ಕೆ ಪಕ್ಷಿ ಪ್ರೇಮಿಗಳು ಆಕ್ಷೇಪಿಸಿದ್ದಾರೆ.

ರೇಸ್‌ಕೋರ್ಸ್ ರಸ್ತೆ ಹಾಗೂ ಹರೇ ಕೃಷ್ಣ ರಸ್ತೆ ಸೇರುವ ಜಂಕ್ಷನ್‌ನಲ್ಲಿ ಕಾಮಗಾರಿ ನಡೆಯುತ್ತಿದೆ. ಕುದುರೆ ಶಿಲ್ಪ ನಿಲ್ಲಿಸಿ ಸುಸಜ್ಜಿತ ಜಂಕ್ಷನ್ ಮಾಡುವ ಕಾಮಗಾರಿ ಇದಾಗಿದೆ. ಈ ಜಂಕ್ಷನ್‌ನಲ್ಲಿ ನಿತ್ಯವೂ ನೂರಾರು ಪಾರಿವಾಳಗಳು ಇಲ್ಲಿ ಕೂರುತ್ತಿವೆ.

ವಾಹನ ಚಾಲಕರು, ಬೈಕ್ ಸವಾರರು, ಸ್ಥಳೀಯ ವ್ಯಾಪಾರಿಗಳು, ವೃದ್ಧರು–ಮಕ್ಕಳು ಜಂಕ್ಷನ್‌ಗೆ ಬಂದು ಪಾರಿವಾಳಗಳಿಗೆ ಆಹಾರ, ಕುಡಿಯಲು ನೀರು ಇರಿಸುತ್ತಿದ್ದಾರೆ. ಪಾರಿವಾಳಗಳು ಇದೇ ಸ್ಥಳದಲ್ಲಿ ಕೂರುತ್ತಿವೆ.

ಜಂಕ್ಷನ್‌ನಲ್ಲಿ ಈಗ ಕಬ್ಬಿಣದ ಕಂಬಗಳನ್ನು ನಿಲ್ಲಿಸಿ, ಕಾಂಕ್ರೀಟ್ ಆಸನಗಳನ್ನು ನಿರ್ಮಿಸಲಾಗಿದೆ. ಈ ಜಾಗದಲ್ಲಿ ಪಾರಿವಾಳಗಳು ಕುಳಿತರೆ ಜಂಕ್ಷನ್ ಗಲೀಜಾಗುತ್ತದೆ ಎಂದು ಅಭಿಪ್ರಾಯಪಟ್ಟಿರುವ ಗುತ್ತಿಗೆದಾರ, ಜಾಗದ ಸೌಂದರ್ಯ ಕೆಲ ಅಧಿಕಾರಿಗಳ ಸೂಚನೆಯಂತೆ ಫಲಕ ಹಾಕಿದ್ದಾರೆನ್ನಲಾಗಿದೆ.



ರೇಸ್‌ಕೋರ್ಸ್ ರಸ್ತೆಯ ಜಂಕ್ಷನ್‌ನಲ್ಲಿ ಹಾಕಿರುವ ದಂಡದ ಫಲಕ

'ಇಲ್ಲಿ ಪಾರಿವಾಳಗಳಿಗೆ ಆಹಾರ ಹಾಕಬೇಡಿ. ಹಾಕಿದಲ್ಲಿ ₹200 ದಂಡ ವಿಧಿಸಲಾಗುವುದು' ಎಂದು ಫಲಕದಲ್ಲಿ ಬರೆಯಲಾಗಿದೆ. ಆದರೆ ಯಾವುದೇ ಇಲಾಖೆ ಹಾಗೂ ಅಧಿಕಾರಿ ಹೆಸರು ನಮೂದಿಸಿಲ್ಲ. ಆದರೂ ಕೆಲವರು ಪಾರಿವಾಳಗಳಿಗೆ ಆಹಾರ ಹಾಕುತ್ತಿದ್ದಾರೆ. ಇದೇ ವಿಚಾರವಾಗಿ ಪಕ್ಷಿ ಪ್ರೇಮಿಗಳು ಹಾಗೂ ಕೆಲಸಗಾರರ ನಡುವೆ ಮಾತಿನ ಚಕಮಕಿ ನಡೆಯುತ್ತಿದೆ.

'ಪಾರಿವಾಳಗಳಿಗೆ ಆಹಾರ ಹಾಕಬೇಡಿ ಎಂದು ಹೇಳಲು ನೀವು ಯಾರು, ಯಾರದ್ದಾದರೂ ಆದೇಶ ಇದೆಯಾ, ಇದ್ದರೆ ಆದೇಶ ಪ್ರತಿ ತೋರಿಸಿ' ಎಂದು ಪಕ್ಷಿ ಪ್ರೇಮಿಗಳು ಪ್ರಶ್ನಿಸುತ್ತಿದ್ದಾರೆ. 'ಗುತ್ತಿಗೆದಾರ ಹೇಳಿದ್ದಕ್ಕೆ ಫಲಕ ಹಾಕಲಾಗಿದೆ' ಎಂದಷ್ಟೇ ಕೆಲಸಗಾರರು ಹೇಳುತ್ತಿದ್ದು, ಯಾವುದೇ ಆದೇಶ ತೋರಿಸುತ್ತಿಲ್ಲ.

'ಪಾರಿವಾಳಗಳು ಹೆಚ್ಚು ಕುಳಿತರೆ ಗಲೀಜಾಗುತ್ತದೆ. ಆಹಾರ ಸಿಗದಿದ್ದರೆ ಪಾರಿವಾಳಗಳು ಬರುವುದಿಲ್ಲ. ಹೀಗಾಗಿ, ಆಹಾರ ಹಾಕಿದರೆ ದಂಡ ಹಾಕುವ ಫಲಕ ಹಾಕಲಾಗಿದೆ' ಎಂದು ಕೆಲಸಗಾರರೊಬ್ಬರು ಹೇಳಿದರು.

ಆಟೊ ಚಾಲಕ ರಘುವೀರ್, 'ಈಗ ದಿಢೀರ್ ದಂಡ ವಿಧಿಸುವ ಫಲಕ ಹಾಕಿರುವುದು ಸರಿಯಲ್ಲ' ಎಂದರು.

ಸ್ಥಳೀಯ ವ್ಯಾಪಾರಿ ಸೆಲ್ವಕುಮಾರ್, 'ಐದು ವರ್ಷಗಳಿಂದ ಮಧ್ಯಾಹ್ನ ಊಟದ ಅವಧಿಯಲ್ಲಿ ಜಂಕ್ಷನ್‌ಗೆ ಬಂದು ಪಾರಿವಾಳಿಗೆ ಕಾಳು ಹಾಕುತ್ತಿದ್ದೇನೆ. ಅವುಗಳ ಜೊತೆ ಕೆಲ ನಿಮಿಷ ಕಳೆದರೆ ಕೆಲಸದ ಒತ್ತಡ ಕಡಿಮೆಯಾಗುತ್ತದೆ. ಈಗ ಆಹಾರ ಹಾಕದಂತೆ ತಡೆಯುವುದು ಯಾವ ನ್ಯಾಯ' ಎಂದು ಪ್ರಶ್ನಿಸಿದರು.

ಫಲಕ ಹಾಕಿರುವ ಕುರಿತಂತೆ ಪ್ರತಿಕ್ರಿಯೆಯನ್ನು ಪಡೆಯಲು ಗುತ್ತಿಗೆದಾರ ಹಾಗೂ ಕಾಮಗಾರಿ ಉಸ್ತುವಾರಿ ಅಧಿಕಾರಿಗಳು ಲಭ್ಯರಾಗಲಿಲ್ಲ.

ಅಚ್ಚಲು: ನದಿಯಂಚಿನ ತ್ಯಾಜ್ಯ ತೆರವು

ರಾಮನಗರ: ತಾಲ್ಲೂಕಿನ ಅಚ್ಚಲು ಗ್ರಾಮದ ಅರ್ಕಾವತಿ ನದಿಯಂಚಿನಲ್ಲಿ ತ್ಯಾಜ್ಯ ವಿಲೇವಾರಿ ಮಾಡುವುದನ್ನು ತಪ್ಪಿಸಿರುವ ರಾಮನಗರ ನಗರಸಭೆಯು, ಸ್ಥಳದಲ್ಲಿದ್ದ ಕಸವನ್ನು ಶುಕ್ರವಾರ ತೆರವುಗೊಳಿಸಿದೆ .

ನದಿಯಂಚಿಗೆ ತ್ಯಾಜ್ಯ ಎಸೆಯುತ್ತಿರುವುದರಿಂದ ಕಸದ ಹೊಗೆ, ಅನಾರೋಗ್ಯ ಸೇರಿದಂತೆ ಗ್ರಾಮದಲ್ಲಿ ವಿವಿಧ ಸಮಸ್ಯೆಗಳು ಎದುರಾಗಿವೆ ಎಂದು ದೂರಿದ್ದ ಗ್ರಾಮಸ್ಥರು, ಲೋಕಸಭಾ ಚುನಾವಣೆ ಬಹಿಷ್ಕರಿಸಲು ನಿರ್ಧರಿಸಿದ್ದರು. ಈ ಕುರಿತು 'ಪ್ರಜಾವಾಣಿ'ಯು ಮಾರ್ಚ್ 20ರಂದು 'ತ್ಯಾಜ್ಯದಿಂದ ಬೇಸತ್ತು ಚುನಾವಣೆ ಬಹಿಷ್ಕಾರ' ಎಂಬ ವಿಶೇಷ ವರದಿ ಪ್ರಕಟಿಸಿತ್ತು.

ವರದಿ ಬೆನ್ನಲ್ಲೇ ನಗರಸಭೆ ಎಚ್ಚೆತ್ತುಕೊಂಡಿತ್ತು. ಪೌರಾಯುಕ್ತ ಎಲ್. ನಾಗೇಶ್ ಅವರು, ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸ್ಥಳೀಯ ಹುಣಸನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಸ್ಥಳೀಯರ ಜೊತೆ ಮಾತುಕತೆ ನಡೆಸಿ ತ್ಯಾಜ್ಯ ತೆರವಿನ ಭರವಸೆ ನೀಡಿದ್ದರು. ಅದರಂತೆ, ಸ್ಥಳದಲ್ಲಿ ಜೆಸಿಬಿ ಹಾಗೂ ಟಿಪ್ಪರ್ ಲಾರಿಗಳ ಮೂಲಕ ಕಸ ತೆರವುಗೊಳಿಸಿ, ತ್ಯಾಜ್ಯದ ದುರ್ನಾತ ಬೀರದಂತೆ ಮಣ್ಣು ಹಾಕಿದ್ದಾರೆ.

ನಗರದಲ್ಲಿ ಇಂದು

'ಹಿರಿಯ ನಾಗರಿಕರ ಸಂರಕ್ಷಣೆ ಹಾಗೂ ಪಾಲನೆ' ವಿಚಾರಸಂಕಿರಣ: ಆರಂಭಿಕ ನುಡಿ: ನ್ಯಾ. ಎಂ.ಎನ್. ವೆಂಕಟಾಚಲಯ್ಯ, ಪ್ರಾಸ್ತಾವಿಕ ನುಡಿ: ನ್ಯಾ. ಸಂತೋಷ್ ಹೆಗ್ಡೆ, ಅಧ್ಯಕ್ಷತೆ: ಪುರುಷೋತ್ತಮ ಬಂಗ್, ವಿಷಯ ಮಂಡನೆ: ಎನ್. ಸಿದ್ದೇಶ್ವರ್, ರಾಧಾಮೂರ್ತಿ, ಮಿಲಿಂದ್ ಎಸ್. ಗೋಖಲೆ, ಇಂದುಮತಿ ರಾವ್, ಇಂದಿರಾ ಜಯಪ್ರಕಾಶ್, ಆಯೋಜನೆ: ಕರ್ನಾಟಕ ಹಿರಿಯ ನಾಗರಿಕರ ವೇದಿಕೆಗಳ ಒಕ್ಕೂಟ, ಸ್ಥಳ: ಆರ್.ವಿ. ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್, ಜಯನಗರ, ಬೆಳಿಗ್ಗೆ 10

ಡ್ಯಾನ್ಸ್ ಜಾತ್ರೆ: ನೃತ್ಯ ಪ್ರದರ್ಶನ: ಸಂಜುಕ್ತ ಸಿನ್ಹಾ, ಶೀಲಾ ಉನ್ನಿಕೃಷ್ಣನ್, ಭೂಮಿ ಠಾಕೂರ್, ಸುಧೀರ್ ರಾವ್, ನಿರೂಪಮಾ ರಾಜೇಂದ್ರ, ಆಯೋಜನೆ ಹಾಗೂ ಸ್ಥಳ: ಶಾಂಭವಿ ಸ್ಕೂಲ್ ಆಫ್ ಡ್ಯಾನ್ಸ್, ಕನಕಪುರ ರಸ್ತೆ, ಬೆಳಿಗ್ಗೆ 10ರಿಂದ

ನ್ಯಾಯಾಂಗ ಅಧಿಕಾರಿಗಳ ದೈವಾರ್ಷಿಕ 21ನೇ ರಾಜ್ಯಮಟ್ಟದ ಸಮ್ಮೇಳನ: ಉದ್ಘಾಟನೆ: ನ್ಯಾ.ಡಿ.ವೈ. ಚಂದ್ರಚೂಡ್, ಗೌರವ ಅತಿಥಿಗಳು: ಸಿದ್ದರಾಮಯ್ಯ, ನ್ಯಾ.ಅಜ್ಜಿಕುಟ್ಟೀರ ಸೋಮಯ್ಯ ಬೋಪಣ್ಣ, ನ್ಯಾ.ಬಿ.ವಿ. ನಾಗರತ್ನ, ಗೌರವ ಅತಿಥಿಗಳು: ನ್ಯಾ. ಅರವಿಂದ್ ಕುಮಾರ್, ನ್ಯಾ.ಎನ್.ವಿ. ಅಂಜಾರಿಯ, ಆಯೋಜನೆ: ಕರ್ನಾಟಕ ಸ್ಟೇಟ್ ಜ್ಯುಡಿಷಿಯಲ್ ಆಫೀಸರ್ಸ್ ಅಸೋಸಿಯೇಷನ್, ಸ್ಥಳ: ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮ್ಮೇಳನ ಸಭಾಂಗಣ, ಜಿಕೆವಿಕೆ, ಬೆಳಿಗ್ಗೆ 10.30

ಡಾ.ರಾಮಮನೋಹರ ಲೋಹಿಯಾ ಜನ್ಮದಿನಾಚರಣೆ ಹಾಗೂ 'ಡಾ.ರಾಮಮನೋಹರ ಲೋಹಿಯಾ ಪ್ರಶಸ್ತಿ' ಪ್ರದಾನ ಸಮಾರಂಭ: ಉದ್ಘಾಟನೆ: ಬಿ.ಆರ್. ಪಾಟೀಲ, ಪ್ರಶಸ್ತಿ ಪ್ರದಾನ: ವಿಜಯಾ, ಅಧ್ಯಕ್ಷತೆ: ಬಿ.ಎಲ್. ಶಂಕರ್, ಮುಖ್ಯ ಅತಿಥಿಗಳು: ಮಾವಳ್ಳಿ ಶಂಕರ್, ಸುಮಾವಿಜಯ್, ಪ್ರಶಸ್ತಿ ಪುರಸ್ಕೃತರು: ಇಂದಿರಾ ಕೃಷ್ಣಪ್ಪ, ಆಯೋಜನೆ: ಭಾರತ ಯಾತ್ರಾ ಕೇಂದ್ರ, ಎಂ.ಪಿ. ಪ್ರಕಾಶ್ ಸಮಾಜಮುಖಿ ಟ್ರಸ್ಟ್, ಲೋಕನಾಯಕ ಜಯಪ್ರಕಾಶ್ ನಾರಾಯಣ ವಿಚಾರ ವೇದಿಕೆ, ಸ್ಥಳ: ಚಿತ್ರಕಲಾ ಪರಿಷತ್ತು, ಕುಮಾರಕೃಪ ರಸ್ತೆ, ಬೆಳಿಗ್ಗೆ 11

'ಕುಡಿಯುವ ನೀರಿನ ಸಮಸ್ಯೆ' ಬಗ್ಗೆ ಚಿಂತನ ಮಂಥನ: ಪ್ರಾಸ್ತಾವಿಕ ನುಡಿ: ಕುರುಬೂರು ಶಾಂತಕುಮಾರ್, ಉದ್ಘಾಟನೆ: ರಾಮ್‌ಪ್ರಸಾತ್ ಮನೋಹರ್, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಮುಖ್ಯ ಅತಿಥಿಗಳು: ಟಿ.ವಿ. ರಾಮಚಂದ್ರ, 'ಮುಖ್ಯಮಂತ್ರಿ' ಚಂದ್ರು, ದಾಕ್ಷಾಯಿಣಿ ಎಸ್. ದಳವಾಯಿ, ಆಯೋಜನೆ: ಕರ್ನಾಟಕ ನೆಲ–ಜಲ ಸಂರಕ್ಷಣಾ ಸಮಿತಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸ್ಥಳ: ಗಾಂಧಿ ಭವನ, ಕುಮಾರಪಾರ್ಕ್, ಬೆಳಿಗ್ಗೆ 11

ಭಗತ್ ಸಿಂಗ್, ರಾಜಗುರು ಹಾಗೂ ಸುಖದೇವ್ ಸಿಂಗ್ ಪುಣ್ಯಸ್ಮರಣೆ ಕಾರ್ಯಕ್ರಮ: ಆಯೋಜನೆ: ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 11.30

ಪ್ರೊ.ಎಲ್.ವಿ. ಶಾಂತಕುಮಾರಿ ಅವರೊಂದಿಗೆ 'ಮಾತುಕತೆ': ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವಶಿಲ್ಪ, ಕೆಂಪೇಗೌಡನಗರ, ಸಂಜೆ 4.30

'ಚಕ್ರವ್ಯೂಹ' ಯಕ್ಷಗಾನ ಪ್ರದರ್ಶನ: ಆಯೋಜನೆ: ಯಕ್ಷ ಸಂಪದ, ಸ್ಥಳ: ಉದಯಭಾನು ಕಲಾಸಂಘ, ಗವಿಪುರ, ಸಂಜೆ 4.30

ಆಲೂರು ದೊಡ್ಡ ನಿಂಗಪ್ಪ ಅವರ 'ಚಂದ್ರನ ಚೂರು' ಕಾದಂಬರಿ ಬಿಡುಗಡೆ: ಬಂಜಗೆರೆ ಜಯಪ್ರಕಾಶ್, ಕಾದಂಬರಿ ಬಗ್ಗೆ ಮಾತು: ಎಂ.ಎಸ್. ಆಶಾದೇವಿ, ದಯಾ ಗಂಗನಘಟ್ಟ, ಆಯೋಜನೆ: ಪಂಪ ಸಾಂಸ್ಕೃತಿಕ ವೇದಿಕೆ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತಿನ ಆವರಣ, ಕುಮಾರ ಕೃಪ ರಸ್ತೆ, ಸಂಜೆ 5

ಎಸ್. ಗಂಗಾಧರಯ್ಯ ಅವರ 'ಗಂಗಾಪಾಣಿ' ಕಾದಂಬರಿ ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಪುಸ್ತಕದ ಬಗ್ಗೆ ಮಾತು: ರಘುನಾಥ ಚ.ಹ., ಬಿ.ಯು. ಸುಮಾ, ಉಪಸ್ಥಿತಿ: ಎಸ್. ಗಂಗಾಧರಯ್ಯ, ಧನಂಜಯ್ ಎನ್., ಆಯೋಜನೆ: ಜೀರುಂಡೆ ಪುಸ್ತಕ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ರಾಷ್ಟ್ರ ಕವಿ ಎಂ. ಗೋವಿಂದ ಪೈ ಜನ್ಮದಿನ ಹಾಗೂ ರಾಜ್ಯಮಟ್ಟದ ಕವನ ರಚನಾ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣಾ ಸಮಾರಂಭ: ಬಹುಮಾನ ವಿತರಣೆ: ರಾಮಣ್ಣ ಎಚ್. ಕೋಡಿಹೊಸಹಳ್ಳಿ, ಉಪನ್ಯಾಸ: ಶಾಂತರಾಜು, ಅಧ್ಯಕ್ಷತೆ: ಎ.ಎಸ್. ನಾಗರಾಜಸ್ವಾಮಿ, ಆಯೋಜನೆ: ಕನ್ನಡ ಸಂಘರ್ಷ ಸಮಿತಿ, ಸ್ಥಳ: ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ. ಸಂಜೆ 5

ಅಬ್ಬೂರು ಪ್ರಕಾಶ್ ಅವರ 'ಕಣ್ಣ ಕನ್ನಡಿಯಲ್ಲಿ...' ಹಾಗೂ ರೇಖಾ ಹೆಗಡೆ ಬಾಳೇಸರ ಅವರ 'ಕಾಡು ಕಾಡ್ತು' ಪುಸ್ತಕಗಳ ಬಿಡುಗಡೆ: ಐ.ಎಂ. ವಿಠ್ಠಲಮೂರ್ತಿ, ಅಧ್ಯಕ್ಷತೆ: ಆರತಿ ಎಚ್.ಎನ್., ಮುಖ್ಯ ಅತಿಥಿ: ರವೀಂದ್ರ ಭಟ್ಟ, ಆಯೋಜನೆ: ಬಹುರೂಪಿ, ಸ್ಥಳ: ಬಾಪು ಸಭಾಂಗಣ, ಗಾಂಧಿ ಭವನ, ಕುಮಾರಪಾರ್ಕ್, ಸಂಜೆ 5

ಅ'ಸಾಮಾನ್ಯ' ಗೀತೆ ತಿಂಗಳ ಕಾರ್ಯಕ್ರಮ: ಡಿ.ವಿ. ಜಿ. ಮತ್ತು ಪು.ತಿ.ನ. ನೆನಪು, ಉದ್ಘಾಟನೆ ಮತ್ತು ಆಶೀರ್ವಚನ: ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಉಪಸ್ಥಿತಿ: ಎಸ್.ಎಸ್. ರಾಮದಾಸ್, ಎ.ಎಂ. ಚಂದ್ರಶೇಖರ್, ಆಯೋಜನೆ: ಪಂಚಾಮೃತ ಸುಗಮ ಸಂಗೀತ ಅಕಾಡೆಮಿ, ಸ್ಥಳ: ಯದುಗಿರಿ ಯತಿರಾಜ ಮಠದ ಆವರಣ, ಸಂಜೆ 5.30

'ಸಪ್ನ' ಯುಗಾದಿ ಕಥಾ ಸಂಗಮ: ಉದ್ಘಾಟನೆ: ಗಿರೀಶ್ ರಾವ್ ಹತ್ವಾರ್ (ಜೋಗಿ), ಆಶಯ ನುಡಿ: ಸೂರ್ಯಕೀರ್ತಿ, ಕಥೆ ಮತ್ತು ಓದುಗ: ರಂಜನಿ ರಾಘವನ್, ಉಪಸ್ಥಿತಿ: ನಿತಿನ್ ಷಾ, ಆಯೋಜನೆ, ಸ್ಥಳ: ಸಪ್ನ ಬುಕ್ ಹೌಸ್, ಗಾಂಧಿನಗರ, ಸಂಜೆ 5

ಬೆಂಗಳೂರು ಅಂತರರಾಷ್ಟ್ರೀಯ ಕಲಾ ಮಹೋತ್ಸವ: 'ಪ್ರತಿಬೋಧನಾ' ನೃತ್ಯ ಪ್ರದರ್ಶನ: ರಮಾ ವೈದ್ಯನಾಥನ್ ಮತ್ತು ತಂಡ, 'ಸಿಲಪ್ಪದಿಕಾರಂ' ನೃತ್ಯ ರೂಪಕ ಪ್ರದರ್ಶನ, ಆಯೋಜನೆ: ಏಮ್ ಸಂಸ್ಥೆ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 6

ರಾಷ್ಟ್ರ ಕವಿ ಮಂಜೇಶ್ವರ ಗೋವಿಂದ ಪೈ ಸ್ಮರಣೆ: ಅಧ್ಯಕ್ಷತೆ: ಶ್ರೀರಾಮೇಗೌಡ, ಪುಷ್ಪ ನಮನ: ಎಲ್. ವೆಂಕಟಪ್ಪ, ನುಡಿ ನಮನ: ಪ್ರೊ.ಜಿ. ಅಶ್ವತ್ಥನಾರಾಯಣ, ಆಯೋಜನೆ: ಉದಯಭಾನು ಕಲಾಸಂಘ, ಸ್ಥಳ: ಉದಯಭಾನು ಅಂಗಳ, ಕೆಂಪೇಗೌಡನಗರ, ಸಂಜೆ 6

ಡಾ. ಗಿರೀಶ ಕಾರ್ನಾಡರ ನಾಟಕೋತ್ಸವ ಸಮಾರೋಪ: ಉಪಸ್ಥಿತಿ: ಮಲ್ಲಿಕಾರ್ಜುನ ಕಡಕೋಳ, ಶಶಿಕಾಂತ ಯಡಹಳ್ಳಿ, ನಾಟಕ ಪ್ರದರ್ಶನ: 'ಮಾನಿಷಾದ', ಆಯೋಜನೆ: ಭಾಗವತರು, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

'ಕಂಬ್ಳಿ ಸೇವೆ' ಹಾಸ್ಯ ನಾಟಕ ಪ್ರದರ್ಶನ: ನಿರ್ದೇಶನ: ಪ್ರಸನ್ನ ಜಿ.ವಿ., ಆಯೋಜನೆ: ಆಯಾಮ, ಸ್ಥಳ: ವ್ಯೋಮ, ಆರ್ಟ್ ಸ್ಪೇಸ್ ಆ್ಯಂಡ್ ಸ್ಟುಡಿಯೊ ಥಿಯೇಟರ್, ಜೆ.ಪಿ.ನಗರ, ಸಂಜೆ 7

'ಮೀಸಲಾತಿ ಅಂತರಂಗ' ಕೃತಿ ಬಿಡುಗಡೆ ಮಾಡಿದ ಎಸ್‌.ಜಿ. ಸಿದ್ಧರಾಮಯ್ಯ

ಚರಿತ್ರೆಯನ್ನು ತಿರುಚುವ ದ್ರೋಹ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸಾಹತುಶಾಹಿ ಮತ್ತು ವಸಾಹತುಶಾಹಿಯೇತರ ದೃಷ್ಟಿಕೋನದಲ್ಲಿ ಬರೆದ ಚರಿತ್ರೆಗಳಲ್ಲಿ ಭಿನ್ನತೆ ಇರಬಹುದು. ಆದರೆ ಚರಿತ್ರೆ ತಿರುಚುತ್ತಿರಲಿಲ್ಲ. ಈಗ ಚರಿತ್ರೆಯನ್ನೇ ತಿರುಚಲಾಗುತ್ತಿದೆ ಎಂದು ಸಾಹಿತಿ ಎಸ್.ಜಿ. ಸಿದ್ಧರಾಮಯ್ಯ ವಿಷಾದಿಸಿದರು.

ಕೆ.ಎನ್. ಲಿಂಗಪ್ಪ ಅವರ 'ಮೀಸಲಾತಿ ಅಂತರಂಗ' ಕೃತಿಯನ್ನು ಶುಕ್ರವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ನಾವು ಕಲಿಯುವಾಗ ಚರಿತ್ರೆ ತಿರುಚುವ ದ್ರೋಹದ ಕೆಲಸಗಳಾಗುತ್ತಿರಲಿಲ್ಲ. ಯುವಪೀಳಿಗೆಗೆ ದಾರಿ ತಪ್ಪಿಸುವ ಕಾರ್ಯ ಇದು' ಎಂದು ವಿಶ್ಲೇಷಿಸಿದರು.

ದೇಶ, ಪ್ರಜಾಪ್ರಭುತ್ವ, ಸಂವಿಧಾನ ಎದುರಿಸುತ್ತಿರುವ ಬಿಕ್ಕಟ್ಟಿನ ನಡುವೆ ಕೆಲವೊಂದು ಪ್ರಗತಿಪರ ಘಟನೆಗಳೂ ನಡೆಯುತ್ತಿವೆ. ಜಾತಿ ಗಣತಿ ವರದಿ ಹಲವು ವರ್ಷಗಳ ಬಳಿಕ ಸ್ವೀಕಾರವಾಗಿರುವುದು ಇದಕ್ಕೆ ಸಾಕ್ಷಿ. ಇದು ಪ್ರಾಥಮಿಕ ಹಂತ. ಈ ವರದಿ ಅನುಷ್ಠಾನಕ್ಕೆ ಅದಕ್ಕೆ ಇನ್ನೆಷ್ಟು ವರ್ಷ ಬೇಕು ಎಂಬುದು ಗೊತ್ತಾಗುತ್ತಿಲ್ಲ ಎಂದು ತಿಳಿಸಿದರು.

ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್. ದ್ವಾರಕಾನಾಥ್ ಮಾತನಾಡಿ, 'ಮೇಲೂ ಅಲ್ಲದ, ಕೆಳಗೂ ಅಲ್ಲದ ಅತಂತ್ರ ಸ್ಥಿತಿಯಲ್ಲಿ ಇರುವವರು ಮಧ್ಯಮ ವರ್ಗದವರು. ದಲಿತರ ನೋವು ಕಾಣುತ್ತದೆ. ಹಿಂದುಳಿದ ವರ್ಗಗಳ ಯಾತನೆ ಕಾಣಿಸುವುದಿಲ್ಲ. ಯಾತನೆಯಲ್ಲೇ ಬೇಯುತ್ತಿದ್ದಾರೆ' ಎಂದರು.

ಎಸ್‌ಸಿ, ಎಸ್‌ಟಿ ಮೀಸಲಾತಿ ಬಗ್ಗೆ ಅನೇಕ ಚರ್ಚೆಗಳು, ಸಂವಾದಗಳು ನಡೆದಿವೆ. ಕೃತಿಗಳು ಬಂದಿವೆ. ಆದರೆ, ಹಿಂದುಳಿದ ವರ್ಗಗಳ ಮೀಸಲಾತಿ ಬಗ್ಗೆ ಇವು ಯಾವುದೂ ಆಗಿಲ್ಲ. ಈ ಕೊರತೆಯನ್ನು ನೀಗಿಸುವ ಕೆಲಸವನ್ನು ಕೆ.ಎನ್. ಲಿಂಗಪ್ಪ ಅವರ ಕೃತಿಗಳು ಮಾಡುತ್ತಿವೆ ಎಂದು ವಿಶ್ಲೇಷಿಸಿದರು.

ರಾಜ್ಯ ಚುನಾವಣಾ ಆಯೋಗದ ಮಾಜಿ ಅಧ್ಯಕ್ಷ ಪಿ.ಎನ್. ಶ್ರೀನಿವಾಸಾಚಾರಿ, 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ನಿವೃತ್ತ ಕೆಎಎಸ್ ಅಧಿಕಾರಿ ಭಕ್ತ ರಾಮೇಗೌಡ, ಕೃತಿಕಾರ ಕೆ.ಎನ್. ಲಿಂಗಪ್ಪ, ಪ್ರಕಾಶಕ ಅಭಿರುಚಿ ಗಣೇಶ್ ಉಪಸ್ಥಿತರಿದ್ದರು.



'ಮೀಸಲಾತಿ ಅಂತರಂಗ' ಪುಸ್ತಕವನ್ನು ಸಾಹಿತಿ ಎಸ್‌.ಜಿ. ಸಿದ್ಧರಾಮಯ್ಯ ಬಿಡುಗಡೆ ಮಾಡಿದರು. ಪ್ರಕಾಶಕ ಅಭಿರುಚಿ ಗಣೇಶ್, ನಿವೃತ್ತ ಕೆಎಎಸ್ ಅಧಿಕಾರಿ ಭಕ್ತ ರಾಮೇಗೌಡ, ಮಾಜಿ ಚುನಾವಣಾ ಆಯುಕ್ತ ಪಿ.ಎಂ. ಶ್ರೀನಿವಾಸಾಚಾರಿ, ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್. ದ್ವಾರಕಾನಾಥ್, ಕೃತಿಕಾರ ಕೆ.ಎನ್. ಲಿಂಗಪ್ಪ ಉಪಸ್ಥಿತರಿದ್ದರು. –ಪ್ರಜಾವಾಣಿ ಚಿತ್ರ

ಆರೋಗ್ಯ ಇಲಾಖೆ ನಡೆಸಿದ ಕಾರ್ಯಾಚರಣೆಯಲ್ಲಿ 80ಕ್ಕೂ ಅಧಿಕ ವೈದ್ಯರು ಪತ್ತೆ

ನಗರದಾದ್ಯಂತ ನಕಲಿ ವೈದ್ಯರ ಜಾಲ

• ವರುಣ ಹೆಗಡೆ

ಬೆಂಗಳೂರು: ನಗರದಾದ್ಯಂತ ನಕಲಿ ವೈದ್ಯರ ಜಾಲ ವಿಸ್ತರಣೆಯಾಗಿದ್ದು, ಆರೋಗ್ಯ ಇಲಾಖೆ ಕಳೆದೊಂದು ವರ್ಷದಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ 81 ನಕಲಿ ವೈದ್ಯರು ಪತ್ತೆಯಾಗಿದ್ದಾರೆ.

ಕೆಪಿಎಂಇ (ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ನಿಯಂತ್ರಣ ಕಾಯ್ದೆ) ಕಾಯ್ದೆಯಡಿ ಆರೋಗ್ಯಾಧಿಕಾರಿಗಳ ತಂಡವು ವಿವಿಧ ಆಸ್ಪತ್ರೆಗಳು, ಕ್ಲಿನಿಕ್‌ಗಳು ಹಾಗೂ ಪ್ರಯೋಗಾಲಯಗಳಿಗೆ ದಿಢೀರ್ ಭೇಟಿ ನೀಡಿ, ಪರಿಶೀಲನೆ ನಡೆಸುತ್ತಿದೆ. ಈ ಪರಿಶೀಲನೆ ವೇಳೆ ವೈದ್ಯಕೀಯ ವೃತ್ತಿ ನಡೆಸಲು ಅಗತ್ಯ ವಿದ್ಯಾರ್ಹತೆ ಇಲ್ಲದಿದ್ದರೂ, ಪರವಾನಗಿ ಹೊಂದಿರದಿದ್ದರೂ ಅನಧಿಕೃತವಾಗಿ ಕ್ಲಿನಿಕ್‌ಗಳು ಮತ್ತು ಪ್ರಯೋಗಾಲಯಗಳನ್ನು ನಡೆಸುತ್ತಿರುವುದು ಅಧಿಕಾರಿಗಳ ತಂಡದ ಗಮನಕ್ಕೆ ಬಂದಿದೆ. ಅಂತಹವರನ್ನು ನಕಲಿ ವೈದ್ಯರ ಪಟ್ಟಿಗೆ ಸೇರಿಸಿ, ಕಾನೂನಿನ ಅಡಿ ಕ್ರಮ ಕೈಗೊಳ್ಳಲಾಗಿದೆ.

ಗುರುತಿಸಲಾದ ನಗರದ ಬಹುತೇಕ ನಕಲಿ ವೈದ್ಯರ ಕ್ಲಿನಿಕ್‌ಗಳಿಗೆ ನೋಟಿಸ್ ನೀಡಿ, ಬಂದ್ ಮಾಡಲಾಗಿದೆ. ಕೆ.ಪಿ. ಅಗ್ರಹಾರ, ದಾಸನಪುರ, ಸುಂಕದಕಟ್ಟೆ, ವಿಲ್ಸನ್ ಗಾರ್ಡನ್, ಹೆಬ್ಬುಗೋಡಿ, ಅನಂತನಗರ, ತಿರುಪಾಳ್ಯ, ಗೊಲ್ಲಹಳ್ಳಿ, ವೀರಸಂದ್ರ, ಯಲಹಂಕ, ಜಿಗಣಿ, ಅತ್ತಿಬೆಲೆ, ಸರ್ಜಾಪುರ, ಕಾಮಾಕ್ಷಿಪಾಳ್ಯ, ಚಿಕ್ಕಜಾಲ, ದೊಡ್ಡತೊಗುರು, ಕೊಡತಿ, ಹೆಬ್ಬಗೋಡಿ, ಜೆ.ಪಿ. ನಗರ, ಪೀಣ್ಯ 2ನೇ ಹಂತ, ಕೆ.ಆರ್. ಪುರ, ನಾಗವಾರ ಸೇರಿ ವಿವಿಧೆಡೆ ನಕಲಿ ವೈದ್ಯರು ಪತ್ತೆಯಾಗಿದ್ದಾರೆ. ಹೆಚ್ಚಿನವರು ನಗರದ ಹೊರವಲಯದಲ್ಲಿ ಕ್ಲಿನಿಕ್‌ಗಳನ್ನು ಸ್ಥಾಪಿಸಿಕೊಂಡು ಕಾರ್ಯನಿರ್ವಹಿಸುತ್ತಿದ್ದಾರೆ.

ಕ್ಲಿನಿಕ್‌ಗಳು ಬಂದ್: ಇಲಾಖೆ ಆಯುಕ್ತರ ಸೂಚನೆ ಮೇರೆಗೆ ಅಧಿಕಾರಿಗಳ ತಂಡವು ಪರಿಶೀಲನೆಯನ್ನು ಚುರುಕುಗೊಳಿಸಿದೆ. ಅರ್ಹತೆ ಹಾಗೂ ಪರವಾನಗಿ ಹೊಂದಿರದ ಕಾರಣ 50ಕ್ಕೂ ಅಧಿಕ ಕ್ಲಿನಿಕ್‌ಗಳ ವೈದ್ಯರಿಗೆ ನೋಟಿಸ್ ನೀಡಿ, ಅವರು ನಡೆಸುತ್ತಿದ್ದ ಕ್ಲಿನಿಕ್‌ಗಳನ್ನು ತಾತ್ಕಾಲಿಕವಾಗಿ ಬಂದ್ ಮಾಡಲಾಗಿದೆ. 10ಕ್ಕೂ ಅಧಿಕ ಕ್ಲಿನಿಕ್‌ಗಳನ್ನು ಶಾಶ್ವತವಾಗಿ ಮುಚ್ಚಿಸಲಾಗಿದೆ.

‘ಅನಧಿಕೃತ ಆಸ್ಪತ್ರೆಗಳು, ಕ್ಲಿನಿಕ್‌ಗಳು, ಪ್ರಯೋಗಾಲಯಗಳು ಹಾಗೂ ನಕಲಿ ವೈದ್ಯರ ಮೇಲೆ ಕೆಪಿಎಂಇ ಕಾಯ್ದೆಯಡಿ ಕ್ರಮ ಕೈಗೊಳ್ಳಲಾಗುತ್ತಿದೆ. ಇತ್ತೀಚೆಗೆ ನಕಲಿ ಕ್ಲಿನಿಕ್‌ಗಳ ಮತ್ತು ವೈದ್ಯರ ಸಂಖ್ಯೆ ಹೆಚ್ಚಾಗುತ್ತಿದೆ. ವಿವಿಧ ಸ್ಕ್ಯಾನಿಂಗ್ ಕೇಂದ್ರಗಳಿಗೂ ದಿಢೀರ್ ಭೇಟಿ ನೀಡಿ, ಗರ್ಭಪೂರ್ವ ಮತ್ತು ಪ್ರಸವಪೂರ್ವ ಭ್ರೂಣಲಿಂಗ ಪತ್ತೆ ಕಾಯ್ದೆ (ಪಿಸಿಪಿಎನ್‌ಡಿಟಿ) ಅಡಿ ದಾಖಲಾತಿಗಳನ್ನು ಸಮರ್ಪಕವಾಗಿ ನಿರ್ವಹಿಸದ ಕೇಂದ್ರಗಳಿಗೆ ಬೀಗ ಹಾಕಲಾಗುತ್ತಿದೆ’ ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.



ನಾವು ಸರ್ಕಾರಕ್ಕೆ ಸಹಕಾರ ನೀಡುತ್ತೇವೆ. ಕೆಪಿಎಂಇ ಕಾಯ್ದೆಯಡಿ ನಕಲಿ ವೈದ್ಯರನ್ನು ಗುರುತಿಸಿ, ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಬೇಕು

ಡಾ.ಎಸ್. ಶ್ರೀನಿವಾಸ್, ಐಎಂಎ ಕರ್ನಾಟಕ ಶಾಖೆಯ ಅಧ್ಯಕ್ಷ

ಹೋಮಿಯೋಪಥಿ ವೈದ್ಯರ ಮೇಲೂ ಕ್ರಮ

ಗುರುತಿಸಲಾದ ನಕಲಿ ವೈದ್ಯರ ಪಟ್ಟಿಯಲ್ಲಿ ಅಲೋಪಥಿ ವೈದ್ಯರ ಜತೆಗೆ ಹೋಮಿಯೋಪಥಿ, ಆಯುರ್ವೇದ, ನ್ಯಾಚುರೋಪಥಿ, ಯುನಾನಿ ಹಾಗೂ ಸಿದ್ಧ ವೈದ್ಯರೂ ಸೇರಿದ್ದಾರೆ. ಜಕ್ಕಸಂದ್ರ, ವಿಲ್ಸನ್ ಗಾರ್ಡನ್, ವೀರಸಂದ್ರ, ಬನ್ನೇರುಘಟ್ಟ ಸೇರಿ ವಿವಿಧೆಡೆ ಹೋಮಿಯೋಪಥಿ ಕ್ಲಿನಿಕ್‌ಗಳನ್ನು ನಡೆಸುತ್ತಿದ್ದ ನಕಲಿ ವೈದ್ಯರನ್ನು ಗುರುತಿಸಿ, ಅವರ ಕ್ಲಿನಿಕ್‌ಗಳನ್ನು ಬಂದ್ ಮಾಡಲಾಗಿದೆ.

‘ನಕಲಿ ವೈದ್ಯರ ಪತ್ತೆಗೆ ಭಾರತೀಯ ವೈದ್ಯಕೀಯ ಸಂಘದಿಂದಲೂ (ಐಎಂಎ) ಉಪಸಮಿತಿಯನ್ನು ರಚಿಸಲಾಗಿದೆ. ಆಯುರ್ವೇದ ಪದ್ಧತಿಯಡಿ ಸೇವೆ ನೀಡುತ್ತಿರುವವರ ಅರ್ಹತೆ ಗುರುತಿಸುವುದು ಕಷ್ಟ. ವೈದ್ಯರ ಬಳಿ ಕೆಲಸ ಮಾಡುವ ಕೆಲವರು ಅರ್ಹ ಪದವಿ ಹೊಂದಿರದಿದ್ದರೂ ಪ್ರತ್ಯೇಕ ಕ್ಲಿನಿಕ್‌ಗಳನ್ನು ಪ್ರಾರಂಭಿಸುತ್ತಿದ್ದಾರೆ. ಅಂತಹವರು ವೈರಾಣು ಜ್ವರದಂತಹ ಸಾಮಾನ್ಯ ಸಮಸ್ಯೆಗಳಿಗೆ ಮಾತ್ರೆಗಳನ್ನು ನೀಡುತ್ತಿದ್ದಾರೆ. ಕೆಪಿಎಂಇ ಕಾಯ್ದೆಯು ನಕಲಿ ವೈದ್ಯರ ಪತ್ತೆಗೆ ಸಹಕಾರಿಯಾಗಿದೆ’ ಎಂದು ಐಎಂಎ ಕರ್ನಾಟಕ ಶಾಖೆಯ ಅಧ್ಯಕ್ಷ ಡಾ.ಎಸ್. ಶ್ರೀನಿವಾಸ್ ತಿಳಿಸಿದರು.

ಮೂಲಸೌಲಭ್ಯ ಇಲ್ಲಿ ಮರೀಚಿಕೆ

ಪ್ರಜಾವಾಣಿ ವಾರ್ತೆ





ಒಳಚರಂಡಿಗಾಗಿ ಅಗೆದು ಬಿಟ್ಟಿರುವ ರಸ್ತೆ(ಎಡಚಿತ್ರ), ಅಭಿವೃದ್ಧಿಯಾಗದ ರಸ್ತೆ

ರಾಜರಾಜೇಶ್ವರಿನಗರ: ಕಿತ್ತು ಹೋಗಿರುವ ಮಣ್ಣಿನ ರಸ್ತೆಗಳು, ಚರಂಡಿ ಸರಿಯಿಲ್ಲದೆ ರಸ್ತೆಯಲ್ಲಿ ಹರಿಯುವ ಕೊಳಚೆ ನೀರು, ಒಳಚರಂಡಿ ವ್ಯವಸ್ಥೆ ಇಲ್ಲದ ಕಾರಣ ಚರಂಡಿಯಲ್ಲಿ ನಿಂತಿರುವ ಕೊಳಚೆ ನೀರು, ನೊಣ, ಸೊಳ್ಳೆ ಕಾಟದಿಂದ ನಾಗರಿಕರು ಹೈರಾಣು...

ಮಾಗಡಿ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಬೈರವೇಶ್ವರ ನಗರದ ಶ್ರೀರಾಮ ಆಸ್ಪತ್ರೆಯ ರಸ್ತೆಯಲ್ಲಿ ಕಂಡುಬರುವ ದೃಶ್ಯಗಳಿವು.

ಈ ಬಡಾವಣೆಯಲ್ಲಿರುವ ಮಣ್ಣಿನ ರಸ್ತೆಗಳು ಕಿತ್ತುಹೋಗಿವೆ. ಬೇಸಿಗೆಯಲ್ಲಿ ದೂಳು, ಮಳೆ ಬಂದರೆ ಕೆಸರು ಗದ್ದೆಯಂತಾಗುತ್ತವೆ. ಚರಂಡಿ ವ್ಯವಸ್ಥೆಯೂ ಹಾಳಾಗಿದೆ. ಹೀಗಾಗಿ, ಮಳೆಗಾಲದಲ್ಲಿ ಮನೆಗೆ ನೀರು ನುಗ್ಗುತ್ತದೆ ಎಂದು ಬಡಾವಣೆಯ ಮಹಿಳೆಯರು ದೂರಿದರು.

‘ಮತ್ತೊಂದೆಡೆ ಕಾವೇರಿ ನೀರು ಪೂರೈಕೆಗೆ ಹಾಗೂ ಒಳಚರಂಡಿ ವ್ಯವಸ್ಥೆಗಾಗಿ ಕೊಳವೆಗಳನ್ನು ಅಳವಡಿಸಲು ಜಲಮಂಡಳಿಯವರು ರಸ್ತೆ ಅಗೆದು ಹಾಗೆಯೇ ಬಿಟ್ಟಿದ್ದಾರೆ. ಪ್ರತಿನಿತ್ಯ ದ್ವಿಚಕ್ರ ವಾಹನ ಸವಾರರು ಒಬ್ಬರಲ್ಲಾ ಒಬ್ಬರು ಬಿದ್ದು ಗಾಯಗೊಳ್ಳುತ್ತಾರೆ’ ಎಂದು ನಿಂಗರಾಜು ಹೇಳುತ್ತಾರೆ.

‘ಚರಂಡಿ, ರಸ್ತೆಗಳು ಸರಿಯಿಲ್ಲ. ಪ್ರತಿನಿತ್ಯ ವೃದ್ಧರು, ಮಕ್ಕಳು ರಸ್ತೆಯಲ್ಲಿ ತಿರುಗಾಡಲು ಸಾಧ್ಯವಾಗುತ್ತಿಲ್ಲ. ಮಳೆ ಬಂದಾಗ ತಗ್ಗು ಪ್ರದೇಶಗಳಲ್ಲಿರುವ ಮನೆಗಳಿಗೆ ಚರಂಡಿ ನೀರು ನುಗ್ಗುತ್ತದೆ’ ಎಂದು ಬೈರವೇಶ್ವರನಗರದ ಲಿಂಗರಾಜು ದೂರಿದರು.

ರಾಜರಾಜೇಶ್ವರಿನಗರ ಕ್ಷೇತ್ರದಲ್ಲಿ ಬಿಡಿಎ ಲೇಔಟ್, ಖಾಸಗಿ ಲೇಔಟ್‌ಗಳು, ಶ್ರೀಮಂತರು ವಾಸಿಸುವ ಬಡಾವಣೆಗಳು ಅಭಿವೃದ್ಧಿಯಾಗಿವೆ. ಆದರೆ, ನಮ್ಮಂತಹ ಬಡವರು, ಕೂಲಿಕಾರ್ಮಿಕರು, ಮಧ್ಯಮವರ್ಗದವರು ವಾಸಿಸುವ ಬಡಾವಣೆಗಳ ಕಡೆ ಯಾರೂ ಗಮನಹರಿಸಿಲ್ಲ ಎಂದು ನಾಗರಿಕರು ಅಳಲು ತೋಡಿಕೊಂಡರು.

ಬಡಾವಣೆ ಸಮಸ್ಯೆಗಳ ಕುರಿತು ಬಿಬಿಎಂಪಿ ಕಾರ್ಯಪಾಲಕ ಎಂಜಿನಿಯರ್ ಪಾಪರೆಡ್ಡಿ ಅವರನ್ನು ಕೇಳಿದಾಗ, ‘ನಾನು ಇತ್ತೀಚೆಗಷ್ಟೆ ಬಂದಿದ್ದಾನೆ. ಕ್ಷೇತ್ರದ ಅಭಿವೃದ್ಧಿಗೆ ವಿಶೇಷ ಅನುದಾನ ಬಿಡುಗಡೆಯಾಗಿದೆ. ಹಂತಹಂತವಾಗಿ ಕಾಮಗಾರಿ ಕೈಗೊಳ್ಳಲಾಗುವುದು’ ಎಂದು ಹೇಳಿದರು.

ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಎಚ್.ಎಸ್.ಮಧು, ಜ್ಞಾನಭಾರತಿ ವಾರ್ಡ್ ವ್ಯಾಪ್ತಿಯಲ್ಲಿ ₹19,50 ಕೋಟಿ ವೆಚ್ಚದಲ್ಲಿ ವಿವಿಧ ಕಾಮಗಾರಿಗಳಿಗೆ ಟೆಂಡರ್ ಕರೆಯುವ ಕಾರ್ಯ ಪ್ರಗತಿಯಲ್ಲಿದೆ. ಚುನಾವಣಾ ನೀತಿ ಸಂಹಿತೆಯಿಂದ ವಿಳಂಬವಾಗಿದೆ. ಎಲ್ಲ ಪ್ರಕ್ರಿಯೆ ನಂತರ ಕಾಮಗಾರಿ ಪ್ರಾರಂಭಿಸಲಾಗುವುದು ಎಂದರು.

ನೆಲಮಂಗಲ: ಪರ್ಯಾಯ ವ್ಯವಸ್ಥೆ ಕಲ್ಪಿಸಲು ಆಗ್ರಹ

ನೀರಿಗಾಗಿ ನಗರಸಭೆ ಎದುರು ಧರಣಿ

ಪ್ರಜಾವಾಣಿ ವಾರ್ತೆ

ನೆಲಮಂಗಲ: ‘ನೀರು ಪೂರೈಕೆ ವಿಷಯವಾಗಿ ಜನರಿಗೆ ಉತ್ತರಿಸಲು ಆಗುತ್ತಿಲ್ಲ, ಪರ್ಯಾಯ ವ್ಯವಸ್ಥೆ ಕಲ್ಪಿಸಿ’ ಎಂದು ಆಗ್ರಹಿಸಿ ನಗರಸಭೆ ಸದಸ್ಯ ಎನ್.ಜಿ. ರವಿಕುಮಾರ್ ಅವರು ವಾರ್ಡ್ ಜನರೊಂದಿಗೆ ನಗರಸಭೆ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

‘ನವೆಂಬರ್ ತಿಂಗಳಿನಿಂದ 9ನೇ ವಾರ್ಡ್ ವ್ಯಾಪ್ತಿಯ ಗಜಾರಿಯಾ ಬಡಾವಣೆ, ಬೆತ್ತನಗೆರೆ ರಸ್ತೆ, ಎಂ.ಜಿ. ರಸ್ತೆ, ವಾಜರಹಳ್ಳಿ ಸುತ್ತಮುತ್ತ ನೀರಿನ ಸಮಸ್ಯೆ ಇದೆ. ಕೊಳವೆಬಾವಿಗಳನ್ನೇ ಆಶ್ರಯಿಸಿರುವ ನಮ್ಮ ವಾರ್ಡ್‌ನಲ್ಲಿ ಬೇಕಾದಷ್ಟು ನೀರು ಇತ್ತು, ಇಲ್ಲಿನ ಕೊಳವೆ ಬಾವಿಗಳಿಂದ ಬೇರೆ ವಾರ್ಡ್‌ಗಳಿಗೂ ನೀರು ಪೂರೈಕೆಯಾಗುತ್ತಿತ್ತು, ಎಲ್ಲರಿಗೂ ಕೊಟ್ಟು ನಮಗೇ ನೀರು ಇಲ್ಲದಂತಾಗಿದೆ, ಇರುವ ಎಲ್ಲ ಆರು ಕೊಳವೆಬಾವಿಗಳು ಬತ್ತಿಹೋಗಿವೆ. 15 ದಿನಗಳಿಂದ ನೀರು ಬಿಟ್ಟಿಲ್ಲ, ಟ್ಯಾಂಕರ್ ಮೂಲಕ ಪೂರೈಸಲಾಗುತ್ತಿದೆ. ಅದು ಸಾಕಾಗುತ್ತಿಲ್ಲ’ ಎಂದು ದೂರಿದರು.

‘ಕೊಳವೆಬಾವಿಗಳಲ್ಲಿ ನೀರಿಲ್ಲ ಎಂಬುದನ್ನು ನಗರಸಭೆ ಆಯುಕ್ತರ ಗಮನಕ್ಕೆ ತಂದರೆ ಜನರನ್ನು ಸಮಾಧಾನಪಡಿಸಿ ಎಂದು ಸಲಹೆ ನೀಡುತ್ತಾರೆ. ಎಂಜಿನಿಯರ್‌ಗಳನ್ನು ಕೇಳಿದರೆ, ತಮಗೆ ಸಂಬಂಧವೇ ಇಲ್ಲದಂತೆ ಮಾತನಾಡುತ್ತಾರೆ. ಲಕ್ಷಾಂತರ ರೂಪಾಯಿ ಸಂಬಳ ಪಡೆಯುವ ಅಧಿಕಾರಿಗಳು ಪರಿಹಾರ ಕಲ್ಪಿಸಲು ಚಿಂತನೆ ನಡೆಸಬೇಕೇ ಹೊರತು ಹಾರಿಕೆ ಉತ್ತರ ಕೊಡುವುದಲ್ಲ’ ಎಂದು ಟೀಕಿಸಿದರು.



ನೆಲಮಂಗಲ ನಗರಸಭೆ ಎದುರು ಪ್ರತಿಭಟನೆ ನಡೆಸುತ್ತಿದವರ ಜೊತೆ ನಗರಸಭೆ ಆಯುಕ್ತ ಮನುಕುಮಾರ್ ಮಾತುಕತೆ ನಡೆಸಿದರು

‘ನಗರಸಭೆಯವರು ಪ್ರತಿವರ್ಷ ಕಂದಾಯ ಪಡೆಯುತ್ತಾರೆ. ಕಂದಾಯ ಪಾವತಿಸಲು ತಡವಾದರೆ ಅದಕ್ಕೆ ಬಡ್ಡಿ ಹಾಕುತ್ತಾರೆ. ನೀರು ಮಾತ್ರ ಪೂರೈಸುತ್ತಿಲ್ಲ. ಸರಿಯಾಗಿ ನೀರು ಪೂರೈಕೆ ಮಾಡದೇ ಇದ್ದರೆ ಇನ್ನು ಮುಂದೆ ಕಂದಾಯ ಕಟ್ಟುವುದಿಲ್ಲ’ ಎಂದು ಗಜಾರಿಯಾ ಬಡಾವಣೆ ನಿವಾಸಿ ಅನಿತಾ ಎಚ್ಚರಿಸಿದರು.

‘ಪಟ್ಟಣ ಪಂಚಾಯಿತಿಯಿಂದ ಪುರಸಭೆ, ಪುರಸಭೆಯಿಂದ ನಗರಸಭೆ ಆಯಿತು. ಜನಸಂಖ್ಯೆ ಹೆಚ್ಚುತ್ತಲಿದೆ. ಆದರೆ, ನೀರು ಸಂಗ್ರಹಿಸುವ ಪಂಪ್‌ಹೌಸ್‌ನ ಶೇಖರಣಾ ಸಾಮರ್ಥ್ಯವನ್ನು ಹೆಚ್ಚಿಸಿಲ್ಲ. 20 ವರ್ಷಗಳಿಂದ ಯಾವುದೇ ಶಾಶ್ವತ ಪರಿಹಾರ ಕಾರ್ಯ ಕೈಗೊಂಡಿಲ್ಲ. ಕೆರೆಗಳ ಅಭಿವೃದ್ಧಿಯನ್ನೂ ಮಾಡಿಲ್ಲ’ ಎಂದು ಪುರಸಭೆ ಮಾಜಿ ಸದಸ್ಯ ಎನ್. ರಾಜಶೇಖರ್ ದೂರಿದರು.

‘ಪರ್ಯಾಯ ವ್ಯವಸ್ಥೆ ಕಲ್ಪಿಸುತ್ತೇವೆ. ಧರಣಿ ನಿಲ್ಲಿಸಿ’ ಎಂದು ನಗರಸಭೆ ಆಯುಕ್ತ ಮನುಕುಮಾರ್ ಮತ್ತು ಸಿಬ್ಬಂದಿ ಕೇಳಿಕೊಂಡರೂ ರವಿಕುಮಾರ್ ಮತ್ತು ನಾಗರಿಕರು ಜಗ್ಗಲಿಲ್ಲ. ‘ಪರಿಹಾರ ಕಲ್ಪಿಸುವವರೆಗೆ ಇಲ್ಲೇ ಇರುತ್ತೇವೆ’ ಎಂದು ಪಟ್ಟುಹಿಡಿದರು.


ಪಂಪ್‌ಹೌಸ್‌ನ ಏಳು ಲೈನ್‌ಗಳಲ್ಲಿ ಒಂದನ್ನು 9ನೇ ವಾರ್ಡ್ ಹಾಗೂ ಸುತ್ತಮುತ್ತಲ ವಾರ್ಡ್‌ಗಳಿಗೆ ಸಂಪರ್ಕ ಕಲ್ಪಿಸುವ ಲೈನ್‌ಗೆ ಜೋಡಣೆ ಮಾಡಲು ಎಂಜಿನಿಯರ್‌ಗಳನ್ನು ಆಯುಕ್ತ ಮನುಕುಮಾರ್ ಕಳುಹಿಸಿದರು. ಬೆತ್ತನಗೆರೆ ರಸ್ತೆಯ ಖಾಸಗಿ ಕೊಳವೆ ಬಾವಿಯಿಂದಲೂ ಪೈಪ್‌ಲೈನ್ ಅಳವಡಿಸಲು ಕ್ರಮ ಕೈಗೊಂಡರು.

‘ಕ್ಯಾನ್ಸರ್ ಚಿಕಿತ್ಸೆಗೆ ಇಮ್ಯುನೊಥೆರಪಿ ಸಹಕಾರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅತ್ಯಾಧುನಿಕ ತಂತ್ರಜ್ಞಾನದ ನೆರವಿನಿಂದಾಗಿ ಕ್ಯಾನ್ಸರ್ ಚಿಕಿತ್ಸೆಯಲ್ಲಿ ಗಮನಾರ್ಹವಾದ ಪ್ರಗತಿ ಸಾಧಿಸಿದ್ದೇವೆ. ತಲೆ ಮತ್ತು ಕುತ್ತಿಗೆ ಕ್ಯಾನ್ಸರ್ ಚಿಕಿತ್ಸೆಗೆ ಇಮ್ಯುನೊಥೆರಪಿ ಸಹಕಾರಿಯಾಗಿದೆ’ ಎಂದು ಎಚ್‌ಸಿಜಿ ಕ್ಯಾನ್ಸರ್ ಆಸ್ಪತ್ರೆಯ ಕಾರ್ಯಕಾರಿ ಅಧ್ಯಕ್ಷ ಡಾ.ಬಿ.ಎಸ್. ಅಜಯ್ ಕುಮಾರ್ ತಿಳಿಸಿದರು.

ಕ್ಯಾನ್ಸರ್ ಕಾಯಿಲೆಯ ಸುಧಾರಿತ ಚಿಕಿತ್ಸೆ, ಪರಿಹಾರದ ಬಗ್ಗೆ ಚರ್ಚೆ ನಡೆಸಲು ದಿ ಗ್ಲೋಬಲ್ ಹೆಲ್ತ್ ಕೇರ್ ಅಕಾಡೆಮಿ ನಗರದಲ್ಲಿ ಹಮ್ಮಿಕೊಂಡಿರುವ ಮೂರು ದಿನಗಳ ‘ಬೆಸ್ಟ್ ಆಫ್ ಎಎಸ್‌ಸಿಒ’ ಸಮಾವೇಶದಲ್ಲಿ ಭಾಗವಹಿಸಿ, ಮಾತನಾಡಿದರು.



ಅಜಯ್ ಕುಮಾರ್

‘ಬದಲಾದ ಜೀವನಶೈಲಿ, ಪಾಶ್ಚಾತ್ಯ ಆಹಾರ ಪದ್ಧತಿ, ಧೂಮಪಾನದಂತಹ ವ್ಯಸನ, ಒತ್ತಡದ ಜೀವನ, ಕಲುಷಿತ ಪರಿಸರ ಸೇರಿ ವಿವಿಧ ಕಾರಣಗಳಿಂದ ಕ್ಯಾನ್ಸರ್ ಪ್ರಕರಣಗಳು ಹೆಚ್ಚಾಗುತ್ತಿವೆ. ಕ್ಯಾನ್ಸರ್ ವಿಧಗಳನ್ನು ಗಮನಿಸಿದಾಗ ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಹಾಗೂ ಪುರುಷರಲ್ಲಿ ಶ್ವಾಸಕೋಶ ಕ್ಯಾನ್ಸರ್ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗುತ್ತಿವೆ. ಆದ್ದರಿಂದ ಚಿಕಿತ್ಸೆಗೆ ಸಂಬಂಧಿಸಿದಂತೆ ವಿವಿಧ ಆವಿಷ್ಕಾರಗಳನ್ನು ಮಾಡಲಾಗುತ್ತಿದೆ. ತಲೆ ಮತ್ತು ಕುತ್ತಿಗೆ ಕ್ಯಾನ್ಸರ್ ಪ್ರಕರಣಗಳಿಗೆ ಸಂಬಂಧಿಸಿದ ಇಮ್ಯುನೊಥೆರಪಿ ಚಿಕಿತ್ಸೆ ಮಹತ್ವದ ಆವಿಷ್ಕಾರವಾಗಿದೆ. ಈ ವಿಧಾನದಡಿ ಎಚ್‌ಸಿಜಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದ್ದು, ರೋಗಿಗಳು ಚೇತರಿಸಿಕೊಂಡಿದ್ದಾರೆ’ ಎಂದು ಹೇಳಿದರು.

‘ಇಮ್ಯುನೊಥೆರಪಿ ಚಿಕಿತ್ಸೆ ವಿಧಾನದಲ್ಲಿ ವ್ಯಕ್ತಿಯ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿ, ಕ್ಯಾನ್ಸರ್ ಕೋಶದ ವಿರುದ್ಧ ರಕ್ಷಣೆ ಒದಗಿಸಲಾಗುತ್ತದೆ’ ಎಂದು ತಿಳಿಸಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಕೆ. ರಮೇಶ್, ‘ಕ್ಯಾನ್ಸರ್ ಕಾಯಿಲೆ ಇತ್ತೀಚೆಗೆ ಸಾಮಾನ್ಯವಾಗಿದೆ. ಈ ಕಾಯಿಲೆ ಬಗ್ಗೆ ಜಾಗೃತಿಯೂ ಮೂಡುತ್ತಿದೆ. ತಂತ್ರಜ್ಞಾನದ ನೆರವಿನಿಂದ ನಿಖರ ಚಿಕಿತ್ಸೆಗಳನ್ನು ಒದಗಿಸಿ, ವ್ಯಕ್ತಿಯನ್ನು ಪ್ರಾಣಾಪಾಯದಿಂದ ಪಾರು ಮಾಡಲು ಸಾಧ್ಯವಾಗುತ್ತಿದೆ. ಕೃತಕ ಬುದ್ಧಿಮತ್ತೆ ಯಂತಹ ತಂತ್ರಜ್ಞಾನಗಳು ನಿಖರ ಚಿಕಿತ್ಸೆಗೆ ಸಹಕಾರಿಯಾಗುತ್ತಿವೆ’ ಎಂದು ಹೇಳಿದರು.

ಬಂಗಾಳ ಸಚಿವ ಸಿನ್ಹಾ ಮನೆಯಲ್ಲಿ ಇ.ಡಿ ಶೋಧ

ಕೋಲ್ಕತ್ತ (ಪಿಟಿಐ): ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ತನಿಖೆಗೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳದ ಸಚಿವ ಚಂದ್ರನಾಥ್ ಸಿನ್ಹಾ ಅವರ ನಿವಾಸದಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಶುಕ್ರವಾರ ಶೋಧ ನಡೆಸಿದರು.

‘ಶೋಧದ ವೇಳೆ ಸಿನ್ಹಾ ಅವರು ಮನೆಯಲ್ಲಿ ಇರಲಿಲ್ಲ. ಅವರ ಕುಟುಂಬಸ್ಥರೊಂದಿಗೆ ನಾವು ಮಾತನಾಡಿದ್ದೇವೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸಿನ್ಹಾ ಅವರು ಈ ಸಂದರ್ಭದಲ್ಲಿ ಮುರಾರೈನಲ್ಲಿರುವ ತಮ್ಮ ಪೂರ್ವಜರ ಮನೆಯಲ್ಲಿ ಇದ್ದರು. ಸುದ್ದಿಗಾರರೊಂದಿಗೆ ಮಾತನಾಡಿದ ಸಿನ್ಹಾ ‘ನಾನು ಯಾವುದೇ ತಪ್ಪು ಮಾಡಿಲ್ಲ. ಸಾಧ್ಯವಿರುವ ಎಲ್ಲಾ ರೀತಿಯಲ್ಲಿ ನಾನು ಅಧಿಕಾರಿಗಳಿಗೆ ಸಹಕರಿಸುತ್ತೇನೆ’ ಎಂದರು.

ವಿವಾದಾತ್ಮಕ ಯೂಟ್ಯೂಬರ್ ಎಲ್ವಿಶ್‌ಗೆ ಜಾಮೀನು ಮಂಜೂರು



ನೊಯಿಡಾ (ಪಿಟಿಐ): ಹಾವಿನ ವಿಷವನ್ನು ಮಾದಕ ವಸ್ತುವನ್ನಾಗಿ ಬಳಕೆ ಮಾಡಿದ ಆರೋಪದ ಮೇಲೆ ಬಂಧಿತನಾಗಿದ್ದ ವಿವಾದಾತ್ಮಕ ಯೂಟ್ಯೂಬರ್ ಎಲ್ವಿಶ್ ಯಾದವ್ ಅಲಿಯಾಸ್ ಸಿದ್ಧಾರ್ಥ್ ಯಾದವ್‌ಗೆ ನೊಯಿಡಾದ ಗೌತಮ ಬುದ್ಧ ನಗರ ನ್ಯಾಯಾಲಯವು ಶುಕ್ರವಾರ ಜಾಮೀನು ನೀಡಿದೆ.

ಎಲ್ವಿಶ್ ತಾನು ಆಯೋಜಿಸುತ್ತಿದ್ದ ಪಾರ್ಟಿಗಳಲ್ಲಿ ಹಾವಿನ ವಿಷವನ್ನು ಮಾದಕ ವಸ್ತುವನ್ನಾಗಿ ಬಳಸುತ್ತಿದ್ದ ಆರೋಪದ ಮೇಲೆ ಕಳೆದ ಭಾನುವಾರ ನೊಯಿಡಾ ಪೊಲೀಸರು ಆತನನ್ನು ಬಂಧಿಸಿದ್ದರು. ಎಲ್ವಿಶ್‌ನ ಜಾಮೀನು ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಲಯ ತಲಾ ₹50,000ಗಳ ಎರಡು ಬಾಂಡ್ ಆಧಾರದ ಮೇಲೆ ಜಾಮೀನು ಮಂಜೂರು ಮಾಡಿದೆ.

ಸದ್ಯ ನೊಯಿಡಾದ ಲಕ್ಸರ್ ಜೈಲಿನಲ್ಲಿರುವ ಎಲ್ವಿಶ್ ಜೈಲಿನಿಂದ ಹೊರಬರಲು ಸ್ವಲ್ಪ ಸಮಯ ತೆಗೆದುಕೊಳ್ಳಬಹುದು. ನಾವು ಕಾನೂನು ಪ್ರಕ್ರಿಯೆಯನ್ನು ಆರಂಭಿಸಿದ್ದೇವೆ. ಜಾಮೀನು ಬಾಂಡ್‌ಗಳ ತಾತ್ಕಾಲಿಕ ಸ್ವೀಕಾರಕ್ಕಾಗಿ ಅರ್ಜಿ ಸಲ್ಲಿಸಿದ್ದೇವೆ. ಇದರಿಂದ ಬಿಡುಗಡೆ ಆದೇಶ ಶೀಘ್ರವಾಗುತ್ತದೆ. ಶುಕ್ರವಾರ ರಾತ್ರಿ ಅಥವಾ ಕೆಲ ದಿನಗಳ ಬಳಿಕ ಬಿಡುಗಡೆ ಆದೇಶ ನೀಡಬಹುದ ಎಂದು ಎಲ್ವಿಶ್ ಪರ ವಕೀಲ ಪ್ರಶಾಂತ್ ರಾಠಿ ತಿಳಿಸಿದ್ದಾರೆ.

ಮತ ಜಾಗೃತಿಗೆ ಅಂಗವಿಕಲರ ಬೈಕ್ ರ‍್ಯಾಲಿ

ಆನೇಕಲ್: ತಾಲ್ಲೂಕಿನ ಮರಸೂರು ಗ್ರಾಮದಲ್ಲಿ ಜಿಲ್ಲಾ ಸ್ವೀಪ್ ಸಮಿತಿಯಿಂದ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಅಂಗವಿಲರು ಬೈಕ್ ರ‍್ಯಾಲಿ ನಡೆಸಿ, ಕಡ್ಡಾಯ ಮತದಾನದ ಜಾಗೃತಿ ಮೂಡಿಸಿದರು. ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಬೈಕ್ ರ‍್ಯಾಲಿ ನಡೆಸಿ ಮತದಾನದ ಮಹತ್ವ ಸಾರಲಾಯಿತು. ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಶ್ರೀನಾಥ್ ಗೌಡ ಮರಸೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮುರಳಿ ಇದ್ದರು.

ಚಿತ್ರಾವಳಿ



ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ಶುಕ್ರವಾರದಿಂದ ಆರಂಭವಾದ ‘ಬೆಂಗಳೂರು ಅಂತರರಾಷ್ಟ್ರೀಯ ಕಲಾ ಉತ್ಸವ 2024’ದಲ್ಲಿ ರೋನು ಮಜುಂದಾರ್ ಮತ್ತು ತಂಡದಿಂದ ವಾದ್ಯ ಜುಗಲ್ಬಂದಿ ನಡೆಯಿತು. ರೋನು ಮಜುಂದಾರ್ ಕೊಳಲು, ಸುಮಾ ಸುಧೀಂದ್ರ ವೀಣೆ, ಬಿ.ಸಿ. ಮಂಜುನಾಥ್ ಮೃದಂಗ, ಎಸ್‌.ಎನ್. ನಾರಾಯಣಮೂರ್ತಿ ಘಟಂ ಮತ್ತು ರಾಜೇಂದ್ರ ನಾಕೋಡ್ ತಬಲಾ ಪ್ರಸ್ತುತಪಡಿಸಿದರು – ಪ್ರಜಾವಾಣಿ ಚಿತ್ರ



ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ‘ಸಮಾವರ್ತನ’ ಪ್ರದವಿ ಪ್ರದಾನ ಸಮಾರಂಭದಲ್ಲಿ 245 ವಿದ್ಯಾರ್ಥಿಗಳು ಪದವಿ ಸ್ವೀಕರಿಸಿದರು – ಪ್ರಜಾವಾಣಿ ಚಿತ್ರ



ನಗರದ ಹೈಕೋರ್ಟ್ ಯೂನಿಟ್ ಹಾಲ್ ನಲ್ಲಿ ಬೆಂಗಳೂರು ವಕೀಲರ ಸಂಘ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನೂತನವಾಗಿ ಕರ್ನಾಟಕ ಹೈಕೋರ್ಟ್ ನ್ಯಾಯಾಲಯಕ್ಕೆ ಆಗಮಿಸಿದ ನ್ಯಾಯಮೂರ್ತಿ ಅನು ಸಿವರಾಮನ್ ರವರಿಗೆ ಸನ್ಮಾನಿಸಿದರು. ಕರ್ನಾಟಕ ಸರ್ಕಾರ ಅಡ್ವೋಕೇಟ್ ಜನರಲ್ ಶಶಿ ಕಿರಣ್ ಶೆಟ್ಟಿ, ಕರ್ನಾಟಕ ಹೈಕೋರ್ಟ್ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ, ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬ ರೆಡ್ಡಿ, ಅಡಿಷನಲ್ ಸಾಲಿಸಿಟರ್ ಜನರಲ್ ಆಫ್ ಇಂಡಿಯಾ ಕುಳೂರ್ ಅರವಿಂದ ಕಾಮತ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ



ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ರೈಲ್ವೆ ಮಹಿಳಾ ಕಲ್ಯಾಣ ಕೇಂದ್ರೀಯ ಸಂಸ್ಥೆಯು ನೀಡುವ ರಾಷ್ಟ್ರಮಟ್ಟದ ‘ಅತ್ಯುತ್ತಮ ಮಹಿಳಾ ಉದ್ಯೋಗಿ ಪ್ರಶಸ್ತಿ’ಗೆ ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ಬಾಣಸವಾಡಿಯ ಮೆಮು ಶೆಡ್‌ನ ಟೆಕ್ನಿಶಿಯನ್ ಸೋನಿಯಾ ಸೋನಿ ಜಾರ್ಜ್ ಆಯ್ಕೆಯಾಗಿದ್ದು, ನವದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಿದರು.

ಆನಂದ, ಶ್ರೀನಿವಾಸಮೂರ್ತಿ ಆಯ್ಕೆ

ಬೆಂಗಳೂರು: ಅಖಿಲ ಕರ್ನಾಟಕ ಸುಗಮ ಸಂಗೀತ ಸಂಸ್ಥೆಗಳ ಒಕ್ಕೂಟದ ಗೌರವಾಧ್ಯಕ್ಷರಾಗಿ ಆನಂದ ಮಾದಲಗೆರೆ ಹಾಗೂ ಅಧ್ಯಕ್ಷರಾಗಿ ಕಾ.ವೆಂ.ಶ್ರೀನಿವಾಸಮೂರ್ತಿ ಆಯ್ಕೆಯಾಗಿದ್ದಾರೆ.

ಒಕ್ಕೂಟದ ಸರ್ವ ಸದಸ್ಯರ ಸಭೆಯಲ್ಲಿ ನೂತನ ಕಾರ್ಯಕಾರಿ ಸಮಿತಿಯನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ. ಒಕ್ಕೂಟದ ಉಪಾಧ್ಯಕ್ಷರಾಗಿ ಬಂಡ್ಲಹಳ್ಳಿ ವಿಜಯಕುಮಾರ್, ಪ್ರಧಾನ ಕಾರ್ಯದರ್ಶಿಯಾಗಿ ಟಿ. ರಾಜಾರಾಮ್, ಸಂಘಟನಾ ಕಾರ್ಯದರ್ಶಿಯಾಗಿ ಇಂಚರ ಪ್ರವೀಣ್ ಕುಮಾರ್, ಸಹ ಕಾರ್ಯದರ್ಶಿಯಾಗಿ ಗಣೇಶ್ ದೇಸಾಯಿ, ಉಷಾ ಉಮೇಶ್, ಖಜಾಂಚಿಯಾಗಿ ಅನುರಾಗ್ ಗದ್ದಿ, ಕಾರ್ಯಕಾರಿ ಸಮಿತಿ ಸದಸ್ಯರಾಗಿ ವೆಂಕಟೇಶಮೂರ್ತಿ ಶಿರೂರು, ರಾಜಶೇಖರ ನುಲಿ, ಕೆಂಕೆರೆ ಮಲ್ಲಿಕಾರ್ಜುನ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.



ಶ್ರೀನಿವಾಸ ಮೂರ್ತಿ



ಆನಂದ ಮಾದಲಗೆರೆ

ಹೋಳಿ ವಿವಾದ: ತರಗತಿ ಬಹಿಷ್ಕರಿಸಿದ ವಿದ್ಯಾರ್ಥಿಗಳು

ಅಲಿಗಢ (ಪಿಟಿಐ): ಹೋಳಿ ಆಚರಣೆ ವಿವಾದದ ಹಿನ್ನೆಲೆಯಲ್ಲಿ ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಗುಂಪೊಂದು ಶುಕ್ರವಾರ ತರಗತಿಯನ್ನು ಬಹಿಷ್ಕರಿಸಿದೆ.

ಹೋಳಿ ಆಚರಣೆ ಸಂಬಂಧ ಎರಡು ಗುಂಪುಗಳ ನಡುವೆ ನಡೆದಿರುವ ಗಲಾಟೆ ಸಂಬಂಧವಾಗಿ ಏಕಪಕ್ಷೀಯವಾಗಿ ಕ್ರಮ ಕೈಗೊಂಡಿರುವುದನ್ನು ಖಂಡಿಸಿ ತರಗತಿ ಬಹಿಷ್ಕರಿಸುವಂತೆ ವಿದ್ಯಾರ್ಥಿ ನಾಯಕರು ಕರೆ ಕೊಟ್ಟಿದ್ದರು.

‘ಶುಕ್ರವಾರ ಬೆಳಿಗ್ಗೆ ತರಗತಿ ಆರಂಭವಾದ ಕೆಲ ಹೊತ್ತಿನಲ್ಲಿ ಆಗಮಿಸಿದ ವಿದ್ಯಾರ್ಥಿ ಗುಂಪೊಂದು ಉಳಿದ ವಿದ್ಯಾರ್ಥಿಗಳು ತರಗತಿಯನ್ನು ಬಹಿಷ್ಕರಿಸುವಂತೆ ಪ್ರೇರೆಪಿಸಿತು’ ಎಂದು ವಿಶ್ವವಿದ್ಯಾಲಯದ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಶುಕ್ರವಾರದ ಪ್ರಾರ್ಥನೆಯ ಬಳಿಕ ಪ್ರತಿಭಟನಾ ಜಾಥಾ ನಡೆಸುವಂತೆ ವಿದ್ಯಾರ್ಥಿ ಗುಂಪು ಕರೆ ಕೊಟ್ಟಿತ್ತು.

ನಾಳೆ ಚಿಂತಲಪಲ್ಲಿ ವೆಂಕಟರಾವ್ ಸ್ಮಾರಕ ಭವನ ಉದ್ಘಾಟನೆ

ಗೌರಿಬಿದನೂರು: ಹುಣಸೇನಹಳ್ಳಿ (ಚಿಂತಲಪಲ್ಲಿ)ಯಲ್ಲಿ ಭಾನುವಾರ (ಮಾ.24) ಚಿಂತಲಪಲ್ಲಿ ಪರಂಪರಾ ಟ್ರಸ್ಟ್‌ನಿಂದ ಮೈಸೂರು ಆಸ್ಥಾನ ಸಂಗೀತ ರತ್ನ ವಿದ್ವಾನ್ ಚಿಂತಲಪಲ್ಲಿ ವೆಂಕಟರಾವ್ ಸ್ಮಾರಕ ಭವನದ ಉದ್ಘಾಟನೆ ಜರುಗಲಿದೆ. ಉದ್ಘಾಟನೆಯ ನಂತರ ಚಿಂತಲಪಲ್ಲಿಯ ಕಲಾವಿದರಿಂದ ಗಾಯನ ಕಾರ್ಯಕ್ರಮ ನಡೆಯಲಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಭಾನುವಾರ ಬೆಳಿಗ್ಗೆ 10ಕ್ಕೆ ಮೈಸೂರು ಆಸ್ಥಾನ ಸಂಗೀತ ರತ್ನ ವಿದ್ವಾನ್ ಚಿಂತಲಪಲ್ಲಿ ವೆಂಕಟರಾವ್ ಸ್ಮಾರಕ ಭವನವು ಗ್ರಾಮದಲ್ಲಿ ಲೋಕಾರ್ಪಣೆ ಆಗಲಿದೆ.

ಶಾಸಕ ಕೆ.ಎಚ್.ಪುಟ್ಟಸ್ವಾಮಿಗೌಡ, ಮಾಜಿ ಸಚಿವ ಎನ್.ಎಚ್. ಶಿವಶಂಕರ ರೆಡ್ಡಿ ಹಾಗೂ ಅಧಿಕಾರಿಗಳು ಭಾಗವಹಿಸುವರು.

IN THE COURT OF THE HON’BLE I ADDL. CIVIL JUDGE AT BANGALORE

P & S.C. No.148/2024

BETWEEN:

1. **Mr. K.N. Hari Kumar**
   S/o Late Mr. K.A. Nettakallappa
   Aged about 72 years,
   22, 1st A Main road, Block 1, RMV 2nd Stage,
   Bangalore-560 094
2. **Mr. K.N. Tilak Kumar**
   S/o Late Mr. K.A. Nettakallappa
   Aged about 71 years,
   173, Subbarama Chetty Road, Basavanagudi,
   Bangalore - 560 004.
3. **Mr. K.N. Shanth Kumar**
   S/o Late Mr. K.A. Nettakallappa
   Aged about 63 years,
   298/A, 1st Main Road, 8th Block,
   Jayanagar, Bangalore-560 082 **PETITIONERS**

AND

NIL **RESPONDENT/S**

Whereas the petitioners have filed the above petition under Section 376 read with 372 of the Indian Succession Act, 1925, for the grant of succession certificate in their favour holding that they are entitled to succeed title over the Share Certificates and bank account of their mother Late Mrs. K.N. Jambavathi alias Jambavathi Nettakalappa who died on 27/06/1995.

Interested parties are hereby notified to appear before the Hon’ble Court in person or by pleader duly instructed on **25th day of APRIL 2024 at 11 ‘o’ Clock**, to show-cause against the above petition, take notice that, in default of your appearance on the date aforementioned, the petition will be heard and determined in your absence.

Details of the assets that standing in the name of Late Mrs. K.N. Jambavathi alias Jambavathi Nettakalappa.

SCHEDULE PROPERTIES

I. Equity Shares

Name of the company	Folio Numbers	No. of Equity Shares
ABB India Limited	J0002590	722
Glaxo Smith Kline Pharmaceuticals Limited	0147071	146
Mahindra & Mahindra Limited	N003209	3332
Essel Propack Limited	J01436	12800
Sterlite Technologies Limited	K55145	500
Peirce Leslie India Limited	00002815	290

II. Savings Bank Account

Savings bank account with **Kotak Mahindra Bank bearing account No. 134010000791** held at Nettakallappa Circle Branch, Bangalore.

Sd/-
Advocate for the Petitioners
Tarunn Surana
Surana & Co
Advocates
10, 2nd Floor, 5th Cross,
Vasanthnagar, Bengaluru-560 001
98459 10663
office@suranaandco.com

By Order of the Court
Sd/-
City Civil and Sessions Judge, Bengaluru City

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ



ಪಾತ್ರಗಳ ಒಳಗು ಹೊರಗು

ಮಾರ್ಚ್ 27 ವಿಶ್ವರಂಗಭೂಮಿ ದಿನ. ಈ ಹಿನ್ನೆಲೆಯಲ್ಲಿ ರಂಗಭೂಮಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಸಾಧಕಿಯರ ಮನದಾಳದ ಮಾತು ಇಲ್ಲಿದೆ...

ನಿರೂಪಣೆ: ರೂಪಾ ಕೆ.ಎಂ. ಪವಿತ್ರಾ ಭಟ್

ನಿಜ ಜೀವನದ ಕನ್ನಡಿ

ರಂಗಭೂಮಿಯ ಸೆಳೆತವೇ ಹಾಗೆ. ಅಷ್ಟು ಸುಲಭಕ್ಕೆ ಬಿಡುವಂಥದ್ದಲ್ಲ. ಹಾಗೆಯೇ ಅಷ್ಟು ಬೇಗ ಒಲಿಯುವಂಥದ್ದೂ ಅಲ್ಲ. ವಿದೇಶದಲ್ಲಿದ್ದು ಅಲ್ಲಿನ ನಾಟಕಗಳ ಸೊಗಡನ್ನೂ ಅರಿತಿರುವ ಧಾರವಾಡದ ಶಿಲ್ಪಾ ಮೊಕಾಶಿ, ನಾಟಕಗಳು ನಿಜ ಜೀವನದಲ್ಲಿ ನಡೆಯುವ ಘಟನೆಗಳಿಗೆ ಕನ್ನಡಿಯಂತೆ ಎನ್ನುತ್ತಾರೆ.

ಚಿಕ್ಕಂದಿನಿಂದಲೂ ನಾಟಕ ಎಂದರೆ ಹುಚ್ಚು. ಧಾರವಾಡದಲ್ಲಿ ಓದಿದ್ದು ಎಂಜಿನಿಯರಿಂಗ್ ಆದರೂ ರಂಗಭೂಮಿ ಸೆಳೆತ ಮಾತ್ರ ಹಾಗೆಯೇ ಇತ್ತು. ಯಾವ ಪಾತ್ರವಾದರೂ ಸರಿ ವೇದಿಕೆ ಹತ್ತಿ ನಟಿಸುತ್ತಿದ್ದೆ. ಆದರೆ ಮದುವೆಯಾದ ಮೇಲೆ ಹುಟ್ಟೂರು ಮಾತ್ರವಲ್ಲ, ದೇಶವನ್ನೇ ಬಿಟ್ಟು ಹೋಗಿದ್ದೆ. 12 ವರ್ಷ ವಿದೇಶದಲ್ಲಿದ್ದ ನನಗೆ ನಾಟಕ, ವೇದಿಕೆಯ ಸಂಪರ್ಕ ಕಡಿದಿತ್ತು. ಆದರೆ ಅದರೆಡೆಗಿನ ಹುಚ್ಚು ಆಸೆ ಮಾತ್ರ ಕಡಿಮೆಯಾಗಿರಲಿಲ್ಲ.

ಇಂಗ್ಲೆಂಡ್‌ನಲ್ಲಿ ಅನೇಕ ನಾಟಕಗಳು ನಡೆಯುತ್ತವೆ. ವರ್ಷಗಟ್ಟಲೇ ಒಂದೇ ನಾಟಕ ಪ್ರದರ್ಶಿಸಿದರೂ ನೋಡುಗರ ಸಂಖ್ಯೆ ಕಡಿಮೆಯಾಗುವುದಿಲ್ಲ. ಅಲ್ಲಿದ್ದಾಗ ಆಗಾಗ ನಾಟಕ ನೋಡಲು ಹೋಗುತ್ತಿದ್ದೆ. ವೇದಿಕೆ ಮೇಲೆ ಒಬ್ಬೊಬ್ಬರ ನಟನೆಯನ್ನು ನೋಡಿ ನಾನು ಮಾಡಬೇಕಿತ್ತು ಎಂದು ನನ್ನೊಳಗೇ ಮರುಗಿದ್ದಿದೆ.

2015ರಲ್ಲಿ ಭಾರತಕ್ಕೆ ವಾಪಸ್ ಆಗಿ ಮೈಸೂರಿನಲ್ಲಿ ವಾಸವಿದ್ದೆವು. ಆಗ ಮತ್ತೆ 'ಅರಿವು ರಂಗ' ತಂಡದೊಂದಿಗೆ ಸೇರಿ ನಾಟಕ ಮಾಡಿದ್ದೆ. ವೇದಿಕೆ ಹತ್ತಿದಾಗ ಏನೋ ಕಳೆದುಕೊಂಡಿದ್ದನ್ನು ಮತ್ತೆ ಪಡೆದುಕೊಂಡಂತಾಗಿತ್ತು, ಮಗು ತಾಯಿ ಮಡಿಲನ್ನು ಮತ್ತೆ ಸೇರಿದ ಅನುಭವವದು.

ವಿದೇಶಕ್ಕೆ ಹೋಗುವ ಮೊದಲು ನನ್ನ ರಂಗಭೂಮಿ ಜ್ಞಾನ ಇಲ್ಲಿಗೆ ಮಾತ್ರ ಸೀಮಿತವಾಗಿತ್ತು. ಆದರೆ ಅಲ್ಲಿ ಬೇರೆ ಬೇರೆ ನಾಟಕಗಳನ್ನು ನೋಡಲು ಸಾಧ್ಯವಾಗಿತ್ತು. ಧ್ವನಿ ನಾಟಕ, ವಿಜ್ಞಾನ ನಾಟಕ, ಹಾರರ್ ನಾಟಕದ ಜತೆಗೆ ಅವರು ಬಳಸುವ ವಿವಿಧ ತಂತ್ರಗಳನ್ನು ತಿಳಿಯಲು ಸಾಧ್ಯವಾಯಿತು. ಅದರ ಬಗ್ಗೆ ತಿಳಿಯಬೇಕೆಂದು ಭಾರತಕ್ಕೆ ಬಂದ ಮೇಲೆ ರಂಗಭೂಮಿ ವಿಷಯದ ಮೇಲೆ ಉನ್ನತ ಶಿಕ್ಷಣ ಪಡೆದುಕೊಂಡೆ. ನಾಟಕದ ವಿವಿಧ ಆಯಾಮಗಳನ್ನು ತಿಳಿದುಕೊಂಡು ನನ್ನಲ್ಲಿ ಅಳವಡಿಸಿಕೊಂಡೆ.

ನನ್ನ ಮಕ್ಕಳಿಗೆ ಶಾಲೆಗೆ ಕಳಿಸಿ ಶಿಕ್ಷಣ ಕೊಡಿಸುವ ಬದಲು ಮನೆಯಲ್ಲಿಯೇ ರಂಗಭೂಮಿಯ ಹಿನ್ನೆಲೆಯಲ್ಲಿ ಶಿಕ್ಷಣ ನೀಡುತ್ತಿದ್ದೇನೆ. ಇದರಿಂದ ಮಕ್ಕಳಿಗೆ ಭಾಷೆ, ಬರವಣಿಗೆಯ ಸುಧಾರಣೆಯಾಗುತ್ತದೆ. ಅಲ್ಲದೆ ಹೊಸ ಬಗೆಯ ಕಲಿಕೆ ನೀಡುವ ಪ್ರಯೋಗ ನನ್ನದು.

ಮಕ್ಕಳು, ಸಂಸಾರದ ಜಂಜಾಟದ ನಡುವೆ ಕೆಲವೊಮ್ಮೆ ಅನಿಸಿದ್ದಿದೆ ಇಷ್ಟೆಲ್ಲಾ ಜವಾಬ್ದಾರಿ ಬೇಕಿತ್ತಾ ಎಂದು. ಆದರೆ ನಮ್ಮವರು ನೀಡುವ ಪ್ರೋತ್ಸಾಹ ಎಂತಹ ಸಾಧನೆಗಾದರೂ ಸ್ಫೂರ್ತಿ ನೀಡಬಲ್ಲದು. ಅದೇ ಹುರುಪಿನಲ್ಲಿ ನಾಟಕವನ್ನು ನಿರ್ದೇಶಿಸಿ, ತಂಡದೊಂದಿಗೆ ಪ್ರದರ್ಶನ ನೀಡುತ್ತಿದ್ದೇನೆ.



ಶಿಲ್ಪಾ ಮೊಕಾಶಿ ಧಾರವಾಡ



ಮಾಲತಿ ಸರದೇಶಪಾಂಡೆ ಬೆಂಗಳೂರು

ಬದುಕು ಕೊಟ್ಟಿದೆ

ಜೀವನವೊಂದು ನಾಟಕ ರಂಗ, ಎಲ್ಲರೂ ಕಲಾವಿದರೆ ಎಂಬ ಮಾತು ನಿಜವೇ ಇರಬಹುದು. ನಾಟಕದ ವಿಚಾರ ಬಂದಾಗ ಎಲ್ಲರೂ ಕಲಾವಿದರಾಗಲಾರರು. ಅದಕ್ಕೆ ಬದ್ಧತೆ, ಸಿದ್ಧತೆ ಎಲ್ಲವೂ ಬೇಕು.

ಅದರಲ್ಲೂ ಇಂದಿನ ಡಿಜಿಟಲ್ ಯುಗದಲ್ಲಿ ತಾಸುಗಟ್ಟಲೆ ಪ್ರೇಕ್ಷಕನನ್ನು ಹಿಡಿದಿಡುವುದು ಮೊದಲಿಗಿಂತ ಹೆಚ್ಚು ಸವಾಲೇ ಸರಿ. ಅಂತಹ ಶಕ್ತಿ ನಾಟಕಕ್ಕಿದೆಯಾದರೂ ಕಲಾವಿದರಿಗೂ ಅಂತಹ ತಾಕತ್ತಿರಬೇಕು. ಇಂತಹ ತಾಕತ್ತಿನ ಕಲಾವಿದೆ, ಇಂದಿಗೂ ಆಧುನಿಕತೆಯೊಟ್ಟಿಗೆ ನಾಟಕದಲ್ಲಿ ತೊಡಗಿಸಿಕೊಂಡು ಸಾಗುತ್ತಿರುವವರು ಮಾಲತಿ ಸರದೇಶಪಾಂಡೆ.

ನಾಟಕವೆಂದರೇನೇ ಹಾಗೆ, ಅದು ಆಪ್ಯಾಯಮಾನವಾದದ್ದು. ರಂಗದ ರಂಗಿನ ಬೆಳಕಿನಲ್ಲಿ ಬಣ್ಣ ತೊಟ್ಟು ನಿಂತರೆ ನಿಜ ಅಸ್ತಿತ್ವ ಮರೆಯಾಗಿ ಪಾತ್ರವಾಗಿ ಬದಲಾಗುವ ಸುಂದರ ಅನುಭವವದು. ಚಿಕ್ಕಂದಿನಲ್ಲಿ ಚಿಕ್ಕಪುಟ್ಟ ಪಾತ್ರಗಳನ್ನು ಮಾಡುತ್ತಿದ್ದ ನಾನು 20ನೇ ವಯಸ್ಸಿನಲ್ಲಿ ಸಂಪೂರ್ಣವಾಗಿ ವೇದಿಕೆ ಹತ್ತಿದ್ದೆ. ಧಾರವಾಡದಲ್ಲಿ ಹಯವದನ ನಾಟಕದಲ್ಲಿ ಪದ್ಮಿನಿಯಾಗಿ ಬಣ್ಣ ಹಚ್ಚಿದ ಮೇಲೆ ರಂಗಭೂಮಿ ನನ್ನ ಜೀವನದ ಭಾಗವೇ ಆಯಿತು.

ಬದಲಾವಣೆ ನಿರಂತರ...ಇಂದು ರಂಗಭೂಮಿ ಹೊಸ ತಂತ್ರಜ್ಞಾನದೊಂದಿಗೆ ಹೊಸ ಆವಿಷ್ಕಾರಗಳೊಂದಿಗೆ ಬೆಳೆದುನಿಂತಿದೆ. ಕಾಲಕ್ಕೆ ತಕ್ಕಂತೆ ನಾವೂ ಬದಲಾವಣೆ ಮಾಡಿಕೊಂಡು, ಕಲೆಯ ನೈಜ ಸತ್ವಕ್ಕೆ ಕುಂದು ಬಾರದಂತೆ ನಡೆಸಿಕೊಂಡು ಬರುತ್ತಿದ್ದೇವೆ. ಕಲಾವಿದರಾಗಿ ಅದು ನಮ್ಮ ಕರ್ತವ್ಯ ಕೂಡ.

ಹಿಂದೆಲ್ಲಾ ತಡರಾತ್ರಿ ನಾಟಕದಲ್ಲಿ ಅಭಿನಯಿಸಲು ಹೆಣ್ಣುಮಕ್ಕಳು ಮನೆಯಿಂದ ಹೊರಹೋಗುತ್ತಾರೆ ಎಂದರೆ ಕುಟುಂಬಕ್ಕೆ ಭಯವೇ ಹೆಚ್ಚಿತ್ತು. ನಾಟಕದ ಬಗ್ಗೆ ಅರಿವಿದ್ದವರು, ಅದರ ಹಿನ್ನೆಲೆಯಲ್ಲಿಯೇ ಬೆಳೆದು ಬಂದವರು ಮಾತ್ರ ಮುಂದೆ ಬರಲು ಸಾಧ್ಯವಾಗುತ್ತಿತ್ತು. ಈಗ ಕಾಲ ಬದಲಾಗಿದೆ, ನಾಟಕದಲ್ಲಿ ಆಸಕ್ತಿ ಹೊಂದಿರುವ ಯುವ ಜನತೆ ನಮ್ಮ ನಡುವೆ ಇದ್ದಾರೆ ಎನ್ನುವುದು ಖುಷಿಯ ವಿಷಯ.

ಹವ್ಯಾಸಿ ರಂಗಭೂಮಿ ಕಲಾವಿದೆಯಾಗಿ ಪಯಣ ಆರಂಭಿಸಿದ ನನ್ನನ್ನು ಕಲೆ ಅಪ್ಪಿಕೊಂಡಿತ್ತು. ವೇದಿಕೆಯಲ್ಲಿ ನಿಂತ ಮೇಲೆ ರಮಾಬಾಯಿ, ಮೋಹಿನಿ, ಲಕ್ಷ್ಮಿ ಯಾವುದೇ ಪಾತ್ರವಾಗಲೀ ಮಾಲತಿ ಮರೆಯಾಗಿ ಆ ಪಾತ್ರವೇ ರಾರಾಜಿಸುತ್ತಿತ್ತು. ಸಾವಿರಕ್ಕೂ ಹೆಚ್ಚು ಪ್ರದರ್ಶನ ನೀಡಿದರೂ ಸಹಿರಿಸಹಿ ಮತ್ತು ಆಲ್ ದಿ ಬೆಸ್ಟ್ ನನ್ನ ನೆಚ್ಚಿನ ನಾಟಕ. 11-13 ಜನರ ನಮ್ಮ ತಂಡ ಇಂದಿಗೂ ಕಲಾಪ್ರೇಮಿಗಳನ್ನು ನಾಟಕದತ್ತ ಹೊರಳುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದೇವೆ ಎಂಬ ಹೆಮ್ಮೆ ನಮ್ಮದು. ಕಿರುತೆರೆಯಲ್ಲಿ ಸಕ್ರಿಯರಾಗಿದ್ದರೂ ನಾಟಕದ ಒಲವು ಇಂದಿಗೂ ನನ್ನನ್ನು ಸೆಳೆಯುತ್ತದೆ.

ನಾಟಕವೇ ಜೀವಾಳ...

ಕೆ. ವಿ ಸುಬ್ಬಣ್ಣ, ಯು. ಆರ್. ಅನಂತಮೂರ್ತಿ, ಬಿ. ವಿ. ಕಾರಂತರು ಹೀಗೆ ಅನೇಕ ಹಿರಿಯ ಕಲಾವಿದರ ಮಾರ್ಗದರ್ಶನದಲ್ಲಿ ಬೆಳೆದ ಅಪ್ಪಟ ಹವ್ಯಾಸಿ ರಂಗಭೂಮಿ ಕಲಾವಿದೆ ನಾನು. 1994ರಿಂದ ನಟನೆಯಲ್ಲಿ ತೊಡಗಿಸಿಕೊಂಡಿದ್ದೇನೆ. ಪ್ರತಿ ಕಲಾವಿದರಿಗೂ ರಂಗಭೂಮಿಯೇ ಬುನಾದಿ.

ತಂದೆಯ ಪೀಳಿಗೆಗೆ ರಂಗಭೂಮಿಯೊಂದಿಗಿನ ನಂಟು ಕೊನೆಯಾಗಬಾರದು, ಅದನ್ನು ಮುಂದುವರಿಸಿಕೊಂಡು ಏನಾದರೂ ಸಾಧನೆ ಮಾಡಬೇಕೆಂದು ಹೊರಟ ನನಗೆ ನಾಟಕವೇ ಜೀವಾಳವಾಗಿತ್ತು. ಮನೆ ತೊರೆದು ನೀನಾಸಂಗೆ ಸೇರಿದ್ದು ನನ್ನ ತಂದೆಗೆ ಇಷ್ಟವಿರಲಿಲ್ಲ, ಸರಿಸುಮಾರು ಮೂರು ತಿಂಗಳು ಮನೆಯವರ ಸಂಪರ್ಕವಿಲ್ಲದೆ ಹೊರಗಿನವರ ಉಪಚಾರದಲ್ಲಿಯೇ ಇದ್ದೆ, ಹೆಣ್ಣುಮಕ್ಕಳನ್ನು ರಂಗಭೂಮಿಯಿಂದ ದೂರವಿಡುತ್ತಿದ್ದ ಕಾಲದಲ್ಲಿ ಅದರಲ್ಲೇ ಜೀವನ ಕಟ್ಟಿಕೊಳ್ಳಲು ಹೊರಟಿದ್ದೆ. ದಿನಕಳೆದಂತೆ ನನ್ನ ಏಳಿಗೆ ಕಂಡು ತಂದೆಯೂ ಕ್ರಮೇಣ ಒಪ್ಪಿಕೊಂಡರು. ಅಲ್ಲಿಂದ ನನ್ನ ಪಯಣಕ್ಕೆ ಹೊಸ ತಿರುವು ಶುರುವಾಗಿತ್ತು.

ನಾಟಕವೇ ಜೀವನವಾಗಿ ಸುಮಾರು 30 ವರ್ಷಗಳು ಕಳೆಯುತ್ತಾ ಬಂತು. 200ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದೇನೆ. ಇಂದಿಗೂ ವೇದಿಕೆ ಹತ್ತುವಾಗ ಅದೇನೋ ಅಳುಕು, ಆಂತರ್ಯದಲ್ಲಿ ಭಯ ಪುಟಿದೇಳುತ್ತದೆ. ಪಾತ್ರವಾಗಿ ಒಮ್ಮೆ ಮೈಮರೆತರೆ ಹೊರಗಿನ ಪ್ರಪಂಚ ಶೂನ್ಯ. ಅಂತಹ ಒಂದು ಭಯ ಇದ್ದರೆ ಮಾತ್ರ ಒಬ್ಬ ಕಲಾವಿದ ಮುಂದುವರಿಯಲು ಸಾಧ್ಯ ಎನ್ನುವುದು ನನ್ನ ತತ್ವ.

ನಿರ್ದೇಶಕರು ನೀಡುವ ಪ್ರತೀ ಪಾತ್ರವೂ ಸವಾಲು. ವೈಯಕ್ತಿಕವಾಗಿ ಎಷ್ಟೇ ಕಲಿಸಿದರೂ ಎದುರಿಗಿರುವ ಕಲಾವಿದನ ನಟನೆ ನೋಡಿ ಕಲಿಯುವ ಮನಸ್ಸಿರಬೇಕು. ನನ್ನ ಪಾತ್ರವನ್ನು ನಾನು ಇನ್ನಷ್ಟು ಚಂದವಾಗಿ ಹೇಗೆ ಮಾಡಬಹುದು ಎನ್ನುವ ಹುಮ್ಮಸ್ಸಿರಬೇಕು. ಆಗ ಮಾತ್ರ ನಾಟಕದಲ್ಲಿನ ಪಾತ್ರ ನಾವಾಗಲು ಸಾಧ್ಯ. ಪ್ರತಿ ಪಾತ್ರಕ್ಕೆ ಜೀವ ತುಂಬುವ ಹಾಗೆ ರಂಗಭೂಮಿ ನಮ್ಮ ಜೀವನಕ್ಕೆ ರಂಗು ತುಂಬಿದೆ. ಏನೇ ಸನ್ನಿವೇಶ ಬರಲಿ, ಯಾವುದೇ ಜಾಗವಿರಲಿ ಬದುಕಬಲ್ಲೆ ಎನ್ನುವ ಧೈರ್ಯ ನೀಡಿದೆ. ಅದರಲ್ಲೇ ಜೀವನ ರೂಪಿಸಿಕೊಂಡೆ ಎನ್ನುವ ಸಾರ್ಥಕತೆ ನನ್ನದು.



ಹನುಮಕ್ಕ ಮರಿಯಮ್ಮನಹಳ್ಳಿ



ಶ್ರದ್ಧಾ ರಾಜ್ ಇಂಗ್ಲಿಷ್ ರಂಗಭೂಮಿ

ಬೆಸೆಯುವ ಸೊಬಗೇ ರಂಗಭೂಮಿ

2015ರಿಂದಲೂ ರಂಗಭೂಮಿಯಲ್ಲಿ ಸಕ್ರಿಯಳಾಗಿದ್ದೀನಿ. ಸ್ವತಂತ್ರ ನಟಿಯಾಗಿದ್ದರೂ ಆಫ್ ಸ್ಟ್ರೀಮ್ ಫಿಶಸ್ ಮತ್ತು ಕ್ವಾಬಿಲಾ ಕಲೆಕ್ಟಿವ್ ಎರಡೂ ತಂಡಗಳಲ್ಲಿಯೂ ಗುರುತಿಸಿಕೊಂಡಿದ್ದೇನೆ. ಈಗ ನಟನೆಯನ್ನು ವೃತ್ತಿಯಾಗಿಯೂ ತೆಗೆದುಕೊಂಡಿದ್ದೇನೆ. 'ಪಂಚಮ ಪದ', 'ಆಶಿ ಮತ್ತು ರೇಣು' ಹೀಗೆ ವಿಭಿನ್ನ ನಾಟಕಗಳಲ್ಲಿ ಪಾತ್ರ ಮಾಡಿದ್ದೇನೆ. ಜತೆಗೆ ಮಕ್ಕಳ ನಾಟಕ 'ಗಾಥ್ ಆಫ್ ಕಾರ್ನೆಜ್'ನಲ್ಲಿಯೂ ಪಾತ್ರ ನಿರ್ವಹಿಸಿದ್ದೇನೆ.

ಪಿಯು ಓದುತ್ತಿರುವಾಗಲೇ ರಂಗಭೂಮಿಯ ನಂಟು ಅಂಟಿಕೊಂಡಿತು. ನನಗೆ ರಂಗಭೂಮಿಯೆಂಬುದು ಪ್ರತಿಯೊಂದರ ಹೆಣಿಗೆ ಎಂದೇ ಅನಿಸುತ್ತದೆ. ಅದು ಪಾತ್ರವೇ ಆಗಿರಬಹುದು; ಕಥೆಯೇ ಆಗಿರಬಹುದು; ಭಾವವೇ ಆಗಿರಬಹುದು; ಸನ್ನಿವೇಶವೇ ಆಗಿರಬಹುದು. ಹೀಗೆ ಎಲ್ಲವನ್ನು ಹೆಣೆಯುತ್ತ ಒಂದು ಮಾದರಿಯಾಗಿ ರೂಪುಗೊಳ್ಳುವ ಸೊಬಗೇ ರಂಗಭೂಮಿ. ಒಂದಕ್ಕೊಂದು ಬೆಸೆದು ನೋಡುವ ಪರಿಯೇ ಚಂದ. ವ್ಯಷ್ಟಿಯಾಗಿ, ಸಮಷ್ಟಿಯಾಗಿ ಹೇಗೆ ನೋಡಿದರೂ ರಂಗಭೂಮಿ ಜೀವನದ ಉದ್ದಕ್ಕೂ ಹೊಳಹುಗಳನ್ನು ನೀಡುತ್ತಲೇ ಇರುತ್ತದೆ. ಕಾಲೇಜಿನಲ್ಲಿದ್ದಾಗ ರಂಗಭೂಮಿಯಲ್ಲಿ ಸಿಕ್ಕ ಗೆಳೆಯರೂ ಈಗಲೂ ನನ್ನ ಜತೆ ಇದ್ದಾರೆ. ಬದುಕುವ ದಾರಿ, ಮಾರ್ಗದರ್ಶನ, ಜತೆಗೆ ಸ್ನೇಹಿತರ ಬೆಂಬಲ ಹೀಗೆ ಎಲ್ಲವನ್ನು ಕೊಟ್ಟಿದೆ.

ರಂಗಭೂಮಿಯಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚುತ್ತಲೇ ಇದೆ. ನಾನು ಆರಂಭಿಕ ಹೆಜ್ಜೆಗಳನ್ನು ಇಟ್ಟಿದ್ದು ನಿರ್ದೇಶಕಿಯೊಬ್ಬರ ಸಹಾಯದಿಂದಲೇ. ಹೆಣ್ಣುಮಕ್ಕಳ ಕೆಲಸಕ್ಕೆ ಪ್ರಾಮುಖ್ಯತೆಯೂ ಸಿಗುತ್ತಿದೆ. ಇಂಗ್ಲಿಷ್ ರಂಗಭೂಮಿಯಲ್ಲಿ ಕಥೆ ಹಾಗೂ ನಿರೂಪಣೆಯ ಶೈಲಿಯಲ್ಲಿ ಹಲವು ಪ್ರಯೋಗಗಳು ಆಗುತ್ತಿವೆ. ಅದರಲ್ಲಿಯೂ ಹೆಣ್ಣುಮಕ್ಕಳ ದೃಷ್ಟಿಕೋನದಿಂದ ಪ್ರಯೋಗಗಳು ನಡೆಯುತ್ತಿರುವುದು ಗಮನಾರ್ಹ. ಗಾಢ ಸತ್ಯಕ್ಕೆ ಪ್ರೇಕ್ಷಕ ಪ್ರಭುವಿನ ಮುಂದೆ ಕನ್ನಡಿ ಹಿಡಿಯುವುದಕ್ಕೆ ರಂಗಭೂಮಿಯಲ್ಲಿ ಬಹಳಷ್ಟು ಅವಕಾಶಗಳಿವೆ. ಅನನ್ಯ ಜಗತ್ತು ಎನಿಸಿಕೊಂಡಿರುವ ಕನ್ನಡ ಮತ್ತು ಇಂಗ್ಲಿಷ್ ರಂಗಭೂಮಿಗಳೆರಡೂ ಒಂದಕ್ಕೊಂದು ಸಮೀಪ ಬರುತ್ತಿದೆ ಎನಿಸುತ್ತಿರುವುದು ಖುಷಿಯ ವಿಚಾರ.



ಪ್ರಣೀತಾ ಸುಭಾಷ್

ಕುಟುಂಬದ ಕಾಳಜಿಗೆ ಬಾದಾಮಿ

ಧಾವಂತದ ಬದುಕಿನಲ್ಲಿ ಚರ್ಮ ಮತ್ತು ಕೂದಲಿನ ಬಗ್ಗೆ ಕಾಳಜಿ ವಹಿಸವುದು ಅಷ್ಟು ಸುಲಭವಲ್ಲ. ಆರೋಗ್ಯಯುತ ಬದುಕಿನಲ್ಲಿ ಬಾದಾಮಿಗಳ ಸೇವನೆಗೆ ವಿಶಿಷ್ಟ ಸ್ಥಾನವಿದೆ. ಈ ಬಗ್ಗೆ ನಟಿ ಪ್ರಣೀತಾ ಸುಭಾಷ್ ಹೇಳಿಕೊಂಡಿದ್ದಾರೆ.

ತಾಯಿ, ಪತ್ನಿ, ನಟಿ ಹೀಗೆ ಎಲ್ಲವೂ ಆಗಿರುವ ಪ್ರಣೀತಾ ಒತ್ತಡದ ನಡುವೆಯೂ ಬಾದಾಮಿ ಸೇವಿಸುವುದನ್ನು ನಿಯಮಿತ ಅಭ್ಯಾಸವಾಗಿಸಿಕೊಂಡಿದ್ದಾರೆ. ಹೊಳೆಯುವ ಚರ್ಮ ಮತ್ತು ಆರೋಗ್ಯಕರ ಕೂದಲಿಗೆ ಬಾದಾಮಿ ಸೇವನೆ ಅವಶ್ಯ. ಕುರುಕಲು ತಿಂಡಿಯ ಜಾಗವನ್ನು ಈಗೀಗ ಬಾದಾಮಿ ಆಕ್ರಮಿಸಿಕೊಂಡಿದೆ.

'ಬಾದಾಮಿ ರುಚಿಕರ ಮಾತ್ರವಲ್ಲ. ಅವು ಚರ್ಮ ಮತ್ತು ಕೂದಲನ್ನು ಹೊಳಪಾಗಿಡುತ್ತದೆ. ಅದಕ್ಕೆ ನಿತ್ಯ ಬೆಳಿಗ್ಗೆ ಬಾದಾಮಿಯನ್ನು ನೆನೆಸಿ, ಸಿಪ್ಪೆ, ಸುಲಿದು ತಿನ್ನುವ ಅಭ್ಯಾಸವನ್ನು ರೂಢಿಸಿಕೊಂಡಿದ್ದೇನೆ. ನನ್ನ ಮಗಳು ಅರ್ನಾಳಿಗೂ ಬಾದಾಮಿಯ ರುಚಿ ತೋರಿಸಿದ್ದೇನೆ. ಪುಡಿ ಮಾಡಿದ ಬಾದಾಮಿಗಳನ್ನು ಆಹಾರ ಮಿಶ್ರಣದೊಂದಿಗೆ ನೀಡುತ್ತಿದ್ದೇನೆ' ಎನ್ನುತ್ತಾರೆ ಅವರು.

ನಿಮ್ಮ ದೈನಂದಿನ ಜೀವನದಲ್ಲಿ ಬಾದಾಮಿಯನ್ನು ಹೇಗೆ ಮತ್ತು ಯಾವಾಗ ಸೇವಿಸಬೇಕು ಎನ್ನುವುದರ ಕುರಿತು ಅವರು ಇಲ್ಲಿ ತಿಳಿಸಿದ್ದಾರೆ.

ಮಧುಮೇಹಿಗಳಾಗಿದ್ದರೆ ಆಗಾಗ ಹಸಿವು ಕಾಡುತ್ತಿರುತ್ತದೆ. ನಿಮ್ಮ ಕೈಚೀಲದಲ್ಲಿ ಪುಟ್ಟದೊಂದು ಸಂಚಿ ಮಾಡಿಟ್ಟುಕೊಂಡು ಅದರಲ್ಲಿ ಒಂದು ಹಿಡಿ ಬಾದಾಮಿ ಇಟ್ಟುಕೊಂಡಿರಿ. ಇನ್ನಿತರ ಕುರುಕಲು ತಿಂಡಿಗಳಿಗಿಂತಲೂ ಬಾದಾಮಿ ಸವಿಯುವುದು ಹೆಚ್ಚು ಆರೋಗ್ಯಕರ

ಕಾಳಜಿ



- ಇದು ಹೃದಯದ ಆರೋಗ್ಯಕ್ಕೆ ಸೂಕ್ತವಾಗಿದೆ
- ಹೇರಳವಾಗಿ ವಿಟಮಿನ್ ಇ ದೊರೆಯುತ್ತದೆ
- ರಕ್ತದ ಏರೊತ್ತಡವನ್ನು ನಿಯಂತ್ರಿಸುತ್ತದೆ
- ರಕ್ತದಲ್ಲಿ ಸಕ್ಕರೆ ಅಂಶವನ್ನು ನಿಯಂತ್ರಿಸುತ್ತದೆ
- ವಯೋಸಹಜವಾಗಿ ಮುಖದ ಮೇಲೆ ಮೂಡುವ ನೆರಿಗೆಗಳನ್ನು ನಿಯಂತ್ರಿಸುತ್ತದೆ
- ಮಕ್ಕಳು ನಿಯಮಿತವಾಗಿ ಸೇವಿಸುವುದರಿಂದ ನೆನಪಿನ ಶಕ್ತಿ ಹೆಚ್ಚುತ್ತದೆ
- ಮಕ್ಕಳಲ್ಲಿ ಏಕಾಗ್ರತೆ ಶಕ್ತಿ ಹೆಚ್ಚುತ್ತದೆ
- ಋತುಬಂಧದ ಸಂದರ್ಭದಲ್ಲಿ ಹೆಚ್ಚು ಬಾದಾಮಿಯನ್ನು ಸೇವಿಸುವುದರಿಂದ ಮೂಡ್‌ಸ್ವಿಂಗ್ ಅನ್ನು ತಡೆಯಬಹುದಾಗಿದೆ.

ಯಾವಾಗ ತಿನ್ನಬೇಕು?

ಸಾಮಾನ್ಯವಾಗಿ ರಾತ್ರಿ ನೆನಸಿಟ್ಟ ಬಾದಾಮಿಗಳನ್ನು ಬೆಳಗ್ಗೆ ನಿಮ್ಮ ತಿಂಡಿಯೊಟ್ಟಿಗೆ ಸೇವಿಸುವುದು ಸೂಕ್ತವಾಗಿದೆ. ಇಡೀದಿನ ಚೈತನ್ಯಭರಿತವಾಗಿರಲು ಇದು ಅನುಕೂಲ ಮಾಡಿಕೊಡುತ್ತದೆ.

ಎಷ್ಟು ತಿನ್ನಬೇಕು?

ಪ್ರತಿದಿನ ಬಾದಾಮಿಯನ್ನು ಸೇವಿಸಬೇಕೆಂದರೆ ಅದೆಷ್ಟು ತಿನ್ನಬೇಕು ಎಂಬ ಪ್ರಶ್ನೆಗೆ ಒಂದು ಸರಳ ಸೂತ್ರವಿದೆ. 1–2–3 ಅಂದ್ರೆ ಒಂದು ಔನ್ಸ್ ಅಥವಾ 23 ಬಾದಾಮಿಗಳನ್ನು ಪ್ರತಿದಿವಸವೂ ಸೇವಿಸಿದರೆ ನಮಗೆ ಅಗತ್ಯ ಇರುವ ಎಲ್ಲ ಪೋಷಕಾಂಶ ತತ್ವಗಳೂ ದೊರೆಯುತ್ತವೆ. ಆದರೆ ಏಕಾಏಕಿ ಪ್ರತಿದಿನ 23 ಬಾದಾಮಿ ಸೇವಿಸಲು ಆರಂಭಿಸಿದರೆ ಕೆಲವರಿಗೆ ಜೀರ್ಣವಾಗುವಲ್ಲಿ ತೊಂದರೆ ಉಂಟಾಗಬಹುದು. ಅಂಥವರು ಹತ್ತರಿಂದ ಆರಂಭಿಸಿ, 23ರವರೆಗೆ ನಿಧಾನವಾಗಿ ಪ್ರಮಾಣ ಹೆಚ್ಚಿಸುತ್ತ ಹೋಗಬೇಕು. ಜೀರ್ಣ ಶಕ್ತಿ ಕಡಿಮೆ ಇದ್ದವರು ತಮ್ಮ ಶಕ್ತ್ಯಾನುಸಾರ ಸೇವಿಸುವುದು ಒಳಿತು.

ಆಹಾ ಅಡುಗೆ

ರಸಸ್ವಾದ

ಪವಿತ್ರ ಮಾಸ ರಂಜಾನ್‌ನಲ್ಲಿ ಬ್ಯಾರಿ ಸಮುದಾಯದ ತಿಂಡಿತಿನಿಸುಗಳ ರೆಸಿಪಿಯನ್ನು ಪರಿಚಯಿಸಿದ್ದಾರೆ ಆಯಿಷಾ ಇಂದಬೆಟ್ಟು



ರಾಗಿ ಮಣ್ಣಿ

ಬೇಕಾಗುವ ಸಾಮಗ್ರಿಗಳು: ರಾಗಿ, ತೆಂಗಿನಕಾಯಿ, ಏಲಕ್ಕಿ, ಬೆಲ್ಲ.

ಮಾಡುವ ವಿಧಾನ: ರಾಗಿ ಹಾಗೂ ತೆಂಗಿನ ತುರಿಯನ್ನು ನುಣ್ಣಗೆ ರುಬ್ಬಿಕೊಂಡು, ಜರಡಿಯಲ್ಲಿ ಸೋಸಿಕೊಳ್ಳಬೇಕು. ರುಬ್ಬಿಕೊಂಡ ಹಾಲಿಗೆ ಬೆಲ್ಲ, ಏಲಕ್ಕಿ ಸೇರಿಸಿ ಗಟ್ಟಿಯಾಗುವುವರೆಗೂ ಕೈಯಾಡಿಸಬೇಕು. ಅದನ್ನು ಬಟ್ಟಲಿಗೆ ಸೇರಿಸಿ, ಒಣ ಹಣ್ಣುಗಳಿಂದ ಅಲಂಕರಿಸಬೇಕು. ಪ್ಲೇಟ್‌ಗೆ ಹಾಕಿ ಅರ್ಧ ಗಂಟೆ ಆರಲು ಬಿಟ್ಟು, ಬೇಕಾದ ಆಕಾರದಲ್ಲಿ ಕತ್ತರಿಸಿಕೊಂಡು ಮಾಡಿ ಸವಿಯಬಹುದು. ಫ್ರಿಜ್‌ನಲ್ಲಿಟ್ಟರೆ ಮೂರು ದಿನಗಳವರೆಗೆ ಬಳಸಬಹುದು.

ಎಗ್ ಪಫ್ಸ್

ಬೇಕಾಗುವ ಸಾಮಗ್ರಿಗಳು: ಈರುಳ್ಳಿ, ಕ್ಯಾರೆಟ್, ಅಲೂಗಡ್ಡೆ, ಕ್ಯಾಬೆಜ್, ಕಾಯಿಮೆಣಸು, ಹಳದಿ, ಚಿಕನ್, ಚಿಕನ್ ಮಸಾಲ, ಗರಂ ಮಸಾಲ, ಶುಂಠಿ ಬೆಳ್ಳುಳ್ಳಿ ಪೇಸ್ಟ್, ಕರಿಬೇವು, ಮೈದಾ, ಮೊಟ್ಟೆ, ಕೊತ್ತಂಬರಿ ಸೊಪ್ಪು.

ಮಾಡುವ ವಿಧಾನ: ಬಣ್ಣ ಬದಲಾಗುವವರೆಗೆ ಈರುಳ್ಳಿಯನ್ನು ಎಣ್ಣೆಯಲ್ಲಿ ಕರಿಯಬೇಕು. ಬಳಿಕ ಕರಿಬೇವು, ಕ್ಯಾರೆಟ್, ಕ್ಯಾಬೆಜ್, ಆಲೂಗಡ್ಡೆ ಸೇರಿಸಿ ಮಿಶ್ರಣ ಮಾಡಿಕೊಳ್ಳಬೇಕು. ಹಳದಿ, ಗರಂ ಮಸಾಲ, ಶುಂಠಿ ಬೆಳ್ಳುಳ್ಳಿ ಪೇಸ್ಟ್ ಸೇರಿಸಿ ಹದವಾಗಿ ಬೇಯಿಸಿಕೊಳ್ಳಬೇಕು. ಉಪ್ಪು, ಹಳದಿ ಹಾಕಿ ಬೇಯಿಸಿದ ಚಿಕನ್ ಅನ್ನು ಚಾಪ್ ಮಾಡಿ ಅದನ್ನು ಈ ಮಸಾಲೆಗೆ ಬೆರೆಸಬೇಕು. ಸಮೋಸದ ಎರಡು ಅಚ್ಚನ್ನು ಮೈದಾದಿಂದ ತಯಾರಿಸಿದ ಅಂಟು ಮೂಲಕ ಪಾಕೆಟ್ ಮಾದರಿಯಲ್ಲಿ ಆಕಾರ ನೀಡಬೇಕು. ಅದಕ್ಕೆ ಮಸಾಲೆ ತುಂಬಿಸಬೇಕು. ಮೊದಲೇ ಬೇಯಿಸಿದ ಅರ್ಧ ಮೊಟ್ಟೆಯನ್ನು ಇಡಬೇಕು. ಎರಡು ಬದಿಗಳನ್ನು ಅಂಟು ಮೂಲಕ ಮುಚ್ಚಬೇಕು. ಇನ್ನೆರಡು ಬದಿಗಳನ್ನು ಚಿತ್ರದಲ್ಲಿ ಕಾಣಿಸುವ ಹಾಗೆ ಗೆರೆ ಎಳೆದು ತುಂಡರಿಸಬೇಕು. ಅದರ ಮೇಲೆಗೆ ಮೈದಾ ಅಂಟನ್ನು ಸವರಿ ಜೋಡಿಸಬೇಕು. ಎಣ್ಣೆಯಲ್ಲಿ ಕರಿದರೆ ಎಗ್ ವಿತ್ ಚಿಕನ್ ಪಫ್ಸ್ ರೆಡಿ





ಚಿಕನ್ ಕಟ್ಲೆಟ್

ಬೇಕಾಗುವ ಸಾಮಗ್ರಿಗಳು: ಅಲೂಗಡ್ಡೆ, ಚಿಕನ್, ಈರುಳ್ಳಿ, ಟೊಮೆಟೊ, ಗರಂ ಮಸಾಲ, ಶುಂಠಿ ಬೆಳ್ಳುಳ್ಳಿ ಪೇಸ್ಟ್, ಚಿಕನ್ ಮಸಾಲ, ಉಪ್ಪು, ಹಳದಿ, ಮೊಟ್ಟೆ, ಬ್ರೆಡ್ ಕ್ರಮ್ಸ್.

ಮಾಡುವ ವಿಧಾನ: ಬಣ್ಣ ಬದಲಾಗುವವರೆಗೆ ಎಣ್ಣೆಯಲ್ಲಿ ಈರುಳ್ಳಿಯನ್ನು ಕರಿದು ಬಳಿಕ ಅದಕ್ಕೆ ಟೊಮೆಟೊ, ಶುಂಠಿ ಬೆಳ್ಳುಳ್ಳಿ ಪೇಸ್ಟ್, ಹಳದಿಯನ್ನು ಸೇರಿಸಬೇಕು. ರುಚಿಗೆ ತಕ್ಕಷ್ಟು ಉಪ್ಪನ್ನು ಚಿಮುಕಿಸಿ ಮಸಾಲೆ ತಯಾರಿಸಬೇಕು. ಮೊದಲೇ ಪ್ರತ್ಯೇಕವಾಗಿ ಬೇಯಿಸಿಕೊಂಡಿರುವ ಚಿಕನ್ ಹಾಗೂ ಆಲೂಗಡ್ಡೆಯನ್ನು ಸಣ್ಣದಾಗಿ ಹಿಚುಕಿ ಈ ಮಸಾಲೆಗೆ ಬೆರೆಸಬೇಕು. ಇದನ್ನು ಕಟ್ಲೆಟ್ ಆಕಾರದಲ್ಲಿ ಕಟ್ಟಬೇಕು.

ಬಳಿಕ ಇನ್ನೊಂದು ಬೌಲ್‌ನಲ್ಲಿ ಎರಡು ಮೊಟ್ಟೆಯನ್ನು ಒಡೆದು ಹಾಕಿ, ಅದಕ್ಕೆ ಉಪ್ಪು ಹಾಗೂ ಹಳದಿಯನ್ನು ಹಾಕಿ ಮಿಶ್ರಣ ಮಾಡಿಕೊಳ್ಳಬೇಕು. ಕಟ್ಟಿದ ಮಸಾಲೆಯನ್ನು ಮೊಟ್ಟೆ ಮಿಶ್ರಣದಲ್ಲಿ ಅದ್ದಿ, ಬ್ರೆಡ್ ಕ್ರಮ್ಸ್‌ನಲ್ಲಿ ಆಡಿಸಿ ಎಣ್ಣೆಯಲ್ಲಿ ಕರಿದರೆ ರುಚಿರುಚಿಯಾದ ಚಿಕನ್ ಕಟ್ಲೆಟ್ ಸಿದ್ಧಗೊಳ್ಳುತ್ತದೆ.



ಎಕ್ಸ್‌ಚೇಂಜ್ ಮೇಳ
₹8,000
ಫ್ಲಾಟ್ ಆಫ್ ಆನ್ ಹಳೆಯ ಎಸಿ*
ಬೃಹತ್ ಡಿಸ್ಕೌಂಟ್ಸ್
₹40,000
ವರೆಗಿನ ಕಡಿತ, ಹೊಸ ಎಸಿ* ಖರೀದಿ ಮೇಲೆ
ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
ಕೂಲೆಸ್ಟ್ ಸಮ್ಮರ್ ಸೇಲ್
UPTO 20% ಕ್ಯಾಶ್ ಬ್ಯಾಕ್ ಕ್ರೆಡಿಟ್ ಕಾರ್ಡ್ ಮೇಲೆ
1 ಇ.ಎಮ್.ಐ ಉಚಿತ*
ಉಚಿತ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್ ಮೌಲ್ಯ* ₹20,000
ಉಚಿತ ಇನ್‌ಸ್ಟಾಲೇಶನ್*
FINANCE POWERED BY Groww
0% EMI
MIN PRODUCT VALUE ₹10,000
MobiKwik 4% ಕ್ಯಾಶ್ ಬ್ಯಾಕ್ on UPI
MINIMUM TRANSACTION ₹500 MAXIMUM CASHBACK UPTO ₹1000
5% INSTANT DISCOUNT* SBI card
*Min. Trxn.: ₹15,000; Max. Discount: ₹2,500 per card. Valid only on EMI Trxn. Validity: 14 Mar - 28 Apr 2024. T&C Apply.
ASSURED GIFTS ON ALL LG PRODUCTS*
BT SPEAKER
INDUCTION COOKER
STEAM IRON
KETTLE
DRY IRON
24 HOURS EXPRESS DELIVERY*
UNBEATABLE OFFERS ON AIR CONDITIONERS
DAIKIN 1.0 TON 3 STAR INVERTER
ಗಿರಿಯಾಸ್ ರಿಯಾಯಿತಿ ₹ 7,670
ಎಕ್ಸ್‌ಚೇಂಜ್ ಹಳೆಯ ಎಸಿ ₹ 4,000
ಎಕ್ಸ್‌ಚೇಂಜ್ ಸಬ್ಸಿಡಿ ₹ 4,000
ಎಂ.ಆರ್.ಪಿ ₹48,200
ಎಫೆಕ್ಟಿವ್ ಪ್ರೈಸ್ ₹32,530
ಪ್ರತಿ ದಿನ ಇಎಂಐ ₹90
BLUE STAR 1.5 TON 3 STAR INVERTER
ಗಿರಿಯಾಸ್ ರಿಯಾಯಿತಿ ₹21,200
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್ ₹ 3,000
ಎಕ್ಸ್‌ಚೇಂಜ್ ಹಳೆಯ ಎಸಿ ₹ 4,000
ಎಕ್ಸ್‌ಚೇಂಜ್ ಸಬ್ಸಿಡಿ ₹ 4,000
ಎಂ.ಆರ್.ಪಿ ₹63,500
ಎಫೆಕ್ಟಿವ್ ಪ್ರೈಸ್ ₹31,300
ಪ್ರತಿ ದಿನ ಇಎಂಐ ₹87
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್
SAMSUNG 653 ಲೀ ಸೈಡ್ ಬೈ ಸೈಡ್ RS76CG8113SLHL
ಇ.ಎಮ್.ಐ ₹4,990
LG 650 ಲೀ ಸೈಡ್ ಬೈ ಸೈಡ್ GL-B257EPZ3
ಇ.ಎಮ್.ಐ ₹4,999
LG 1.5 TON 3 STAR INVERTER TS-Q18YNXE2
ಗಿರಿಯಾಸ್ ರಿಯಾಯಿತಿ ₹35,080
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್ ₹ 1,500
ಎಕ್ಸ್‌ಚೇಂಜ್ ಹಳೆಯ ಎಸಿ ₹ 4,000
ಎಕ್ಸ್‌ಚೇಂಜ್ ಸಬ್ಸಿಡಿ ₹ 4,000
ಎಂ.ಆರ್.ಪಿ ₹78,990
ಎಫೆಕ್ಟಿವ್ ಪ್ರೈಸ್ ₹34,410
ಪ್ರತಿ ದಿನ ಇಎಂಐ ₹96
Godrej 1.0 TON 3 STAR INVERTER
Girias Discount ₹ 9,480
Credit Card Cashback ₹ 1,000
Exchange Old AC ₹ 4,000
Exchange Subsidy ₹ 4,000
MRP ₹41,900
EFFECTIVE PRICE ₹23,420
Per Day EMI ₹65
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್
Haier 531 ಲೀ ಸೈಡ್ ಬೈ ಸೈಡ್
ಇ.ಎಮ್.ಐ ₹2,994
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್
Panasonic 280 ಲೀ ಫ್ರಾಸ್ಟ್ ಫ್ರೀ
ಇ.ಎಮ್.ಐ ₹2,724
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್
LG 9 ಕೆಜಿ ಫ್ರಂಟ್ ಲೋಡಿಂಗ್ FHP1209Z9B
ಇ.ಎಮ್.ಐ ₹4,416
BOSCH 8 ಕೆಜಿ ಫ್ರಂಟ್ ಲೋಡಿಂಗ್
ಇ.ಎಮ್.ಐ ₹3,799
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್
IFB 25ಲೀ ಕನ್‌ವೆಂಕ್ಷನ್ ಮೈಕ್ರೋವೇವ್
ಇ.ಎಮ್.ಐ ₹1,017
VOLTAS 1.0 TON 3 STAR INVERTER
ಗಿರಿಯಾಸ್ ರಿಯಾಯಿತಿ ₹22,620
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್ ₹ 1,500
ಎಕ್ಸ್‌ಚೇಂಜ್ ಹಳೆಯ ಎಸಿ ₹ 4,000
ಎಕ್ಸ್‌ಚೇಂಜ್ ಸಬ್ಸಿಡಿ ₹ 4,000
ಎಂ.ಆರ್.ಪಿ ₹56,990
ಎಫೆಕ್ಟಿವ್ ಪ್ರೈಸ್ ₹24,820
ಪ್ರತಿ ದಿನ ಇಎಂಐ ₹69
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್
LLOYD 1.0 TON 3 STAR INVERTER
ಗಿರಿಯಾಸ್ ರಿಯಾಯಿತಿ ₹16,440
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್ ₹ 1,500
ಎಕ್ಸ್‌ಚೇಂಜ್ ಹಳೆಯ ಎಸಿ ₹ 4,000
ಎಕ್ಸ್‌ಚೇಂಜ್ ಸಬ್ಸಿಡಿ ₹ 4,000
ಎಂ.ಆರ್.ಪಿ ₹49,990
ಎಫೆಕ್ಟಿವ್ ಪ್ರೈಸ್ ₹24,050
ಪ್ರತಿ ದಿನ ಇಎಂಐ ₹67
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್
iPhone 14/15
₹58,900 ONWARDS
₹81 ಪ್ರತಿ ದಿನ ಇಎಂಐ
70% OFF ON DAMAGE PROTECTION
SAMSUNG S24/ S24Plus/ S24Ultra
₹70,999 ONWARDS
₹98 ಪ್ರತಿ ದಿನ ಇಎಂಐ
PAY ₹199 AND GET 1YR COMPLETE DAMAGE PROTECTION + WATCH WORTH ₹17,999
5G mela 5G PHONE
₹9,999 ONWARDS
PAY ₹99 AND GET FREE 1 YEAR COMPLETE DAMAGE PROTECTION + BT NECKBAND WORTH UPTO ₹9999
mi vivo ONEPLUS oppo
LG ಒಎಲ್ಇಡಿ B3 77 4K SMART TV OLED77B3PSA
ಇ.ಎಮ್.ಐ ₹4,999
SAMSUNG 55 ಒಎಲ್ಇಡಿ 4K SMART TV 55S90C
ಇ.ಎಮ್.ಐ ₹3,990
SONY 55 4K ULTRA HD SMART ಒಎಲ್ಇಡಿ GOOGLE TV XR-55A80L
ಇ.ಎಮ್.ಐ ₹5,500
hp VICTUS- GAMING
RYZEN 5 5600H
16GB RAM
512GB SSD
4 GB GFX
15.6" FHD
WIN 11
OFFER PRICE ₹53,490
ಉಚಿತ: ₹9,999 ಮೌಲ್ಯದ ಸ್ಮಾರ್ಟ್ ವಾಚ್+ಬ್ಯಾಗ್
UPTO 2500 CASH BACK* + ADDITIONAL BENEFIT WORTH ₹10,999 @ ₹1999
Lenovo (Slim 1)
Ryzen 3 7320
8GB, 512GB
15.6 FHD
Win11 MSO 21
SPECIAL PRICE ₹36,490
ಉಚಿತ: ₹9,999 ಮೌಲ್ಯದ ಸ್ಮಾರ್ಟ್ ಕಾಲಿಂಗ್ ವಾಚ್+ಬ್ಯಾಗ್
LG SOUND BAR OK55
EMI ₹1,833
OFFER PRICE ₹21,990*
SONY 5.1 Ch. SOUND BAR HT-S20
EMI ₹1,249
OFFER PRICE ₹14,990*
WIDEST RANGE OF AIRCOOLERS
KENSTAR Symphony VOLTAS BAJAJ
WIDEST RANGE OF FANS
HAVELLS Crompton V-GUARD USHA orient
Prestige
MIXER GRINDERS ENDURA 1000W MIXER GRINDER + PRESSURE COOKERS: SS Popular3 LTR
OFFER PRICE: ₹8,190
COMBI MRP: ₹13,385
OZONE DIGITAL LOCKERS
₹2,190 ONWARDS
AVAILABLE @ SELECTED STORES
Prestige
GAS STOVES:SVACHH DUO / NEO 3 BURNER + PRESSURE COOKERS: SS POPULAR3 LTR
EUREKA FORBES AQUAGUARD SUPERIO RO+UV+MTDS+SS +
WONDERCHEF NON STICK COOKWARE: ASPA 4 Pc SET
OFFER PRICE: ₹18,990
COMBI MRP: ₹31,990
LG SAMSUNG SONY Panasonic Haier NW IFB Godrej LLOYD Whirlpool BOSCH Electrolux PHILIPS hp acer DELL Lenovo ASUS vivo oppo ONEPLUS mi iPhone JBL
BLUE STAR HÄFELE Symphony HAVELLS USHA DAIKIN GENERAL Prestige VOLTAS VOLTAS·beko Butterfly Preethi VIJAYALAKSHMI ULTRA EUREKA FORBES pureit Livpure FABER KENSTAR Pigeon BAJAJ Crompton MAHARAJA WHITELINE V-GUARD ZEBRONICS KAFF OZONE
GIRIAS THE CONSUMER DURABLE PEOPLE Since 1971
ಅಂದ್ರಹಳ್ಳಿ 95918 35070 | ಅತ್ತಿಬೆಲೆ 99009 77747 | ಆರ್.ಟಿ.ನಗರ 91080 65665 | ಇಂದಿರಾನಗರ 9035499255 | ಉತ್ತರಹಳ್ಳಿ 90362 89563 | ಎಲೆಕ್ಟ್ರಾನಿಕ್‌ಸಿಟಿ 9591103536 | ಕತ್ರಿಗುಪ್ಪೆ 9035499288 | ಕನಕಪುರ ಮುಖ್ಯ ರಸ್ತೆ 90082 20739 |ಕುಣಿಗಲ್ 90362 89546 | ಕೆಂಗೇರಿ 99009 77712 | ಕೆಆರ್ ಪುರಂ 9019929881 | ಕೋರಮಂಗಲ 90354 11200 | ಕೋಲಾರ 90082 20791 | ಗಾಂಧಿನಗರ 9035499311 | ಗೌರಿಬಿದನೂರು 90354 99244 | ಚನ್ನಪಟ್ಟಣ 9035023186 | ಚಿಂತಾಮಣಿ 90362 89552 | ಚಿಕ್ಕಜಾಲ 95918 32080 | ಚಿಕ್ಕಬಳ್ಳಾಪುರ 9591561669 | ಜಯನಗರ 90354 99077 | ಜಾಲಹಳ್ಳಿ ಕ್ರಾಸ್ 9008220804 | ಜೆ.ಪಿ.ನಗರ 9606922698 | ತಿಪಟೂರು 90362 89548 | ತುಮಕೂರು 90082 18009 | ದೊಡ್ಡಬಳ್ಳಾಪುರ 77602 12888 | ನಾಗರಭಾವಿ 90354 99191 | ನೆಲಮಂಗಲ 9606922798 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಬಸವನಗುಡಿ 90354 99244 | ಬಾಗೇಪಲ್ಲಿ 9036289562 | ಭಾರ್ತಿಯಾ ಮಾಲ್ 70900 00981 | ಮಾದನಾಯಕನಹಳ್ಳಿ 90362 89550 | ಮಂತ್ರಿ ಮಾಲ್ 95919 25353 | ಮತ್ತಿಕೆರೆ 90352 22377 |ಮಲ್ಲೇಶ್ವರಂ 90354 99233 | ಮಾಗಡಿರಸ್ತೆ 90362 89557 | ಮಾರತ್‌ಹಳ್ಳಿ 90354 99011 | ಮಾಲೂರು 9036984484 | ಮೈಸೂರು ರಸ್ತೆ 90354 99188 | ಯಲಹಂಕ 9036001315 | ರಾಜಾಜಿನಗರ 9035499144 | ರಾಮನಗರ 9606922697 | ವಿಜಯನಗರ 96069 22795 |ಶಿರಾ 9035023188 | ಸದಾಶಿವನಗರ 9035499088 | ಸಹಕಾರನಗರ 90199 29882 | ಹಿರಿಯೂರು 9035023185 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಹೆಬ್ಬಗೋಡಿ 90350 50023 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಹೊಸಕೋಟೆ 90362 89545 | ಹೊಸೂರು 04344 243633 | ಹೊಸೂರು ರಸ್ತೆ 9035499022
STORE LOCATOR
ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ.ಹಣಕಾಸು ಯೋಜನೆಗಳು ಫೈನಾನ್ಸ್ ಕಂಪನಿಯ ಸ್ವಂತ ವಿವೇಚನೆಗೆ ಒಳಪಟ್ಟಿರುತ್ತವೆ. ಆಯ್ದ ಬ್ರಾಂಡ್‌ಗಳು ಮತ್ತು ಮಾಡೆಲ್‌ಗಳ ಮೇಲೆ 20% ತನಕ ಕ್ಯಾಶ್‌ಬ್ಯಾಕ್ ಮತ್ತು 1 ಇಎಂಐ ತನಕ ರಿಯಾಯಿತಿ. 3 ಇಎಂಐ ಅನ್ನು ಪೂರ್ಣಗೊಳಿಸಿದ ನಂತರ ಕ್ಯಾಶ್ ಬ್ಯಾಕ್ / ವೋಚರ್‌ಗಳನ್ನು ಗ್ರಾಹಕರ ಬ್ಯಾಂಕ್ ಖಾತೆ / ಬಿಎಫ್‌ಎಲ್ ವ್ಯಾಲೆಟ್‌ಗೆ ಕ್ರೆಡಿಟ್ ಮಾಡಲಾಗುತ್ತದೆ. ಇಎಂಐ 9,12,18,24 ಮತ್ತು ಸ್ಥಿರ ಇಎಂಐ ಯೋಜನೆಗಳ ಆಧಾರದ ಮೇಲೆ ಮೇಲಿನ ಉತ್ಪನ್ನಗಳನ್ನು ನೀಡುತ್ತದೆ. ವಿನಿಮಯ ಕೊಡುಗೆಗಳು ಉತ್ತಮ ಕೆಲಸದ ಸ್ಥಿತಿಯ ಉತ್ಪನ್ನಗಳಲ್ಲಿ ಮತ್ತು ಇಎಂಐ ಬೆಲೆಯ ಮೇಲೆ ಮಾನ್ಯವಾಗಿರುತ್ತದೆ. ವಿನಿಮಯ ಕೊಡುಗೆಗಳು ಉತ್ತಮ ಕೆಲಸದ ಸ್ಥಿತಿಯ ಉತ್ಪನ್ನಗಳಲ್ಲಿ ಮತ್ತು ಎಂ.ಆರ್.ಪಿ ಬೆಲೆಯ ಮೇಲೆ ಮಾನ್ಯವಾಗಿರುತ್ತವೆ. ಹಳೆಯ ಸ್ಪ್ಲಿಟ್ ಎಸಿ ವಿನಿಮಯಕ್ಕಾಗಿ ಫ್ಲಾಟ್ ರೂ.8000 ರಿಯಾಯಿತಿ. ಉಚಿತ ಸ್ಮಾರ್ಟ್‌ವಾಚ್ ಆಫರ್‌ಗಳು ಕೇವಲ ರೂ.20000 ಮತ್ತು ಅದಕ್ಕಿಂತ ಹೆಚ್ಚಿನ ಆಯ್ದ ಮಾಡೆಲ್‌ಗಳು ಮತ್ತು ಬ್ರ್ಯಾಂಡ್‌ಗಳ ಖರೀದಿಗಳಿಗೆ ಮಾತ್ರ ಮಾನ್ಯವಾಗಿರುತ್ತವೆ.
155 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA

ಬೈಯಪ್ಪನಹಳ್ಳಿಯಲ್ಲಿ ಕಾಮಗಾರಿ: ರೈಲು ಸಂಚಾರ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಯಪ್ಪನಹಳ್ಳಿ ಯಾರ್ಡ್‌ನಲ್ಲಿ ಕಾಮಗಾರಿ ಕೈಗೊಳ್ಳಲಿರುವುದರಿಂದ ಏ.1ರಿಂದ 5ರ ವರೆಗೆ ಕೆಲವು ರೈಲುಗಳ ಸಂಚಾರ ರದ್ದುಗೊಳಿಸಲಾಗಿದ್ದು, ಇನ್ನೂ ಕೆಲವು ರೈಲುಗಳ ಮಾರ್ಗ ಬದಲಾವಣೆ ಮಾಡಲಾಗಿದೆ.

ಯಾರ್ಡ್‌ನಲ್ಲಿ ಬಾಣಸವಾಡಿ-ಕರ್ಮೆಲರಾಂ ಮಾರ್ಗದಲ್ಲಿ ಬಾಕ್ಸ್ ಸೇತುವೆ ನಿರ್ಮಾಣಕ್ಕಾಗಿ ಲೈನ್ ಬ್ಲಾಕ್ ಮತ್ತು ಪವರ್ ಬ್ಲಾಕ್ ಅಳವಡಿಸುವ ಕಾಮಗಾರಿ ನಡೆಯಲಿದೆ.

ಯಶವಂತಪುರ-ಸೇಲಂ-ಯಶವಂತಪುರ ಎಕ್ಸ್‌ಪ್ರೆಸ್, ಮೈಸೂರು-ಯಶವಂತಪುರ-ಮೈಸೂರು ಎಕ್ಸ್‌ಪ್ರೆಸ್, ಯಶವಂತಪುರ-ತುಮಕೂರು-ಯಶವಂತಪುರ ಮೆಮು, ಯಶವಂತಪುರ-ಹೊಸೂರು-ಯಶವಂತಪುರ ಮೆಮು ವಿಶೇಷ ರೈಲು, ಯಶವಂತಪುರ-ಚಿಕ್ಕಬಳ್ಳಾಪುರ-ಯಶವಂತಪುರ ಮೆಮು ರೈಲುಗಳ ಸಂಚಾರ ಈ ಸಮಯದಲ್ಲಿ ರದ್ದಾಗಲಿದೆ.

ಮಾರ್ಗ ಬದಲಾವಣೆ: ಕಣ್ಣೂರು-ಯಶವಂತಪುರ-ಕಣ್ಣೂರು ಎಕ್ಸ್‌ಪ್ರೆಸ್ ರೈಲು, ಯಶವಂತಪುರ-ಕೊಚುವೇಲಿ-ಯಶವಂತಪುರ ಎಕ್ಸ್‌ಪ್ರೆಸ್ ರೈಲು ಕಾರ್ಮೆಲರಾಂ, ಬೈಯಪ್ಪನಹಳ್ಳಿ ಕ್ಯಾಬಿನ್, ಬೈಯಪ್ಪನಹಳ್ಳಿ, ಬೆಂಗಳೂರು ಎಸ್‌ಎಂವಿಟಿ ಮತ್ತು ಬಾಣಸವಾಡಿ ಮಾರ್ಗ ಮೂಲಕ ಸಂಚರಿಸಲಿದೆ.

ಯಶವಂತಪುರ-ಕೊಚುವೇಲಿ ಯಶವಂತಪುರ ಎಕ್ಸ್‌ಪ್ರೆಸ್, ದಾದರ್-ತಿರುನೆಲ್ವೆಲಿ-ದಾದರ್ ಎಕ್ಸ್‌ಪ್ರೆಸ್, ಕೊಚುವೇಲಿ-ಯಶವಂತಪುರ-ಕೊಚುವೇಲಿ ರೈಲು ಬಾಣಸವಾಡಿ, ಎಸ್‌ಎಂವಿಟಿ ಬೆಂಗಳೂರು, ಬೈಯಪ್ಪನಹಳ್ಳಿ, ಬೈಯಪ್ಪನಹಳ್ಳಿ ಕ್ಯಾಬಿನ್, ಕಾರ್ಮೆಲರಾಂ ಮತ್ತು ಹೊಸೂರು ಮಾರ್ಗವಾಗಿ ಸಂಚರಿಸಲಿದೆ.

ರಂಜಾನ್ ತಿಂಗಳಲ್ಲಿ ನಗರದಲ್ಲೇ 500 ಟನ್‌ಗೂ ಹೆಚ್ಚು ಖರ್ಜೂರ ಮಾರಾಟದ ನಿರೀಕ್ಷೆ

ಮಾರುಕಟ್ಟೆಯಲ್ಲಿ ಖರ್ಜೂರ ವೈವಿಧ್ಯ

• ಖಲೀಲಅಹ್ಮದ ಶೇಖ



ರಸೆಲ್ ಮಾರುಕಟ್ಟೆಯ ಅಂಗಡಿಯೊಂದರಲ್ಲಿ ಕಂಡುಬಂದ ವಿವಿಧ ಬಗೆಯ ಖರ್ಜೂರಗಳು –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ

ಬೆಂಗಳೂರು: ರಂಜಾನ್ ಮಾಸದ ಅಂಗವಾಗಿ ನಗರದ ವಿವಿಧ ಮಾರುಕಟ್ಟೆಗೆ ದೇಶ-ವಿದೇಶದ ವಿಶಿಷ್ಟ ಖರ್ಜೂರದ ತಳಿಗಳು ಲಗ್ಗೆ ಇಟ್ಟಿವೆ. ಬೇಡಿಕೆಯನ್ನೂ ಪಡೆದಿವೆ. ವ್ಯಾಪಾರವೂ ಭರ್ಜರಿಯಾಗಿ ನಡೆಯುತ್ತಿದೆ.

ರಂಜಾನ್ ಮಾಸದಲ್ಲಿ ಖರ್ಜೂರಕ್ಕೆ ಹೆಚ್ಚು ಬೇಡಿಕೆ. ಈ ಸಮಯದಲ್ಲಿ ಮುಸ್ಲಿಮರು ಉಪವಾಸ ಮುಗಿಸುವಾಗ ಖರ್ಜೂರ ಸೇವಿಸುವ ಮೂಲಕ. ಈ ಪ್ರಾರ್ಥನೆ ವೇಳೆ, ನಗರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಖರ್ಜೂರ ಮಾರಾಟವಾಗುತ್ತದೆ.

ಶಿವಾಜಿನಗರದ ರಸೆಲ್ ಮಾರುಕಟ್ಟೆ, ಯಶವಂತಪುರದ ಎಪಿಎಂಸಿ ಮಾರುಕಟ್ಟೆ, ಮಲ್ಲೇಶ್ವರ, ಜಯನಗರ 4ನೇ ಬ್ಲಾಕ್, ಬಸವನಗುಡಿ, ಹಳೇ ತರಗುಪೇಟೆ, ಹೊಸ ತರಗುಪೇಟೆಗಳಲ್ಲಿ ಖರ್ಜೂರ ವ್ಯಾಪಾರ ನಡೆಯುತ್ತದೆ. ಸದ್ಯ ನಗರದಲ್ಲಿ ಖರ್ಜೂರ ಮಾರಾಟದ 200ಕ್ಕೂ ಹೆಚ್ಚು ಅಂಗಡಿಗಳಿವೆ. ಈ ಅವಧಿಯಲ್ಲಿ 500 ಟನ್‌ಗೂ ಅಧಿಕ ಖರ್ಜೂರ ಮಾರಾಟವಾಗುತ್ತದೆ ಎಂದು ಅಂದಾಜಿಸಲಾಗಿದೆ. ವಿದೇಶದ ಬಗೆಬಗೆಯ ಖರ್ಜೂರಗಳು ಈ ಮಾರುಕಟ್ಟೆಗಳಲ್ಲಿ ಲಭ್ಯ. ಮುಸ್ಲಿಮರ ಜತೆ ಬೇರೆ ಸಮುದಾಯದವರು ಖರ್ಜೂರ ಖರೀದಿಸುತ್ತಾರೆ.

'ರಂಜಾನ್ ಅಂಗವಾಗಿ ಮುಸ್ಲಿಮರು ಒಂದು ತಿಂಗಳು ಉಪವಾಸ ವ್ರತ (ರೋಜಾ) ಕೈಗೊಳ್ಳುತ್ತಾರೆ. ಪ್ರವಾದಿ ಮೊಹಮ್ಮದ್ ಅವರು ಇಫ್ತಾರ್ ವೇಳೆ ಖರ್ಜೂರ ಸೇವಿಸಿ ರೋಜಾ ಮುಕ್ತಾಯಗೊಳಿಸುತ್ತಿದ್ದರು. ಮಸೀದಿ, ಮನೆಗಳಲ್ಲಿ ಸಂಜೆ ಆಯೋಜಿಸುವ ಇಫ್ತಾರ್ ಕೂಟಗಳಲ್ಲಿ ಖರ್ಜೂರಕ್ಕೆ ಮೊದಲ ಸ್ಥಾನವಿದೆ' ಎನ್ನುತ್ತಾರೆ ಸಮುದಾಯದ ಹಿರಿಯರು.

'ಅಜೂವಾ ಖರ್ಜೂರ ಆರೋಗ್ಯಕ್ಕೆ ತುಂಬಾ ಉಪಯುಕ್ತವಾಗಿದೆ. ಖರ್ಜೂರದ ಜೊತೆಗೆ, ಅಫ್ಘಾನಿಸ್ತಾನದ ಅಂಜೂರ, ಬದಾಮಿ, ಗೋಡಂಬಿ, ಪಿಸ್ತಾ, ಕ್ಯಾಲಿಫೋರ್ನಿಯಾದ ಅಕ್ರೋಟ್ ಕೂಡ ಮಾರುಕಟ್ಟೆಯಲ್ಲಿ ಕಾಣಿಸಿಕೊಂಡಿವೆ. ರಂಜಾನ್ ಮಾಸದಲ್ಲಿ ನಮ್ಮ ಅಂಗಡಿಯಲ್ಲಿ ಡ್ರೈಫ್ರೂಟ್ ಮತ್ತು ಖರ್ಜೂರ ಖರೀದಿಗೆ ವಿವಿಧ ಕಡೆಗಳಿಂದ ಬರುತ್ತಾರೆ' ಎಂದು ಶಿವಾಜಿನಗರದ ರಸೆಲ್ ಮಾರ್ಕೆಟ್ ವ್ಯಾಪಾರಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಇದ್ರೀಸ್ ಚೌಧರಿ ಮಾಹಿತಿ ನೀಡಿದರು.

'ಖರ್ಜೂರಗಳಲ್ಲಿ ಔಷಧೀಯ ಗುಣಗಳಿವೆ. ಮಕ್ಕಳಿಂದ ಹಿಡಿದು ವೃದ್ಧರವರೆಗೆ ಎಲ್ಲರಿಗೂ ಖರ್ಜೂರ ಅಚ್ಚುಮೆಚ್ಚು. ಅಜುವಾ ಖರ್ಜೂರಕ್ಕೆ ವಿಶೇಷ ಶಕ್ತಿ ಇದೆ. ನಿಶ್ಯಕ್ತಿ, ಚರ್ಮರೋಗ, ದೃಷ್ಟಿ ದೋಷ ಕಾಯಿಲೆ ನಿವಾರಣೆಗೆ ಸಹಕಾರಿ ಎನ್ನಲಾಗಿದೆ. ದಕ್ಷಿಣ ಆಫ್ರಿಕಾ ಮೂಲದ ಮೆಡ್‌ಜೋಲ್ ಖರ್ಜೂರ ಹೆಚ್ಚು ಸಿಹಿಯಾಗಿದ್ದು, ಅಧಿಕ ತಿರುಳು ಹೊಂದಿರುತ್ತದೆ' ಎಂದು ಹೇಳಿದರು.

'ದಿನದ 12 ಗಂಟೆಯವರೆಗೂ ಉಪವಾಸ ಮಾಡುವುದರಿಂದ ದೇಹದಲ್ಲಿ ಸಕ್ಕರೆ ಪ್ರಮಾಣ ಕಡಿಮೆ ಆಗುತ್ತದೆ. ಇದನ್ನು ನಿವಾರಿಸಲು ಸಂಜೆ ಇಫ್ತಾರ್ ವೇಳೆಯಲ್ಲಿ ಖರ್ಜೂರ ಸೇವಿಸಲಾಗುತ್ತದೆ. ಇದರಿಂದ ನೈಸರ್ಗಿಕವಾದ ಸಕ್ಕರೆ ಅಂಶ ನಮ್ಮ ದೇಹಕ್ಕೆ ಸಿಗುವುದರ ಜೊತೆಗೆ ದೇಹದಲ್ಲಿ ಶಕ್ತಿಯ ಪ್ರಮಾಣವು ಹೆಚ್ಚಾಗುತ್ತದೆ' ಎಂದು ಹಲಸೂರಿನ ಸುಲೇಮಾನ್ ಪಾಷಾ ಹೇಳಿದರು.

ಡ್ರೈಫ್ರೂಟ್ಸ್ ದರ (1 ಕೆ.ಜಿಗೆ)

ಬದಾಮಿ	₹680
ಗೋಡಂಬಿ	₹800
ಅಕ್ರೂಟ್	₹400
ಪಿಸ್ತಾ	₹980–₹1080
ಒಣದ್ರಾಕ್ಷಿ	280
ಒಣಖರ್ಜೂರ	₹320

ಖರ್ಜೂರ ದರ (1 ಕೆ.ಜಿಗೆ)

ಜಾಹೇರಿ ಖರ್ಜೂರ	₹100
ಸುಕ್ರಿ ಖರ್ಜೂರ	₹500
ಕಲ್ಮಿ ಖರ್ಜೂರ	₹400–600
ಸಫಾವಿ ಖರ್ಜೂರ	₹800
ಮರಿಯಮ್ ಖರ್ಜೂರ	₹800
ಅಜೂವಾ ಖರ್ಜೂರ	₹900
ಮಬರೂಮ್ ಖರ್ಜೂರ	₹900
ಆಸ್ವಾದಿ ಚಾಕೊಲೇಟ್ ಖರ್ಜೂರ	₹1,200
ಮೆಡ್ಜಾಲ್ ಖರ್ಜೂರ	₹1,600

'ವಿದೇಶಿ ಖರ್ಜೂರಕ್ಕೆ ಹೆಚ್ಚಿದ ಬೇಡಿಕೆ'

ಪ್ರಪಂಚದಲ್ಲಿ 350ಕ್ಕೂ ಹೆಚ್ಚು ಬಗೆಯ ಖರ್ಜೂರ ಬೆಳೆಯಲಾಗುತ್ತದೆ. ಶಿವಾಜಿನಗರದ ರಸೆಲ್ ಮಾರುಕಟ್ಟೆಯಲ್ಲಿಯೇ 42 ಬಗೆಯ ಖರ್ಜೂರಗಳು ದೊರೆಯುತ್ತವೆ.

'ವಿದೇಶದ ಖರ್ಜೂರ ಹಾಗೂ ಒಣಹಣ್ಣುಗಳ ಖರೀದಿಗಾಗಿ ರಂಜಾನ್‌ಗಿಂತ ಒಂದು ತಿಂಗಳಿಂದ ಮುಂಚಿನಿಂದಲೇ ಬೇಡಿಕೆ ಇರುತ್ತದೆ. ಸೌದಿ ಅರೇಬಿಯಾ, ಇರಾನ್, ಜೋರ್ಡಾನ್, ಬಾಗ್ದಾದ್, ಟ್ಯುನಿಷಿಯಾ, ದಕ್ಷಿಣ ಆಫ್ರಿಕಾ ಖರ್ಜೂರಗಳನ್ನು, ಆಮದು ಮಾಡಿಕೊಳ್ಳಲಾಗಿದೆ. ಅದರಲ್ಲಿ ಅಜುವಾ, ಸಕ್ಕರೆ ರಹಿತ ಮೆಡ್ಜಾಲ್, ರುತ್ಬ ಸುಕ್ರಿ, ಸಖಾರಿ, ಕಲ್ಮಿ, ಇರಾನಿ, ಅಂಬರ, ಖುದ್ರಿ, ಸಗಾಯಿ ಸೇರಿ ಹಲವಾರು ಬಗೆಯ ಖರ್ಜೂರಗಳು ಲಭ್ಯ. ಪ್ರತಿ ಕೆ.ಜಿ.ಗೆ ಕನಿಷ್ಠ ₹100ರಿಂದ ಗರಿಷ್ಠ ₹2ಸಾವಿರವರೆಗೆ ದರವಿದೆ. ರಂಜಾನ್ ತಿಂಗಳಲ್ಲಿ ನಾನು 12ರಿಂದ 15 ಟನ್‌ನಷ್ಟು ಖರ್ಜೂರ ಮಾರಾಟ ಮಾಡುತ್ತೇನೆ' ಎಂದು ಮಹಮ್ಮದ್ ಇದ್ರೀಸ್ ಚೌಧರಿ ತಿಳಿಸಿದರು.

ಸುದ್ದಿ 2 ನಿಮಿಷ

ಆತ್ಮಹತ್ಯೆ: ಯುಡಿಆರ್ ದಾಖಲು

ಬೆಂಗಳೂರು: ಅತ್ತಿಗುಪ್ಪೆ ಮೆಟ್ರೊ ನಿಲ್ದಾಣದಲ್ಲಿ ಹಳಿಗೆ ಹಾರಿ ಕಾನೂನು ವಿದ್ಯಾರ್ಥಿ ಧ್ರುವ್ ಠಕ್ಕರ್ (19) ಆತ್ಮಹತ್ಯೆ ಮಾಡಿಕೊಂಡಿರುವ ಸಂಬಂಧ ಚಂದ್ರಾ ಲೇಔಟ್ ಠಾಣೆ ಪೊಲೀಸರು ಯುಡಿಆರ್ (ಅಸಹಜ ಸಾವು) ದಾಖಲಿಸಿಕೊಂಡಿದ್ದಾರೆ.

'ಮುಂಬೈನ ಧ್ರುವ್, ನಗರದಲ್ಲಿ ರುವ ರಾಷ್ಟ್ರೀಯ ಕಾನೂನು ಶಾಲೆ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದರು. ಕುಟುಂಬಸ್ಥರ ಅನುಮತಿ ಪಡೆದು ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಬೇಕಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವಿಶ್ವವಿದ್ಯಾಲಯದ ವಸತಿ ನಿಲಯದ ಮೇಲ್ವಿಚಾರಕರು, ಕೆಲ ವಿದ್ಯಾರ್ಥಿಗಳಿಂದ ಹೇಳಿಕೆ ಪಡೆಯಲಾಗಿದೆ' ಎಂದು ತಿಳಿಸಿವೆ.

ಸಿ.ಸಿ.ಸಿ.ಟಿ ಕ್ಯಾಮೆರಾದಲ್ಲಿ ದೃಶ್ಯ ಸೆರೆ: 'ರೈಲು ಬರುವ ಸಮಯಕ್ಕೆ ಹಳಿಗೆ ಇಳಿದಿದ್ದ ಧ್ರುವ್, ಅಲ್ಲಿಯೇ ಅಂಗಾತ ಮಲಗಿದ್ದ. ಅದನ್ನು ನೋಡಿದ್ದ ಭದ್ರತಾ ಸಿಬ್ಬಂದಿ, ಯುವಕರನ್ನು ರಕ್ಷಿಸಲು ಕೂಗಾಡಿದ್ದರು. ಅಷ್ಟರಲ್ಲೇ ರೈಲು ಧ್ರುವ್ ಅವರ ಮೇಲೆಯೇ ಹರಿದಿತ್ತು' ಎಂದು ಹೇಳಿವೆ.



ಬೆಂಕಿ ಅವಘಡ: ಇಬ್ಬರಿಗೆ ಗಾಯ

ಬೆಂಗಳೂರು: ಕಲಾಸಿಪಾಳ್ಯ ಠಾಣೆ ವ್ಯಾಪ್ತಿಯ ಕೊಠಡಿಯೊಂದರಲ್ಲಿ ಅಡುಗೆ ಅನಿಲ ಸೋರಿಕೆಯಿಂದ ಬೆಂಕಿ ಅವಘಡ ಸಂಭವಿಸಿದ್ದು, ಇಬ್ಬರು ತೀವ್ರ ಗಾಯಗೊಂಡಿದ್ದಾರೆ.

'ಶುಕ್ರವಾರ ನಡೆದಿರುವ ಅವಘಡದಲ್ಲಿ ಮಾವಳ್ಳಿ ಕೃಂಬಿಗಲ್ ರಸ್ತೆಯ ರಾಮಪ್ರಧಾನ್ (29) ಹಾಗೂ ಪರಶುರಾಮ್ ಗುವಾಲಾ (22) ಗಾಯಗೊಂಡವರು. ಇಬ್ಬರೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಟ್ರೈಸ್ಟಾರ್ ಗ್ಯಾಸ್ ಏಜೆನ್ಸಿಯಿಂದ ಕೃಂಬಿಗಲ್ ರಸ್ತೆಯ ಗೋದಾಮುವೊಂದರಲ್ಲಿ 300 ಅಡುಗೆ ಅನಿಲ ಸಿಲಿಂಡರ್‌ಗಳನ್ನು ಸಂಗ್ರಹಿಸಲಾಗಿತ್ತು. ಗೋದಾಮು ನಿರ್ವಹಣೆಗೆ ವ್ಯಕ್ತಿಯೊಬ್ಬರನ್ನು ನಿಯೋಜಿಸಲಾಗಿತ್ತು. ಅದೇ ವ್ಯಕ್ತಿ, ಗೋದಾಮು ಬಳಿಯ ಕೊಠಡಿಯಲ್ಲಿ ಉಳಿದುಕೊಂಡಿದ್ದರು.'ವ್ಯಕ್ತಿ ಉಳಿದುಕೊಂಡಿದ್ದ ಕೊಠಡಿಯಲ್ಲಿ ಅಡುಗೆ ಅನಿಲ ಸೋರಿಕೆಯಾಗಿ ಸ್ಫೋಟ ಸಂಭವಿಸಿ ಬೆಂಕಿ ಕಾಣಿಸಿಕೊಂಡಿತ್ತು. ಅಕ್ಕ–ಪಕ್ಕದ ಮನೆಗಳಿಗೂ ಬೆಂಕಿ ವ್ಯಾಪಿಸಿತ್ತು. ಮನೆಗಳ ಗೋಡೆಗಳು ಬಿರುಕು ಬಿಟ್ಟಿವೆ' ಎಂದು ಮೂಲಗಳು ತಿಳಿಸಿವೆ.

ಗ್ರಾಹಕನ ಮೇಲೆ ಹಲ್ಲೆ ನಡೆಸಿದ್ದ ಪೆಟ್ರೋಲ್ ಬಂಕ್ ಸಿಬ್ಬಂದಿ

ವಂಚನೆ: ಬಂಕ್ ವ್ಯವಸ್ಥಾಪಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ₹500 ಪಡೆದು, ₹489 ಪೆಟ್ರೋಲ್ ಹಾಕಿ ವಂಚಿಸಿದ್ದನ್ನು ಪ್ರಶ್ನಿಸಿದ್ದ ಗ್ರಾಹಕನ ಮೇಲೆ ಹಲ್ಲೆ ಮಾಡಿದ್ದ ಆರೋಪದಡಿ ಬಂಕ್ ವ್ಯವಸ್ಥಾಪಕ ಸೇರಿ ಇಬ್ಬರನ್ನು ರಾಜಗೋಪಾಲನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಪೀಣ್ಯ ಎರಡನೇ ಹಂತದಲ್ಲಿರುವ ಎಚ್‌.ಪಿ. ಪೆಟ್ರೋಲ್ ಬಂಕ್‌ನ ವ್ಯವಸ್ಥಾಪಕ ತಿಮ್ಮಪ್ಪ ಹಾಗೂ ಕೆಲಸಗಾರ ಸುರೇಶ್ ಅವರನ್ನು ಬಂಧಿಸಲಾಗಿದೆ. ಬಂಕ್ ಮಾಲೀಕ ರಂಗಸ್ವಾಮಿ ಹಾಗೂ ಕೆಲಸಗಾರ ದೇವರಾಜ್ ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಗ್ರಾಹಕ ಅಬೂಬಕರ್ ಅವರು ಗುರುವಾರ ಬೆಳಿಗ್ಗೆ ತಮ್ಮ ಬೈಕ್‌ನಲ್ಲಿ ಬಂಕ್‌ಗೆ ಹೋಗಿದ್ದರು. ₹500 ನೋಟು ಕೊಟ್ಟು, ಪೂರ್ತಿ ಹಣದಲ್ಲಿ ಪೆಟ್ರೋಲ್ ಹಾಕುವಂತೆ ಹೇಳಿದ್ದರು. ಬಂಕ್ ಸಿಬ್ಬಂದಿ, ಕೇವಲ ₹489 ಮಾತ್ರ ಪೆಟ್ರೋಲ್ ಹಾಕಿ ತರಾತುರಿಯಲ್ಲಿ ಪೈಪ್ ವಾಪಸು ತೆಗೆದುಕೊಂಡಿದ್ದರು. ₹500 ಪೆಟ್ರೋಲ್ ಹಾಕಿರುವುದಾಗಿ ಗ್ರಾಹಕನಿಗೆ ಹೇಳಿದ್ದರು.'

'ಕಡಿಮೆ ಪೆಟ್ರೋಲ್ ಹಾಕಿದ್ದನ್ನು ಗಮನಿಸಿದ್ದ ಅಬೂಬಕರ್, ಮುದ್ರಿತ ಬಿಲ್ ನೀಡುವಂತೆ ಒತ್ತಾಯಿಸಿದ್ದರು. ಮುದ್ರಿತ ಬಿಲ್ ನೀಡಲು ಒಪ್ಪದ ಸಿಬ್ಬಂದಿ, ಕೈಯಿಂದ ಬರೆದಿದ್ದ ಬಿಲ್ ಕೊಟ್ಟಿದ್ದರು. ಮತ್ತಷ್ಟು ಅನುಮಾನಗೊಂಡ ಗ್ರಾಹಕ, 'ಕಡಿಮೆ ಪೆಟ್ರೋಲ್ ಹಾಕಿದ್ದೀರಿ... ಗ್ರಾಹಕರಿಗೆ ಏಕೆ ಮೋಸ ಮಾಡುತ್ತಿದ್ದೀರಿ' ಎಂದು ಪ್ರಶ್ನಿಸಿದ್ದರು.'

'ಗ್ರಾಹಕನ ಜೊತೆಗೆ ಜಗಳ ತೆಗೆದಿದ್ದ ಸಿಬ್ಬಂದಿ, ಹಲ್ಲೆ ಮಾಡಿದ್ದರು. ಬಂಕ್‌ನಲ್ಲಿ ಅಟ್ಟಾಡಿಸಿ ಹಿಡಿದು ಥಳಿಸಿದ್ದರು. ಈ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆಹಿಡಿದಿದ್ದ ವ್ಯಕ್ತಿಯೊಬ್ಬರು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿದ್ದರು. ಬಂಕ್ ಸಿಬ್ಬಂದಿ ಕೃತ್ಯಕ್ಕೆ ಜನರಿಂದ ಆಕ್ರೋಶ ವ್ಯಕ್ತವಾಗಿತ್ತು' ಎಂದು ಪೊಲೀಸರು ತಿಳಿಸಿದರು.

ಎಫ್‌ಐಆರ್ ದಾಖಲಿಸಿಕೊಂಡು ದಾಳಿ: 'ಘಟನೆಯಿಂದ ಗಾಯಗೊಂಡಿದ್ದ ಅಬೂಬಕರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಚೇತರಿಸಿಕೊಂಡಿದ್ದಾರೆ. ಅವರ ಸಹೋದರ ನೀಡಿದ್ದ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಂಡಿದ್ದ ಇನ್‌ಸ್ಪೆಕ್ಟರ್ ಪುನೀತ್ ನೇತೃತ್ವದ ತಂಡ, ಬಂಕ್ ಮೇಲೆ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಿದೆ. ಅಬೂಬಕರ್ ಅವರಿಂದಲೂ ಹೇಳಿಕೆ ಪಡೆಯಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಂಕ್ ಸಿಬ್ಬಂದಿ ಹಲವು ದಿನಗಳಿಂದ ಗ್ರಾಹಕರಿಗೆ ವಂಚನೆ ಮಾಡುತ್ತಿರುವ ಮಾಹಿತಿ ಇದೆ. ಸದ್ಯ ದಾಖಲಾಗಿರುವ ಪ್ರಕರಣದ ತನಿಖೆ ಮುಂದುವರಿಸಲಾಗಿದೆ. ಕಾನೂನು ಮಾಪನ ಇಲಾಖೆ ಹಾಗೂ ತೈಲ ಪೂರೈಕೆ ಕಂಪನಿ ಅಧಿಕಾರಿಗಳಿಗೂ ಪ್ರಕರಣದ ಬಗ್ಗೆ ಮಾಹಿತಿ ನೀಡಲಾಗುವುದು. ಬಂಕ್‌ನಿಂದ ಯಾರಾದರೂ ವಂಚನೆಗೀಡಾಗಿದ್ದರೆ ಠಾಣೆಗೆ ನೀಡಬಹುದು' ಎಂದು ತಿಳಿಸಿದರು.

ಅಪರಾಧ ಸುದ್ದಿ

ಸವಾರನಿಗೆ ಗಾಯ: ಬಿಬಿಎಂಪಿ ವಿರುದ್ಧ ಎಫ್‌ಐಆರ್

ಬೆಂಗಳೂರು: ಮರದ ಕೊಂಬೆ ಬಿದ್ದು ದ್ವಿಚಕ್ರ ವಾಹನ ಸವಾರ ಚಂದನ್ ಎಂಬುವವರು ತೀವ್ರ ಗಾಯಗೊಂಡಿದ್ದು, ಈ ಬಗ್ಗೆ ಅಶೋಕನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮಾರ್ಚ್ 7ರಂದು ಬೆಳಿಗ್ಗೆ ನಡೆದಿರುವ ಘಟನೆ ಸಂಬಂಧ ಗಾಯಾಳು ಚಂದನ್ ಅವರು ಹೇಳಿಕೆ ನೀಡಿದ್ದಾರೆ. ಬಿಬಿಎಂಪಿ ಅಧಿಕಾರಿಗಳು ಹಾಗೂ ಕಾಲೇಜೊಂದರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಮುಂದುವರಿದಿದೆ' ಎಂದು ಪೊಲೀಸರು ಹೇಳಿದರು. 'ಕಂಪನಿಯೊಂದರ ಉದ್ಯೋಗಿ ಚಂದನ್, ರೆಸಿಡೆನ್ಸಿ ರಸ್ತೆ ಮೂಲಕ ದ್ವಿಚಕ್ರ ವಾಹನದಲ್ಲಿ ಕಚೇರಿಯತ್ತ ಹೊರಟಿದ್ದರು. ಇದೇ ರಸ್ತೆಯಲ್ಲಿರುವ ಕಾಲೇಜೊಂದರ ಕಾಂಪೌಂಡ್ ಜಾಗದಲ್ಲಿ ಬೃಹತ್ ಮರವಿದ್ದು, ಅದರ ಕೊಂಬೆಗಳು ರಸ್ತೆಗೆ ಚಾಚಿಕೊಂಡಿವೆ. ಅದೇ ಮರದ ಕೊಂಬೆಯೊಂದು ತುಂಡಾಗಿ ಚಂದನ್ ಮೇಲೆ ಬಿದ್ದಿತ್ತು' ಎಂದು ತಿಳಿಸಿದರು.

'ಘಟನೆಯಿಂದಾಗಿ ಚಂದನ್ ಅವರ ಬೆನ್ನುಮೂಳೆಗೆ ತೀವ್ರ ಪೆಟ್ಟು ಬಿದ್ದಿತ್ತು. ಸ್ಥಳದಲ್ಲಿ ಬಿದ್ದು ನರಳುತ್ತಿದ್ದ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಘಟನೆ ನಡೆದ ದಿನದಿಂದಲೂ ಚಂದನ್ ಆಸ್ಪತ್ರೆಯಲ್ಲಿದ್ದಾರೆ. ಬೆನ್ನುಮೂಳೆ ಮುರಿದಿರುವುದಾಗಿ ವೈದ್ಯರು ಹೇಳುತ್ತಿದ್ದಾರೆ' ಎಂದು ಪೊಲೀಸರು ಹೇಳಿದರು.

'ಕಾಲೇಜಿನವರು ಕೊಂಬೆಗಳನ್ನು ತೆರವು ಮಾಡಿರಲಿಲ್ಲ. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳೂ ಕ್ರಮ ಕೈಗೊಂಡಿರಲಿಲ್ಲ. ಇಬ್ಬರ ನಿರ್ಲಕ್ಷ್ಯದಿಂದ ಘಟನೆ ನಡೆದಿರುವುದಾಗಿ ಚಂದನ್ ಆರೋಪಿಸುತ್ತಿದ್ದಾರೆ. ಆರೋಪಿಗಳಿಗೆ ನೋಟಿಸ್ ನೀಡಿ, ವಿಚಾರಣೆ ನಡೆಸಲಾಗುತ್ತಿದೆ' ಎಂದು ತಿಳಿಸಿದರು.

ಎಡಿಜಿಪಿ ಹೆಸರಿನಲ್ಲಿ ನಕಲಿ ಆದೇಶ: ಎಫ್‌ಐಆರ್ ದಾಖಲು

ಬೆಂಗಳೂರು: 'ಸಶಸ್ತ್ರ ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳ ನೇಮಕಾತಿಗಾಗಿ ಮಾರ್ಚ್ 25, 26 ಹಾಗೂ 27ರಂದು ದೈಹಿಕ ಸಾಮರ್ಥ್ಯ ಪರೀಕ್ಷೆ ನಿಗದಿಪಡಿಸಲಾಗಿದೆ' ಎಂಬುದಾಗಿ ನೇಮಕಾತಿ ವಿಭಾಗದ ಎಡಿಜಿಪಿ ಹೆಸರಿನಲ್ಲಿ ನಕಲಿ ಆದೇಶ ಸೃಷ್ಟಿಸಲಾಗಿದ್ದು, ಈ ಸಂಬಂಧ ಕೇಂದ್ರ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದ್ದ ನಕಲಿ ಆದೇಶ ಗಮನಿಸಿದ್ದ ನೇಮಕಾತಿ ವಿಭಾಗದ ಅಧಿಕಾರಿಗಳು ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'3064 ಸಶಸ್ತ್ರ ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳ ನೇಮಕಾತಿಗಾಗಿ ಮಾರ್ಚ್ 18, 19 ಹಾಗೂ 20ರಂದು ದೈಹಿಕ ಪರೀಕ್ಷೆ ನಿಗದಿಪಡಿಸಲಾಗಿತ್ತು. ಆದರೆ, ತಾಂತ್ರಿಕ ಕಾರಣಗಳಿಂದಾಗಿ ಪರೀಕ್ಷೆಯನ್ನು ಮುಂದೂಡಲಾಗಿದೆ.

ನೇಮಕಾತಿ ವಿಭಾಗದಿಂದ ರಾಜ್ಯದ ಎಲ್ಲ ಪೊಲೀಸ್ ಘಟಕಗಳಿಗೆ ಈ ಬಗ್ಗೆ ಮಾಹಿತಿ ರವಾನಿಸಲಾಗಿದೆ. ಇದರ ಬೆನ್ನಲ್ಲೇ ಕಿಡಿಗೇಡಿಗಳು, ಅಭ್ಯರ್ಥಿಗಳ ದಾರಿ ತಪ್ಪಿಸುವ ಉದ್ದೇಶದಿಂದ ನಕಲಿ ಆದೇಶ ಸೃಷ್ಟಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಅಭ್ಯರ್ಥಿಗಳು ಯಾವುದೇ ತಪ್ಪು ಮಾಹಿತಿಗೆ ಕಿವಿಗೊಡಬಾರದು. ನೇಮಕಾತಿಗೆ ಸಂಬಂಧಪಟ್ಟಂತೆ ಯಾವುದೇ ಖಚಿತ ಮಾಹಿತಿ ಬೇಕಾದರೆ, https://ksp-recruitment.in/ ಹಾಗೂ ಸಹಾಯವಾಣಿ ಸಂಖ್ಯೆ: 080–22943346, 080–22943039 ಸಂಪರ್ಕಿಸಬಹುದು' ಎಂದು ಹೇಳಿವೆ.

ತೇಜಸ್ವಿ ಸೂರ್ಯ ವಿರುದ್ಧದ ಪ್ರಕರಣಕ್ಕೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ನಗರ್ತಪೇಟೆಯ ಮೊಬೈಲ್ ಅಂಗಡಿ ಮಾಲೀಕ ಮುಖೇಶ ಮೇಲೆ ದುಷ್ಕರ್ಮಿಗಳು ಹಲ್ಲೆ ನಡೆಸಿರುವುದನ್ನು ಖಂಡಿಸಿ ಪ್ರತಿಭಟನೆ ನಡೆಸಿ ಸಾರ್ವಜನಿಕ ಶಾಂತಿ ಸುವ್ಯವಸ್ಥೆಗೆ ಭಂಗ ತಂದ ಆರೋಪದಡಿ ಸಂಸದ ತೇಜಸ್ವಿ ಸೂರ್ಯ ವಿರುದ್ಧ ದಾಖಲಿಸಲಾಗಿದ್ದ ಎಫ್‌ಐಆರ್‌ಗೆ ಹೈಕೋರ್ಟ್ ತಡೆ ನೀಡಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ನನ್ನ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದು ಪಡಿಸಬೇಕು' ಎಂದು ಕೋರಿ ತೇಜಸ್ವಿ ಸೂರ್ಯ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ತೇಜಸ್ವಿ ಸೂರ್ಯ ಪರ ವಾದ ಮಂಡಿಸಿದ ವಕೀಲ ಪಿ. ಪ್ರಸನ್ನ ಕುಮಾರ್, 'ಅರ್ಜಿದಾರರ ವಿರುದ್ಧದ ಆರೋಪಗಳಿಗೆ ಯಾವುದೇ ಪುರಾವೆಗಳಿಲ್ಲ. ವಿನಾಕಾರಣ ಅವರಿಗೆ ತೊಂದರೆ ನೀಡುವ ಉದ್ದೇಶದಿಂದ ರಾಜಕೀಯ ಪ್ರೇರಿತವಾಗಿ ಈ ಪ್ರಕರಣ ದಾಖಲಿಸಲಾಗಿದೆ. ಹಾಗಾಗಿ, ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಪ್ರಕರಣಕ್ಕೆ ಮಧ್ಯಂತರ ತಡೆ ನೀಡಿ ವಿಚಾರಣೆ ಮುಂದೂಡಿತು.

ಸುಳ್ಳು ಎಫ್‌ಐಆರ್: ರಾಜರಾಜೇಶ್ವರಿನಗರ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಅಮಾನತು

ತನಿಖಾಧಿಕಾರಿಗೆ ತಿಳಿಯದಂತೆ ಚಾರ್ಜ್‌ಶೀಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವತಿಯೊಬ್ಬರ ಮೇಲೆ ಸುಳ್ಳು ಎಫ್‌ಐಆರ್ ದಾಖಲಿಸಿಕೊಂಡು ತನಿಖಾಧಿಕಾರಿಗೆ ತಿಳಿಯದಂತೆ ಕಾನೂನುಬಾಹಿರವಾಗಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದ ಆರೋಪದಡಿ ಹೆಡ್ ಕಾನ್‌ಸ್ಟೆಬಲ್ ಯದುಕುಮಾರ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

'ರಾಜರಾಜೇಶ್ವರಿನಗರ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದ ಯದುಕುಮಾರ್ ವಿರುದ್ಧದ ಆರೋಪದ ಬಗ್ಗೆ ಪ್ರಾಥಮಿಕ ತನಿಖೆ ನಡೆಸಿದ್ದ ಕೆಂಗೇರಿ ಗೇಟ್ ಠಾಣೆಯ ಎಸಿಪಿ ಅವರು ವರದಿ ಸಿದ್ಧಪಡಿಸಿದ್ದರು. ಇದೇ ವರದಿ ಆಧರಿಸಿ ಯದುಕುಮಾರ್ ಅವರನ್ನು ಅಮಾನತು ಮಾಡಿ ಪಶ್ಚಿಮ ವಿಭಾಗದ ಡಿಸಿಪಿ ಎಸ್. ಗಿರೀಶ್ ಅವರು ಆದೇಶ ಹೊರಡಿಸಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಜೈಲಿನಿಂದ ಬಂದು ದೂರು ನೀಡಿದ್ದ ಯುವಕ: 'ಕಂಪನಿಯಲ್ಲಿ ಸಹೋದ್ಯೋಗಿ ಆಗಿದ್ದ ಯುವತಿಯ ಜೊತೆಗಿನ ಖಾಸಗಿ ಕ್ಷಣಗಳ ಫೋಟೊ ಇಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಹಾಗೂ ಲೈಂಗಿಕ ಕಿರುಕುಳ ನೀಡುತ್ತಿದ್ದ ಆರೋಪದಡಿ 24 ವರ್ಷದ ಯುವಕನನ್ನು ಕೋಣನಕುಂಟೆ ಠಾಣೆ ಪೊಲೀಸರು ಬಂಧಿಸಿದ್ದರು. ಕೆಲ ದಿನ ಜೈಲಿನಲ್ಲಿದ್ದ ಯುವಕ, ಜಾಮೀನಿನ ಮೇಲೆ ಹೊರಗೆ ಬಂದಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಅದೇ ಯುವಕ, ಹೆಡ್ ಕಾನ್‌ಸ್ಟೆಬಲ್ ಯದುಕುಮಾರ್ ಅವರಿಗೆ ವಿಷಯ ತಿಳಿಸಿದ್ದ. ಯುವತಿ ವಿರುದ್ಧ ಸೇಡು ತೀರಿಸಿಕೊಳ್ಳಬೇಕೆಂದು ಹೇಳಿದ್ದ. ಯುವತಿ ವಿರುದ್ಧ ದೂರು ನೀಡಿದರೆ ತಾನೇ ಎಫ್‌ಐಆರ್ ದಾಖಲಿಸಿಕೊಂಡು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸುವುದಾಗಿ ಯದುಕುಮಾರ್ ತಿಳಿಸಿದ್ದ' ಎಂದು ಹೇಳಿವೆ.

'ಠಾಣೆಯ ತನಿಖಾಧಿಕಾರಿಗಳ ಸಹಾಯಕನಾಗಿದ್ದ ಯದುಕುಮಾರ್ ಮಾತಿನಂತೆ ಯುವಕ ದೂರು ನೀಡಿದ್ದ. ಎಫ್‌ಐಆರ್ ಸಹ ದಾಖಲಾಗಿತ್ತು. ಯುವತಿಗೆ ಯಾವುದೇ ನೋಟಿಸ್ ನೀಡದೇ, ಕೇವಲ 35 ದಿನಗಳಲ್ಲಿ ಯದುಕುಮಾರ್ ದೋಷಾರೋಪ ಪಟ್ಟಿ ಸಿದ್ಧಪಡಿಸಿದ್ದ. ತನಿಖಾಧಿಕಾರಿಗೂ ಯಾವುದೇ ಮಾಹಿತಿ ತಿಳಿಸಿರಲಿಲ್ಲ. ತನಿಖಾಧಿಕಾರಿಯವರ ವೈಯಕ್ತಿಕ ಯೂಸರ್ ನೇಮ್ ಹಾಗೂ ಪಾಸ್‌ವರ್ಡ್ ದುರುಪಯೋಗ ಪಡಿಸಿಕೊಂಡು, ಪೊಲೀಸ್ ತಂತ್ರಾಂಶ ವ್ಯವಸ್ಥೆಯಲ್ಲಿ ದೋಷಾರೋಪ ಪಟ್ಟಿ ಅಪ್‌ಲೋಡ್ ಮಾಡಿದ್ದ' ಎಂದು ಮೂಲಗಳು ತಿಳಿಸಿವೆ.

'ಪ್ರಕರಣದ ವಿಚಾರಣೆ ಆರಂಭಿಸಿದ್ದ ನ್ಯಾಯಾಲಯ ಯುವತಿಗೆ ನೋಟಿಸ್ ನೀಡಿತ್ತು. ಪ್ರಕರಣದ ಬಗ್ಗೆ ಪೊಲೀಸರು ತಮಗೆ ಯಾವುದೇ ಮಾಹಿತಿ ನೀಡಿಲ್ಲವೆಂದು ದೂರಿದ್ದ ಯುವತಿ, ಎಸಿಪಿ ಅವರಿಗೆ ದೂರು ನೀಡಿದ್ದರು. ಅದರ ತನಿಖೆ ಕೈಗೊಂಡಾಗಲೇ ಯದುಕುಮಾರ್ ಕೃತ್ಯ ಪತ್ತೆಯಾಗಿದೆ' ಎಂದು ಹೇಳಿವೆ.



ನಗರದಲ್ಲಿ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣಗಳ ನಿಗಾ ವಹಿಸಲು ಅಧಿಕಾರಿಗಳಿಗೆ ತಾಕೀತು

ಅಧಿಕಾರಿಗಳೊಂದಿಗೆ ಸಮನ್ವಯ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಲೋಕಸಭಾ ಚುನಾವಣೆಯ ಮಾದರಿ ನೀತಿ ಸಂಹಿತೆ ಉಲ್ಲಂಘನೆಗಳ ಮೇಲೆ ನಿಗಾವಹಿಸಿ, ಉಲ್ಲಂಘನೆಗಳಾದಲ್ಲಿ ಕೂಡಲೆ ದೂರು ದಾಖಲಿಸಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಪೊಲೀಸ್ ಅಧಿಕಾರಿಗಳೊಂದಿಗೆ ಶುಕ್ರವಾರ ನಡೆದ ಸಮನ್ವಯ ಸಭೆಯಲ್ಲಿ ಅವರು ಮಾತನಾಡಿದರು.

'ಚೆಕ್‌ಪೋಸ್ಟ್‌ಗಳಲ್ಲಿ ಅನುಮಾನಾಸ್ಪದ ವಾಹನಗಳನ್ನು ಪರಿಶೀಲಿಸಬೇಕು. ದಾಖಲಾತಿಗಳಿಲ್ಲದೆ ಹಣ ಅಥವಾ ಇನ್ನಿತರೆ ವಸ್ತುಗಳನ್ನು ಸಾಗಿಸುತ್ತಿದ್ದರೆ ಅದನ್ನು ವಶಕ್ಕೆ ಪಡೆದು ಕೂಡಲೆ ದೂರು ದಾಖಲಿಸಬೇಕು. ₹10 ಲಕ್ಷಕ್ಕಿಂತ ಹೆಚ್ಚಿನ ಹಣ ಸಿಕ್ಕಿದಲ್ಲಿ ಆದಾಯ ತೆರಿಗೆ ಇಲಾಖೆಗೆ ಮಾಹಿತಿ ಒದಗಿಸಬೇಕು. ವಶಪಡಿಸಿಕೊಂಡಿರುವ ಹಣಕ್ಕೆ ಸಂಬಂಧಪಟ್ಟವರು ಸರಿಯಾದ ದಾಖಲೆಗಳನ್ನು ಸಲ್ಲಿಸಿದಲ್ಲಿ ಹಣವನ್ನು ಜಿಲ್ಲಾಮಟ್ಟದ ದೂರು ಸಮಿತಿಯ ಆದೇಶದ ಮೇರೆಗೆ ಬಿಡುಗಡೆಗೊಳಿಸಬೇಕು' ಎಂದರು.

ಬೆಂಗಳೂರು ವ್ಯಾಪ್ತಿಯ 28 ವಿಧಾನಸಭಾ ಕ್ಷೇತ್ರಗಳಿಗೆ ನಿಯೋಜಿಸಿರುವ ಎಫ್‌ಎಸ್‌ಟಿ ಹಾಗೂ ಎಸ್‌ಎಸ್‌ಟಿ ತಂಡಗಳು ಸಕ್ರಿಯವಾಗಿ ಕೆಲಸ ನಿರ್ವಹಿಸಿ, ಚುನಾವಣೆಗೆ ಸಂಬಂಧಿಸಿದಂತೆ ದೂರುಗಳನ್ನು ಆಯಾ ಪೊಲೀಸ್ ಠಾಣೆಗೆ ನೀಡಬೇಕು. ಪೊಲೀಸ್ ಅಧಿಕಾರಿಗಳು ದೂರಿನ ಮೇಲೆ ಎಫ್‌ಐಆರ್ ಅಥವಾ ಗಂಭೀರ ಸ್ವರೂಪವಲ್ಲದ ವರದಿ (ಎನ್‌ಸಿಆರ್) ದಾಖಲಿಸಿ ತುರ್ತು ಕ್ರಮ ಕೈಗೊಳ್ಳಲು ಸೂಚಿಸಿದರು.

ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೆ ಮಾದರಿ ನೀತಿ ಸಂಹಿತೆ ಅಧಿಕಾರಿಯನ್ನು ನಿಯೋಜನೆ ಮಾಡಿರುವುದರಿಂದ ಅವರಿಂದ ಮಾಧ್ಯಮ ಪ್ರಮಾಣೀಕರಣ ಮತ್ತು ಮೇಲುಸ್ತುವಾರಿ ಸಮಿತಿ (ಎಂಸಿಎಂಸಿ) ಉಲ್ಲಂಘನೆ ಪ್ರಕರಣ ದೂರುಗಳನ್ನು ನೀಡಬೇಕು ಎಂದು ಹೇಳಿದರು.

ಬೆಂಗಳೂರು ನಗರ ಪೊಲೀಸ್ ಕಮಿಷನರ್ ದಯಾನಂದ್ ಮಾತನಾಡಿ, 'ಲೋಕಸಭಾ ಚುನಾವಣಾ ಕೆಲಸ-ಕಾರ್ಯಗಳನ್ನು ಶಿಸ್ತಿನಿಂದ ನಿರ್ವಹಿಸಬೇಕು. ಚುನಾವಣಾಧಿಕಾರಿಗಳ ಜೊತೆಗೆ ಸಮನ್ವಯ ಸಾಧಿಸಿ ಕರ್ತವ್ಯ ನಿರ್ವಹಿಸಬೇಕು' ಎಂದು ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಚುನಾವಣಾ ವಿಭಾಗದ ವಿಶೇಷ ಆಯುಕ್ತ ಸೆಲ್ವಮಣಿ, ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಗಳಾದ ಡಾ. ಹರೀಶ್ ಕುಮಾರ್, ದಯಾನಂದ್, ವಿನೋತ್ ಪ್ರಿಯಾ, ಡಿಸಿಪಿಗಳು, ಪೊಲೀಸ್ ನೋಡಲ್ ಅಧಿಕಾರಿಗಳು ಉಪಸ್ಥಿತರಿದ್ದರು.



ಪೊಲೀಸ್ ಅಧಿಕಾರಿಗಳೊಂದಿಗೆ ಶುಕ್ರವಾರ ನಡೆದ ಸಮನ್ವಯ ಸಭೆಯಲ್ಲಿ ನಗರ ಪೊಲೀಸ್ ಕಮಿಷನರ್ ದಯಾನಂದ್, ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಅವರು ಮಾತನಾಡಿದರು

₹7.86 ಕೋಟಿ ಮೌಲ್ಯದ ಅಕ್ರಮ ಮದ್ಯ ವಶ



ಅಕ್ರಮ ಮದ್ಯವನ್ನು ವಶಕ್ಕೆ ಪಡೆದಿರುವ ಅಬಕಾರಿ ಇಲಾಖೆ ತಂಡ

ದೇವನಹಳ್ಳಿ: ಚುನಾವಣೆ ನೀತಿ ಸಂಹಿತೆ ಜಾರಿಯಾದ ನಂತರ ಅಬಕಾರಿ ಇಲಾಖೆ ನಡೆಸಿದ ಕಾರ್ಯಾಚರಣೆಯಲ್ಲಿ ಇದುವರೆಗೂ ₹7.86 ಕೋಟಿ ಮೌಲ್ಯದ ಅಕ್ರಮ ಮದ್ಯ ವಶಕ್ಕೆ ಪಡೆಯಲಾಗಿದೆ.

ಜಿಲ್ಲೆಯಾದ್ಯಂತ ಒಟ್ಟು 1,48,985 ಲಕ್ಷ ಲೀಟರ್ ಮದ್ಯ ಇದುವರೆಗೂ ವಶಕ್ಕೆ ಪಡೆಯಲಾಗಿದೆ. ಅಬಕಾರಿ ಇಲಾಖೆಯು ಒಟ್ಟು 45 ಪ್ರಕರಣ ದಾಖಲು ಮಾಡಿದೆ. ಎರಡು ಲಾರಿ, ಎರಡು ಕಾರು, ಬೈಕ್ ಸೇರಿದಂತೆ ಒಟ್ಟು ಒಂಬತ್ತು ವಾಹನಗಳನ್ನು ಜಪ್ತಿ ಮಾಡಲಾಗಿದೆ.

ಅಬಕಾರಿ ಜಿಲ್ಲಾಧಿಕಾರಿ ನಾಗೇಶ್ ನೇತೃತ್ವದ ತಂಡ ನೆಲಮಂಗಲ ವ್ಯಾಪ್ತಿಯಲ್ಲಿ ಎರಡು ಪ್ರತ್ಯೇಕ ಪ್ರಕರಣದಲ್ಲಿ 10 ಕೆ.ಜಿ ಗಾಂಜಾವನ್ನು ವಶಕ್ಕೆ ಪಡೆದಿದೆ. ಈ ಸಂಬಂಧ ಅಸ್ಸಾಂ ಮೂಲದ ಬಿರಾಗೊಂಡ ಹಾಗೂ ಸೋಮನಾಥ ಗೊಂಡ ಎಂಬ ಆರೋಪಿಗಳನ್ನು ಬಂಧಿಸಿ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.

ಎಚ್‌ಡಿಕೆ ಚನ್ನಪಟ್ಟಣ ಬಿಡೋದು ಬೇಡ

ನಿಖಿಲ್ ಕುಮಾರಸ್ವಾಮಿಗೆ ಕಾರ್ಯಕರ್ತರ ದುಂಬಾಲು

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ಮಂಡ್ಯ ಅಭ್ಯರ್ಥಿಯಾಗಿ ಜೆಡಿಎಸ್ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರು ಕಣಕ್ಕಿಳಿಯಲಿದ್ದಾರೆ ಎಂದು ಮುಖಂಡ ಸಿ.ಎಸ್. ಪುಟ್ಟರಾಜು ಹೇಳಿಕೆ ಬೆನ್ನಲ್ಲೇ, ಎಚ್‌ಡಿಕೆ ಚನ್ನಪಟ್ಟಣ ಬಿಟ್ಟು ಹೋಗುವುದಕ್ಕೆ ಸ್ಥಳೀಯ ಮುಖಂಡರು ಹಾಗೂ ಕಾರ್ಯಕರ್ತರು ವಿರೋಧ ವ್ಯಕ್ತಪಡಿಸಿದ್ದಾರೆ.

ಪಕ್ಷದ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ತಾಲ್ಲೂಕಿನ ರೆಸಾರ್ಟ್‌ವೊಂದರಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಅವರನ್ನು ಮುತ್ತಿಕೊಂಡ ಕಾರ್ಯಕರ್ತರು, 'ಮಂಡ್ಯದಿಂದ ನೀವೇ ಸ್ಪರ್ಧೆ ಮಾಡಿ. ನಾವು ಸಹ ಅಲ್ಲಿಗೆ ಬಂದು ಪ್ರಚಾರ ಮಾಡುತ್ತೇವೆ. ಕುಮಾರಣ್ಣ ಚನ್ನಪಟ್ಟಣದಲ್ಲೇ ಇರಲಿ' ಎಂದು ದುಂಬಾಲು ಬಿದ್ದರು.

ಕಾರ್ಯಕರ್ತರ ಮನವಿ ಆಲಿಸಿದ ನಿಖಿಲ್, 'ಎಚ್‌ಡಿಕೆ ಅವರೇ ಮಂಡ್ಯ ಅಭ್ಯರ್ಥಿಯಾಗಲಿದ್ದಾರೆ ಎಂದಿರುವ ಪುಟ್ಟರಾಜು ಅವರು, ಅಲ್ಲಿನ ಜನರ ಮನಸ್ಸಿನ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಸ್ಪರ್ಧೆ ಕುರಿತು ತಂದೆ, ತಾತ ಎಚ್.ಡಿ.ದೇವೇಗೌಡರು ಹಾಗೂ ಪಕ್ಷದ ಹಿರಿಯರು ತೀರ್ಮಾನಿಸಿಲ್ಲ. ಹಾಗೇನಾದರೂ ಇದ್ದರೆ ಚನ್ನಪಟ್ಟಣ ಮತ್ತು ರಾಮನಗರ ಕಾರ್ಯಕರ್ತರ ಅಭಿಪ್ರಾಯ ಪಡೆದು ನಿರ್ಧರಿಸಲಾಗುವುದು' ಎಂದು ಸಮಾಧಾನಪಡಿಸಿದರು.

'ಚನ್ನಪಟ್ಟಣದಲ್ಲಿ ಹಲವು ವರ್ಷಗಳಿಂದ ನಮ್ಮ ಕಾರ್ಯಕರ್ತರು ನೋವು ಅನುಭವಿಸಿದ್ದರು. ಹಾಗಾಗಿ ಕುಮಾರಸ್ವಾಮಿ ಅವರು ಚನ್ನಪಟ್ಟಣಕ್ಕೆ ಬಂದು ಸ್ಪರ್ಧಿಸಿ ಧೈರ್ಯ ತುಂಬಿದರು. ಇಲ್ಲಿನ ಜನರು ಕೊಟ್ಟಿರುವ ಪ್ರೀತಿ ಹಾಗೂ ಪಕ್ಷದ ಮೇಲಿಟ್ಟಿರುವ ನಂಬಿಕೆಗೆ ನಾವು ಋಣಿಯಾಗಿರುತ್ತೇವೆ' ಎಂದರು.

ಎಚ್‌ಡಿಕೆ ನಾಳೆ ಮನೆಗೆ



ಚನ್ನಪಟ್ಟಣ (ರಾಮನಗರ): ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಭಾನುವಾರ ಆಸ್ಪತ್ರೆಯಿಂದ ಬಿಡುಗಡೆಯಾಗಲಿದ್ದಾರೆ ಎಂದು ಪಕ್ಷದ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದರು.

ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಡಾ.ಸಿ.ಎನ್.ಮಂಜುನಾಥ್ ಹಾಗೂ ಹಿರಿಯ ವೈದ್ಯ ಸಾಯಿ ಸತೀಶ್ ನೇತೃತ್ವದಲ್ಲಿ ಕುಮಾರಸ್ವಾಮಿ ಅವರಿಗೆ ಯಶಸ್ವಿಯಾಗಿ ಹೃದಯ ಶಸ್ತ್ರಚಿಕಿತ್ಸೆ ನಡೆದಿದೆ. ರಾಜ್ಯದ ಜನರ ಆಶೀರ್ವಾದದಿಂದ ಅವರು ಗುಣಮುಖರಾಗಿದ್ದಾರೆ ಎಂದರು.

ಕುಮಾರಸ್ವಾಮಿ ಅವರು ಏಪ್ರಿಲ್ ಮೊದಲ ವಾರದಿಂದಲೇ ಚುನಾವಣಾ ಕಾರ್ಯಕ್ರಮಗಳಲ್ಲಿ ಭಾಗಿಯಾಗಿಲಿದ್ದಾರೆ. ಆ ಬಳಿಕ ಡಾ.ಮಂಜುನಾಥ್ ಅವರ ನಾಮಪತ್ರ ಸಲ್ಲಿಕೆಗೆ ದಿನಾಂಕ ನಿಗದಿ ಬಗ್ಗೆ ಸಭೆ ಮಾಡಿ ತೀರ್ಮಾನ ಮಾಡಲಾಗುವುದು ಎಂದು ತಿಳಿಸಿದರು.

ಶಿವರಾಜ್‌ಕುಮಾರ್ ಚಿತ್ರ ಪ್ರದರ್ಶನ ನಿರ್ಬಂಧಕ್ಕೆ ಮನವಿ

ಬೆಂಗಳೂರು: ಚಲನಚಿತ್ರ ನಟ ಶಿವರಾಜ್‌ಕುಮಾರ್ ಅವರು ಕಾಂಗ್ರೆಸ್ ಪಕ್ಷದ ಪರವಾಗಿ ಪ್ರಚಾರ ಮಾಡುತ್ತಿರುವುದರಿಂದ ಅವರ ಅಭಿನಯದ ಚಲನಚಿತ್ರಗಳು ಮತ್ತು ಅವರು ಇರುವ ಜಾಹೀರಾತುಗಳ ಮೇಲೆ ನಿರ್ಬಂಧ ವಿಧಿಸಬೇಕು ಎಂದು ಚುನಾವಣಾ ಆಯೋಗಕ್ಕೆ ಬಿಜೆಪಿ ಮನವಿ ಮಾಡಿದೆ.

ಶಿವರಾಜ್‌ಕುಮಾರ್ ಕನ್ನಡದ ಜನಪ್ರಿಯ ನಟ. ಅವರ ಪತ್ನಿ ಗೀತಾ ಅವರು ಶಿವಮೊಗ್ಗ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ. ಶಿವರಾಜ್‌ಕುಮಾರ್ ಅವರ ಚಲನಚಿತ್ರಗಳು ಮತದಾರರ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ ಎಂದು ಬಿಜೆಪಿಯ ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಆರ್.ರಘು (ಕೌಟಿಲ್ಯ) ಚುನಾವಣಾ ಆಯೋಗಕ್ಕೆ ನೀಡಿರುವ ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

ಚುನಾವಣೆ ಮುಗಿಯುವವರೆಗೆ ಚಿತ್ರಮಂದಿರಗಳು, ಟಿ.ವಿ, ಸಾಮಾಜಿಕ ಜಾಲತಾಣ ಮತ್ತು ಒಟಿಟಿಗಳಲ್ಲಿ ಇವರ ಅಭಿನಯದ ಚಲನಚಿತ್ರಗಳ ಪ್ರದರ್ಶನ ನಿರ್ಬಂಧಿಸಬೇಕು. ಈ ಕುರಿತು ತಕ್ಷಣವೇ ಆದೇಶ ಹೊರಡಿಸಬೇಕು ಎಂದೂ ಒತ್ತಾಯಿಸಿದ್ದಾರೆ.

'ಜಾತ್ಯತೀತ ತತ್ವ ಗಾಳಿಗೆ ತೂರಿದ ಜೆಡಿಎಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೆಡಿಎಸ್ ಪಕ್ಷವು ಜಾತ್ಯತೀತ ತತ್ವಗಳನ್ನು ಗಾಳಿಗೆ ತೂರಿದೆ. ಈ ಕಾರಣಕ್ಕಾಗಿ ಆ ಪಕ್ಷವನ್ನು ತೊರೆದು ಕಾಂಗ್ರೆಸ್ ಸೇರಿದ್ದೇನೆ' ಎಂದು ವಿಧಾನ ಪರಿಷತ್‌ನ ಮಾಜಿ ಸದಸ್ಯ ಮರಿತಿಬ್ಬೇಗೌಡ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಪಕ್ಷ ಸೇರಿದ ಬಳಿಕ ಮಾತನಾಡಿದ ಅವರು, 'ಜೆಡಿಎಸ್ ಪಕ್ಷದಲ್ಲಿ ಆಂತರಿಕ ಪ್ರಜಾಪ್ರಭುತ್ವ ಇಲ್ಲ. ಅಲ್ಲಿ ಕಾರ್ಯಕರ್ತರು ಮತ್ತು ಮುಖಂಡರ ಅಭಿಪ್ರಾಯಗಳಿಗೆ ಬೆಲೆಯೇ ಇಲ್ಲ' ಎಂದು ವಾಗ್ದಾಳಿ ನಡೆಸಿದರು.

'ಎಚ್.ಡಿ.ದೇವೇಗೌಡ ಮತ್ತು ಎಚ್.ಡಿ.ಕುಮಾರಸ್ವಾಮಿ ಅವರು ಕಾವೇರಿ ನದಿ ನೀರಿನ ವಿಷಯವನ್ನು ಭಾವನಾತ್ಮಕವಾಗಿ ರಾಜಕಾರಣಕ್ಕೆ ಬಳಸಿಕೊಂಡಿದ್ದಾರೆ. ಜೆಡಿಎಸ್ ರೈತರ ಹೆಸರನ್ನು ಬಳಸಿಕೊಂಡು ರಾಜಕೀಯ ಮಾಡಿದೆ. ಮಂಡ್ಯ ಜಿಲ್ಲೆಯ ಅಭಿವೃದ್ಧಿಗೆ ಜೆಡಿಎಸ್‌ನ ಕೊಡುಗೆ ಶೂನ್ಯ. ಎನ್. ಚಲುವರಾಯಸ್ವಾಮಿ ಅವರು ಹಿಂದೆ ಸಚಿವರಾಗಿದ್ದಾಗ ಜಿಲ್ಲೆಗೆ ವೈದ್ಯಕೀಯ ಕಾಲೇಜು ಮಂಜೂರು ಮಾಡಿಸಿದ್ದರು' ಎಂದರು.

'ಜೆಡಿಎಸ್‌ನವರು ನನಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ಮಾತ್ರ ನೀಡಿದ್ದರು. ಆದರೆ, ಬೆಂಬಲ ಕೊಡಲಿಲ್ಲ. ಕುಟುಂಬದ ಪರವಾಗಿ ಮಾತ್ರ ಪಕ್ಷದ ಸಭೆಗಳಲ್ಲಿ ತೀರ್ಮಾನ ತೆಗೆದುಕೊಳ್ಳುತ್ತಿದ್ದರು. ಅಂತಹ ಧೋರಣೆ ವಿರುದ್ಧ ಹಲವು ಬಾರಿ ಧ್ವನಿ ಎತ್ತಿದ್ದೆ. ಕೇಂದ್ರ ಸರ್ಕಾರವು ರೈತರ ವಿರೋಧಿ ಕಾಯ್ದೆಗಳನ್ನು ಜಾರಿಗೊಳಿಸಿದಾಗ ಜೆಡಿಎಸ್ ಬೆಂಬಲ ನೀಡಿದ್ದನ್ನೂ ವಿರೋಧಿಸಿದ್ದೆ' ಎಂದು ಮರಿತಿಬ್ಬೇಗೌಡ ಹೇಳಿದರು.

'ವಿಧಾನ ಪರಿಷತ್‌ನ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ನಾಲ್ಕು ಬಾರಿ ಆಯ್ಕೆಯಾಗಿದ್ದೆ. ಮೊದಲ ಬಾರಿಗೆ ಡಿ.ಕೆ. ಶಿವಕುಮಾರ್ ಅವರ ಬೆಂಬಲದಿಂದ ಟಿಕೆಟ್ ದೊರಕಿತ್ತು. 1985ರಲ್ಲಿ ಸಿದ್ದರಾಮಯ್ಯ ನೇತೃತ್ವದಲ್ಲಿ ಜನತಾ ದಳ ಪಕ್ಷ ಸೇರಿದ್ದೆ. ಈಗ ಜೆಡಿಎಸ್‌ನಲ್ಲಿ ಜಾತ್ಯತೀತ ತತ್ವಗಳಿಗೆ ಧಕ್ಕೆಯಾಗಿರುವ ಕಾರಣದಿಂದ ಹೊರ ಬಂದಿದ್ದೇನೆ. ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಗೆ ಸಂಪೂರ್ಣ ಬೆಂಬಲ ನೀಡುತ್ತೇನೆ' ಎಂದರು.

'ಸುಧಾಕರ್‌ಗೆ ಟಿಕೆಟ್ ಬೇಡ'

ಯಲಹಂಕ: ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ ವರ್ಚಸ್ಸು ಕಳೆದುಕೊಂಡಿರುವ ವ್ಯಕ್ತಿಗಳಿಗೆ ಟಿಕೆಟ್ ನೀಡುವುದರ ಬದಲಿಗೆ ಯುವ ನಾಯಕ ಅಲೋಕ್ ವಿಶ್ವನಾಥ್ ಅವರಿಗೆ ನೀಡಬೇಕೆಂದು ಚಿಕ್ಕಬಳ್ಳಾಪುರ ಬಿಜೆಪಿ ನಾಯಕರು ವರಿಷ್ಠರನ್ನು ಒತ್ತಾಯಿಸಿದ್ದಾರೆ.

ಯಲಹಂಕದ ಸಿಂಗನಾಯಕನಹಳ್ಳಿಯ ಶಾಸಕ ಎಸ್.ಆರ್. ವಿಶ್ವನಾಥ್ ಗೃಹಕಚೇರಿಯಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ದೊಡ್ಡಬಳ್ಳಾಪುರ ಶಾಸಕ ಧೀರಜ್ ಮುನಿರಾಜು ಸೇರಿ ಜಿಲ್ಲಾ ಬಿಜೆಪಿ ಮುಖಂಡರು ಮಾತನಾಡಿದರು.

ಇದುವರೆಗೆ ನಡೆದಿರುವ ಎಲ್ಲ ಸಮೀಕ್ಷೆಗಳಲ್ಲೂ ಅಲೋಕ್ ವಿಶ್ವನಾಥ್ ಮುಂಚೂಣಿಯಲ್ಲಿದ್ದಾರೆ. ಇಂತಹ ಗೆಲ್ಲುವ ಅಭ್ಯರ್ಥಿಯನ್ನು ಬಿಟ್ಟು ಕ್ಷೇತ್ರದಲ್ಲಿ ವರ್ಚಸ್ಸು ಕಳೆದುಕೊಂಡಿರುವ ವ್ಯಕ್ತಿಗೆ ಟಿಕೆಟ್ ನೀಡಲು ಮುಂದಾಗಿದ್ದಾರೆ ಎಂಬ ವದಂತಿ ಹಬ್ಬಿದೆ ಎಂದು ಅವರು ಹೇಳಿದರು.

ಚಿಕ್ಕಬಳ್ಳಾಪುರ ಕ್ಷೇತ್ರದ ಅಭ್ಯರ್ಥಿ ಬಗ್ಗೆ ಈವರೆಗೂ ಯಾವುದೇ ನಿರ್ಧಾರ ಆಗಿಲ್ಲ. ಆದರೆ ಸುಧಾಕರ್ ಅವರೇ ಅಭ್ಯರ್ಥಿ ಎಂಬಂತೆ ಫ್ಲೆಕ್ಸ್‌ಗಳನ್ನು ಹಾಕುತ್ತಿದ್ದಾರೆ. ಸುಧಾಕರ್ ಸಚಿವರಾಗಿದ್ದಾಗ ಕಾರ್ಯಕರ್ತರು, ಮುಖಂಡರಿಗೆ ಸ್ಪಂದಿಸಲಿಲ್ಲ. ಆದ್ದರಿಂದ ಸುಧಾಕರ್ ಅವರಿಗೆ ಟಿಕೆಟ್ ನೀಡಬಾರದು ಎಂದು ಶಾಸಕ ಎಸ್.ಆರ್.ವಿಶ್ವನಾಥ್ ಆಗ್ರಹಿಸಿದರು.

ಸಂಸದ ಡಿ.ಕೆ. ಸುರೇಶ್ ಪರ ಮಹಿಳೆಯರ ಪ್ರಚಾರ ಆರಂಭ



ಸಭೆಯಲ್ಲಿ ಭಾಗವಹಿಸಿರುವ ಮಹಿಳಾ ಕಾರ್ಯಕರ್ತರು

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಕೋವಿಡ್ ಸಮಯದಲ್ಲಿ ಸೋಂಕಿತರ ಮನೆ ಮನೆಗಳಿಗೆ ತೆರಳಿ ಉಚಿತ ಔಷಧ, ಉಚಿತ ತರಕಾರಿ, ದಿನಸಿ ಕಿಟ್ ತಲುಪಿಸಿದ, ನೊಂದವರ ಕುಟುಂಬಗಳಿಗೆ ಸಹಾಯಹಸ್ತ ನೀಡಿದ ಅಭ್ಯರ್ಥಿ ಡಿ.ಕೆ. ಸುರೇಶ್ ಅವರ ಗೆಲುವಿಗಾಗಿ ನಾವೆಲ್ಲರೂ ದುಡಿಯುತ್ತೇವೆ' ಎಂದು ಕಾಂಗ್ರೆಸ್ ಮಹಿಳಾ ಕಾರ್ಯಕರ್ತೆಯರು ನಿರ್ಧಾರ ಪ್ರಕಟಿಸಿದರು.

ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಮಹಿಳಾ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರ ಸಭೆಯಲ್ಲಿ ಈ ನಿರ್ಧಾರ ಪ್ರಕಟಿಸಿದರು.

ಕೆಪಿಸಿಸಿ ವಕ್ತಾರೆ ಎಚ್. ಕುಸುಮಾ ಮಾತನಾಡಿ, 'ಜನಸಾಮಾನ್ಯರ, ನೊಂದವರ, ಬಡವರ ಪರವಾಗಿ ಸೇವೆ ಸಲ್ಲಿಸುವ, ರಾಜ್ಯಕ್ಕಾಗುತ್ತಿರುವ ಅನ್ಯಾಯದ ವಿರುದ್ಧ ಸಂಸತ್ತಿನಲ್ಲಿ ಗಟ್ಟಿಧ್ವನಿ ಎತ್ತುವುದಕ್ಕಾಗಿ ಡಿ.ಕೆ. ಸುರೇಶ್ ಅವರ ಗೆಲುವಿಗಾಗಿ ಕೆಲಸ ಮಾಡಬೇಕು' ಎಂದರು.

'ರಾಷ್ಟ್ರದಲ್ಲಿಯೇ ಅತಿ ಹೆಚ್ಚಿನ ತೆರಿಗೆ ಪಾವತಿಸುವ ಎರಡನೇ ರಾಜ್ಯ ಕರ್ನಾಟಕ, ನಮಗೆ ಸಿಗಬೇಕಾದ ಅನುದಾನ ಕೇಳಿದರೆ ದೇಶದ್ರೋಹ ಪಟ್ಟ ಕಟ್ಟುವ ಬಿಜೆಪಿ ವಿರುದ್ಧ ಮತ ಚಲಾಯಿಸಿ' ಎಂದು ಕೋರಿದರು.

ಕೆಪಿಸಿಸಿ ಹಿಂದುಳಿದ ವಿಭಾಗದ ಪ್ರಧಾನ ಕಾರ್ಯದರ್ಶಿ ಹೇಮಲತಾ ಇಂದ್ರೇಶ್, ವಿವಿಧ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಸುಲಕ್ಷಣ ಬೈರಪ್ಪ, ಬಿಬಿಎಂಪಿ ಮಾಜಿ ಸದಸ್ಯೆ ಮಂಜುಳಾ ನಾರಾಯಣಸ್ವಾಮಿ, ಬ್ಲಾಕ್ ಅಧ್ಯಕ್ಷರಾದ ನೇತ್ರ ರಮೇಶ್, ಲಕ್ಷ್ಮಿ, ನಳಿನ, ವಾರ್ಡ್ ಅಧ್ಯಕ್ಷರಾದ ಶಶಿಕಲಾ, ವಿಮಲ, ರತ್ನ ನಾರಾಯಣ್ ಮಾತನಾಡಿದರು.

'ಎನ್‌ಡಿಎ ಒಕ್ಕೂಟ ಅಧಿಕಾರಕ್ಕೆ ಬೇಡ'

ಪ್ರಜಾವಾಣಿ ವಾರ್ತೆ

ಮೈಸೂರು: 'ಮುಂಬರುವ ಲೋಕಸಭಾ ಚುನಾವಣೆ ವೇಳೆ ರಾಷ್ಟ್ರದಲ್ಲಿ ಎನ್‌ಡಿಎ ಒಕ್ಕೂಟ ಅಧಿಕಾರಕ್ಕೆ ಬರುವುದನ್ನು ತಡೆಯಬೇಕಿದೆ' ಎಂದು ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಿಜೆಪಿ ಮತ್ತು ಮಿತ್ರ ಪಕ್ಷಗಳನ್ನು ಸೋಲಿಸಿ -ರೈತ ಸಮುದಾಯವನ್ನು ಉಳಿಸಿ ಎಂಬ ಘೋಷಣೆಯಡಿ ಈಚೆಗೆ ದೆಹಲಿಯ ರಾಮಲೀಲಾ ಮೈದಾನದಲ್ಲಿ ಬೃಹತ್ ರೈತ-ಕಾರ್ಮಿಕ ಮಹಾಪಂಚಾಯತ್‌ನಲ್ಲಿ ದೇಶದ ರೈತರು ನಿರ್ಣಯ ಕೈಗೊಂಡಿದ್ದಾರೆ' ಎಂದು ತಿಳಿಸಿದರು.

'ಕಳೆದ ಬಾರಿ ರಾಜ್ಯದಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ರೈತ ಸಂಘಟನೆಗಳು, ದಲಿತ, ಕಾರ್ಮಿಕ, ಮಹಿಳಾ, ಯುವಜನ, ವಿದ್ಯಾರ್ಥಿ ಮತ್ತು ಪ್ರಗತಿಪರ ಸಂಘಟನೆಗಳ ಸತತ ಪ್ರಯತ್ನದಿಂದ ರಾಜ್ಯದಲ್ಲಿ ಬಿಜೆಪಿ ಪಕ್ಷವನ್ನು ವಿಧಾನಸೌಧದಿಂದ ತೊಲಗಿಸಲಾಯಿತು. ಈ ಲೋಕಸಭಾ ಚುನಾವಣೆಯಲ್ಲೂ ಇದೇ ಪ್ರಯತ್ನ ಮತ್ತಷ್ಟು ವಿಸ್ತಾರವಾಗಿ ವಾಡಲಾಗುತ್ತಿದೆ' ಎಂದರು.

ಈ ಸಂದರ್ಭದಲ್ಲಿ ಬಾಗಲಕೋಟೆ, ಉತ್ತರ ಕನ್ನಡ ಮತ್ತು ಕೆಲವು ಕ್ಷೇತ್ರಗಳಲ್ಲಿ ರೈತ ಸಂಘದ ಮುಖಂಡರು ಸ್ಪರ್ಧಿಸಲು ನಿರ್ಧರಿಸಿದ್ದಾರೆ. ಸದ್ಯದಲ್ಲಿಯೇ ಸರ್ವೋದಯ ಕರ್ನಾಟಕ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜ್, ಪ್ರಸನ್ನ ಎನ್.ಗೌಡ ಸೇ, ನಾಗೇನಹಳ್ಳಿ ವಿಜಯೇಂದ್ರ, ಪಿ. ಮಾರಂಕಯ್ಯ, ಪ್ರಕಾಶ್ ಹಾಜರಿದ್ದರು.

ಹೋಳಿ: 540 ವಿಶೇಷ ರೈಲು ಸಂಚಾರ

ನವದೆಹಲಿ: ಹೋಳಿ ಹಬ್ಬದ ಹಿನ್ನೆಲೆಯಲ್ಲಿಪ್ರಯಾಣಿಕರಅನುಕೂಲಕ್ಕಾಗಿ540 ವಿಶೇಷ ರೈಲುಗಳ ವ್ಯವಸ್ಥೆ ಮಾಡಲಾಗಿದೆ ಎಂದು ಭಾರತೀಯ ರೈಲ್ವೆ ತಿಳಿಸಿದೆ.

ಹೋಳಿ ವಿಶೇಷ ರೈಲುಗಳ ಸಂಚಾರದ ಮೇಲೆ ನಿಗಾ ವಹಿಸುವಂತೆ ಎಲ್ಲ ಝೋನ್‌ಗಳಿಗೆ ರೈಲ್ವೆ ಬೋರ್ಡ್ ಗುರುವಾರ ಸೂಚನೆ ನೀಡಿದೆ.

ದೇಶದ ಪ್ರಮುಖ ಸ್ಥಳಗಳನ್ನು ಸಂಪರ್ಕಿಸುವಂತೆ ವಿಶೇಷ ರೈಲಿನ ವ್ಯವಸ್ಥೆ ಮಾಡಲಾಗಿದ್ದು, ದೆಹಲಿ-ಪಟ್ನಾ, ದೆಹಲಿ-ಭಾಗಲ್ಪುರ, ದೆಹಲಿ-ಮುಜಾಫ್ಫರ್‌ಪುರ, ದೆಹಲಿ-ಸಹರ್ಸ, ಗೋರಖ್‌ಪುರ-ಮುಂಬೈ, ಕೋಲ್ಕತ್ತ-ಪುರಿ, ಗುವಾಹಟಿ-ರಾಂಚಿ, ನವದೆಹಲಿ-ಶ್ರೀ ಮಾತಾ ವೈಷ್ಣೋದೇವಿ ಕತ್ರ, ಜೈಪುರ-ಬಂದ್ರ ಟರ್ಮಿನಲ್, ಪುಣೆ-ದಾನಪುರ, ದುರ್ಗಾ-ಪಟ್ನಾ, ಬಾರಾನಿ-ಸೂರತ್ ಮತ್ತಿತರ ಮಾರ್ಗಗಳಲ್ಲಿ ವಿಶೇಷ ರೈಲುಗಳು ಸಂಚರಿಸಲಿದೆ.

ಪರವಾನಗಿದಾರರಿಂದ ಪಿಸ್ತೂಲ್ ಪಡೆಯುವಾಗ ಅವಘಡ

ಹಾರಿದ ಗುಂಡು: ಕಾನ್‌ಸ್ಟೆಬಲ್‌ಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಪರವಾನಗಿದಾರರಿಂದ ಶಸ್ತ್ರಾಸ್ತ್ರ ಠೇವಣಿ ಇರಿಸಿಕೊಳ್ಳುತ್ತಿದ್ದ ಸಂದರ್ಭದಲ್ಲಿ ಪಿಸ್ತೂಲ್‌ನಿಂದ ಗುಂಡು ಹಾರಿದ್ದು, ಹೆಡ್ ಕಾನ್‌ಸ್ಟೆಬಲ್‌ವೊಬ್ಬರು ಗಾಯಗೊಂಡಿದ್ದಾರೆ.

'ಬೇಗೂರು ಠಾಣೆಯಲ್ಲಿ ಶುಕ್ರವಾರ ಈ ಅವಘಡ ಸಂಭವಿಸಿದೆ. ಪಿಸ್ತೂಲ್ ಪರವಾನಗಿದಾರ ಮುಕುಂದ್ ರೆಡ್ಡಿ ಹಾಗೂ ಠಾಣೆಯ ಕಾನ್‌ಸ್ಟೆಬಲ್ ಒಬ್ಬರ ವಿರುದ್ಧ ಪ್ರಕರಣ ದಾಖಲಾಗಿದ್ದು, ತನಿಖೆ ಕೈಗೊಳ್ಳಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಲೋಕಸಭಾ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದು, ಪರವಾನಗಿ ಶಸ್ತ್ರಾಸ್ತ್ರ ಹೊಂದಲು ಅವಕಾಶವಿಲ್ಲ. ಹೀಗಾಗಿ, ಠಾಣೆಗೆ ಠೇವಣಿ ಇರಿಸುವಂತೆ ಆದೇಶ ಹೊರಡಿಸಲಾಗಿದೆ. ಇದೇ ಕಾರಣಕ್ಕೆ ಪರವಾನಗಿದಾರ ಮುಕುಂದ್ ರೆಡ್ಡಿ ಅವರು ಪಿಸ್ತೂಲ್ ಠೇವಣಿ ಇರಿಸಲು ಬೇಗೂರು ಠಾಣೆಗೆ ಬಂದಿದ್ದರು.'

'ಪಿಸ್ತೂಲ್‌ನಲ್ಲಿ ಒಂದು ಗುಂಡು ಇತ್ತು. ಆದರೆ, ಪರವಾನಗಿದಾರ ಯಾವುದೇ ಗುಂಡು ಇಲ್ಲವೆಂದು ತಿಳಿಸಿದ್ದರು. ಅದನ್ನೇ ನಿಜವೆಂದು ನಂಬಿದ್ದ ಕಾನ್‌ಸ್ಟೆಬಲ್ ವೆಂಕಣ್ಣ, ಪಿಸ್ತೂಲ್ ಕೈಗೆತ್ತಿಕೊಂಡಿದ್ದರು. ಇದೇ ಸಂದರ್ಭದಲ್ಲಿ ಪಿಸ್ತೂಲ್‌ನಿಂದ ಗುಂಡು ಹಾರಿತ್ತು. ಸಮೀಪದಲ್ಲಿದ್ದ ಹೆಡ್ ಕಾನ್‌ಸ್ಟೆಬಲ್ ಅನ್ನುದಾಸ್ ಅವರ ಕಾಲಿಗೆ ಗುಂಡು ತಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಗುಂಡೇಟಿನಿಂದ ಗಾಯಗೊಂಡ ಅನ್ನುದಾಸ್ ಅವರನ್ನು ಸಿಬ್ಬಂದಿಯೇ ಆಸ್ಪತ್ರೆಗೆ ದಾಖಲಿಸಿದ್ದಾರೆ. ವೈದ್ಯರು ಚಿಕಿತ್ಸೆ ಮುಂದುವರಿಸಿದ್ದಾರೆ' ಎಂದು ತಿಳಿಸಿವೆ.

ಕಾರಣ ನಿಗೂಢ: 'ಪಿಸ್ತೂಲ್‌ನಿಂದ ಗುಂಡು ಹಾರಿದ್ದು ಆಕಸ್ಮಿಕವೋ ಅಥವಾ ಬೇರೆ ಏನಾದರೂ ಕಾರಣವಿದೆಯಾ? ಎಂಬುದು ತನಿಖೆಯಿಂದ ತಿಳಿಯಬೇಕಿದೆ. ಶಸ್ತ್ರಾಸ್ತ್ರ ಕಾಯ್ದೆ ಹಾಗೂ ಐಪಿಸಿ ಸೆಕ್ಷನ್ 338 (ಮನುಷ್ಯನ ಜೀವಕ್ಕೆ ಅಪಾಯವನ್ನುಂಟು ಮಾಡುವುದು) ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪರವಾನಗಿದಾರ ಹಾಗೂ ಕಾನ್‌ಸ್ಟೆಬಲ್ ಇಬ್ಬರನ್ನೂ ಆರೋಪಿಗಳನ್ನಾಗಿ ಮಾಡಲಾಗಿದೆ. ಪೂರ್ಣ ಪ್ರಮಾಣದಲ್ಲಿ ತನಿಖೆ ನಡೆದ ನಂತರವೇ ನಿಖರ ಕಾರಣ ತಿಳಿಯಲಿದೆ' ಎಂದು ತಿಳಿಸಿವೆ.




ಕೊಡಗಳ ಸಾಲು

ಬನ್ನೇರುಘಟ್ಟ ರಸ್ತೆಯಲ್ಲಿ ಎನ್.ಎಸ್. ಪಾಳ್ಯ ಕೈಗಾರಿಕಾ ಪ್ರದೇಶದಲ್ಲಿ ಜಲಮಂಡಳಿ ಪೂರೈಸುವ ಕಾವೇರಿ ಕುಡಿಯುವ ನೀರಿಗಾಗಿ ಸರತಿಯಲ್ಲಿರುವ ಪ್ಲಾಸ್ಟಿಕ್ ಕೊಡಗಳು. – ಪ್ರಜಾವಾಣಿ ಚಿತ್ರ: ಎಸ್.ಕೆ. ದಿನೇಶ್

24ಕ್ಕೆ ಸುಗ್ಗನಹಳ್ಳಿ ರಥೋತ್ಸವ

ಪ್ರಜಾವಾಣಿ ವಾರ್ತೆ



ಕುದೂರು: ಹೋಬಳಿಯ ಇತಿಹಾಸ ಪ್ರಸಿದ್ಧ ಸುಗ್ಗನಹಳ್ಳಿಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿಯ ಬ್ರಹ್ಮರಥೋತ್ಸವವು ಮಾರ್ಚ್ 24 ರಂದು ಅದ್ದೂರಿಯಾಗಿ ನೆಡೆಯಲಿದೆ. ಅಂದು ಮಧ್ಯಾಹ್ನ 1:30ರಿಂದ 2 ಗಂಟೆ ಅವಧಿಯ ಲಗ್ನದಲ್ಲಿ ಮುಜಾರಾಯಿ ಇಲಾಖೆ ವತಿಯಿಂದ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಬ್ರಹ್ಮರಥೋತ್ಸವ ನಡೆಯಲಿದೆ.

ಸಂಜೆ 6 ಗಂಟೆಗೆ ಎಳನೀರು ಸೇವೆ, ಶೇಷವಾಹನೋತ್ಸವ ನಡೆಯಲಿದೆ. ಮಾ.25ರಂದು ಸೂರ್ಯ ಮಂಡಲೋತ್ಸವ, ಮಂಟಪ ಪಡಿಸೇವೆ, ಡೋಲೋತ್ಸವ, ರಾತ್ರಿ 1 ಗಂಟೆಗೆ ಗರುಡೋತ್ಸವ, ಕುದುರೆ ಉತ್ಸವ ನಿಗದಿಯಾಗಿವೆ. ಮಾ.26ರಂದು ಅವಭೃತ ಸ್ನಾನ, ಹಂಸ ವಾಹನೋತ್ಸವ, ಧ್ವಜಾರೋಹಣ, ಪಲ್ಲಕ್ಕಿ ಉತ್ಸವ ನಡೆಯಲಿವೆ. ಮಾ.27ರಂದು ಪುಷ್ಪಯಾಗ ಸೇವೆ, ಗರುಡೋತ್ಸವ, ಜಲಕ್ರೀಡೋತ್ಸವ ನಡೆಯಲಿವೆ. ಮಾ.28ರಂದು ಅಂಬೆಗಾಲು ಕೃಷ್ಣನ ಸೇವೆ, 29ರಂದು ರಾತ್ರಿ 8 ಗಂಟೆಗೆ ಕುದೂರು ಪೊಲೀಸ್ ಇಲಾಖೆ ವತಿಯಿಂದ ಶಯನೋತ್ಸವ, ಸುಪ್ರಭಾತ ಸೇವೆ, ಮಹಾಸ್ನಪನವನ್ನು ಏರ್ಪಡಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ

ಸತ್ಕಾರ್ಯಗಳಿಂದ ಅಂತರಂಗ ಪರಿಶುದ್ಧ

ಪ್ರಜಾವಾಣಿ ವಾರ್ತೆ

ಬಾಳೆಹೊನ್ನೂರು (ಚಿಕ್ಕಮಗಳೂರು): 'ಮನುಷ್ಯ ಎಷ್ಟೇ ಎತ್ತರಕ್ಕೆ ಬೆಳೆದರೂ ಮೂಲ ಸಂಸ್ಕೃತಿ ಮರೆಯಬಾರದು. ಮೂಲ ಮರೆತರೆ ಬದುಕಿನಲ್ಲಿ ಸೋಲು ನಿಶ್ಚಿತ. ಮನಸ್ಸು ಪರಿಶುದ್ಧವಾಗಿದ್ದರೆ ಸಂತೋಷ ನೆರಳಿನಂತೆ ನಮ್ಮನ್ನು ಹಿಂಬಾಲಿಸುತ್ತದೆ. ಸತ್ಕಾರ್ಯಗಳಿಂದ ಮನುಷ್ಯನ ಅಂತರಂಗ ಪರಿಶುದ್ಧ ಆಗುತ್ತದೆ' ಎಂದು ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ ಹೇಳಿದರು.

ಪೀಠದಲ್ಲಿ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಕ್ಷೇತ್ರನಾಥ ವೀರಭದ್ರಸ್ವಾಮಿ ಮಹಾರಥೋತ್ಸವದ ಅಂಗವಾಗಿ ನಡೆದ ರೇಣುಕಾಚಾರ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

ಬಾಗಲಕೋಟೆಯ ವೈದ್ಯೆ ಮಹಾಜಬೀನ ಎಸ್.ಮಧುರಕರ ಅವರಿಗೆ 2024ನೇ ಸಾಲಿನ ಜಗದ್ಗುರು ರೇಣುಕಾಚಾರ್ಯ ಪ್ರಶಸ್ತಿಯ ಜೊತೆಗೆ ₹1 ಲಕ್ಷ ನಗದು, ಸ್ಮರಣಿಕೆ ಪ್ರದಾನ ಮಾಡಲಾಯಿತು.

'ವೈದ್ಯಕೀಯ ಕ್ಷೇತ್ರದಲ್ಲಿ ಶ್ರಮಿಸಿದ ಪ್ರತಿಫಲವಾಗಿ ಗುರು ಪೀಠದಿಂದ ಅತ್ಯುನ್ನತ ಪ್ರಶಸ್ತಿ ಪ್ರಾಪ್ತವಾಗಿರುವುದು ಸಂತೋಷ ತಂದಿದೆ' ಎಂದು ವೈದ್ಯೆ ಮಹಾಜಬೀನ ಹೇಳಿದರು.

ಗೌರಿಗದ್ದೆ ಅವಧೂತ ಆಶ್ರಮದ ವಿನಯ ಗುರೂಜಿ ಮಾತನಾಡಿ,'ಧರ್ಮಗಳ ನಡುವೆ ಭಾವೈಕ್ಯ ಸೃಷ್ಟಿ ಮಾಡುವುದು ಧರ್ಮ ಪೀಠಗಳು ಮಾತ್ರ. ರಂಭಾಪುರಿ ಪೀಠದ ಧರ್ಮ, ಆದರ್ಶ ಮತ್ತು ರೇಣುಕಾಚಾರ್ಯರ ವಿಶ್ವ ಬಂಧುತ್ವದ ವಿಚಾರ ಧಾರೆಗಳು ನಮ್ಮೆಲ್ಲರ ಬಾಳಿಗೆ ಬೆಳಕು ನೀಡುತ್ತವೆ' ಎಂದರು.

ಶೃಂಗೇರಿ ಶಾಸಕ ಟಿ.ಡಿ. ರಾಜೇಗೌಡ, ಸಂಸದ ಬಿ.ವೈ.ರಾಘವೇಂದ್ರ, ಹಗರಿಬೊಮ್ಮನಹಳ್ಳಿ ಶಾಸಕ ನೇಮಿನಾಥ ನಾಯ್ಕ ಇದ್ದರು. ಲೆಕ್ಕ ಪರಿಶೋಧಕ ಎಂ.ಸದಾಶಿವಪ್ಪ, ಮಮತಾ ನಾಗರಾಜ್ ಕೂಡ್ಲಿಗೆರೆ, ಚಿಕ್ಕಮಗಳೂರಿನ ಎಚ್.ಎಂ. ಲೋಕೇಶ, ಕೆ.ಆರ್.ಪ್ರಕಾಶ ಕೋಣಂದೂರು ಇವರಿಗೆ ಗುರುರಕ್ಷೆ ನೀಡಲಾಯಿತು. ಮುಕ್ತಿಮಂದಿರದ ವಿಮಲ ರೇಣುಕ ಮುಕ್ತಿಮುನಿ ಶಿವಾಚಾರ್ಯ ಸ್ವಾಮೀಜಿ ಸಂಗಮೇಶ ಉತ್ತಂಗಿ ವಿರಚಿತ 'ನಾದಲೀಲೆ' ಕೃತಿ ಬಿಡುಗಡೆ ಮಾಡಿದರು.



ಬಾಳೆಹೊನ್ನೂರಿನ ರಂಭಾಪುರಿ ಪೀಠದಲ್ಲಿ ನಡೆದ ಕಾರ್ಯಕ್ರಮದಲ್ಲಿ 2024ನೇ ಸಾಲಿನ ಜಗದ್ಗುರು ರೇಣುಕಾಚಾರ್ಯ ಪ್ರಶಸ್ತಿಯನ್ನು ಬಾಗಲಕೋಟೆಯ ವೈದ್ಯೆ ಮಹಾಜಬೀನ ಎಸ್‌ಮಧುರಕರ ಅವರಿಗೆ ಪ್ರದಾನ ಮಾಡಲಾಯಿತು. ರಂಭಾಪುರಿ ಸ್ವಾಮೀಜಿ, ಗೌರಿಗದ್ದೆ ವಿನಯ ಗುರೂಜಿ, ಶಾಸಕ ಟಿ.ಡಿ.ರಾಜೇಗೌಡ ಭಾಗವಹಿಸಿದ್ದರು

ನಿಧನ ವಾರ್ತೆ

ದಾಮೋದರ ರಾವುತ್



ಭುವನೇಶ್ವರ (ಪಿಟಿಐ): ಹಿರಿಯ ರಾಜಕಾರಣಿ, ಬಿಜೆಡಿ ನಾಯಕ ದಾಮೋದರ ರಾವುತ್ ಶುಕ್ರವಾರ ಇಲ್ಲಿನ ಆಸ್ಪತ್ರೆಯಲ್ಲಿ ಮಿದುಳು ನಿಷ್ಕ್ರಿಯಗೊಂಡಿದ್ದರಿಂದಾಗಿ ನಿಧನರಾದರು. ಅವರಿಗೆ 81 ವರ್ಷ ವಯಸ್ಸಾಗಿತ್ತು.

ಅವರಿಗೆ ಪುತ್ರ, ಬಿಜೆಡಿ ಶಾಸಕ ಸಂಬೀತ್ ರೌತ್ರೇಯ, ಸ್ಥಳೀಯ ನಗರಸಭೆ ಸದಸ್ಯೆಯೂ ಆದ ಪುತ್ರಿ ಪ್ರೀತಿನಂದಾ ಇದ್ದಾರೆ. ಹೃದಯಾಘಾತವಾದ ಬಳಿಕ ಮಾರ್ಚ್ 18ರಂದು ರಾವುತ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಂದಿನಿಂದ ವೆಂಟಿಲೇಟರ್‌ನಲ್ಲಿಯೇ ಇದ್ದರು.

ವೃತ್ತಿಯಿಂದ ಪಶುಸಂಗೋಪನಾ ವೈದ್ಯರಾಗಿದ್ದ ರಾವುತ್ ಅವರು 1970ರಲ್ಲಿ ರಾಜಕೀಯ ಕ್ಷೇತ್ರ ಪ್ರವೇಶಿಸಿದ್ದರು. ಮೊದಲ ಬಾರಿಗೆ ಒಡಿಶಾ ವಿಧಾನಸಭೆಗೆ 1977ರಲ್ಲಿ ಚುನಾಯಿತರಾಗಿದ್ದರು. ಒಟ್ಟು ಏಳು ಬಾರಿ ಅವರು ಶಾಸನಸಭೆಗೆ ಆಯ್ಕೆಯಾಗಿದ್ದರು.

ಬಿಜು ಪಟ್ನಾಯಕ್ ಮತ್ತು ಅವರ ಪುತ್ರ ನವೀನ್ ಪಟ್ನಾಯಕ್ ಇಬ್ಬರ ಸಚಿವ ಸಂಪುಟದಲ್ಲಿಯೂ ಅವರು ಸಚಿವರಾಗಿ ಕಾರ್ಯನಿರ್ವಹಿಸಿದ್ದರು.

ಬಾಲಕಿಯ ಅಕ್ರಮ ದತ್ತು: ಮಾರ್ಚ್ 25ರವರೆಗೆ ಪೊಲೀಸ್ ಕಸ್ಟಡಿಗೆ

ಕಿರುತೆರೆ ನಟಿ ಸೋನುಗೌಡ ಬಂಧನ

ಪ್ರಜಾವಾಣಿ ವಾರ್ತೆ



ಸೋನು ಶ್ರೀನಿವಾಸ್ ಗೌಡ

ಬೆಂಗಳೂರು: ಬಾಲಕಿ ಒಬ್ಬರನ್ನು ಅಕ್ರಮವಾಗಿ ದತ್ತು ಪಡೆದು ಸಾಮಾಜಿಕ ಮಾಧ್ಯಮಗಳಲ್ಲಿ ವಿಡಿಯೊ ಹರಿಬಿಟ್ಟ ಆರೋಪದಡಿ ಕಿರುತೆರೆ ನಟಿ ಸೋನು ಶ್ರೀನಿವಾಸ್ ಗೌಡ ಅಲಿಯಾಸ್ ಶಾಂಭವಿ (29) ಅವರನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಬಾಲಕಿಯ ಅಕ್ರಮ ದತ್ತು ಸಂಬಂಧ ಜಿಲ್ಲಾ ಮಕ್ಕಳ ಹಕ್ಕುಗಳ ರಕ್ಷಣಾ ಘಟಕದ (ಬೆಂಗಳೂರು ಪಶ್ಚಿಮ) ಕಾನೂನು ಪರಿವೀಕ್ಷಣಾ ಅಧಿಕಾರಿ ಗೀತಾ ದೂರು ನೀಡಿದ್ದಾರೆ. ಬಾಲನ್ಯಾಯ ಕಾಯ್ದೆ ಹಾಗೂ ಐಪಿಸಿ ಸೆಕ್ಷನ್ ಅಡಿ ಎಫ್‌ಐಆರ್ ದಾಖಲಿಸಿಕೊಂಡು, ಸೋನು ಅವರನ್ನು ಗುರುವಾರ ಬೆಳಿಗ್ಗೆ ಬಂಧಿಸಲಾಗಿದೆ. ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ ಮಾರ್ಚ್ 25ರವರೆಗೆ ಕಸ್ಟಡಿಗೆ ಪಡೆಯಲಾಗಿದೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಎಸ್. ಗಿರೀಶ್ ಹೇಳಿದರು.

'ರಾಯಚೂರು ದಂಪತಿಯ ಎಂಟು ವರ್ಷದ ಮಗಳನ್ನು ಅಕ್ರಮವಾಗಿ ದತ್ತು ಪಡೆದಿದ್ದ ಸೋನು, ತನ್ನ ಮನೆಯಲ್ಲಿ ಇರಿಸಿಕೊಂಡಿದ್ದರು. ಬಾಲಕಿ ಜೊತೆ ರೀಲ್ಸ್ ವಿಡಿಯೊ ಸಹ ಮಾಡುತ್ತಿದ್ದರು. ಕಾನೂನುಬದ್ಧವಾಗಿ ದತ್ತು ಪಡೆಯುತ್ತಿರುವುದಾಗಿ ಹೇಳಿಕೊಂಡು, ಬಾಲಕಿಯ ಜೊತೆ ವಿಡಿಯೊ ಮಾಡಿ ಯುಟ್ಯೂಬ್, ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂ ಖಾತೆಗಳಲ್ಲಿ ಅಪ್‌ಲೋಡ್ ಮಾಡಿದ್ದರು.'

'ವಿಡಿಯೊ ಗಮನಿಸಿದ್ದ ಜಿಲ್ಲಾ ಮಕ್ಕಳ ಹಕ್ಕುಗಳ ರಕ್ಷಣಾ ಘಟಕದ ಅಧಿಕಾರಿಗಳು, ಪರಿಶೀಲನೆ ನಡೆಸಿದ್ದರು. ಇದೊಂದು ಅಕ್ರಮ ದತ್ತು ಎಂಬುದು ಗೊತ್ತಾಗುತ್ತಿದ್ದಂತೆ, ಸೋನು ವಿರುದ್ಧ ದೂರು ನೀಡಿದ್ದರು. ಬಾಲಕಿಯನ್ನು ರಕ್ಷಿಸಿ, ಮಕ್ಕಳ ಹಕ್ಕುಗಳ ರಕ್ಷಣಾ ಘಟಕದ ಅಧಿಕಾರಿಗಳ ಸುಪರ್ದಿಗೆ ಒಪ್ಪಿಸಲಾಗಿದೆ' ಎಂದು ತಿಳಿಸಿದರು.

ದೂರಿನ ವಿವರ: 'ಹಿಂದೂ ದತ್ತು ಕಾಯ್ದೆ ಪ್ರಕಾರ, ದತ್ತು ಪಡೆಯುವ ವ್ಯಕ್ತಿಯು ಕೆಲ ಅರ್ಹತೆಗಳನ್ನು ಹೊಂದಿರಬೇಕು. ಮಕ್ಕಳ ಹಕ್ಕುಗಳ ರಕ್ಷಣಾ ಘಟಕ, ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ ಹಾಗೂ ರಾಜ್ಯ ದತ್ತು ಪ್ರಾಧಿಕಾರದ ಎದುರು, ದತ್ತು ಪಡೆಯುವ ವ್ಯಕ್ತಿಯೂ ತನ್ನ ಅರ್ಹತೆಗಳನ್ನು ತಿಳಿಸಬೇಕು. ಎಲ್ಲ ಹಂತದ ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಿದ ನಂತರವೇ ಮಕ್ಕಳನ್ನು ದತ್ತು ಪಡೆಯಬೇಕು. ಈ ಯಾವ ನಿಯಮವನ್ನೂ ಸೋನುಗೌಡ ಪಾಲಿಸಿಲ್ಲ' ಎಂದು ದೂರಿನಲ್ಲಿ ಕಾನೂನು ಪರಿವೀಕ್ಷಣಾ ಅಧಿಕಾರಿ ಗೀತಾ ದೂರಿದ್ದಾರೆ.

'ಬಾಲ ನ್ಯಾಯ ಕಾಯ್ದೆ ಪ್ರಕಾರ, ಪೋಷಕರು ಮಗುವನ್ನು ಮೊದಲು ಮಕ್ಕಳ ಕಲ್ಯಾಣ ಸಮಿತಿ ಎದುರು ಹಾಜರುಪಡಿಸಬೇಕು. ನಂತರವೇ ದತ್ತು ಪ್ರಕ್ರಿಯೆ ಆರಂಭಿಸಲು ಅವಕಾಶವಿದೆ. ಈ ನಿಯಮವನ್ನೂ ಸೋನುಗೌಡ ಉಲ್ಲಂಘಿಸಿದ್ದಾರೆ' ಎಂದು ಆರೋಪಿಸಿದ್ದಾರೆ.

'ಪೋಷಕರಿಗೆ ವಿವಿಧ ರೀತಿಯ ಸೌಕರ್ಯಗಳನ್ನು ನೀಡಿದ್ದೇನೆ' ಎಂಬುದಾಗಿ ವಿಡಿಯೊದಲ್ಲಿ ಹೇಳಲಾಗಿದೆ. ಪೋಷಕರು ಮಗುವನ್ನು ಮಾರಾಟ ಮಾಡಿರುವ ಅನುಮಾನವೂ ಇದೆ. ಜೊತೆಗೆ, ಮಗುವನ್ನು ಇದುವರೆಗೂ ಎಲ್ಲಿಯೂ ಶಾಲೆಗೆ ಸೇರಿಸಿಲ್ಲ. ಮಗುವಿನ ವಿಡಿಯೊ ಚಿತ್ರೀಕರಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿರುವುದು ಕಾನೂನುಬಾಹಿರ' ಎಂದು ಗೀತಾ ದೂರಿದ್ದಾರೆ.

ಬಿಗ್‌ಬಾಸ್ ರಿಯಾಲಿಟಿ ಶೋನಲ್ಲಿಯೂ ಸೋನು ಶ್ರೀನಿವಾಸ್ ಗೌಡ ಸ್ಪರ್ಧಿಸಿದ್ದರು. 'ಕ್ಯಾಡ್ಬರೀಸ್', 'ಲಗೋರಿ' ಸಿನಿಮಾಗಳಲ್ಲೂ ನಟಿಸಿದ್ದಾರೆ.

ಬಾಲಕಿ ಹೆಸರಿನಲ್ಲಿ ಹಣ ಸಂಪಾದನೆ: 'ಬಾಲಕಿಯನ್ನು ಮುಂದಿಟ್ಟುಕೊಂಡು ವಿಡಿಯೊ ಮಾಡಿ ಸೋನುಗೌಡ ಹಣ ಸಂಪಾದಿಸುತ್ತಿರುವ ಮಾಹಿತಿ ಲಭ್ಯವಾಗಿದ್ದು, ಈ ಬಗ್ಗೆ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಾಲಕಿಯಿಂದ ಬಂದ ಹಣವನ್ನು ಪೋಷಕರಿಗೆ ನೀಡುತ್ತೇನೆ' ಎಂದು ಸೋನು ಗೌಡ ವಿಡಿಯೊದಲ್ಲಿ ಹೇಳಿದ್ದಾರೆ. ಈ ಬಗ್ಗೆ ಅವರಿಂದ ಹೇಳಿಕೆ ಪಡೆಯಬೇಕಿದೆ' ಎಂದು ತಿಳಿಸಿದರು.

ಕಾನೂನು ಪ್ರಕಾರ ತನಿಖೆ: ಸೋನು

'ಎಲ್ಲವೂ ಕಾನೂನು ಪ್ರಕಾರ ತನಿಖೆ ನಡೆಯುತ್ತಿದೆ. ಯಾವುದೇ ಸಮಸ್ಯೆ ಇಲ್ಲ' ಎಂದು ಸೋನು ತಿಳಿಸಿದರು.

ನ್ಯಾಯಾಲಯದ ಬಳಿ ಮಾಧ್ಯಮದವರಿಗೆ ಪ್ರತಿಕ್ರಿಯ ನೀಡಿದ ಅವರು, 'ಒಂದು ಹುಡುಗಿಯನ್ನು ರಕ್ಷಣೆ ಮಾಡಲು ಕರೆದುಕೊಂಡು ಬಂದಿದ್ದೆ. ಆ ಹುಡುಗಿ ಈ ಸುರಕ್ಷಿತವಾಗಿ ಇದ್ದಾಳೆ' ಎಂದರು.

ಪರೀಕ್ಷೆಗೆ ಏಕೈಕ ವಿದ್ಯಾರ್ಥಿನಿ: 15 ಸಿಬ್ಬಂದಿ

ಪ್ರಜಾವಾಣಿ ವಾರ್ತೆ

ಕಂಪ್ಲಿ (ಬಳ್ಳಾರಿ ಜಿಲ್ಲೆ): ಇಲ್ಲಿಯ ಷಾ ಮಿಯಾಚಂದ್ ಸರ್ಕಾರಿ ಪದವಿಪೂರ್ವ ಕಾಲೇಜಿನ ದ್ವಿತೀಯ ಪಿಯು ಪರೀಕ್ಷಾ ಕೇಂದ್ರದಲ್ಲಿ ಶುಕ್ರವಾರ ಹಿಂದಿ ಪರೀಕ್ಷೆಗೆ ಒಬ್ಬ ವಿದ್ಯಾರ್ಥಿನಿ ಹಾಜರಾಗಿದ್ದು, 15 ಜನ ಸಿಬ್ಬಂದಿ ನಿಯೋಜಿಸಲಾಗಿತ್ತು.

ಡಿಎಚ್ಎಸ್ ಕಾಲೇಜಿನ ವಿದ್ಯಾರ್ಥಿನಿ ನಾಜಮೀನ್ ದ್ವಿತೀಯ ಭಾಷೆಯಾಗಿ ಹಿಂದಿ ಆಯ್ಕೆ ಮಾಡಿಕೊಂಡಿದ್ದು, ಅವರೊಬ್ಬರೇ ಪರೀಕ್ಷೆ ಬರೆದರು.

ಪರೀಕ್ಷಾ ಮುಖ್ಯ ಅಧೀಕ್ಷಕ, ಉಪ ಮುಖ್ಯ ಅಧೀಕ್ಷಕ, ಕಚೇರಿ ಅಧೀಕ್ಷಕ, ಉತ್ತರ ಪತ್ರಿಕೆ ಪಾಲಕ, ಪೊಲೀಸ್, ಆರೋಗ್ಯ ಸಹಾಯಕಿ, ಜವಾನ ಸೇರಿ ಇಬ್ಬರು ವಿಶೇಷ ಜಾಗೃತ ದಳದ ಸದಸ್ಯರು, ಬಳ್ಳಾರಿಯಿಂದ ಕಂಪ್ಲಿಗೆ ಪ್ರಶ್ನೆಪತ್ರಿಕೆ ತರುವ ಮಾರ್ಗ ಐವರು ಅಧಿಕಾರಿಗಳು ಕಾರ್ಯನಿರ್ವಹಿಸಿದರು.

ಸಂಸ್ಕೃತಿ ಇಲಾಖೆ ನಡೆಗೆ ಸಾಂಸ್ಕೃತಿಕ ವಲಯದಲ್ಲಿ ಆಕ್ಷೇಪ • 2ನೇ ಕಂತು ಬಿಡುಗಡೆಗಿಲ್ಲ ಖಚಿತತೆ

ಧನಸಹಾಯ: ಅಲ್ಪ 'ಧನ'ಕ್ಕೆ ಅತೃಪ್ತಿ

• ವರುಣ ಹೆಗಡೆ

ಬೆಂಗಳೂರು: ಸಾಂಸ್ಕೃತಿಕ ಉತ್ಸವಗಳಿಗೆ ಈ ಬಾರಿ ಕೋಟ್ಯಂತರ ರೂಪಾಯಿ ವೆಚ್ಚ ಮಾಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಅನುದಾನದ ಕೊರತೆಯಿಂದಾಗಿ ಸಂಘ–ಸಂಸ್ಥೆಗಳಿಗೆ ಕಂತು ರೂಪದಲ್ಲಿ ಧನಸಹಾಯ ಬಿಡುಗಡೆ ಮಾಡಿರುವುದಕ್ಕೆ ಸಾಂಸ್ಕೃತಿಕ ವಲಯದಲ್ಲಿ ಆಕ್ಷೇಪ ವ್ಯಕ್ತವಾಗಿದೆ.

ಇಲಾಖೆಯು ಇದೇ ಮೊದಲ ಬಾರಿ ಕಂತು ರೂಪದಲ್ಲಿ ಧನಸಹಾಯ ಒದಗಿಸಿದೆ. ಜಿಲ್ಲಾ ಸಮಿತಿ ಶಿಫಾರಸು ಮಾಡಿದ್ದ ಅನುದಾನದಲ್ಲಿ ಪರಿಶಿಷ್ಟ ಜಾತಿ ಉಪಯೋಜನೆಯಡಿ ಆಯ್ಕೆಯಾದ ಸಂಘ–ಸಂಸ್ಥೆಗಳಿಗೆ ಶೇ 31ರಷ್ಟು, ಪರಿಶಿಷ್ಟ ಪಂಗಡ ಉಪಯೋಜನೆಯಡಿ ಆಯ್ಕೆಯಾದವರಿಗೆ ಶೇ 33ರಷ್ಟು ಹಾಗೂ ಸಾಮಾನ್ಯ ವರ್ಗದಲ್ಲಿ ಆಯ್ಕೆಯಾದವರಿಗೆ ಶೇ 40ರಷ್ಟು ಅನುದಾನ ಒದಗಿಸಿದೆ.

ಆದರೆ, ಎರಡನೇ ಕಂತಿನ ಬಗ್ಗೆ ಇಲಾಖೆಯು ಆದೇಶದಲ್ಲಿ ಪ್ರಸ್ತಾಪಿಸಿಲ್ಲ. ಇದರಿಂದ ಸಂಘ–ಸಂಸ್ಥೆಗಳಿಗೆ ಮತ್ತೊಂದು ಕಂತಿನ ಖಚಿತತೆ ಇಲ್ಲವಾಗಿದೆ. ಹಲವು ಸಂಘ–ಸಂಸ್ಥೆಗಳು


ಕನ್ನಡ ಭವನ

ಇಲಾಖೆ ನೀಡುವ ಧನಸಹಾಯವನ್ನೇ ಅವಲಂಬಿಸಿದ್ದು, ಪೂರ್ಣ ಹಣ ಬಿಡುಗಡೆಯಾಗದಿರುವುದರಿಂದ ಗೊಂದಲಕ್ಕೆ ಒಳಗಾಗಿವೆ.

ಧನಸಹಾಯಕ್ಕಾಗಿ ಸರ್ಕಾರ ಪ್ರತಿವರ್ಷ ₹15 ಕೋಟಿಯಿಂದ ₹20 ಕೋಟಿ ಖರ್ಚು ಮಾಡುತ್ತಿದೆ. ರಾಜ್ಯದಲ್ಲಿ 7 ಸಾವಿರಕ್ಕೂ ಅಧಿಕ ಸಾಂಸ್ಕೃತಿಕ ಸಂಘ–ಸಂಸ್ಥೆಗಳಿವೆ. ಅರ್ಜಿ ಅಲ್ಲಿಸುವ 4 ಸಾವಿರಕ್ಕೂ ಹೆಚ್ಚು ಸಂಘ–ಸಂಸ್ಥೆಗಳಲ್ಲಿ ಒಂದು ಸಾವಿರದಿಂದ 1,500 ಸಾವಿರ ಸಂಘ–ಸಂಸ್ಥೆಗಳಿಗೆ ಧನಸಹಾಯ ಒದಗಿಸಲಾಗುತ್ತಿದೆ. ಇಲಾಖೆಯಲ್ಲಿ ₹6 ಕೋಟಿ ಮಾತ್ರ ಅನುದಾನ ಧನಸಹಾಯಕ್ಕೆ ಲಭ್ಯವಿದ್ದರಿಂದ ಸಾಮಾನ್ಯ ವರ್ಗದಲ್ಲಿ 831, ಪರಿಶಿಷ್ಟ ಜಾತಿ ಉಪಯೋಜನೆಯಡಿ 519 ಹಾಗೂ ಪರಿಶಿಷ್ಟ ಪಂಗಡ ಉಪಯೋಜನೆಯಡಿ 97 ಸಂಘ–ಸಂಸ್ಥೆಗಳಿಗೆ ಮೊದಲ ಕಂತು ಹಂಚಿಕೆ ಮಾಡಲಾಗಿದೆ.

ಕಡಿಮೆ ಹಣ ಶಿಫಾರಸು: ಯೋಜನೆಯಡಿ ಗರಿಷ್ಠ ₹5 ಲಕ್ಷದವರೆಗೆ ಅನುದಾನ ಒದಗಿಸಲು ಅವಕಾಶವಿದೆ. ಜಿಲ್ಲಾ ಸಮಿತಿ ಬಹುತೇಕ ಸಂಘ–ಸಂಸ್ಥೆಗಳಿಗೆ ₹1 ಲಕ್ಷದಿಂದ ₹ 2 ಲಕ್ಷ ಮಾತ್ರ ಶಿಫಾರಸು ಮಾಡಿದೆ. ಕೆಲ ಸಂಘ–ಸಂಸ್ಥೆಗಳಿಗೆ ₹ 50 ಸಾವಿರವನ್ನೂ ಸಮಿತಿ ಶಿಫಾರಸು ಮಾಡಿದೆ. ಇದರಿಂದ ₹15 ಸಾವಿರದಿಂದ ₹ 20 ಸಾವಿರ ಮೊದಲ ಕಂತಾಗಿ ಕೈಸೇರಲಿದೆ. ಇದು ಅಸಮಾಧಾನಕ್ಕೆ ಕಾರಣವಾಗಿದೆ.

ಕನಕಗಿರಿ ಉತ್ಸವ ಹಾಗೂ ಆನೆಗೊಂದಿ ಉತ್ಸವವು ಇಲಾಖೆಯ ಕ್ರಿಯಾಯೋಜನೆಯಲ್ಲಿ ಇರಲಿಲ್ಲ. ಹಾಗಿದ್ದರೂ, ಈ ಉತ್ಸವಗಳಿಗೆ ಕ್ರಮವಾಗಿ ₹10 ಕೋಟಿ ಹಾಗೂ ₹ 8 ಕೋಟಿ ಅನುದಾನ ಒದಗಿಸಲಾಗಿತ್ತು ಎಂದು ಕಲಾವಿದರು ದೂರಿದ್ದಾರೆ.

'ಅನುದಾನ ಲಭ್ಯತೆ ಆಧರಿಸಿ ಕಂತು ರೂಪದಲ್ಲಿ ಹಣ ಒದಗಿಸಲಾಗುತ್ತಿದೆ. ಹೆಚ್ಚುವರಿ ಅನುದಾನಕ್ಕೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ' ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಕಲಾವಿದರ ಅಲೆದಾಟ

2023–24ನೇ ಸಾಲಿನ ಧನಸಹಾಯಕ್ಕೆ ಸಂಬಂಧಿಸಿ ಸೇವಾ ಸಿಂಧು ಪೋರ್ಟಲ್‌ನಲ್ಲಿ ಅರ್ಜಿ, ದಾಖಲಾತಿ ಸಲ್ಲಿಸಿದ್ದ ಕಲಾವಿದರು ಹಾಗೂ ಸಂಘ–ಸಂಸ್ಥೆಗಳ ಮುಖ್ಯಸ್ಥರು, ಬಳಿಕ ಇಲಾಖೆಯ ಸಹಾಯಕ ನಿರ್ದೇಶಕರ ಸೂಚನೆ ಮೇರೆಗೆ ಭೌತಿಕವಾಗಿ ಆಮಂತ್ರಣ ಪತ್ರಿಕೆ, ಪತ್ರಿಕಾ ತುಣುಕು ಹಾಗೂ ಫೋಟೊಗಳನ್ನು ಸಲ್ಲಿಸಲು ಕಚೇರಿಗಳಿಗೆ ಅಲೆದಾಟ ನಡೆಸಿದ್ದರು. ಈಗ ಕಂತು ರೂಪದಲ್ಲಿ ಬಿಡುಗಡೆ ಮಾಡಿರುವುದರಿಂದ ಅಸಮಾಧಾನಗೊಂಡ ಕಲಾವಿದರು, ಕನ್ನಡ ಭವನಕ್ಕೆ ಅಲೆದಾಟ ನಡೆಸುತ್ತಿದ್ದಾರೆ.

'ಅರ್ಜಿ ಸಲ್ಲಿಸಿದವರು ಅಲ್ಪ ಕಾಸಿಗೂ ಅಲೆದಾಟ ನಡೆಸಬೇಕಾಗಿದೆ. ಉತ್ಸವಗಳಿಗೆ ಕೋಟ್ಯಂತರ ರೂಪಾಯಿ ವೆಚ್ಚ ಮಾಡುವ ಇಲಾಖೆಗೆ ಧನಸಹಾಯ ಒದಗಿಸಲು ಹಣ ಇರದಿರುವುದು ವಿಪರ್ಯಾಸ' ಎಂದು ಕಲಾವಿದ ಜಯಸಿಂಹ ಎಸ್.ಬೇಸರ ವ್ಯಕ್ತಪಡಿಸಿದರು.

ಸಾಂಸ್ಕೃತಿಕ ಲೋಕವನ್ನು ಸಂಸ್ಕೃತಿ ಇಲಾಖೆ ಕಡೆಗಣಿಸಿದೆ. ಇನ್ನೊಂದು ಕಂತಿನ ಬಗ್ಗೆ ಸ್ಪಷ್ಟತೆಯಿಲ್ಲ. ಸಂಘ–ಸಂಸ್ಥೆಗಳು ಕಾರ್ಯಕ್ರಮ ನಡೆಸುವುದೇ ಕಷ್ಟವಾಗಿದೆ

ವೈ.ಕೆ. ಮುದ್ದುಕೃಷ್ಣ, ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ

ಪ್ರತಿಷ್ಠಿತ ಸಂಘ–ಸಂಸ್ಥೆಗಳಿಗೆ ಅನುದಾನ ಕಡಿತ ಮಾಡಿ, ಅನಾಮಧೇಯ ಸಂಘ–ಸಂಸ್ಥೆಗೆ ಅಧಿಕ ಹಣ ನೀಡಲಾಗಿದೆ. ಕಂತು ರೂಪದ ಧನಸಹಾಯ ನೀತಿ ಖಂಡನೀಯ

ಬೈರಮಂಗಲ ರಾಮೇಗೌಡ, ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷ

ಸುದ್ದಿ 2 ನಿಮಿಷ

ವಿದ್ಯುತ್ ಬಿಲ್ ವಿಳಂಬ ಪಾವತಿಗೆ ದಂಡವಿಲ್ಲ: ಇಂಧನ ಇಲಾಖೆ

ಬೆಂಗಳೂರು: ಆನ್‌ಲೈನ್ ಸೇವೆಗಳು ಸ್ಥಗಿತಗೊಂಡ ಅವಧಿಯಲ್ಲಿ ವಿದ್ಯುತ್ ಬಿಲ್ ಪಾವತಿಸಲು ಗ್ರಾಹಕರಿಗೆ ಸಾಧ್ಯವಾಗಿಲ್ಲ. ಹಾಗಾಗಿ ವಿಳಂಬ ವಿದ್ಯುತ್ ಬಿಲ್ ಪಾವತಿಗೆ ಯಾವುದೇ ದಂಡ ಅಥವಾ ಬಡ್ಡಿ ವಿಧಿಸದಿರಲು ಇಂಧನ ಇಲಾಖೆಯು ನಿರ್ಧರಿಸಿದೆ.

ಇಂಧನ ಇಲಾಖೆಯ ಮಾಹಿತಿ ತಂತ್ರಜ್ಞಾನ (ಸಾಫ್ಟ್‌ವೇರ್) ವ್ಯವಸ್ಥೆಯ ಉನ್ನತೀಕರಣ ಕಾರ್ಯ ಪೂರ್ಣಗೊಂಡಿದೆ. ಎಲ್ಲ ಎಸ್ಕಾಂಗಳ, ಸ್ಥಗಿತಗೊಂಡಿದ್ದ ಆನ್‌ಲೈನ್ ವಿದ್ಯುತ್ ಸೇವೆಗಳು ಪುನರ್ ಆರಂಭಗೊಂಡಿವೆ ಎಂದು ಇಲಾಖೆ ಪ್ರಕಟಣೆ ತಿಳಿಸಿದೆ.

ಸಾಫ್ಟ್‌ವೇರ್ ಉನ್ನತೀಕರಣಕ್ಕಾಗಿ ಮಾರ್ಚ್ 10 ರಿಂದ 19ರವರೆಗೆ ಎಲ್ಲ ಎಸ್ಕಾಂಗಳ ಆನ್‌ಲೈನ್ ಸೇವೆಗಳನ್ನು ಸ್ಥಗಿತಗೊಳಿಸಲಾಗಿತ್ತು. ಮಾ.20ರಂದು ಸೇವೆಗಳು ಪುನರಾರಂಭಗೊಳಿಸಲಾಗಿತ್ತು. ಹತ್ತು ದಿನ ಸ್ಥಗಿತಗೊಂಡಿದ್ದ ಕಾರಣ ಹೆಚ್ಚಿನ ಗ್ರಾಹಕರು ಏಕಕಾಲಕ್ಕೆ ವಿದ್ಯುತ್ ಬಿಲ್ ಪಾವತಿಗಾಗಿ ಮುಂದಾಗಿದ್ದರು.

'ಈ ಕಾರಣದಿಂದಾಗಿ ಸರ್ವರ್ ಓವರ್ ಲೋಡ್ ಆಗಿ, ಸೇವೆಯಲ್ಲಿ ತುಸು ವ್ಯತ್ಯಯವಾಗಿತ್ತು. ಅದನ್ನು ಹಂತ ಹಂತವಾಗಿ ಸರಿಪಡಿಸುವ ಕೆಲಸವೂ ನಡೆಯುತ್ತಿದೆ. ಮಾ.30ರೊಳಗೆ ಎಲ್ಲ ಆನ್‌ಲೈನ್ ವಿದ್ಯುತ್ ಸೇವೆಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲಿವೆ' ಎಂದೂ ಇಲಾಖೆ ಹೇಳಿದೆ.

ಪ್ರಶ್ನೆಪತ್ರಿಕೆ ಸೋರಿಕೆ: ಪರೀಕ್ಷೆ ರದ್ದು

ಬೆಳಗಾವಿ: ಬಿ.ಕಾಂ 2ನೇ ಸೆಮಿಸ್ಟರ್‌ನ ಫೈನಾನ್ಷಿಯಲ್ ಮ್ಯಾನೇಜ್‌ಮೆಂಟ್ ಪರೀಕ್ಷೆ ಪ್ರಶ್ನೆಪತ್ರಿಕೆ ಸೋರಿಕೆಯಾದ ಕಾರಣ ಇಲ್ಲಿನ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಶುಕ್ರವಾರ ಪರೀಕ್ಷೆ ರದ್ದುಪಡಿಸಿತು.

ನಿಗದಿಯಂತೆ ಶುಕ್ರವಾರ ಬೆಳಿಗ್ಗೆ 9.30ಕ್ಕೆ ವಿಶ್ವವಿದ್ಯಾಲಯದ ಎಲ್ಲ ಸಂಯೋಜಿತ ಪದವಿ ಕಾಲೇಜುಗಳಲ್ಲಿ ಪರೀಕ್ಷೆ ಆರಂಭವಾಯಿತು. ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾದ ಐದೇ ನಿಮಿಷದಲ್ಲಿ ಪ್ರಶ್ನೆಪತ್ರಿಕೆ ಪ್ರತಿಯು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತು. ಈ ಹಿನ್ನೆಲೆಯಲ್ಲಿ ತಕ್ಷಣಕ್ಕೆ ಪರೀಕ್ಷೆ ರದ್ದು ಮಾಡಲಾಯಿತು.

'ಪರೀಕ್ಷೆಯ ಮುಂದಿನ ದಿನಾಂಕವನ್ನು ವಿದ್ಯಾರ್ಥಿಗಳಿಗೆ ತಿಳಿಸಲಾಗುವುದು' ಎಂದು ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವ ಪ್ರೊ.ರವೀಂದ್ರನಾಥ ಎಸ್. ಕದಮ್ ತಿಳಿಸಿದ್ದಾರೆ.


ರಥೋತ್ಸವ ಮೈಸೂರು ಜಿಲ್ಲೆ ನಂಜನಗೂಡಿನಲ್ಲಿ ಶುಕ್ರವಾರ ಬೆಳಿಗ್ಗೆ ನಡೆದ 'ಶ್ರೀಕಂಠೇಶ್ವರಸ್ವಾಮಿ ಗೌತಮ ಪಂಚ ಮಹಾರಥೋತ್ಸವ'ದಲ್ಲಿ ಕಂಡುಬಂದ ಜನಸ್ತೋಮ ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಕ್ಷುದ್ರಗ್ರಹಕ್ಕೆ ವಿಜ್ಞಾನಿಯ ಹೆಸರು

ಬೆಂಗಳೂರಿನ ಖಭೌತ ವಿಜ್ಞಾನಿ ಜಯಂತಮೂರ್ತಿಗೆ ಗೌರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಖಗೋಳ ಒಕ್ಕೂಟ (ಐಎಯು) ಕ್ಷುದ್ರಗ್ರಹವೊಂದಕ್ಕೆ ಬೆಂಗಳೂರು ಮೂಲದ ಖಭೌತ ವಿಜ್ಞಾನಿ ಜಯಂತಮೂರ್ತಿ ಅವರ ಹೆಸರನ್ನು ಇಟ್ಟಿದೆ. ಇನ್ನು ಮುಂದೆ ಈ ಕ್ಷುದ್ರಗ್ರಹವನ್ನು 'ಜಯಂತಮೂರ್ತಿ' ಹೆಸರಿನಿಂದಲೇ ಕರೆಯಲಾಗುವುದು.

ಜಯಂತ ಅವರು ಭಾರತೀಯ ಖಭೌತ ವಿಜ್ಞಾನ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, 2021ರಲ್ಲಿ ನಿವೃತ್ತಿ ಹೊಂದಿದ್ದರು. ಆ ಬಳಿಕ ಅದೇ ಸಂಸ್ಥೆಯಲ್ಲಿ ಗೌರವ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಖಭೌತ ವಿಜ್ಞಾನ ಕ್ಷೇತ್ರದಲ್ಲಿ ಅವರ ಕೊಡುಗೆಯನ್ನು ಪರಿಗಣಿಸಿ ಕ್ಷುದ್ರಗ್ರಹ '2005 ಇಎಕ್ಸ್ 296'ಕ್ಕೆ ಅವರ ಹೆಸರು ಇಡುವ ಸಂಬಂಧ ಅಂತರರಾಷ್ಟ್ರೀಯ ಖಗೋಳ ಒಕ್ಕೂಟ ಇದೇ 18ರಂದು ಪ್ರಕಟಣೆ ಹೊರಡಿಸಿದೆ. ನಾಸಾದ ನವ ದಿಗಂತ ವಿಜ್ಞಾನ ಅನ್ವೇಷಣೆ ತಂಡದ ಸದಸ್ಯರಾಗಿ ಜಯಂತ ಅವರು ಬ್ರಹ್ಮಾಂಡದಿಂದ ಹೊರಹೊಮ್ಮುವ ನೇರಳಾತೀತ ಹಿನ್ನೆಲೆಯ ವಿಕಿರಣವನ್ನು ಗಮನಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಮೂರ್ತಿ, 'ಖಗೋಳ ವಿಜ್ಞಾನದ ಬಗ್ಗೆ ಹಿಂದಿನಿಂದಲೂ ಆಸಕ್ತಿ ಇತ್ತು. ನೀಲ್ ಆರ್ಮಸ್ಟ್ರಾಂಗ್ ಅವರು ಚಂದ್ರನ ಮೇಲೆ ಇಳಿಯುವುದನ್ನು ನೋಡಿದ್ದೆ. ಆಕಾಶದತ್ತ ತಲೆ ಎತ್ತಿ ನೋಡುವಾಗ ನನ್ನ ಹೆಸರಿನ ಕ್ಷುದ್ರಗ್ರಹ ನೋಡಲು ಖುಷಿ ಎನ್ನಿಸುತ್ತದೆ. ಕ್ಷುದ್ರಗ್ರಹಗಳಿಗೆ ವಿಜ್ಞಾನಿಗಳಲ್ಲದೇ ಬೇರೆಯವರ ಹೆಸರುಗಳನ್ನೂ ಇಡಲಾಗುತ್ತದೆ. ಚೆಸ್ ಗ್ರ್ಯಾಂಡ್ ಮಾಸ್ಟರ್ ವಿಶ್ವನಾಥನ್ ಆನಂದ್ ಅವರ ಹೆಸರನ್ನೂ ಕ್ಷುದ್ರಗ್ರಹಕ್ಕೆ ಇಡಲಾಗಿದೆ' ಎಂದರು.

'ನನ್ನ ಪ್ರಾಥಮಿಕ ಸಂಶೋಧನಾ ಆಸಕ್ತಿ ಅಂತರ್ ತಾರಾ ಮಾಧ್ಯಮ (ಇಂಟರ್‌ಸ್ಟೆಲ್ಲಾರ್) ಮತ್ತು ಧೂಳು, ನೇರಳಾತೀತ ಖಗೋಳ ವಿಜ್ಞಾನ ಹಾಗೂ ಬಾಹ್ಯಾಕಾಶ ಯಾನಗಳ ಕುರಿತಾಗಿತ್ತು' ಎಂದು ಅವರು ಪಿಟಿಐ ಸುದ್ದಿ ಸಂಸ್ಥೆಗೆ ತಿಳಿಸಿದರು.

ನಿಗಮ ಮಂಡಳಿಗಳಿಗೆ ನೇಮಕ ಪರಿಷ್ಕೃತ ಅಂಕಪಟ್ಟಿ ಪ್ರಕಟ

ಬೆಂಗಳೂರು: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮದ (ಕಿಯೊನಿಕ್ಸ್) ಸೇರಿದಂತೆ ವಿವಿಧ ನಿಗಮಗಳಲ್ಲಿನ ಖಾಲಿ ಹುದ್ದೆಗಳ ಭರ್ತಿಗೆ ನಡೆಸಿದ್ದ ಲಿಖಿತ ಪರೀಕ್ಷೆಯ ಪರಿಷ್ಕೃತ ಅಂಕಗಳ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಶುಕ್ರವಾರ ಪ್ರಕಟಿಸಿದೆ.

ಮಾರ್ಚ್ 7ರಂದು ತಾತ್ಕಾಲಿಕ ಅಂಕಪಟ್ಟಿ ಪ್ರಕಟಿಸಿ, ವಿಷಯವಾರು ಅಂಕಗಳು ಕಾಣದಿದ್ದಲ್ಲಿ ಪೂರ್ಣ ಮಾಹಿತಿಯನ್ನು ಅಪ್ಲೋಡ್ ಮಾಡಲು ಅಭ್ಯರ್ಥಿಗಳಿಗೆ ಸೂಚಿಸಲಾಗಿತ್ತು. ಬಹಳಷ್ಟು ಅಭ್ಯರ್ಥಿಗಳು ಅಪ್ಲೋಡ್ ಮಾಡಿರಲಿಲ್ಲ. ಹಾಗಾಗಿ, ಆಕ್ಷೇಪಣೆಗಳನ್ನು ಸಲ್ಲಿಸಲು ಮಾರ್ಚ್ 29ರವರೆಗೆ ಅವಕಾಶ ನೀಡಲಾಗಿದೆ.

ಆಕ್ಷೇಪಣೆಗಳನ್ನು ನಿಗದಿತ ಲಿಂಕ್ ಮೂಲಕವೇ ಸಲ್ಲಿಸಬೇಕು. ಇ-ಮೇಲ್, ಅಂಚೆ ಅಥವಾ ಖುದ್ದಾಗಿ ನೀಡುವ ಆಕ್ಷೇಪಣೆ ಪರಿಗಣಿಸುವುದಿಲ್ಲ ಎಂದು ಕೆಇಎ ಸ್ಪಷ್ಟಪಡಿಸಿದೆ.

ದಿಬ್ಬೂರು ಪ್ರಕರಣ ಇ.ಡಿ. ಅರ್ಜಿ ವಜಾ

ನವದೆಹಲಿ: ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ಪವನ ದಿಬ್ಬೂರು ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ ಸಲ್ಲಿಸಿದ್ದ ಪುನರ್ ಪರಿಶೀಲನಾ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಐಪಿಸಿಯ ಸೆಕ್ಷನ್ 120ಬಿ ಅಡಿ ಶಿಕ್ಷಾರ್ಹವಾಗುವ ಕ್ರಿಮಿನಲ್ ಪಿತೂರಿಯಂತಹ ಅಪರಾಧ ಕೃತ್ಯವು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ ಅನುಸೂಚಿಯಲ್ಲಿ ನಿರ್ದಿಷ್ಟವಾಗಿ ಉಲ್ಲೇಖಿಸಿದ ಅಪರಾಧಕ್ಕೆ ಸಂಬಂಧಪಟ್ಟಿದ್ದರೆ ಮಾತ್ರ ಅದು ಅನುಸೂಚಿತ ಅಪರಾಧವಾಗುತ್ತದೆ ಎಂದು ಸುಪ್ರೀಂ ಕೋರ್ಟ್ 2023ರ ನವೆಂಬರ್‌ನಲ್ಲಿ ತೀರ್ಪು ನೀಡಿತ್ತು.

ಪವನ ದಿಬ್ಬೂರು ಅವರು ಬೆಂಗಳೂರಿನಲ್ಲಿ ಅಲಯನ್ಸ್ ಬ್ಯುಸಿನೆಸ್ ಸ್ಕೂಲ್‌ನ ಆಸ್ತಿಯನ್ನು ₹13.05 ಕೋಟಿಗೆ ಹಾಗೂ ಮಧುಕರ್ ಅಂಗೂರ್ ಅವರ ಆಸ್ತಿಯನ್ನು ₹2.47 ಕೋಟಿಗೆ ಖರೀದಿಸಲು ಕ್ರಿಮಿನಲ್ ಸಂಚು ರೂಪಿಸಿದ್ದರು. ಇದರ ಆಧಾರದ ಮೇಲೆ ಪವನ ವಿರುದ್ಧ ಹಣದ ಅಕ್ರಮ ವರ್ಗಾವಣೆ ಕಾಯ್ದೆಯಡಿ ಕ್ರಮಕೈಗೊಳ್ಳುವುದಕ್ಕೆ ಜಾರಿ ನಿರ್ದೇಶನಾಲಯ ಮುಂದಾಗಿತ್ತು. ಇದನ್ನು ಪ್ರಶ್ನಿಸಿ ಪವನ ದಿಬ್ಬೂರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿ ದ್ದರು. ಈ ತೀರ್ಪನ್ನು ಮರುಪರಿಶೀಲಿಸಬೇಕು ಎಂದು ಇ.ಡಿ. ಅರ್ಜಿ ಸಲ್ಲಿಸಿತ್ತು.

ಪವನ ದಿಬ್ಬೂರು ಪ್ರಕರಣವನ್ನು ಆಧಾರವಾಗಿಟ್ಟುಕೊಂಡು ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಜಾರಿ ನಿರ್ದೇಶನಾಲಯ ದಾಖಲಿಸಿದ್ದ ಪ್ರಕರಣವನ್ನು ಸುಪ್ರೀಂ ಕೋರ್ಟ್ ಇತ್ತೀಚೆಗೆ ವಜಾಗೊಳಿಸಿತ್ತು.

ಶೋಭಾ ವಿರುದ್ಧದ ಪ್ರಕರಣ: ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣವನ್ನು ತಮಿಳುನಾಡಿಗೆ ಸಂಬಂಧ ಕಲ್ಪಿಸಿ ಪ್ರಚೋದನಕಾರಿ ಹೇಳಿಕೆ ನೀಡಿದ್ದ ಆರೋಪದಡಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣಕ್ಕೆ ಹೈಕೋರ್ಟ್ ತಡೆ ನೀಡಿದೆ.

'ನನ್ನ ವಿರುದ್ಧ ಪೊಲೀಸರು ದಾಖಲಿಸಿರುವ ಎಫ್ಐಆರ್ ಹಾಗೂ ಆ ಸಂಬಂಧ 5ನೇ ಎಸಿಎಂಎಂ ಕೋರ್ಟ್‌ನಲ್ಲಿರುವ ಪ್ರಕರಣವನ್ನು ರದ್ದುಪಡಿಸಬೇಕು' ಎಂದು ಕೋರಿ ಶೋಭಾ ಕರಂದ್ಲಾಜೆ ಅರ್ಜಿ ಸಲ್ಲಿಸಿದ್ದರು. ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ಪೀಠ ಶುಕ್ರವಾರ ಇದರ ವಿಚಾರಣೆ ನಡೆಸಿತು.

ಶೋಭಾ ಕರಂದ್ಲಾಜೆ ಪರ ವಕೀಲ ವೆಂಕಟೇಶ್ ಪಿ.ದಳವಾಯಿ,



'ಇದು ರಾಜಕೀಯ ಪ್ರೇರಿತ ಪ್ರಕರಣ. ಎಫ್ಐಆರ್ ದಾಖಲಿಸಿರುವುದು ಕಾನೂನಿನ ದುರ್ಬಳಕೆ. ಹೀಗಾಗಿ, ಎಫ್ಐಆರ್ ರದ್ದುಪಡಿಸಬೇಕು' ಎಂದು ಕೋರಿದರು. ಆಗ, ಪೀಠವು ಶೋಭಾ ಕರಂದ್ಲಾಜೆ ಹೇಳಿಕೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿತು.

'ಮಾತಿಗೆ ಅಳತೆಗೋಲು ಇರಬೇಕು. ಯಾವುದೇ ಪಕ್ಷ ಇರಲಿ, ಮುಖಂಡರಿಗೆ ಮಾತಿನ ಮೇಲೆ ಹಿಡಿತಇರಬೇಕು. ವಾಕ್ ಸ್ವಾತಂತ್ರ್ಯ ಅಭಿವ್ಯಕ್ತಿ ಸ್ವಾತಂತ್ರ್ಯವೇ ಇರಬಹುದು. ನಾವು ನಾಗರಿಕ ಸಮಾಜದಲ್ಲಿ ಬದುಕುತ್ತಿದ್ದೇವೆ ಎಂದು ಮರೆಯಬಾರದು. ಭಾರತ ಅಫ್ಘಾನಿಸ್ತಾನ ಆಗಬಾರದು' ಎಂದು ತೀಕ್ಷ್ಣವಾಗಿ ಹೇಳಿತು. ಅಂತೆಯೇ, ಪ್ರತಿವಾದಿಗಳಾದ ಕಾಟನ್‌ಪೇಟೆ ಠಾಣೆಯ ಪೊಲೀಸರು ಹಾಗೂ ದೂರು ದಾಖಲಿಸಿದ್ದ ಚುನಾವಣಾ ನೀತಿ ಸಂಹಿತೆ ಸಂಚಾರಿ ದಳದ ಅಧಿಕಾರಿ ಎಂ.ಎನ್. ಶಿವರಾಜು ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಡಿ.ಸಿ.ಎಂ ಡಿಕೆಶಿ ವಿರುದ್ಧದ ಅರ್ಜಿಗಳ ವಿಚಾರಣೆ ಏ.5ಕ್ಕೆ ಮುಂದೂಡಿಕೆ

ಬೆಂಗಳೂರು: ಆದಾಯ ಮೀರಿ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧದ ತನಿಖೆಗೆ ನೀಡಿದ್ದ ಅನುಮತಿ ಹಿಂಪಡೆದಿರುವ ರಾಜ್ಯ ಸರ್ಕಾರದ ಕ್ರಮ ಪ್ರಶ್ನಿಸಿದ್ದ ಅರ್ಜಿಗಳ ಕುರಿತ ಅಂತಿಮ ವಿಚಾರಣೆಯನ್ನು ಏಪ್ರಿಲ್ 5ರಿಂದ ನಡೆಸುವುದಾಗಿ ಹೈಕೋರ್ಟ್ ತಿಳಿಸಿದೆ.

ಅನುಮತಿ ಹಿಂಪಡೆದಿರುವ ಕ್ರಮವನ್ನು ಪ್ರಶ್ನಿಸಿ ಬಿಜೆಪಿಯ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಮತ್ತು ಸಿಬಿಐ ಸಲ್ಲಿಸಿರುವ ಪ್ರತ್ಯೇಕ ಅರ್ಜಿಗಳನ್ನು, ನ್ಯಾಯಮೂರ್ತಿ ಕೆ.ಸೋಮಶೇಖರ್ ನೇತೃತ್ವದ ವಿಭಾಗೀಯ ಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಡಿ.ಕೆ.ಶಿವಕುಮಾರ್, ಸಿಬಿಐ ಮತ್ತು ಯತ್ನಾಳ್ ಪರ ವಕೀಲರ ವಾದಾಂಶ ಆಲಿಸಿದ ಪೀಠ ಏಪ್ರಿಲ್ 5ರಿಂದ ಅರ್ಜಿಗೆ ಸಂಬಂಧಿಸಿದ ಅಂತಿಮ ವಾದ-ಪ್ರತಿವಾದ ಆಲಿಸಲಾಗುವುದು ಎಂದು ತಿಳಿಸಿದೆ.

ಸಿ.ಎಂ.ಇಬ್ರಾಹಿಂ ದಾವೆ ವಜಾ

ಪ್ರಜಾವಾಣಿ ವಾರ್ತೆ


ಸಿ.ಎಂ.ಇಬ್ರಾಹಿಂ

ಬೆಂಗಳೂರು: ಜಾತ್ಯತೀತ ಜನತಾ ದಳದ (ಜೆಡಿಎಸ್) ಅಧ್ಯಕ್ಷ ಸ್ಥಾನದಿಂದ ತಮ್ಮನ್ನು ಉಚ್ಚಾಟಿಸಿದ್ದ ಮತ್ತು ರಾಜ್ಯ ಘಟಕದ ಅಧ್ಯಕ್ಷರಾಗಿ ಎಚ್.ಡಿ.ಕುಮಾರಸ್ವಾಮಿ ಅವರನ್ನು ನೇಮಕವನ್ನು ಪ್ರಶ್ನಿಸಿ ಸಿ.ಎಂ. ಇಬ್ರಾಹಿಂ ಸಲ್ಲಿಸಿದ್ದ ದಾವೆಯನ್ನು ಸೆಷನ್ಸ್ ನ್ಯಾಯಾಲಯ ವಜಾ ಮಾಡಿದೆ.

ಸಿ.ಎಂ.ಇಬ್ರಾಹಿಂ ಸಲ್ಲಿಸಿದ್ದ ಅಸಲು ದಾವೆ ವಿಚಾರಣೆ ನಡೆಸಿದ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಎಸ್.ಕೆ.ಸಾವಿತ್ರಿ, ದಾವೆಯನ್ನು ವಜಾಗೊಳಿಸಿ ಶುಕ್ರವಾರ ಆದೇಶಿಸಿದ್ದಾರೆ.

'ನಿಯಮಗಳಿಗೆ ವಿರುದ್ಧವಾಗಿ ಅಧ್ಯಕ್ಷ ಹುದ್ದೆಯಿಂದ ವಜಾ ಮಾಡಲಾಗಿದೆ' ಎಂದು ಆಕ್ಷೇಪಿಸಿ ಇಬ್ರಾಹಿಂ ಅವರು ಕೋರ್ಟ್ ಮೆಟ್ಟಿಲೇರಿದ್ದರು. ಪಕ್ಷ ವಿರೋಧಿ ಚಟುವಟಿಕೆ ಆರೋಪದಡಿ ಇಬ್ರಾಹಿಂ ಅವರನ್ನು ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಉಚ್ಚಾಟಿಸಿದ್ದರು.

ಬೋರ್ಡ್ ಪರೀಕ್ಷೆಗೆ ಅಸ್ತು

ಒಂದನೇ ಪುಟದಿಂದ...

ಆಗ ಎರಡು ವಿಷಯದ ಪರೀಕ್ಷೆಗಳು ಮುಗಿದಿದ್ದವು. ಬೋರ್ಡ್ ಪರೀಕ್ಷೆಯ ದಿಢೀರ್ ರದ್ದತಿಯಿಂದ ಪೋಷಕರು, ವಿದ್ಯಾರ್ಥಿಗಳು ಆತಂಕಕ್ಕೆ ಒಳಗಾಗಿದ್ದರು. ಮಕ್ಕಳು ಬೇಸಿಗೆ ರಜೆಯಿಂದಲೂ ವಂಚಿತರಾಗಿದ್ದರು. ಹೈಕೋರ್ಟ್ ವಿಭಾಗೀಯ ಪೀಠ ಶನಿವಾರ ನೀಡಿದ ತೀರ್ಪಿನಂತೆ ಬಾಕಿ ವಿಷಯಗಳಿಗೆ ಮಾತ್ರ ಪರೀಕ್ಷೆ ನಡೆಸಲಾಗುತ್ತಿದೆ.

ಮಾರ್ಚ್ 25ರಿಂದ ಎಸ್ಎಸ್ಎಲ್‌ಸಿ ಪರೀಕ್ಷೆಗಳು ಆರಂಭವಾಗುವ ಕಾರಣ ಮಧ್ಯಾಹ್ನದ ಅವಧಿ ಹಾಗೂ ಪರೀಕ್ಷೆಗಳಿಗೆ ರಜೆ ಇರುವ ದಿನಗಳಲ್ಲಿ ಬೆಳಗಿನ ಸಮಯ ಪರೀಕ್ಷೆ ನಡೆಸಲು ವೇಳಾಪಟ್ಟಿ ಸಿದ್ಧಪಡಿಸಲಾಗಿದೆ. ಪರೀಕ್ಷೆಗಳನ್ನು ಯಶಸ್ವಿಯಾಗಿ ನಡೆಸಲು ಶಾಲಾ ಶಿಕ್ಷಣ ಇಲಾಖೆಯೂ ಪ್ರತ್ಯೇಕ ಅಧಿಸೂಚನೆ ಹೊರಡಿಸಿದೆ.

ಎಸ್ಎಸ್ಎಲ್‌ಸಿ ಪರೀಕ್ಷೆಗಳಿಗೆ ಅಡ್ಡಿಯಾಗದಂತೆ 5, 8, 9ನೇ ತರಗತಿಗಳ ಮೌಲ್ಯಾಂಕನ ವೇಳಾಪಟ್ಟಿ ನಿಗದಿಪಡಿಸಲಾಗಿದೆ. 4 ದಿನಗಳಲ್ಲೇ ಬಾಕಿ ಪರೀಕ್ಷೆಗಳು ಮುಗಿಯಲಿವೆ

ಎನ್.ಮಂಜುಶ್ರೀ, ಅಧ್ಯಕ್ಷೆ, ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ

ಬೋರ್ಡ್ ಪರೀಕ್ಷೆ ನಡೆಸಲು ಹೈಕೋರ್ಟ್ ವಿಭಾಗೀಯ ಪೀಠ ತೀರ್ಪು ನೀಡಿದೆ. ಇದನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ನಿರ್ಧರಿಸಲಾಗಿದೆ

ಲೋಕೇಶ್ ತಾಳಿಕಟ್ಟೆ, ಅಧ್ಯಕ್ಷ, ರುಪ್ಸ–ಕರ್ನಾಟಕ

5, 8, 9ನೇ ತರಗತಿಗಳ ಪರೀಕ್ಷೆ ವೇಳಾಪಟ್ಟಿ

5ನೇ ತರಗತಿಗೆ ಮಾರ್ಚ್ 25ರಂದು ಪರಿಸರ ಅಧ್ಯಯನ (ಮಧ್ಯಾಹ್ನ 2.30ರಿಂದ), 26ರಂದು ಗಣಿತ (ಬೆಳಿಗ್ಗೆ 10ರಿಂದ) ವಿಷಯಗಳ ಪರೀಕ್ಷೆಗಳು ನಡೆಯಲಿವೆ. 8 ,9ನೇ ತರಗತಿಗಳಿಗೆ 25ರಂದು ತೃತೀಯ ಭಾಷೆ (ಮಧ್ಯಾಹ್ನ 2.30ರಿಂದ), 26ರಂದು ಗಣಿತ (ಬೆಳಿಗ್ಗೆ 10ರಿಂದ), 27ರಂದು ವಿಜ್ಞಾನ (ಮಧ್ಯಾಹ್ನ 2.30ರಿಂದ), 28ರಂದು ಸಮಾಜ ವಿಜ್ಞಾನ (ಬೆಳಿಗ್ಗೆ 10ರಿಂದ) ಪರೀಕ್ಷೆಗಳು ನಡೆಯಲಿವೆ.

ವಿದ್ಯುತ್ ತಂತಿ ಸ್ಪರ್ಶಿಸಿ ಕಾಡಾನೆ ಸಾವು

ಯಲ್ಲಾಪುರ (ಉತ್ತರ ಕನ್ನಡ): ದೇಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಟ್ಟಿಗೆ ಗ್ರಾಮದ ಇಡ್ಕೆಮನೆಯಲ್ಲಿ ಶುಕ್ರವಾರ ಆಹಾರ ಹುಡುಕಿಕೊಂಡ ಬಂದ ಕಾಡಾನೆಯೊಂದು ವಿದ್ಯುತ್ ತಂತಿ ಸ್ಪರ್ಶಿಸಿ ಮೃತಪಟ್ಟಿದೆ.

'ಕಾಡಾನೆ ಇಡ್ಕೆಮನೆಯ ಪರಮೇಶ್ವರ ಕುಣಬಿ ಎಂಬವರ ಅಡಿಕೆ ತೋಟಕ್ಕೆ ನುಗ್ಗಿತ್ತು. ಅನಿರೀಕ್ಷಿತವಾಗಿ ಅಲ್ಲೇಯೇ ಹರಿದು ಬಿದ್ದಿದ್ದ ವಿದ್ಯುತ್ ತಂತಿಗೆ ತಾಗಿ ಮೃತಪಟ್ಟಿರಬಹುದು. ಈ ಆನೆ 45 ವರ್ಷದ್ದು ಇರಬಹುದು. ತಾಲ್ಲೂಕಿನ ಕಣ್ಣೀಗೇರಿ, ಕಿರವತ್ತಿ, ಮದನೂರು ಮುಂತಾದ ಭಾಗದಲ್ಲಿ ಸಂಚರಿಸುತ್ತ ಬಾಳೆ, ಕಬ್ಬು ಮುಂತಾದ ಬೆಳೆ ಧ್ವಂಸ ಮಾಡುತಿತ್ತು' ಎಂದು ಅರಣ್ಯ ಇಲಾಖೆ ಮೂಲಗಳು ತಿಳಿಸಿವೆ. ಮರಣೋತ್ತರ ಪರೀಕ್ಷೆ ಬಳಿಕ ಅರಣ್ಯ ಇಲಾಖೆಯ ಅಧಿಕಾರಿಗಳು ಆನೆಯ ಅಂತ್ಯಕ್ರಿಯೆ ಮಾಡಿದರು.

'ಉ.ಪ್ರ: ಮದರಸಾ ಶಿಕ್ಷಣ ಕಾಯ್ದೆ ರದ್ದು'

ಲಖನೌ (ಪಿಟಿಐ): 'ಉತ್ತರಪ್ರದೇಶ ಮದರಸಾ ಶಿಕ್ಷಣ ಮಂಡಳಿ ಕಾಯ್ದೆ 2004' ಅಸಾಂವಿಧಾನಿಕವಾದುದು. ಇದು, ಜಾತ್ಯತೀತ ತತ್ವಗಳನ್ನು ಉಲ್ಲಂಘಿಸಿದೆ' ಎಂದು ಅಲಹಾಬಾದ್ ಹೈಕೋರ್ಟ್ ಘೋಷಿಸಿದೆ. ರಾಜ್ಯದಲ್ಲಿ ಪ್ರಸ್ತುತ ಮದರಸಾಗಳಲ್ಲಿರುವ ವಿದ್ಯಾರ್ಥಿ ಗಳನ್ನು ಸಾಮಾನ್ಯ ವ್ಯವಸ್ಥೆಯ ಶಾಲೆಗಳಿಗೆ ದಾಖಲುಪಡಿಸಬೇಕು ಎಂದೂ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಸುಟ್ಟ ಕಾರಿನಲ್ಲಿ ಮೂವರ ಶವ ಪತ್ತೆ

ಪ್ರಜಾವಾಣಿ ವಾರ್ತೆ

ತುಮಕೂರು: ತಾಲ್ಲೂಕಿನ ಕುಚ್ಚಂಗಿ ಕೆರೆ ಅಂಗಳದಲ್ಲಿ ಶುಕ್ರವಾರ ಕಾರಿನಲ್ಲಿ ಸುಟ್ಟ ಸ್ಥಿತಿಯಲ್ಲಿ ಮೂರು ಮೃತದೇಹಗಳು ಪತ್ತೆಯಾಗಿವೆ.

ಕಾರಿನ ಡಿಕ್ಕಿಯಲ್ಲಿ ಎರಡು, ಮಧ್ಯದ ಸೀಟಿನಲ್ಲಿ ಒಂದು ಮೃತದೇಹ ಪತ್ತೆಯಾಗಿದ್ದು, ಗುರುತು ಸಿಗದಷ್ಟು ಸುಟ್ಟು ಹೋಗಿದೆ. ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ನಡ ಗ್ರಾಮದ ಆಟೊ ಚಾಲಕ ಸಾಹುಲ್ (45), ಕುವೆಟ್ಟು ಗ್ರಾಮ ಮದ್ದಡ್ಕದ ಇಸಾಕ್ (56), ಶಿರ್ಲಾಲು ಗ್ರಾಮದ ನಿವಾಸಿ ಇಮ್ತಿಯಾಜ್ (34) ಎಂಬುವರ ಮೃತ ದೇಹಗಳು ಸಿಕ್ಕಿವೆ.

ನೋಂದಣಿ ಸಂಖ್ಯೆ ಆಧಾರದ ಮೇಲೆ ಕಾರು ಮಾಲೀಕ, ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ರಫೀಕ್ ಎಂಬುವವರನ್ನು ಪತ್ತೆ ಮಾಡಲಾಗಿದೆ. ಅವರು ನೀಡಿದ ಮಾಹಿತಿ ಆಧಾರದ ಮೇಲೆ ಮೃತ ದೇಹಗಳ ಗುರುತು ಪತ್ತೆ ಹಚ್ಚಲಾಗಿದೆ. ಮೃತ ಮೂವರು ರಫೀಕ್ ಸ್ನೇಹಿತರಾಗಿದ್ದು, ಅವರಿಂದ ಕಾರು ಪಡೆದುಕೊಂಡಿದ್ದರು. ಎಲ್ಲಿಗೆ ಹೋಗುತ್ತೇವೆ ಎಂಬ ವಿಚಾರ ತಿಳಿಸಿರಲಿಲ್ಲ.

ಕಾರಿನ ಡಿಕ್ಕಿಯಲ್ಲಿ ಶವಗಳು ಸಿಕ್ಕಿರುವುದನ್ನು ಗಮನಿಸಿದರೆ ಸ್ಥಳದಲ್ಲೇ ಕೊಲೆ ಮಾಡಿ ಬೆಂಕಿ ಹಚ್ಚಿರಬಹುದು. ಇಲ್ಲವೇ ಬೇರೆಡೆ ಕೊಲೆ ಮಾಡಿ ಕಾರಿನಲ್ಲಿ ಶವಗಳನ್ನು ಸಾಗಿಸಿ ಬೆಂಕಿ ಹಚ್ಚಿ ಪರಾರಿಯಾಗಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

'ಗುರುವಾರ ರಾತ್ರಿ ಘಟನೆ ಸಂಭವಿಸಿರಬಹುದು, ಶುಕ್ರವಾರ ಮಧ್ಯಾಹ್ನ ಗಮನಕ್ಕೆ ಬಂದಿದೆ. ತನಿಖೆ ಮುಂದುವರಿದಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್ ತಿಳಿಸಿದ್ದಾರೆ.


ತುಮಕೂರು ತಾಲ್ಲೂಕಿನ ಕುಚ್ಚಂಗಿ ಕೆರೆ ಅಂಗಳದಲ್ಲಿ ಶುಕ್ರವಾರ ಸುಟ್ಟ ಸ್ಥಿತಿಯಲ್ಲಿ ಪತ್ತೆಯಾದ ಕಾರು

ಬಾಹ್ಯಾಕಾಶ ಕ್ಷೇತ್ರದಲ್ಲಿ ಇಸ್ರೊ ಮತ್ತೊಂದು ಮೈಲುಗಲ್ಲು

ಪರಾಕ್ರಮ ಮೆರೆದ 'ಪುಷ್ಪಕ್' ರಾಕೆಟ್

ಪ್ರಜಾವಾಣಿ ವಾರ್ತೆ

ನಾಯಕನಹಟ್ಟಿ (ಚಿತ್ರದುರ್ಗ): ಬಾಹ್ಯಾಕಾಶ ಕ್ಷೇತ್ರದಲ್ಲಿ ಛಾಪು ಮೂಡಿಸುತ್ತಿರುವ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಶುಕ್ರವಾರ ಬೆಳಿಗ್ಗೆ ಮತ್ತೊಂದು ಮೈಲುಗಲ್ಲು ಸ್ಥಾಪಿಸಿತು.

ಸಮೀಪದ ಕುದಾಪುರದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ)ಯ ಏರೋನ್ಯಾಟಿಕಲ್ ಟೆಸ್ಟ್‌ರೇಂಜ್ (ಎಟಿಆರ್) ಆವರಣದಲ್ಲಿ ಶುಕ್ರವಾರ ನಡೆದ ಮರುಬಳಕೆ ಉಡಾವಣಾ ವಾಹನ (ಆರ್‌ಎಲ್‌ವಿ) 'ಪುಷ್ಪಕ್', ಸ್ವಾಯತ್ತವಾಗಿ ನೆಲೆ ಕಂಡುಕೊಳ್ಳುವ (ಲೆಕ್ಸ್)-2 ಪರೀಕ್ಷಾರ್ಥ ಹಾರಾಟ ಮತ್ತು ನೆಲೆಗೆ ಮರಳುವ ಪ್ರಯೋಗ ಯಶಸ್ವಿಯಾಗಿದೆ.

ಬಾಹ್ಯಾಕಾಶ ಕ್ಷೇತ್ರದಲ್ಲಿನ ವಿನೂತನ ಸಂಶೋಧನೆ ಇದಾಗಿದೆ. ಬೆಳಿಗ್ಗೆ 7.10ಕ್ಕೆ ಭಾರತೀಯ ವಾಯುಪಡೆಗೆ ಸೇರಿದ ಚಿನೂಕ್ ಯುದ್ಧ ಹೆಲಿಕಾಪ್ಟರ್ ಮೂಲಕ ದೊಡ್ಡ ಗಾತ್ರದ ರೆಕ್ಕೆಯಿರುವ 'ಪುಷ್ಪಕ್' ರಾಕೆಟ್ ಅನ್ನು ಭೂ ಮಟ್ಟದಿಂದ 4.5 ಕಿ.ಮೀ ಮೇಲಕ್ಕೆ ಹೊತ್ತೊಯ್ಯಲಾಯಿತು. ಅಲ್ಲಿಂದ ಅದನ್ನು ಬಿಡುಗಡೆ ಮಾಡಲಾಯಿತು.

ರನ್ ವೇಯಿಂದ 4 ಕಿ.ಮೀ ದೂರದಲ್ಲಿ ಹಾರಾಟ ನಡೆಸಿದ ರಾಕೆಟ್, ಸ್ವಯಂ ಚಾಲನೆ ಪಡೆದುಕೊಂಡಿತು. ರನ್‌ವೇಯಿಂದ ಆಚೆ ಈಚೆಗೂ ಇಳಿಯುವ (ಕ್ರಾಸ್‌ರೇಂಜ್) ಕಮಾಂಡ್‌ಗಳನ್ನು ಪಾಲಿಸುತ್ತಾ ವೇಗವಾಗಿ ಸಾಗಿತು. ಬ್ರೇಕ್ ಪ್ಯಾರಾಚೂಟ್, ಲ್ಯಾಂಡಿಂಗ್ ಗೇರ್ ಬ್ರೇಕ್ ಮತ್ತು ನೋಸ್‌ವ್ಹೀಲ್ ಸ್ಟೀಯರಿಂಗ್ ವ್ಯವಸ್ಥೆ ನೆರವಿನಿಂದ ವೇಗ ತಗ್ಗಿಸಿಕೊಂಡು ರನ್‌ವೇ ಮಧ್ಯಭಾಗಕ್ಕೆ ಬಂದು ನಿಲ್ಲುತ್ತಿದ್ದಂತೆಯೇ, ನೆರೆದ ವಿಜ್ಞಾನಿಗಳು ಹರ್ಷೋದ್ಗಾರ ಮೊಳಗಿಸಿದರು.

ಇಸ್ರೊ ಸೇರಿದಂತೆ ವಿಶ್ವದ ಹಲವು ಬಾಹ್ಯಾಕಾಶ ಸಂಸ್ಥೆಗಳು ನಭಕ್ಕೆ ಉಪಗ್ರಹಗಳನ್ನು ಕಳುಹಿಸುವಾಗ ಪ್ರತಿ ಬಾರಿಯೂ ಹೊಸ ಉಡಾವಣಾ ರಾಕೆಟ್ ಬಳಸಬೇಕಿದೆ. ಉಪಗ್ರಹವನ್ನು ನಭಕ್ಕೆ ಸೇರಿಸಿದ ಬಳಿಕ ರಾಕೆಟ್ ಅಲ್ಲಿಯೇ ಉರಿದು ನಾಶವಾಗುತ್ತಿತ್ತು. ಇದರಿಂದ ಕೋಟ್ಯಂತರ ಹಣ ನಷ್ಟವಾಗುತ್ತಿತ್ತು. ಈ ನಷ್ಟ ತಡೆಯುವ ಉದ್ದೇಶದಿಂದ ಮರುಬಳಕೆ ವಾಹನದ (ಆರ್‌ಎಲ್‌ವಿ) ಪರಿಕಲ್ಪನೆಯನ್ನು ದೇಶಿ ತಂತ್ರಜ್ಞಾನದ ಮೂಲಕ ಇಸ್ರೊ ಆವಿಷ್ಕರಿಸಿದೆ.

ಭಾರತೀಯ ವಾಯುಪಡೆ, ಡಿಆರ್‌ಡಿಒ, ಶಸ್ತ್ರಾಸ್ತ್ರಗಳ ಸಂಶೋಧನೆ ಮತ್ತು ಅಭಿವೃದ್ಧಿ ಪ್ರತಿಷ್ಠಾನ (ಎಆರ್‌ಡಿಇ), ಏರೋನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿ (ಎಡಿಎ), ಸೆಮಿಲ್ಯಾಕ್ ಸಂಸ್ಥೆಗಳು ಸಾಧನಗಳನ್ನು ಪೂರೈಸಿವೆ. ತಂತ್ರಜ್ಞಾನದ ನೆರವನ್ನೂ ನೀಡಿವೆ.



ಯಶಸ್ವಿ ಪರೀಕ್ಷಾರ್ಥ ಲ್ಯಾಂಡಿಂಗ್ ನಡೆಸಿದ 'ಪುಷ್ಪಕ್' ರಾಕೆಟ್

'ಪುಷ್ಪಕ್' ರಾಕೆಟ್ ಸ್ವಾಯತ್ತವಾಗಿ ನೆಲೆ ಕಂಡುಕೊಳ್ಳುವ (ಲೆಕ್ಸ್)-2 ಪರೀಕ್ಷಾರ್ಥ ಹಾರಾಟ ಮತ್ತು ನೆಲೆಗೆ ಮರಳುವ ಪ್ರಯೋಗ ಯಶಸ್ವಿಯಾಗಿದೆ

ಎಸ್.ಸೋಮನಾಥ್, ಇಸ್ರೊ ಅಧ್ಯಕ್ಷ

ಕಕ್ಷೆ ಸುತ್ತುವ ಉಪಗ್ರಹಗಳಿಗೆ ಇಂಧನ ಮರುಪೂರಣ ಸೇರಿದಂತೆ ತಂತ್ರಜ್ಞಾನ ಮತ್ತು ಮಾದರಿಯನ್ನು 'ಪುಷ್ಪಕ್' ಮೂಲಕ ಇಸ್ರೊ ಕರಗತ ಮಾಡಿಕೊಂಡಿದೆ

ಎಸ್.ಉನ್ನಿಕೃಷ್ಣನ್, ನಿರ್ದೇಶಕ, ವಿಕ್ರಮ್ ಸಾರಾಭಾಯ್ ಬಾಹ್ಯಾಕಾಶ ಕೇಂದ್ರ

ಸಂಕ್ಷಿಪ್ತ ಸುದ್ದಿ

ಕಾಡಾನೆ ದಾಳಿ ಕಾರ್ಮಿಕ ಬಲಿ


ಶ್ರೀಧರ್

ಚಿಕ್ಕಮಗಳೂರು: ತಾಲ್ಲೂಕಿನ ಕಂಚೇನಹಳ್ಳಿ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ಕೂಲಿ ಕಾರ್ಮಿಕ ಕಾಡಾನೆ ದಾಳಿಗೆ ಸಿಲುಕಿ ಮೃತಪಟ್ಟಿದ್ದಾರೆ.

ತಮಿಳುನಾಡಿನ ತಿರುವಣ್ಣಾಮಲೈ ಸಮೀಪದ ವೀರಶೋಲಾಪುರಂ ಗ್ರಾಮದ ಶ್ರೀಧರ್ (68) ಮೃತ ಕೂಲಿ ಕಾರ್ಮಿಕ. 30 ವರ್ಷಗಳಿಂದ ಜಿಲ್ಲೆಯ ಕಂಚೇನಹಳ್ಳಿಯಲ್ಲಿ ಶೀಧರ್ ಕುಟುಂಬ ನೆಲೆಸಿದೆ.

ಮಹೇಶ್ ಎಂಬುವರ ತೋಟದಲ್ಲಿ ಶುಕ್ರವಾರ ಬೆಳಿಗ್ಗೆ ಕೆಲಸಕ್ಕೆ ಹೋಗಿದ್ದರು. ದಿಢೀರ್ ಬಂದ ಒಂಟಿ ಸಲಗ, ಕಾರ್ಮಿಕನ ಮೇಲೆ ದಾಳಿ ನಡೆಸಿದೆ. ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಯಿತು. ನಂತರ ಹೆಚ್ಚಿನ ಚಿಕಿತ್ಸೆಗೆ ಹಾಸನಕ್ಕೆ ಕರೆದೊಯ್ಯುವ ಮಾರ್ಗ ಮಧ್ಯೆ ಮೃತಪಟ್ಟರು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದರು.

ಒಂಟಿ ಕಾಡಾನೆ ಈ ಭಾಗದಲ್ಲಿ ಸುತ್ತಾಡುತ್ತಿದ್ದು, ಅದನ್ನು ಹಿಡಿದು ಸ್ಥಳಾಂತರ ಮಾಡಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಬೈಲಹೊಂಗಲ: ರಭಸದ ಮಳೆ

ಬೈಲಹೊಂಗಲ (ಬೆಳಗಾವಿ ಜಿಲ್ಲೆ): ಪಟ್ಟಣ ಸೇರಿ ತಾಲ್ಲೂಕಿನ ಕೆಲ ಗ್ರಾಮಗಳಲ್ಲಿ ಶುಕ್ರವಾರ ಸಂಜೆ ಕೆಲ ಕಾಲ ಮಳೆ ಸುರಿಯಿತು. ಗುಡುಗು ಮಿಂಚು ಸಹಿತ ಅರ್ಧ ಗಂಟೆಗೂ ಹೆಚ್ಚು ಸಮಯ ಸುರಿಯಿತು. ರಭಸದ ಮಳೆಗೆ ಚರಂಡಿ, ಕಾಲುವೆಗಳು ತುಂಬಿ ಹರಿದವು.

ಸಂಪಗಾಂವ, ಸಾಣಿಕೊಪ್ಪ, ಯರಡಾಲ, ತಿಗಡಿ, ನಾವಲಗಟ್ಟಿ ಸೇರಿದಂತೆ ಹಲವು ಗ್ರಾಮಗಳಲ್ಲಿ ಮಳೆ ಆಗಿದೆ.

ಕೋಟೆಕಾರ್: 10 ಸೆಂ.ಮೀ. ಮಳೆ

ಮಂಗಳೂರು: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಕೆಲವೆಡೆ ಮಳೆಯಾಗಿದೆ. ಶುಕ್ರವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ಉಳ್ಳಾಲ ತಾಲ್ಲೂಕು ಕೋಟೆಕಾರ್‌ನಲ್ಲಿ 10 ಸೆಂ.ಮೀ, ತಲಪಾಡಿಯಲ್ಲಿ 6 ಹಾಗೂ ಉಡುಪಿ ಜಿಲ್ಲೆ ಕಾಪು ತಾಲ್ಲೂಕಿನ ಮಲ್ಲಾರು ಗ್ರಾಮದಲ್ಲಿ 5 ಸೆಂ.ಮೀ. ಮಳೆ ದಾಖಲಾಗಿದೆ.

ಮಂಗಳೂರು ನಗರದಲ್ಲಿ ತುಂತುರು ಮಳೆಯಾಗಿದೆ. ಪುತ್ತೂರು ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಗುರುವಾರ ತಡರಾತ್ರಿ ಸಾಧಾರಣ, ಈಶ್ವರಮಂಗಲ ಸುತ್ತಮುತ್ತ ರಾತ್ರಿ ಮತ್ತು ಶುಕ್ರವಾರ ನಸುಕಿನಲ್ಲಿ ಬಿರುಸಿನ ಮಳೆಯಾಗಿದೆ.

ಹಲವು ಕಡೆಗಳಲ್ಲಿ ಮನೆಯಂಗಳದಲ್ಲಿ ಒಣಗಲು ಹಾಕಿದ ಅಡಿಕೆ ಒದ್ದೆಯಾಗಿದೆ. ನೆರೆಯ ಕೇರಳದ ಕಾಸರಗೋಡು ಜಿಲ್ಲೆಯ ಹಲವು ಭಾಗಗಳಲ್ಲಿ ಸುರಿದ ಮಳೆ ತಂಪೆರೆದಿದೆ.

ವಿಚಾರಣಾ ನ್ಯಾಯಾಲಯದಲ್ಲಿ ದೆಹಲಿ ಮುಖ್ಯಮಂತ್ರಿ ವಿರುದ್ಧ ಇ.ಡಿ ಆರೋಪ

ಕೇಜ್ರಿವಾಲ್ ಪ್ರಮುಖ ಸಂಚುಕೋರ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಬಕಾರಿ ನೀತಿ ಹಗರಣದಲ್ಲಿ ಅರವಿಂದ ಕೇಜ್ರಿವಾಲ್ ಅವರು ಪ್ರಮುಖ ಸಂಚುಕೋರ. ಅವರು ಅಬಕಾರಿ ನೀತಿ ರೂಪಿಸುವ ಕಾರ್ಯದಲ್ಲಿ ನೇರವಾಗಿ ಭಾಗಿಯಾಗಿದ್ದರು. ಜತೆಗೆ, ಅವರು ಪಕ್ಷದ ಮುಖ್ಯಸ್ಥರು ಎಂದು ಜಾರಿ ನಿರ್ದೇಶನಾಲಯ ಹೇಳಿದೆ.

ಇ.ಡಿ. ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು, '2021-22ರ ದೆಹಲಿ ಅಬಕಾರಿ ನೀತಿ ರೂಪಿಸಲು ಹಾಗೂ ಅನುಷ್ಠಾನಗೊಳಿಸಲು ಕೇಜ್ರಿವಾಲ್ ಅವರು 'ಸೌತ್ ಗ್ರೂಪ್'ನಿಂದ (ಬಂಧಿತ ಬಿಆರ್‌ಎಸ್ ನಾಯಕಿ ಕೆ.ಕವಿತಾ ಹಾಗೂ ಇತರ ಹಲವು ಮಂದಿಯನ್ನು ಒಳಗೊಂಡಿರುವ ಕಂಪನಿ) ಹಲವಾರು ಕೋಟಿ ಕಿಕ್ ಬ್ಯಾಕ್ ಪಡೆದಿದ್ದಾರೆ' ಎಂದರು.

'ಪಂಜಾಬ್ ಚುನಾವಣೆಗಾಗಿ 'ಸೌತ್ ಗ್ರೂಪ್'ನ ಕೆಲವು ಆರೋಪಿಗಳಿಂದ ₹100 ಕೋಟಿಗೆ ಬೇಡಿಕೆ ಇಟ್ಟಿದ್ದರು. ನಾಲ್ಕು ಹವಾಲಾ ಮಾರ್ಗಗಳಿಂದ ಬಂದ ₹45 ಕೋಟಿಯನ್ನು ಗೋವಾ ಚುನಾವಣೆಗೆ ಬಳಸಲಾಗಿತ್ತು. ಗೋವಾ ಚುನಾವಣೆಯಲ್ಲಿ ಎಎಪಿ ಅಭ್ಯರ್ಥಿಗಳಿಗೆ ಹಣ ನೀಡಲು ಅಬಕಾರಿ ನೀತಿಯನ್ನು ಬದಲಾಯಿಸಲಾಗಿತ್ತು. ಹಗರಣ ನಡೆದಿರುವ ಬಗ್ಗೆ ಸಾಕಷ್ಟು ಪುರಾವೆಗಳಿವೆ. ಗೋವಾ ಚುನಾವಣೆಯ ಸಂದರ್ಭದಲ್ಲಿ ಪ್ರಚಾರ ಕಾರ್ಯದಲ್ಲಿ ತೊಡಗಿದ್ದ ಹಲವು ಜನರ ಹೇಳಿಕೆಗಳನ್ನು ದಾಖಲಿಸಲಾಗಿದೆ. ಈ ಆರೋಪಗಳನ್ನು ಎಎಪಿ ಅಭ್ಯರ್ಥಿಯೊಬ್ಬರು ದೃಢೀಕರಿಸಿದ್ದಾರೆ.



ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಬಂಧನ ವಿರೋಧಿಸಿ ಅಸ್ಸಾಂನ ಗುವಾಹಟಿಯಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದ ಎಎಪಿಯ ಮುಖಂಡರು ಮತ್ತು ಕಾರ್ಯಕರ್ತರನ್ನು ಪೊಲೀಸರು ತಡೆಯಲು ಯತ್ನಿಸಿದರು —ಪಿಟಿಐ ಚಿತ್ರ

ದಿನದ ಬೆಳವಣಿಗೆ

- ಬಂಧನ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿ ಹಿಂಪಡೆದ ಕೇಜ್ರಿವಾಲ್
- ಆಪ್ ನಾಯಕನ ಬಂಧನ ಖಂಡಿಸಿ ದೇಶದಾದ್ಯಂತ ವಿಪಕ್ಷಗಳ ಕೂಟದಿಂದ ಪ್ರತಿಭಟನೆ, ಎಎಪಿ ನಾಯಕರ ಹಾಗೂ ಕಾರ್ಯಕರ್ತರ ಬಂಧನ
- ಕೇಜ್ರಿವಾಲ್ ಕುಟುಂಬಕ್ಕೆ ಧೈರ್ಯ ತುಂಬಿದ ಎಎಪಿ ಹಾಗೂ ವಿಪಕ್ಷಗಳ ನಾಯಕರು
- ವಿಶೇಷ ನ್ಯಾಯಾಲಯಕ್ಕೆ ಕೇಜ್ರಿವಾಲ್ ಅವರನ್ನು ಹಾಜರುಪಡಿಸಿದ ಜಾರಿ ನಿರ್ದೇಶನಾಲಯ
- ತೀರ್ಪು ಕಾಯ್ದಿರಿಸಿದ ವಿಶೇಷ ನ್ಯಾಯಾಲಯ
- ಕೇಜ್ರಿವಾಲ್ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ವಜಾಗೊಳಿಸುವಂತೆ ಕೋರಿ ದೆಹಲಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆ
- ಭಾರತೀಯ ಚುನಾವಣಾ ಆಯೋಗಕ್ಕೆ 'ಇಂಡಿಯಾ' ಮೈತ್ರಿಕೂಟದ ನಿಯೋಗದಿಂದ ಮನವಿ

ಆರೋಪಿಗಳು ಹಾಗೂ ಸಾಕ್ಷಿಗಳ ಹೇಳಿಕೆಗಳನ್ನು ಕರೆ ವಿವರ ದಾಖಲೆಗಳ (ಸಿಡಿಆರ್) ಮೂಲಕ ದೃಢೀಕರಿಸಲಾಗಿದೆ' ಎಂದು ಅವರು ತಿಳಿಸಿದರು.

ಈ ಪ್ರಕರಣವು ವ್ಯಾಪಕ ಎಲೆಕ್ಟ್ರಾನಿಕ್ ಸಾಕ್ಷ್ಯಗಳನ್ನು ನಾಶಪಡಿಸಿದ ಇತಿಹಾಸವನ್ನು ಹೊಂದಿದೆ. ಹೆಚ್ಚಿನ ಸಂಖ್ಯೆಯ ಫೋನ್‌ಗಳು ನಾಶವಾಗಿವೆ. ಅದರ ಹೊರತಾಗಿಯೂ ಇ.ಡಿ. ಅದ್ಭುತ ಸೇವೆಯನ್ನು ಮಾಡಿದೆ. ಅವರಿಗೆ ಒಂಬತ್ತು ಬಾರಿ ಸಮನ್ಸ್ ನೀಡಲಾಗಿತ್ತು. ಅವರು ತನಿಖೆಗೆ ಸಹಕರಿಸಲಿಲ್ಲ. ಹೀಗಾಗಿ, ಅವರನ್ನು ವಿಚಾರಣೆಗೊಳಪಡಿಸಿ ಮಾಹಿತಿ ಸಂಗ್ರಹಿಸಲು ಬಯಸಿದ್ದೇವೆ' ಎಂದು ಬಂಧನವನ್ನು ಸಮರ್ಥಿಸಿಕೊಂಡರು.

ಕೇಜ್ರಿವಾಲ್ ಬಂಧನ: ಯಾರು ಏನೆಂದರು

ಕೇಜ್ರಿವಾಲ್ ಅವರು ಜೈಲಿನಿಂದಲೇ ಆಡಳಿತ ನಡೆಸುವುದು ಜನರಿಗೆ, ಕಾನೂನು ಹಾಗೂ ಪ್ರಜಾಪ್ರಭುತ್ವಕ್ಕೆ ಮಾಡಿದ ಅವಮಾನ

ಅನುರಾಗ್ ಠಾಕೂರ್, ಕೇಂದ್ರ ಸಚಿವ

ನನ್ನ ಪತಿಯನ್ನು ಬಂಧಿಸುವ ಮೂಲಕ ಕೇಂದ್ರ ಸರ್ಕಾರವು ದೆಹಲಿಯ ಜನರಿಗೆ ದ್ರೋಹ ಎಸಗಿದೆ. ದೆಹಲಿ ಜನರು ಮೂರು ಬಾರಿ ಚುನಾಯಿಸಿದ ಮುಖ್ಯಮಂತ್ರಿಯನ್ನು ಅಧಿಕಾರ ದರ್ಪದಿಂದ ಕೇಂದ್ರ ಬಂಧಿಸಿದೆ.

ಸುನಿತಾ ಕೇಜ್ರಿವಾಲ್

ಪಕ್ಷವು ಈ ವರ್ಷ ಹೋಳಿ ಆಚರಿಸುವುದಿಲ್ಲ. ಕೇಜ್ರಿವಾಲ್ ಬಂಧನ ವಿರೋಧಿಸಿ ಮಾರ್ಚ್ 26ರಂದು ಪ್ರಧಾನಿ ನಿವಾಸಕ್ಕೆ ಮುತ್ತಿಗೆ ಹಾಕಲಾಗುವುದು.

ಗೋಪಾಲ್ ರಾಯ್, ಎಎಪಿ ದೆಹಲಿ ಸಂಚಾಲಕ

ಇಂಡಿಯಾ ಮೈತ್ರಿಕೂಟದ ಬಲದಿಂದ ಪ್ರಧಾನಿ ನರೇಂದ್ರ ಮೋದಿ ಕಂಪಿಸುತ್ತಿದ್ದಾರೆ ಎಂಬುದನ್ನು ಕೇಜ್ರಿವಾಲ್ ಬಂಧನ ತೋರಿಸುತ್ತದೆ.

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ)

ಕೇಜ್ರಿವಾಲ್ ದೇಶಭಕ್ತ. ಅವರು ಈಗಿನ ಸಂಚಿನಿಂದ ಇನ್ನಷ್ಟು ದೊಡ್ಡ ನಾಯಕರಾಗಿ ಹೊರಹೊಮ್ಮಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದ್ದಾರೆ. ಈ ದೇಶದಲ್ಲಿ ಪ್ರಜಾಪ್ರಭುತ್ವ ಎಲ್ಲಿದೆ?

ಭಗವಂತ್ ಮಾನ್, ಪಂಜಾಬ್ ಮುಖ್ಯಮಂತ್ರಿ

ಕೇಜ್ರಿವಾಲ್ ಬಂಧನ ಕಾನೂನುಬಾಹಿರ. ಲೋಕಸಭಾ ಚುನಾವಣೆಯಲ್ಲಿ ವಿಪಕ್ಷಗಳ ಕೂಟವನ್ನು ದುರ್ಬಲಗೊಳಿಸಲು ಜಾರಿ ನಿರ್ದೇಶನಾಲಯವನ್ನು ಬಿಜೆಪಿ ದುರ್ಬಳಕೆ ಮಾಡಿಕೊಳ್ಳುತ್ತಿದೆ.

ಬೃಂದಾ ಕಾರಟ್, ಸಿಪಿಎಂ ನಾಯಕಿ

ಕೇಜ್ರಿವಾಲ್ ಬಂಧನ ಅನ್ಯಾಯ. ಜನರು ಅವರಿಗೆ ಪಾಠ ಕಲಿಸಲಿದ್ದಾರೆ. ಪ್ರಜಾಪ್ರಭುತ್ವದ ಹೆಸರಿನಲ್ಲಿ ಈ ದೇಶದಲ್ಲಿ ಏನು ನಡೆಯುತ್ತಿದೆ? ಇದನ್ನೆಲ್ಲ ನೋಡಿ ಆಶ್ಚರ್ಯವಾಗುತ್ತಿದೆ.

ಯೋಗೇಂದ್ರ ಯಾದವ್, ಸಾಮಾಜಿಕ ಕಾರ್ಯಕರ್ತ

ಅಬಕಾರಿ ನೀತಿ ಪ್ರಕರಣದಲ್ಲಿ ಸಂಸ್ಥೆಯ ನಿರ್ದೇಶಕರನ್ನು ಬಂಧಿಸಿದ ಬಳಿಕ ಫಾರ್ಮಸಿ ಸಂಸ್ಥೆಯೊಂದು ಚುನಾವಣಾ ಬಾಂಡ್‌ಗಳ ಮೂಲಕ ಬಿಜೆಪಿಗೆ ₹25 ಕೋಟಿ ಪಾವತಿಸಿದೆ.

ಸೌರಭ್ ಭಾರದ್ವಾಜ್, ದೆಹಲಿ ಸಚಿವ

'ಮದ್ಯದ ನೀತಿಯಿಂದ ದೂರ ಇರಲು ಹೇಳಿದ್ದೆ'



ನವದೆಹಲಿ(ಪಿಟಿಐ): 'ಮದ್ಯ ಕೆಟ್ಟದ್ದು ಎಂಬುದು ಚಿಕ್ಕ ಮಗುವಿಗೂ ಗೊತ್ತು. ಅಬಕಾರಿ ನೀತಿ ರೂಪಿಸಿ, ಜಾರಿಗೆ ತರುವುದು ನಮ್ಮ ಕೆಲಸವಲ್ಲ. ಹೀಗಾಗಿ, ಇದರಿಂದ ದೂರ ಇರುವಂತೆ ಅರವಿಂದ ಕೇಜ್ರಿವಾಲ್‌ಗೆ ಹೇಳಿದ್ದೆ. ಅವರು ನನ್ನ ಮಾತು ಕೇಳಲಿಲ್ಲ' ಎಂದು ಸಾಮಾಜಿಕ ಹೋರಾಟಗಾರ ಅಣ್ಣಾ ಹಜಾರೆ ಶುಕ್ರವಾರ ಹೇಳಿದ್ದಾರೆ.

ಮಹಾರಾಷ್ಟ್ರದ ರಾಲೇಗಣ ಸಿದ್ಧಿ ಗ್ರಾಮದಲ್ಲಿ ಪಿಟಿಐ ಜೊತೆ ಮಾತನಾಡಿದ ಅವರು, 'ಮದ್ಯ ವ್ಯಸನದ ವಿರುದ್ಧ ನಾನು ಧ್ವನಿ ಎತ್ತಿದಾಗ, ಕೇಜ್ರಿವಾಲ್ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಆದರೆ, ಅವರೇ ಅಬಕಾರಿ ನೀತಿಯನ್ನು ಜಾರಿಗೊಳಿಸಿದ್ದನ್ನು ಕೇಳಿ ಬೇಸರವಾಗಿತ್ತು. ಈ ವಿಚಾರವಾಗಿ ಅವರಿಗೆ ಎರಡು ಬಾರಿ ಪತ್ರ ಬರೆದಿದ್ದೆ' ಎಂದು ಹೇಳಿದ್ದಾರೆ.

ಲೋಕಪಾಲ ವ್ಯವಸ್ಥೆ ಜಾರಿಗೆ ಒತ್ತಾಯಿಸಿ 2010ರಲ್ಲಿ ಅಣ್ಣಾ ಹಜಾರೆ ನೇತೃತ್ವದಲ್ಲಿ ನಡೆದಿದ್ದ ಹೋರಾಟದಲ್ಲಿ ಕೇಜ್ರಿವಾಲ್ ಕೂಡ ಪಾಲ್ಗೊಂಡು ಗಮನ ಸೆಳೆದಿದ್ದರು.

'ಅಬಕಾರಿ ನೀತಿ ಜಾರಿ ಮೂಲಕ ಸಾಕಷ್ಟು ಹಣ ಗಳಿಸಬಹುದು ಎಂದು ಭಾವಿಸಿ, ಅವರು ಈ ನೀತಿಯನ್ನು ಜಾರಿಗೊಳಿಸಿರಬಹುದು. ತಾನು ಮಾಡಿದ ಕಾರ್ಯದಿಂದಾಗಿಯೇ ಕೇಜ್ರಿವಾಲ್ ಈಗ ಬಂಧನಕ್ಕೆ ಒಳಗಾಗಿದ್ದಾರೆ. ಈಗ ಅವರ ವಿರುದ್ಧ ಕಾನೂನು ಪ್ರಕಾರವೇ ಕ್ರಮ ಜರುಗಿಸಲಾಗುತ್ತದೆ' ಎಂದು ಹೇಳಿದ್ದಾರೆ.

'ನಿರಾಸೆಗೊಳಿಸಿದ ಕೇಜ್ರಿವಾಲ್'



ನ್ಯಾ. ಸಂತೋಷ ಹೆಗ್ಡೆ

ಬೆಂಗಳೂರು: ಅಬಕಾರಿ ನೀತಿ ಹಗರಣದಲ್ಲಿ ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ಬಂಧಿತರಾಗಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಬಗ್ಗೆ ತೀವ್ರ ಬೇಸರ ಮತ್ತು ನಿರಾಸೆ ಆಗಿದೆ ಎಂದು ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಹೇಳಿದರು.

'ಅಧಿಕಾರಕ್ಕೆ ಬಂದಾಗ ದುರಾಸೆ ನಿಮ್ಮನ್ನು (ಕೇಜ್ರಿವಾಲ್) ಹಿಂದಿಕ್ಕುತ್ತದೆ ಎಂದು ಹೇಳಿದ್ದೆ. ಅದು ನಿಜವಾಗಿದೆ' ಎಂದು ತಿಳಿಸಿದರು. ಅಣ್ಣಾ ಹಜಾರೆ ನೇತೃತ್ವದಲ್ಲಿ ದೆಹಲಿಯಲ್ಲಿ ನಡೆದ ಭ್ರಷ್ಟಾಚಾರದ ವಿರುದ್ಧ ಹೋರಾಟದಲ್ಲಿ ಅರವಿಂದ್ ಕೇಜ್ರಿವಾಲ್ ಜತೆ ಸಂತೋಷ್ ಹೆಗ್ಡೆಯವರೂ ಭಾಗವಹಿಸಿದ್ದರು.

'ಆಮ್ ಆದ್ಮಿ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಭ್ರಷ್ಟಾಚಾರ ರಹಿತ ಸ್ವಚ್ಛ ಆಡಳಿತ ನೀಡುತ್ತದೆ ಎಂದು ಭಾವಿಸಿದ್ದೆ. ಈಗಿನ ಬೆಳವಣಿಗೆ ನಿರಾಸೆ ಉಂಟು ಮಾಡಿದೆ. ಸಂಪೂರ್ಣ ಅಧಿಕಾರ ಯಾರನ್ನಾದರೂ ಭ್ರಷ್ಟಗೊಳಿಸುತ್ತದೆ ಎನ್ನುವ ವಾಸ್ತವಿಕತೆಗೆ ಇದು ಸೂಚನೆಯಾಗಿದೆ' ಎಂದು ತಿಳಿಸಿದರು.

'ಭ್ರಷ್ಟಾಚಾರ ವಿರುದ್ಧದ ಹೋರಾಟದಲ್ಲಿನ ಒಂದು ಗುಂಪು ರಾಜಕೀಯ ಪ್ರವೇಶಿಸಬೇಕು. ಅದನ್ನು ಸ್ವಚ್ಛಗೊಳಿಸಬೇಕು ಎಂದು ತೀರ್ಮಾನಿಸಿತ್ತು. ಇದು ಯಶಸ್ವಿ ಆಗುತ್ತದೆ ಎಂದು ನಂಬಿರಲಿಲ್ಲ. ರಾಜಕಾರಣದಿಂದ ದೂರವಿದ್ದು ಅದನ್ನು ಸ್ವಚ್ಛಗೊಳಿಸಬೇಕು ಎಂದು ನಾವು ಕೆಲವರು ನಂಬಿದ್ದೆವು' ಎಂದು ಹೆಗ್ಡೆ ಹೇಳಿದರು.

ನಿಷೇಧಾಜ್ಞೆ ಉಲ್ಲಂಘನೆ: ಸೌರಭ್, ಆತಿಶಿ ಬಂಧನ

ಕೇಜ್ರಿವಾಲ್ ಬಂಧನ ವಿರೋಧಿಸಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಹಾಗೂ ವಿರೋಧ ಪಕ್ಷಗಳ ಕಾರ್ಯಕರ್ತರು ದೇಶದ ವಿವಿಧ ಕಡೆಗಳಲ್ಲಿ ಪ್ರತಿಭಟನೆ ನಡೆಸಿದರು. ಕೇಂದ್ರದ ಬಿಜೆಪಿ ಸರ್ಕಾರದ ಕುಮ್ಮಕ್ಕಿನಿಂದ ಕೇಜ್ರಿವಾಲ್ ಅವರನ್ನು ಬಂಧಿಸಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸೆಕ್ಷನ್ 144 ಉಲ್ಲಂಘಿಸಿ ನವದೆಹಲಿಯಲ್ಲಿ ಪ್ರತಿಭಟನೆ ನಡೆಸಿದ ದೆಹಲಿ ಸರ್ಕಾರದ ಸಚಿವರಾದ ಆತಿಶಿ ಹಾಗೂ ಸೌರಭ್ ಭಾರದ್ವಾಜ್ ಅವರನ್ನು ಬಂಧಿಸಲಾಯಿತು.

'ಮೊದಲು, ಸುಳ್ಳು ಪ್ರಕರಣದಲ್ಲಿ ಅರವಿಂದ ಕೇಜ್ರಿವಾಲ್ ಅವರನ್ನು ಬಂಧಿಸಲಾಗಿತ್ತು. ಈಗ ಶಾಂತಿಯುತ ಪ್ರತಿಭಟನೆಯಲ್ಲಿ ಭಾಗವಹಿಸಿದವರನ್ನೂ ಬಂಧಿಸಲಾಗಿದೆ. ಇದು ಪ್ರಜಾಪ್ರಭುತ್ವದ ಕೊಲೆಯಲ್ಲ, ಹಾಗಾದರೆ ಏನು?' ಎಂದು ಆತಿಶಿ ಪ್ರಶ್ನಿಸಿದ್ದಾರೆ.

ಕಾನೂನು ತಜ್ಞರು ಏನಂತಾರೆ?

ಪ್ರಜಾವಾಣಿ ವಾರ್ತೆ

ನವದೆಹಲಿ: 'ಬಂಧನದ ಬಳಿಕವೂ ಕೇಜ್ರಿವಾಲ್ ಅವರು ತಮ್ಮ ಹುದ್ದೆಯಲ್ಲಿ ಮುಂದುವರಿಯಲು ಕಾನೂನಿನ ಯಾವುದೇ ಅಡೆತಡೆ ಇಲ್ಲ. ಆದರೆ, ಜೈಲಿನಿಂದ ಕಾರ್ಯನಿರ್ವಹಿಸುವುದು ತಾಂತ್ರಿಕವಾಗಿ ಅಸಾಧ್ಯ' ಎಂದು ಹಿರಿಯ ವಕೀಲ ಗೋಪಾಲ್ ಶಂಕರನಾರಾಯಣ್ ಅಭಿಪ್ರಾಯಪಟ್ಟರು.

ಸುಪ್ರೀಂ ಕೋರ್ಟ್ ವಕೀಲ ಕೆ.ವಿ. ಧನಂಜಯ್, '75 ವರ್ಷಗಳಲ್ಲಿ ಮೊದಲ ಬಾರಿಗೆ ಇಂತಹ ಸನ್ನಿವೇಶ ನಿರ್ಮಾಣವಾಗಿದೆ. ಸಂವಿಧಾನ ಇದಕ್ಕೆ ಸ್ಪಷ್ಟವಾದ ಉತ್ತರ ಕೊಟ್ಟಿಲ್ಲ. ಆದರೆ, ಜೈಲು ಎಂಬುದು ಕಾಫಿ ಶಾಪ್ ಅಲ್ಲ. ಅಧಿಕಾರಿಗಳು ಜೈಲಿಗೆ ಮುಕ್ತವಾಗಿ ಹೋಗಿ ಬರಲು ಆಗುವುದಿಲ್ಲ. ಅಲ್ಲಿ ಗೋಪ್ಯತೆಯ ಪ್ರಶ್ನೆಯೂ ಉದ್ಭವಿಸುತ್ತದೆ. ಈ ಪ್ರಕರಣವನ್ನು ಲೆಫ್ಟಿನೆಂಟ್ ಗವರ್ನರ್ ಅವರು ಗಂಭೀರವಾಗಿ ಪರಿಗಣಿಸಿ ರಾಜೀನಾಮೆ ನೀಡುವಂತೆ ಕೇಜ್ರಿವಾಲ್ ಅವರಿಗೆ ಸೂಚಿಸಬಹುದು. ಹೊಸ ಮುಖ್ಯಮಂತ್ರಿಯನ್ನು ಆಯ್ಕೆ ಮಾಡಿಕೊಳ್ಳುವಂತೆ ಶಾಸಕಾಂಗ ಪಕ್ಷಕ್ಕೆ ಸಲಹೆ ನೀಡಬಹುದು. ಇದಕ್ಕೆ ಒಪ್ಪದಿದ್ದರೆ 2-3 ದಿನ ಕಾದು ಮುಖ್ಯಮಂತ್ರಿಯನ್ನು ವಜಾ ಮಾಡಲು ಅವಕಾಶ ಇದೆ. ಜತೆಗೆ, ರಾಜ್ಯದಲ್ಲಿ ಸಾಂವಿಧಾನಿಕ ಬಿಕ್ಕಟ್ಟು ಎದುರಾಗಿದೆ ಎಂಬ ಕಾರಣ ನೀಡಿ ರಾಷ್ಟ್ರಪತಿ ಆಳ್ವಿಕೆ ಶಿಫಾರಸು ಮಾಡಬಹುದು' ಎಂದು ವಿಶ್ಲೇಷಿಸಿದರು.

ಕೇಜ್ರಿವಾಲ್ ಅವರು ಮುಖ್ಯಮಂತ್ರಿಯಾಗಿ ಮುಂದುವರಿಯಬಹುದು. ಆದರೆ, ಇದು ಆಡಳಿತಾತ್ಮಕವಾಗಿ ಅಸಾಧ್ಯ ಎಂದು ಮತ್ತೊಬ್ಬ ವಕೀಲ ವಿಕಾಸ್ ಸಿಂಗ್ ಅಭಿಪ್ರಾಯಪಟ್ಟರು.

'ಜನಪ್ರತಿನಿಧಿಗಳ ಕಾಯ್ದೆ ಸೆಕ್ಷನ್ 8ರ ಪ್ರಕಾರ, ಬಂಧಿತ ವ್ಯಕ್ತಿಯು ಎರಡು ಅಥವಾ ಹೆಚ್ಚಿನ ವರ್ಷಗಳವರೆಗೆ ಶಿಕ್ಷೆಗೊಳಗಾದಲ್ಲಿ ಮಾತ್ರ ತೀರ್ಪು ಹೊರಬಿದ್ದ ದಿನದಿಂದ ಅವರು ಅನರ್ಹರಾಗುತ್ತಾರೆ. ಅವರು ಜೈಲಿನಿಂದ ಹೊರಬಂದ ನಂತರದ 6 ವರ್ಷಗಳ ಕಾಲ ಅವರ ಅನರ್ಹತೆ ಮುಂದುವರಿಯಲಿದೆ' ಎಂದರು.

'ಸಂವಿಧಾನದ 361ನೇ ಪರಿಚ್ಛೇದದ ಅನುಸಾರ, ದೇಶದ ರಾಷ್ಟ್ರಪತಿ ಮತ್ತು ರಾಜ್ಯಪಾಲರಿಗೆ ಮಾತ್ರ ಕಾನೂನಾತ್ಮಕ ಕ್ರಮದಿಂದ ರಕ್ಷಣೆ ದೊರೆಯಲಿದೆ. ಪ್ರಧಾನಿ ಹಾಗೂ ಮುಖ್ಯಮಂತ್ರಿಗಳಿಗೆ ಯಾವುದೇ ರಕ್ಷಣೆ ದೊರೆಯುವುದಿಲ್ಲ' ಎಂದೂ ಅವರು ಹೇಳಿದರು.

'ಎಎಪಿ ನಾಯಕರಿಗೆ ಹೆಚ್ಚಿದ ಜವಾಬ್ದಾರಿ'



ಆತಿಶಿ



ಭಗವಂತ ಮಾನ್

ನವದೆಹಲಿ (ಪಿಟಿಐ): ಲೋಕಸಭೆ ಚುನಾವಣೆ ಘೋಷಣೆಯಾಗಿ ವಾರವಾಗುವುದಕ್ಕೂ ಮುನ್ನವೇ ಎಎಪಿ ಮುಖ್ಯಸ್ಥ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಬಂಧನ ಆಗಿರುವುದರಿಂದ, ಆ ಪಕ್ಷದ ಇತರ ಹಿರಿಯ ನಾಯಕರ ಮೇಲೆ ಜವಾಬ್ದಾರಿ ಹೆಚ್ಚಾಗುವ ಸಾಧ್ಯತೆಗಳಿವೆ.

ಪಕ್ಷದ ರಾಷ್ಟ್ರೀಯ ಸಂಘಟನೆಯ ಕಾರ್ಯದರ್ಶಿ ಸಂದೀಪ್ ಪಾಠಕ್, ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್, ದೆಹಲಿಯ ಸಚಿವರಾದ ಆತಿಶಿ ಮತ್ತು ಸೌರಭ್ ಭಾರದ್ವಾಜ್ ಸೇರಿದಂತೆ ಪಕ್ಷದ ಹಿರಿಯ ನಾಯಕರ ಪಾತ್ರ ಮತ್ತು ಜವಾಬ್ದಾರಿಗಳು ಹೆಚ್ಚಲಿದ್ದು, ನಾಯಕತ್ವ ಬೆಳೆಯಬಹುದು ಎಂದು ವಿಶ್ಲೇಷಿಸಲಾಗುತ್ತಿದೆ.

ಕೇಜ್ರಿವಾಲ್ ಪತ್ನಿ ಅಖಾಡಕ್ಕೆ?: ಇಲ್ಲಿಯವರೆಗೂ ರಾಜಕೀಯದಿಂದ ಅಂತರ ಕಾಯ್ದುಕೊಂಡಿರುವ ಕೇಜ್ರಿವಾಲ್ ಅವರ ಪತ್ನಿ ಸುನಿತಾ ಕೇಜ್ರಿವಾಲ್ ಅವರು ಹೊಸ ಪಾತ್ರ ನಿಭಾಯಿಸಬಹುದು ಎಂಬ ನಿರೀಕ್ಷೆ ಕುರಿತು ಜನರಲ್ಲಿ ಚರ್ಚೆಯಾಗುತ್ತಿದೆ.

'ನನ್ನ ಪತಿ ಯಾವಾಗಲೂ ದೆಹಲಿಯ ಜನರೊಂದಿಗೆ ನಿಲ್ಲುತ್ತಾರೆ. ಅವರ ಬಂಧನವು ದೆಹಲಿ ಜನರಿಗೆ ಮಾಡಿದ ದ್ರೋಹ' ಎಂದು ಸುನಿತಾ ಕೇಜ್ರಿವಾಲ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ನಿವೃತ್ತ ಐಆರ್‌ಎಸ್ ಅಧಿಕಾರಿಯೂ ಆಗಿರುವ ಅವರು, 'ನಿಮ್ಮ ಮೂರು ಬಾರಿಯ ಮುಖ್ಯಮಂತ್ರಿಯನ್ನು ಮೋದಿಜಿ ಅವರು ಅಧಿಕಾರದ ದುರಹಂಕಾರದಿಂದ ಬಂಧಿಸಿದ್ದಾರೆ. ಹೀಗೆ ಎಲ್ಲರನ್ನೂ ಅವರು ತುಳಿಯಲು ಪ್ರಯತ್ನಿಸುತ್ತಿದ್ದಾರೆ. ಇದು ದೆಹಲಿ ಜನರಿಗೆ ಮಾಡಿದ ದ್ರೋಹ. ನಿಮ್ಮ ಮುಖ್ಯಮಂತ್ರಿ ಯಾವಾಗಲೂ ನಿಮ್ಮೊಂದಿಗೆ ಇರುತ್ತಾರೆ. ಅವರು ಒಳಗಿರಲಿ ಅಥವಾ ಹೊರಗಿರಲಿ, ಅವರ ಜೀವನ ದೇಶಕ್ಕಾಗಿ ಸಮರ್ಪಿತ. ಸಾರ್ವಜನಿಕರಿಗೆ ಪರಮಾಧಿಕಾರ ಇದ್ದು, ಅವರಿಗೆ ಎಲ್ಲವೂ ತಿಳಿದಿದೆ. ಜೈ ಹಿಂದ್' ಎಂದು ಪೋಸ್ಟ್‌ನಲ್ಲಿ ಹೇಳಿದ್ದಾರೆ.

'ಇಂಡಿಯಾ' ಮೈತ್ರಿಕೂಟದ ಮುಂದಿನ ಸಭೆಯಲ್ಲಿ ತಾನು ಭಾಗವಹಿಸುವುದಾಗಿ ಭಗವಾನ್ ಮಾನ್ ತಿಳಿಸಿದ್ದಾರೆ. 'ಕೇಜ್ರಿವಾಲ್ ನನ್ನ ಹಿರಿಯ ಸಹೋದರ. ನಾನು ಪಕ್ಷದ ನಿಷ್ಠಾವಂತ ಸೈನಿಕ. ಮುಂದಿನ ದಿನಗಳಲ್ಲಿ ಗುಜರಾತ್, ಕುರುಕ್ಷೇತ್ರದಲ್ಲಿ ಪ್ರಚಾರಕ್ಕೆ ಹೋಗುತ್ತೇನೆ. ಪಕ್ಷವು ನನ್ನನ್ನು ಎಲ್ಲಿಗೆ ಕಳುಹಿಸುತ್ತದೆಯೋ ಅಲ್ಲಿಗೆ ಹೋಗುತ್ತೇನೆ' ಎಂದು ಅವರು ಪ್ರತಿಕ್ರಿಯಿಸಿದರು.

ಇ.ಡಿ ಮುಖವಾಡ ತೆಗೆಯಲಿ: ವಕೀಲರು

'ಹಾಲಿ ಮುಖ್ಯಮಂತ್ರಿಯೊಬ್ಬರನ್ನು ಬಂಧಿಸಿರುವುದು ಭಾರತದ ಇತಿಹಾಸದಲ್ಲಿ ಇದೇ ಮೊದಲು. ಅವರ ಪಕ್ಷದ ನಾಲ್ವರು ಹಿರಿಯ ನಾಯಕರನ್ನು ಬಂಧಿಸಲಾಗಿದೆ. ಅಂದರೆ, ಮೊದಲ ಮತ ಚಲಾವಣೆಯಾಗುವ ಮುನ್ನವೇ ಫಲಿತಾಂಶ ಬಂದಿದೆ. ಅವರನ್ನು ಬಂಧಿಸುವ ಅಗತ್ಯ ಇರಲಿಲ್ಲ' ಎಂದು ಹಿರಿಯ ವಕೀಲ ಅಭಿಷೇಕ್ ಮನುಸಿಂಘ್ವಿ ಅಭಿಪ್ರಾಯಪಟ್ಟರು.

ಕೇಜ್ರಿವಾಲ್ ಪರ ವಾದ ಮಂಡಿಸಿದ ಅವರು, 'ನಾನು ಕೇಜ್ರಿವಾಲ್ ಅವರನ್ನು ಭೇಟಿ ಮಾಡಿದ್ದೇನೆ ಎಂಬಿತ್ಯಾದಿ ಹೇಳಿಕೆಗಳನ್ನು ಹೊರತುಪಡಿಸಿದರೆ ಯಾವುದೇ ನೇರ ಪುರಾವೆಗಳಿಲ್ಲ. ಶೇ 80ರಷ್ಟು ಜನರು ತಮ್ಮ ಹೇಳಿಕೆಗಳಲ್ಲಿ ಕೇಜ್ರಿವಾಲ್ ಹೆಸರನ್ನು ಪ್ರಸ್ತಾಪಿಸಿಲ್ಲ. ಜನರನ್ನು ಬಂಧಿಸಿ ಕ್ಷಮಿಸಿದರೆ ಅವರು ಖಂಡಿತವಾಗಿಯೂ ಯಾರನ್ನಾದರೂ ಹೆಸರಿಸುತ್ತಾರೆ' ಎಂದರು.

'ಈ ಬಂಧನವನ್ನು ಒಂದು ಸಹಜ ಪ್ರಕ್ರಿಯೆ ಎಂದು ಭಾವಿಸಬೇಡಿ. ಇದಕ್ಕೆ ಸೂಕ್ತ ನ್ಯಾಯಾಂಗ ಪ್ರಕ್ರಿಯೆಯ ಅಗತ್ಯವಿದೆ. ಇದು ದೊಡ್ಡ ಪ್ರಮಾಣದ ಪ್ರಜಾಪ್ರಭುತ್ವದ ವಿಷಯಗಳನ್ನು ಒಳಗೊಂಡಿದೆ' ಎಂದು ಅವರು ಪ್ರತಿಪಾದಿಸಿದರು.

ಕೇಜ್ರಿವಾಲ್ ಪರ ವಾದ ಮಂಡಿಸಿದ ಮತ್ತೊಬ್ಬ ಹಿರಿಯ ವಕೀಲ ವಿಕ್ರಮ್ ಚೌಧರಿ, 'ಜಾರಿ ನಿರ್ದೇಶನಾಲಯದವರು ತಮ್ಮ ಮುಖವಾಡವನ್ನು ತೆಗೆದು ಹಾಕಬೇಕು. ಅವರು ನಿಖರವಾಗಿ ಯಾರನ್ನು ಪ್ರತಿನಿಧಿಸುತ್ತಾರೆ ಎಂಬುದನ್ನು ಬಹಿರಂಗಪಡಿಸಬೇಕು' ಎಂದರು.

'ಕೇಜ್ರಿವಾಲ್ ವಿರುದ್ಧ ಸಾಕಷ್ಟು ಸಾಕ್ಷ್ಯಗಳಿವೆ ಎಂದು ಜಾರಿ ನಿರ್ದೇಶನಾಲಯದವರು ಹೇಳುತ್ತಿದ್ದಾರೆ. ಹಾಗಿದ್ದರೆ ಮಾದರಿ ನೀತಿಸಂಹಿತೆ ಜಾರಿಯಾಗುವ ತನಕ ಕಾದಿದ್ದು ಏಕೆ. ಚುನಾವಣೆಯಲ್ಲಿ ಭಾಗವಹಿಸುವುದು ರಾಜಕಾರಣಿಯ ಹಕ್ಕು' ಎಂದು ಪ್ರತಿಪಾದಿಸಿದರು.

ಜೈಲಿನಿಂದಲೇ ಆಡಳಿತ

'ಕೇಜ್ರಿವಾಲ್ ಜೈಲಿನಿಂದ ಸರ್ಕಾರ ನಡೆಸುತ್ತಾರೆ. ಇದಕ್ಕೆ ಯಾವುದೇ ತೊಂದರೆ ಆಗುವುದಿಲ್ಲ. ಅಷ್ಟಕ್ಕೂ ಮುಖ್ಯಮಂತ್ರಿ ಅವರು ಹೊರಗಿದ್ದಾಗಲೂ ಕೇಂದ್ರ ಸರ್ಕಾರ ಅವರ ಇಡೀ ಆಡಳಿತವನ್ನು ದೆಹಲಿಯಲ್ಲಿ ಬಂಧಿಸಿದಂತಿತ್ತು' ಎಂದು ಪಾಠಕ್ ಪ್ರತಿಕ್ರಿಯಿಸಿದರು.

'ಜೈಲಿನಿಂದ ಆಡಳಿತ ನಡೆಸಲಾಗದು ಎಂದು ಯಾರಾದರೂ ಭಾವಿಸಿದ್ದರೆ ಅದು ತಪ್ಪು ಎಂದು ಸಾಬೀತಾಗಲಿದೆ' ಎಂದು ಅವರು ಹೇಳಿದರು.

ಈಗಾಗಲೇ ಮಾಜಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರು ವರ್ಷಕ್ಕೂ ಹೆಚ್ಚು ಕಾಲದಿಂದ ಜೈಲಿನಲ್ಲಿದ್ದಾರೆ. ಎಎಪಿಯ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಅವರೂ ಕೆಲ ತಿಂಗಳಿಂದ ಜೈಲಿನಲ್ಲಿದ್ದಾರೆ. ಇದೇ ಪ್ರಕರಣದಲ್ಲಿ ಕೇಜ್ರಿವಾಲ್ ಅವರೂ ದೀರ್ಘಕಾಲ ಒಳಗೆ ಇರುವ ಸಾಧ್ಯತೆ ಇದೆ. ಆದ್ದರಿಂದ ದೆಹಲಿ ಸರ್ಕಾರದ ವ್ಯವಹಾರಗಳನ್ನು ನಡೆಸಲು ಎಎಪಿ ಸಮರ್ಥ ನಾಯಕರನ್ನು ಆಯ್ಕೆ ಮಾಡಬೇಕಾಗುತ್ತದೆ. ಅಲ್ಲದೆ ಲೋಕಸಭೆ ಚುನಾವಣೆಯನ್ನು ಗಮನದಲ್ಲಿ ಇಟ್ಟುಕೊಂಡು ರಾಜಕೀಯ ಜವಾಬ್ದಾರಿಗಳನ್ನು ವಹಿಸಬೇಕಾಗಿದೆ ಎಂದು ಮೂಲಗಳು ತಿಳಿಸಿವೆ.

ಕವಿತಾಗೆ ಜಾಮೀನು ನಿರಾಕರಿಸಿದ 'ಸುಪ್ರೀಂ'



ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯದಿಂದ (ಇ.ಡಿ) ಬಂಧಿತರಾಗಿರುವ ಬಿಆರ್‌ಎಸ್ ನಾಯಕಿ ಕೆ. ಕವಿತಾ ಅವರಿಗೆ ಜಾಮೀನು ನೀಡಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಎಂ.ಎಂ.ಸುಂದ್ರೇಶ್, ಬೇಲಾ ಎಂ ತ್ರಿವೇದಿ ಅವರ ಪೀಠವು, ಜಾಮೀನಿಗೆ ಸಂಬಂಧಿಸಿದಂತೆ ವಿಚಾರಣಾ ನ್ಯಾಯಾಲಯವನ್ನು ಸಂಪರ್ಕಿಸುವಂತೆ ತಿಳಿಸಿದೆ. ಜಾಮೀನು ಅರ್ಜಿಗಳಿಗೆ ಸಂಬಂಧಿಸಿದಂತೆ ಪಾಲನೆ ಆಗುತ್ತಿರುವ ಶಿಷ್ಟಾಚಾರವನ್ನು ಬೈಪಾಸ್ ಮಾಡಲು ಸಾಧ್ಯವಿಲ್ಲ ಎಂದು ಪೀಠ ಹೇಳಿದೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ನಿಬಂಧನೆಗಳನ್ನು ಪ್ರಶ್ನಿಸಿ ಕವಿತಾ ಅವರು ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಪೀಠವು ಇ.ಡಿಗೆ ನೋಟಿಸ್ ಜಾರಿ ಮಾಡಿದ್ದು, ಆರು ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸುವಂತೆ ತಿಳಿಸಿದೆ. ಈ ಕುರಿತ ಅರ್ಜಿಯು ಬಾಕಿ ಉಳಿದಿರುವ ಇತರ ಅರ್ಜಿಗಳೊಂದಿಗೆ ವಿಚಾರಣೆಗೆ ಬರಲಿದೆ ಎಂದು ಪೀಠವು ಕವಿತಾ ಪರ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್ ಅವರಿಗೆ ಹೇಳಿದೆ.

ಜಾಮೀನಿಗೆ ಸಂಬಂಧಿಸಿದಂತೆ ಕವಿತಾ ಅವರು ಯಾವುದೇ ಅರ್ಜಿ ಸಲ್ಲಿಸಿದರೆ ಅದನ್ನು ತ್ವರಿತವಾಗಿ ಇತ್ಯರ್ಥಪಡಿಸುವಂತೆ ಪೀಠ ಆದೇಶಿಸಿತು.

ಹಿಮಾಚಲ ಪಕ್ಷೇತರ ಶಾಸಕರ ರಾಜೀನಾಮೆ

ಶಿಮ್ಲಾ (ಪಿಟಿಐ): ಈಚೆಗೆ ನಡೆದ ರಾಜ್ಯಸಭಾ ಚುನಾವಣೆಯಲ್ಲಿ ಬಿಜೆಪಿಯ ಅಭ್ಯರ್ಥಿಗೆ ಮತ ಹಾಕಿದ್ದ ಮೂವರು ಪಕ್ಷೇತರ ಶಾಸಕರು ಶುಕ್ರವಾರ ವಿಧಾನ ಸಭಾ ಕಾರ್ಯದರ್ಶಿಗೆ ತಮ್ಮ ರಾಜೀನಾಮೆ ಸಲ್ಲಿಸಿದ್ದಾರೆ.

ಆಶಿಶ್ ಶರ್ಮಾ (ಹಮೀರ್‌ಪುರ), ಹೋಶಿಯಾರ್ ಸಿಂಗ್ (ದೆಹ್ರಾ), ಕೆ.ಎಲ್.ಠಾಕೂರ್ (ನಾಲಾಗಢ) ರಾಜೀನಾಮೆ ನೀಡಿದವರು.

ಪ್ರತಿಪಕ್ಷ ನಾಯಕ ಜೈರಾಮ್ ಠಾಕೂರ್ ಅವರನ್ನು ಭೇಟಿಯಾದ ನಂತರ ರಾಜೀನಾಮೆ ಸಲ್ಲಿಸಿದ್ದಾರೆ.

'ಬಿಜೆಪಿಯಿಂದ ಚುನಾವಣೆಗೆ ಸ್ಪರ್ಧಿಸಲಿದ್ದೇವೆ' ಎಂದು ಹೋಶಿಯಾರ್ ಸಿಂಗ್ ಪತ್ರಕರ್ತರಿಗೆ ತಿಳಿಸಿದರು.

'ಸಿಎಂ ಸುಖವಿಂದರ್ ಸುಖು ಅವರು ಪಕ್ಷೇತರ ಶಾಸಕರನ್ನು ಗುರಿಯಾಗಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸುತ್ತಿದ್ದಾರೆ' ಎಂದು ದೂರಿದ್ದಾರೆ.



ನೀರಿನ ಬವಣೆ

ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕಿನ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ 87.02 ಅಡಿಗೆ ಕುಸಿದಿದ್ದು ಶುಕ್ರವಾರ ಕಂಡಿದ್ದು ಹೀಗೆ

ಪ್ರಜಾವಾಣಿ ಚಿತ್ರ: ರಂಜು ಪಿ.

ಭೋಜಶಾಲಾ: ಸಮೀಕ್ಷೆ ಆರಂಭಿಸಿದ ಎಎಸ್‌ಐ

ಧಾರ್ (ಪಿಟಿಐ): ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ತಂಡವೊಂದು ಇಲ್ಲಿನ ವಿವಾದಿತ ಭೋಜಶಾಲಾ/ ಕಮಲ್ ಮೌಲಾ ಮಸೀದಿ ಸಂಕೀರ್ಣದಲ್ಲಿ ಶುಕ್ರವಾರ ಸಮೀಕ್ಷೆ ಆರಂಭಿಸಿತು.

15 ಸದಸ್ಯರನ್ನು ಒಳಗೊಂಡಿದ್ದ ತಂಡವು ಬೆಳಿಗ್ಗೆ ಮಸೀದಿ ಸಂಕೀರ್ಣಕ್ಕೆ ಭೇಟಿ ನೀಡಿತು. ಈ ಸಂದರ್ಭದಲ್ಲಿ ಸ್ಥಳೀಯ ಪೊಲೀಸ್ ಮತ್ತು ಜಿಲ್ಲಾಡಳಿತದ ಅಧಿಕಾರಿಗಳು ಇದ್ದರು.

'ಭೋಜಶಾಲಾದಲ್ಲಿ ಸಮೀಕ್ಷೆ ಆರಂಭವಾಗಿದೆ. ಎಎಸ್‌ಐ ತಂಡಕ್ಕೆ ಅಗತ್ಯವಿರುವ ಎಲ್ಲ ಬೆಂಬಲ ನೀಡುತ್ತೇವೆ. ರಕ್ಷಣೆಗೆ ಭದ್ರತೆಯನ್ನೂ ಒದಗಿಸಲಾಗಿದೆ. ನಗರದಲ್ಲಿ ಶಾಂತಿಯುತ ವಾತಾವರಣ ಇದೆ' ಎಂದು ಧಾರ್ ಪೊಲೀಸ್ ವರಿಷ್ಠಾಧಿಕಾರಿ ಮನೋಜ್ ಕುಮಾರ್ ಸಿಂಗ್ ತಿಳಿಸಿದರು.

ಸ್ಥಳದಲ್ಲಿ ಮುಸ್ಲಿಮರಿಗೆ ಪ್ರಾರ್ಥನೆ ಸಲ್ಲಿಸಲು ಅವಕಾಶ ಇದೆಯೇ ಎಂಬ ಪ್ರಶ್ನೆಗೆ, 'ಮಂಗಳವಾರ 'ಪೂಜೆ', ಶುಕ್ರವಾರ 'ನಮಾಜ್' ಎಂದಿನಂತೆ ನಡೆಯುತ್ತದೆ. ಧಾರ್ಮಿಕ ಆಚರಣೆಗಳಿಗೆ ಅವಕಾಶ ನೀಡಲು ಅಗತ್ಯ ವ್ಯವಸ್ಥೆ ಕಲ್ಪಿಸುವ ಬಗ್ಗೆ ಎಎಸ್‌ಐ ಅಧಿಕಾರಿಗಳೊಂದಿಗೆ ಚರ್ಚಿಸುತ್ತೇನೆ' ಎಂದರು.

'15 ಜನರ ತಂಡವು ಸಮೀಕ್ಷೆಗೆ ತಳಮಟ್ಟದ ಸಿದ್ಧತೆ ಮಾಡಿಕೊಂಡಿತು. ಜಿಪಿಎಸ್, ಕಾರ್ಬನ್ ಡೇಟಿಂಗ್ ಸಾಧನಗಳು ಸೇರಿದಂತೆ ನೂತನ ತಂತ್ರಜ್ಞಾನವನ್ನು ತಂಡವು ಬಳಸಿಕೊಳ್ಳಲಿದೆ' ಎಂದು ಅರ್ಜಿದಾರರಾದ ಆಶಿಶ್ ಗೋಯಲ್ ತಿಳಿಸಿದರು.

'ಸಮೀಕ್ಷೆ ವೇಳೆ ಮುಸ್ಲಿಂ ಸಮುದಾಯದವರು ಭಾಗಿಯಾಗಿರಲಿಲ್ಲ. ಆದರೆ ಶುಕ್ರವಾರವಾದ ಕಾರಣ ಸ್ಥಳದಲ್ಲಿ ಎಂದಿನಂತೆ ನಮಾಜ್ ಸಲ್ಲಿಸಿದರು' ಎಂದು ಪ್ರತ್ಯಕ್ಷದರ್ಶಿ ತಿಳಿಸಿದರು.

ಭೋಜಶಾಲಾ ಸಂಕೀರ್ಣದಲ್ಲಿ ಆರು ವಾರಗಳ ಒಳಗಾಗಿ ವೈಜ್ಞಾನಿಕ ಸಮೀಕ್ಷೆ ನಡೆಸಬೇಕು ಎಂದು ಮಧ್ಯಪ್ರದೇಶ ಹೈಕೋರ್ಟ್ ಮಾರ್ಚ್ 11ರಂದು ಎಎಸ್‌ಐಗೆ ನಿರ್ದೇಶನ ನೀಡಿತ್ತು.

ಬರಿದಾಗುತ್ತಿವೆ ಜಲಾಶಯಗಳು

ನವದೆಹಲಿ (ಪಿಟಿಐ): ಬೇಸಿಗೆ ಕಾಲದ ಆರಂಭದಲ್ಲೇ ಎಲ್ಲೆಡೆ ನೀರಿನ ಅಭಾವ ಉಂಟಾಗಿದೆ. ದೇಶದಲ್ಲಿರುವ 150 ಪ್ರಮುಖ ಜಲಾಶಯಗಳಲ್ಲಿ ಅವುಗಳ ಗರಿಷ್ಠ ಸಂಗ್ರಹ ಸಾಮರ್ಥ್ಯದ ಶೇ 38ರಷ್ಟು ನೀರು ಮಾತ್ರ ಲಭ್ಯವಿದೆ. ಇದು, ಕಳೆದ ದಶಕದಲ್ಲಿ ಇದೇ ಅವಧಿಯಲ್ಲಿ ಈ ಜಲಾಶಯಗಳಲ್ಲಿ ಇದ್ದ ನೀರಿನ ಸರಾಸರಿ ಪ್ರಮಾಣಕ್ಕಿಂತಲೂ ಕಡಿಮೆ ಎಂದು ಅಂಕಿ-ಅಂಶಗಳು ಹೇಳುತ್ತಿವೆ.

ಉದ್ಯಾನನಗರಿ ಬೆಂಗಳೂರಿನಲ್ಲಿ ನಿತ್ಯ ಸುಮಾರು 500 ದಶಲಕ್ಷ ಲೀಟರ್ (ಎಂಎಲ್‌ಡಿ) ನೀರಿನ ಅಭಾವ ಉಂಟಾಗುತ್ತಿದೆ. ಇಲ್ಲಿ ದಿನವೊಂದಕ್ಕೆ 2,600 ದಶಲಕ್ಷ ಲೀಟರ್ ನೀರಿನ ಬೇಡಿಕೆ ಇದೆ. ಇಲ್ಲಿರುವ 14,000 ಕೊಳವೆಬಾವಿಗಳ ಪೈಕಿ 6,900 ಈಗಾಗಲೇ ಬತ್ತಿ ಹೋಗಿವೆ. ಜಲಕಾಯಗಳು ಅತಿಕ್ರಮಣಕ್ಕೆ ಒಳಗಾಗಿವೆ ಅಥವಾ ಬತ್ತಿ ಹೋಗಿವೆ.

'ನಗರಕ್ಕೆ ಅಗತ್ಯವಿರುವ ನೀರಿನ ಪೈಕಿ 1,470 ಎಂಎಲ್‌ಡಿ ನೀರನ್ನು ಕಾವೇರಿ ನದಿ ಮೂಲಕ ಮತ್ತು 650 ಎಂಎಲ್‌ಡಿ ನೀರನ್ನು ಕೊಳವೆ ಬಾವಿ ಮೂಲಕ ಪೂರೈಸಲಾಗುತ್ತಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಕಳೆದ ವರ್ಷ ಇದೇ ಅವಧಿಗೆ ಹೋಲಿಸಿದರೆ ಕರ್ನಾಟಕ ಸೇರಿದಂತೆ ಇತರ ರಾಜ್ಯಗಳಲ್ಲಿ ನೀರಿನ ಸಂಗ್ರಹಣಾ ಮಟ್ಟ ಕುಸಿದಿದೆ ಎಂದು ಕೇಂದ್ರೀಯ ಜಲ ಆಯೋಗವು ತನ್ನ ವಾರದ ಬುಲೆಟಿನ್‌ನಲ್ಲಿ ತಿಳಿಸಿದೆ.

ಹಿಮಾಚಲ ಪ್ರದೇಶ, ಪಂಜಾಬ್, ಮಧ್ಯಪ್ರದೇಶ, ತ್ರಿಪುರಾ, ರಾಜಸ್ಥಾನ, ಬಿಹಾರ, ಮಹಾರಾಷ್ಟ್ರ, ಉತ್ತರ ಪ್ರದೇಶ, ಗುಜರಾತ್, ಛತ್ತೀಸಗಢ, ಆಂಧ್ರಪ್ರದೇಶ, ತೆಲಂಗಾಣ ಮತ್ತು ತಮಿಳುನಾಡು ಸೇರಿದಂತೆ ಹಲವು ರಾಜ್ಯಗಳಲ್ಲಿಯೂ ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ನೀರಿನ ಸಂಗ್ರಹಣಾ ಮಟ್ಟ ಕುಸಿದಿದೆ ಎಂದು ಆಯೋಗ ತಿಳಿಸಿದೆ.

'ಸಂಗೀತ ಕಲಾನಿಧಿ' ಪ್ರಶಸ್ತಿಗೆ ಟಿ.ಎಂ. ಕೃಷ್ಣ ಆಯ್ಕೆ ವಿವಾದ

ವಿರೋಧಿಸಿದ ಕಲಾವಿದರಿಗೆ ಬಿಜೆಪಿ ಬೆಂಬಲ

ಪ್ರಜಾವಾಣಿ ವಾರ್ತೆ

ಚೆನ್ನೈ: ಮದ್ರಾಸ್ ಸಂಗೀತ ಅಕಾಡೆಮಿ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕ ಟಿ.ಎಂ. ಕೃಷ್ಣ ಅವರಿಗೆ 'ಸಂಗೀತ ಕಲಾನಿಧಿ' ಪ್ರಶಸ್ತಿಯನ್ನು ನೀಡುವುದಾಗಿ ಘೋಷಿಸಿರುವುದಕ್ಕೆ ಕರ್ನಾಟಕ ಶಾಸ್ತ್ರೀಯ ಸಂಗೀತ ಪ್ರಕಾರದ ಅನೇಕ ಗಾಯಕರು, ಸಂಗೀತಗಾರರು ವಿರೋಧ ವ್ಯಕ್ತಪಡಿಸಿದ್ದಾರೆ. ಈ ವಿವಾದಕ್ಕೆ ಈಗ ರಾಜಕೀಯ ಪಕ್ಷಗಳು, ರಾಜಕೀಯ ನಾಯಕರು ಪ್ರವೇಶ ಮಾಡಿದ್ದಾರೆ.

ತಮಿಳುನಾಡು ಘಟಕದ ಬಿಜೆಪಿ ಅಧ್ಯಕ್ಷ ಕೆ.ಅಣ್ಣಾಮಲೈ ಅವರು ಈ ಕುರಿತು ಶುಕ್ರವಾರ ಹೇಳಿಕೆ ನೀಡಿದ್ದು, 'ಗಾಯಕಿ ಸಹೋದರಿಯರಾದ ರಂಜನಿ–ಗಾಯತ್ರಿ ಸೇರಿದಂತೆ ಕೃಷ್ಣ ಅವರ ಆಯ್ಕೆಯನ್ನು ವಿರೋಧಿಸುತ್ತಿರುವ ಇತರ ಎಲ್ಲ ಕಲಾವಿದರ ಜೊತೆಗೆ ಬಿಜೆಪಿ ಪಕ್ಷವು ನಿಲ್ಲುತ್ತದೆ' ಎಂದು ಹೇಳಿದ್ದಾರೆ.

'ಕರ್ನಾಟಕ ಶಾಸ್ತ್ರೀಯ ಸಂಗೀತದ ಹಾಗೂ ದೈವೀಕ ಪ್ರಜ್ಞೆಯ ದೇಗುಲವಾಗಿರುವ ಸಂಗೀತ ಅಕಾಡೆಮಿಯು ಕಳೆದ 9 ದಶಕಗಳಿಂದ ಕೆಲಸ ಮಾಡುತ್ತಿದೆ. ಆದರೆ, ಈ ಸಂಸ್ಥೆಯ ಪಾವಿತ್ರ್ಯವನ್ನು ಹಾಳುಗೆಡವಲು ವಿಭಜಕ ಶಕ್ತಿಗಳು ಬೆದರಿಕೆ ಒಡ್ಡಿವೆ. ಅಕಾಡೆಮಿಯ ಇಂದಿನ ಆಡಳಿತ ವ್ಯವಸ್ಥೆಯ 'ಹಾನಿಕಾರಕ' ನಿರ್ಧಾರವನ್ನು ಕಲಾವಿದರು ಒಗ್ಗಟ್ಟಿನಿಂದ ವಿರೋಧಿಸಿದ್ದಾರೆ. ಜೊತೆಗೆ, ಸಂಸ್ಥೆಯ ಪಾವಿತ್ರ್ಯವನ್ನು ಕಾಪಾಡಲು ಹೋರಾಡುತ್ತಿದ್ದಾರೆ. ಇವರ ಬೆನ್ನಿಗೆ ಬಿಜೆಪಿಯು ಎಂದಿಗೂ ನಿಲ್ಲಲಿದೆ' ಎಂದರು.

ಕೃಷ್ಣ ಬೆಂಬಲಕ್ಕೆ ನಿಂತ ಕನಿಮೊಳಿ

ಟಿ.ಎಂ. ಕೃಷ್ಣ ಅವರ ಬೆಂಬಲಕ್ಕೆ ಆಡಳಿತಾರೂಢ ಡಿಎಂಕೆ ಪಕ್ಷವು ನಿಂತಿದೆ. 'ತಮ್ಮ ಸಾಮಾಜಿಕ ನಂಬಿಕೆಗಳ ಕಾರಣಕ್ಕೆ, ಪೆರಿಯಾರ್ ಅವರನ್ನು ಗೌರವಿಸುತ್ತಾರೆ ಎನ್ನುವ ಕಾರಣಕ್ಕೆ ಸಂಗೀತಗಾರನೊಬ್ಬನ ವಿರುದ್ಧ ಇಷ್ಟೆಲ್ಲಾ ದ್ವೇಷ ವ್ಯಕ್ತವಾಗುತ್ತಿರುವುದು ಉತ್ತಮ ಬೆಳವಣಿಗೆಯಲ್ಲ' ಎಂದು ಡಿಎಂಕೆ ಸಂಸದೆ ಕನಿಮೊಳಿ ಅವರು ಅಭಿಪ್ರಾಯಪಟ್ಟಿದ್ದಾರೆ.

'ಪೆರಿಯಾರ್ ಅವರ ಸಿದ್ಧಾಂತಗಳ ಕುರಿತ ಮೊದಲ ಓದಿನಲ್ಲಿಯೇ ಅವರು ಎಂಥಾ ಮಹಿಳಾಪರ ಎನ್ನುವುದು ತಿಳಿಯುತ್ತದೆ. ಅವರು ಎಂದಿಗೂ ಯಾವ ಮಾರಣಹೋಮಕ್ಕೂ ಕರೆ ನೀಡಿರಲಿಲ್ಲ. ಬಹುಶಃ ಇವರ್‍ಯಾರಿಗೂ ವೈಚಾರಿಕ ಸ್ವಾತಂತ್ರ್ಯ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಕುರಿತು ನಂಬಿಕೆ ಇಲ್ಲ ಎನ್ನಿಸುತ್ತದೆ' ಎಂದೂ ಹೇಳಿದ್ದಾರೆ. ಗಾಯಕಿಯರಾದ ರಂಜನಿ ಹಾಗೂ ಗಾಯತ್ರಿ ಸಹೋದರಿಯರು, ಕೃಷ್ಣ ಅವರು ಪೆರಿಯಾರ್ ಅವರನ್ನು ವೈಭವೀಕರಿಸುತ್ತಾರೆ ಎಂದು ಆರೋಪಿಸಿದ್ದರು.

ದ್ವೇಷ–ವಿಭಜಕ ಸಿದ್ಧಾಂತಗಳಿಗೆ ಮತ್ತು ಸತ್ತ/ಚಾಲ್ತಿಯಲ್ಲಿಲ್ಲದ ಕಾರ್ಯಸೂಚಿಗಳಿಗೆ ಕರ್ನಾಟಕ ಶಾಸ್ತ್ರೀಯ ಸಂಗೀತದ ದೇಗುಲವು ಆಶ್ರಯತಾಣವಾಗಬಾರದು

ಕೆ. ಅಣ್ಣಾಮಲೈ, ಅಧ್ಯಕ್ಷ, ತಮಿಳುನಾಡು ಬಿಜೆಪಿ ಘಟಕ



ಸುಭಾಷಿತ

ಯಾರಾದರೂ ನಿಮಗೆ ನೋವುಂಟು ಮಾಡುತ್ತಿದ್ದರೆ ಅವರನ್ನು ಶಿಕ್ಷಿಸುವ ಅಗತ್ಯವಿಲ್ಲ. ಅವರಿಗೆ ಸಹಾಯದ ಅಗತ್ಯ ಇರುತ್ತದೆ. ಈ ಸಂದೇಶವನ್ನು ಅವರು ನಿಮಗೆ ನೀಡುತ್ತಿರುತ್ತಾರೆ.

–ನಾಟ್ ಹಾನ್

ಹವಾಮಾನ ಬದಲಾವಣೆಯ ಸಂಕಟ ತಡವಾಗಿದೆ, ಈಗಲೇ ಎಚ್ಚೆತ್ತುಕೊಳ್ಳಿ

ವಿಶ್ವ ಹವಾಮಾನ ಸಂಸ್ಥೆಯು (ಡಬ್ಲ್ಯುಎಂಒ) ಇತ್ತೀಚೆಗೆ ಬಿಡುಗಡೆ ಮಾಡಿರುವ 'ಜಾಗತಿಕ ಹವಾಮಾನ ಸ್ಥಿತಿಗತಿ' ವರದಿಯು ಪ್ರಪಂಚದ ಎಲ್ಲ ದೇಶಗಳಿಗೂ ಬಲು ಗಂಭೀರವಾದ ಎಚ್ಚರಿಕೆ ಸಂದೇಶವನ್ನು ರವಾನಿಸಿದೆ. ಹವಾಮಾನ ಬದಲಾವಣೆಯ ಪ್ರತಿಕೂಲ ಪರಿಣಾಮಗಳ ಕುರಿತು ವ್ಯಕ್ತವಾಗುತ್ತಿರುವ ಭೀತಿ ಮತ್ತು ಆತಂಕಗಳು ಸಕಾರಣವಾದುದು ಹೌದು ಎಂಬುದನ್ನು ಈ ವರದಿಯು ಒತ್ತಿ ಹೇಳಿದೆ. ವರದಿಯಲ್ಲಿ ಒದಗಿಸಲಾಗಿರುವ ಅಂಕಿ ಅಂಶಗಳು ಹವಾಮಾನ ಬದಲಾವಣೆಯ ಸಂಕಟದ ಮುನ್ಸೂಚನೆಯನ್ನು ಢಾಳಾಗಿ ನೀಡುತ್ತಿವೆ. 2023ನೇ ವರ್ಷವು ಅತ್ಯಧಿಕ ಭೂತಾಪದ ವರ್ಷವಾಗಿ ದಾಖಲೆ ಬರೆದಿದೆ ಮತ್ತು ಸದ್ಯದ ದಶಕ, ಚರಿತ್ರೆಯಲ್ಲೇ ಅತ್ಯಧಿಕ ಉಷ್ಣತೆಯಿಂದ ಬಳಲಿದ ದಶಕವಾಗಿ ಗುರುತಿಸಿಕೊಂಡಿದೆ. ಭೂತಾಪಮಾನವು ಕೈಗಾರಿಕಾ ಕ್ರಾಂತಿಯ ಹಿಂದಿನ ದಿನಗಳಿಗೆ ಹೋಲಿಸಿದರೆ, 2023ರಲ್ಲಿ ಸರಾಸರಿ 1.45 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚು ದಾಖಲಾಗಿದೆ. ಭೂತಾಪದ ಏರಿಕೆ ಪ್ರಮಾಣವನ್ನು 1.5 ಡಿಗ್ರಿ ಸೆಲ್ಸಿಯಸ್‌ಗೆ ಮಿತಗೊಳಿಸಬೇಕು ಎಂದು ಪ್ಯಾರಿಸ್ ಶೃಂಗದ ಒಪ್ಪಂದದಲ್ಲಿ ಘೋಷಿಸಲಾಗಿತ್ತು. ಆ ಮಿತಿಯನ್ನು ಮೀರುವ ಎಲ್ಲ ಲಕ್ಷಣಗಳು ಈಗ ಗೋಚರಿಸುತ್ತಿದ್ದು, ಕಳೆದ ವರ್ಷಕ್ಕಿಂತ ಈ ಸಲದ ತಾಪಮಾನ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ ಎಂದು ತಜ್ಞರು ಮುನ್ಸೂಚನೆ ನೀಡಿದ್ದಾರೆ. ಹವಾಮಾನ ಶೃಂಗಗಳಲ್ಲಿ ಒಪ್ಪಿಕೊಂಡ ಗುರಿಗಳನ್ನು ತಲುಪುವಲ್ಲಿ ಎಲ್ಲ ರಾಷ್ಟ್ರಗಳು ವಿಫಲವಾಗುತ್ತಿರುವುದನ್ನೂ ವರದಿ ಎತ್ತಿ ತೋರಿದೆ.



ಭೂತಾಪ ನಿಯಂತ್ರಣಕ್ಕೆ ತುರ್ತಾಗಿ ಪ್ರಭಾವವಾದ ಕ್ರಮ ಕೈಗೊಳ್ಳಲೇಬೇಕಾದ ಅನಿವಾರ್ಯ ಸಂದರ್ಭ ಇದಾಗಿದೆ

ಹಸಿರುಮನೆ ಅನಿಲಗಳ ಹೊರಸೂಸುವಿಕೆಯ ಪ್ರಮಾಣವು ಕಡಿಮೆಯಾಗುವ ಬದಲು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವುದನ್ನು ಸಹ ಡಬ್ಲ್ಯುಎಂಒ ವರದಿ ಗುರುತಿಸಿದೆ. ಅದರ ಪರಿಣಾಮವಾಗಿ ಭೂ ಮತ್ತು ಜಲತಾಪದಲ್ಲಿ ಏರಿಕೆ ಆಗುತ್ತಿದೆ. ನೀರ್ಗಲ್ಲುಗಳು ಕರಗುವ ಪ್ರಮಾಣವು ತೀವ್ರಗತಿಯನ್ನು ಪಡೆದುಕೊಂಡಿದ್ದು, ಇದರಿಂದ ಸಮುದ್ರದ ಮಟ್ಟವು ಏರಿಕೆಯಾಗುತ್ತಿದೆ. ಮೂವತ್ತು ವರ್ಷಗಳಲ್ಲಿ ಆಗಿರುವ ಸಮುದ್ರ ಮಟ್ಟದ ಏರಿಕೆಯಲ್ಲಿ, ಕಳೆದ ಮೂರು ವರ್ಷಗಳ ಪಾಲೇ ಶೇ 10ರಷ್ಟು ಎನ್ನುವ ಸಂಗತಿಯು ತಾಪಮಾನ ಯಾವ ಗತಿಯಲ್ಲಿ ಹೆಚ್ಚುತ್ತಿದೆ ಎನ್ನುವುದರ ದ್ಯೋತಕ. ಸ್ವಿಟ್ಜರ್ಲೆಂಡ್‌ನ ಆಲ್ಪ್ ಪರ್ವತಶ್ರೇಣಿಯು ಕಳೆದ ಎರಡೇ ವರ್ಷಗಳಲ್ಲಿ ಶೇ 10ರಷ್ಟು ನೀರ್ಗಲ್ಲುಗಳನ್ನು ಕಳೆದುಕೊಂಡಿದೆ. ಜಗತ್ತಿನ ಎಲ್ಲ ಹಿಮನದಿಗಳು ಹಿಮವನ್ನು ಶರವೇಗದಲ್ಲಿ ಕಳೆದುಕೊಳ್ಳುತ್ತಿವೆ. ಅಂಟಾರ್ಕ್ಟಿಕಾ ಭೂಪ್ರದೇಶವು ಪ್ರತಿ ವರ್ಷ 15 ಸಾವಿರ ಕೋಟಿ ಟನ್ ಮಂಜುಗಡ್ಡೆಯನ್ನು ಕರಗಿಸಿಕೊಳ್ಳುತ್ತಿದೆ ಎಂದು ಲೆಕ್ಕ ಹಾಕಲಾಗಿದೆ. ಬಿಸಿ ಮಾರುತ, ಬರ, ಅತಿಯಾದ ಮತ್ತು ಅಕಾಲಿಕ ಮಳೆ, ಮಹಾಪೂರ ಜಗತ್ತಿನ ಬಹುತೇಕ ಭಾಗಗಳಲ್ಲಿ ಈಗ ಸಾಮಾನ್ಯವಾಗಿವೆ. ಜನವಸತಿ ಪ್ರದೇಶಗಳ ಸ್ಥಳಾಂತರ, ಗುಳೆ, ಜೀವವೈವಿಧ್ಯದ ಹಾನಿ, ಆಹಾರ ಅಭದ್ರತೆ – ಎಲ್ಲವೂ ಹವಾಮಾನ ವೈಪರೀತ್ಯದ ಪರಿಣಾಮಗಳೇ ಆಗಿವೆ. ಜಗತ್ತಿನ ಎಲ್ಲ ಕಡೆಗಳಲ್ಲೂ ಈ ಸಮಸ್ಯೆಗಳು ತಲೆದೋರಿ ನಿಂತಿವೆ.

ಭೂಮಿಯ ಮೇಲಿನ ಜೀವಮಂಡಲದ ಬದುಕು ಹಾಗೂ ಬದುಕಿನ ಶೈಲಿಯು ಹವಾಮಾನ ಹಾಗೂ ಪರಿಸರದ ಇತರ ಸೂಕ್ಷ್ಮ ಸಂಗತಿಗಳೊಂದಿಗೆ ಜೋಡಣೆಯಾಗಿದೆ. ಪರಿಸರದಲ್ಲಿ ಆಗುವ ಬದಲಾವಣೆಗಳು ಎಲ್ಲ ಜೀವಿಗಳ ಬದುಕಿನ ಮೇಲೂ ವ್ಯತಿರಿಕ್ತ ಪರಿಣಾಮ ಬೀರಬಲ್ಲವು ಮತ್ತು ಜೀವಿಗಳ ಅಸ್ತಿತ್ವವನ್ನೇ ಅಸ್ಥಿರಗೊಳಿಸುವಷ್ಟು ಪ್ರಭಾವವನ್ನು ಉಂಟುಮಾಡಬಲ್ಲವು. [illegible] ಏರುತ್ತಲೇ ಇದೆ. ತುರ್ತುಕ್ರಮ ಅಗತ್ಯವಾಗಿದೆ. ಕಾರ್ಮೋಡದಂಚಿನ ಬೆಳ್ಳಿರೇಖೆ ಎಂಬಂತೆ ವರದಿಯಲ್ಲಿ ಕೆಲವು ಆಶಾಕಿರಣಗಳೂ ಗೋಚರಿಸಿವೆ. ಪುನರ್‌ನವೀಕರಿಸಬಹುದಾದ ಇಂಧನದ ಬಳಕೆ ಜಗತ್ತಿನ ಎಲ್ಲ ಕಡೆಗಳಲ್ಲಿ ದೊಡ್ಡಪ್ರಮಾಣದಲ್ಲಿಯೇ ಹೆಚ್ಚಾಗಿದೆ ಎಂದು ವರದಿ ವಿವರಿಸಿದೆ. 'ದುರಂತದಿಂದ ಪಾರಾಗಲು ಮಾನವ ಜನಾಂಗಕ್ಕೆ ಈಗಲೂ ದಾರಿಯಿದೆ' ಎಂಬ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಮಾತಿನಲ್ಲಿ ಸತ್ಯವಿದೆ. ಅಂತಹ ದಾರಿಯನ್ನು ಜಗತ್ತು ಈಗ ತುರ್ತಾಗಿ ಹುಡುಕಿಕೊಳ್ಳಬೇಕಿದೆ.

ದುಷ್ಟ ವ್ಯವಸ್ಥೆಗೆ ಮುಖಾಮುಖಿಯಾಗುವ ಗಟ್ಟಿಗರು ಎಲ್ಲ ಕಾಲದಲ್ಲೂ ಮೈದಾಳುತ್ತಾರೆ

ಏಕವ್ಯಕ್ತಿ ಸೇನೆಯ ದಿಟ್ಟ ನಾಯಕತ್ವ



ವಿಶ್ಲೇಷಣೆ

ನಟರಾಜ್ ಹುಳಿಯಾರ್

ಈಚೆಗೆ ಶಾಂತವೇರಿ ಗೋಪಾಲಗೌಡರ ಹುಟ್ಟುಹಬ್ಬದ ದಿನ 'ಇಂಥ ಏಕವ್ಯಕ್ತಿ ಸೇನೆಯಂತಿದ್ದ ನಾಯಕರ ಕಾಲ ಮುಗಿದುಹೋಯಿತೇ?' ಎಂದು ಪತ್ರಕರ್ತರೊಬ್ಬರು ಕೇಳಿದರು. ಗೋಪಾಲಗೌಡರ ಸಮಾಜವಾದಿ ಗುರುಗಳಾದ ರಾಮಮನೋಹರ ಲೋಹಿಯಾರ ಹುಟ್ಟುಹಬ್ಬದ (ಮಾರ್ಚ್ 23) ಆಸುಪಾಸಿನಲ್ಲಿ ಇದೇ ಪ್ರಶ್ನೆ ಮತ್ತೆ ಎದುರಾದಾಗ, ಸ್ವಾತಂತ್ರ್ಯಾನಂತರದ ದಿಟ್ಟ ರಾಜಕೀಯ ನಾಯಕರ ಹೆಸರುಗಳು ತೇಲಿಬರತೊಡಗಿದವು: ಎ.ಕೆ. ಗೋಪಾಲನ್, ಸೋಮನಾಥ ಚಟರ್ಜಿ, ಭೂಪೇಶ್ ಗುಪ್ತಾ, ಇಂದ್ರಜಿತ್ ಗುಪ್ತಾ, ಮಧು ಲಿಮಯೆ, ಫಿರೋಜ್ ಗಾಂಧಿ, ಪೀಲೂ ಮೋದಿ, ಎನ್.ಜಿ.ಗೋರೆ...

ನಿಜಕ್ಕೂ ಏಕವ್ಯಕ್ತಿ ಸೇನೆಯಂತಿದ್ದ ನಾಯಕರು ಇವರು. ಒಬ್ಬೊಬ್ಬರೇ ಸರ್ಕಾರಗಳನ್ನು ತುದಿಗಾಲಲ್ಲಿ ನಿಲ್ಲಿಸಬಲ್ಲವರಾಗಿದ್ದವರು. ಇಂಥ ದಿಟ್ಟ ನಾಯಕರು ಸ್ವಾತಂತ್ರ್ಯ ಚಳವಳಿಯ ಕಾಲದಲ್ಲಿ ರೂಪುಗೊಂಡಿದ್ದರಿಂದ ಇದರಲ್ಲಿ ಕಾಲದ ಕೊಡುಗೆಯೂ ಇದೆ, ನಿಜ. ಆದರೆ ಇವರನ್ನು ದಿಟ್ಟ ನಾಯಕರನ್ನಾಗಿಸಿದ ಗುಣಗಳನ್ನು ಗಮನಿಸಿ: ವ್ಯಕ್ತಿತ್ವದ ಪಾರದರ್ಶಕತೆ, ಅಧ್ಯಯನ, ತಾತ್ವಿಕ ಸ್ಪಷ್ಟತೆ, ಸಿದ್ಧತೆ, ರಾಜಿಯಿಲ್ಲದ ಮನೋಭಾವ, ತಮ್ಮ ಒಳಶಕ್ತಿಯ ಬಗ್ಗೆ ನಂಬಿಕೆ, ಜನಪರ ಕಾಳಜಿ... ಇವುಗಳಿಂದ ರೂಪುಗೊಂಡ ನಾಯಕರಿವರು. ತಾವು ರಾಜಕಾರಣಕ್ಕೆ ಇಳಿದಿರುವುದೇ ಜನರಿಗಾಗಿ ಎಂದು ಆಳವಾಗಿ ನಂಬಿದ್ದವರು. ಗೋಪಾಲಗೌಡರು ಶಾಸನಸಭೆಗೆ ಅಥವಾ ಲೋಹಿಯಾ, ಜಾರ್ಜ್ ಫರ್ನಾಂಡಿಸ್ ಪಾರ್ಲಿಮೆಂಟಿಗೆ ಹೋಗುವ ಮುನ್ನ ದಾಖಲೆಗಳನ್ನು ಓದಿಕೊಂಡು, ಬರೆದು ಸಿದ್ಧ ಮಾಡಿಕೊಳ್ಳುತ್ತಿದ್ದ ಟಿಪ್ಪಣಿಗಳೂ ಅವರ ವ್ಯಕ್ತಿತ್ವಕ್ಕೆ ಖಚಿತ ಆತ್ಮವಿಶ್ವಾಸ ಕೊಟ್ಟಿದ್ದವು. ವೃತ್ತಿ ರಾಜಕಾರಣ ಎಂದರೆ ಇದೇ ವಿನಾ ಇಪ್ಪತ್ನಾಲ್ಕು ಗಂಟೆಯೂ ರಾಜಕೀಯ ಒದರುತ್ತಿರುವುದಲ್ಲ!

ಐವತ್ತರ ದಶಕದ ಮೈಸೂರು ವಿಧಾನಸಭೆಯಲ್ಲಿ ಸಮಾಜವಾದಿ ಪಕ್ಷದ ಏಕಮಾತ್ರ ಶಾಸಕರಾಗಿದ್ದ ಗೋಪಾಲಗೌಡರು ಎಲ್ಲ ಥರದ ಬಡವರ ಪ್ರಶ್ನೆಗಳನ್ನೂ ಮಂಡಿಸುತ್ತಿದ್ದರು. ನೇರ ಮಾತಿನಿಂದ ಸರ್ಕಾರವನ್ನು ನಡುಗಿಸುತ್ತಿದ್ದರು. ರೈತಸಂಘದ ಎಂ.ಡಿ.ನಂಜುಂಡಸ್ವಾಮಿ, ಬಾಬಾಗೌಡ ಪಾಟೀಲ ರಾಜ್ಯದ ರೈತರು, ಗ್ರಾಮಗಳ ಪ್ರಶ್ನೆಗಳನ್ನು ಸದನಕ್ಕೆ ತರುತ್ತಿದ್ದರು. ಒಮ್ಮೆ ಸಭಾಧ್ಯಕ್ಷರು ನಂಜುಂಡಸ್ವಾಮಿಯವರನ್ನು 'ವಿರೋಧ ಪಕ್ಷದವರು' ಎಂದಾಗ, ನಂಜುಂಡಸ್ವಾಮಿ ಹೇಳಿದ ಮಾತು: 'ನಾನು ವಿರೋಧ ಪಕ್ಷ ಅಲ್ಲ, ಇಡೀ ಕರ್ನಾಟಕದ ಬಗ್ಗೆ ಮಾತಾಡತಕ್ಕಂಥವನು'.

ಇಂಥ ನಾಯಕರ ಕಾಲ ಮುಗಿಯಿತು ಎಂದು ಹಳಹಳಿಸುವುದರಲ್ಲಿ ಅರ್ಥವಿಲ್ಲ. ಇಂಥ ಸ್ಪಿರಿಟ್ಟಿನ ನಾಯಕ, ನಾಯಕಿಯರು ದೇಶದ ವಿರೋಧ ಪಕ್ಷಗಳಲ್ಲಿ ಯಾವಾಗಲೂ ರೂಪುಗೊಂಡಿದ್ದಾರೆ. ಎ.ಕೆ.ಸುಬ್ಬಯ್ಯ ಕರ್ನಾಟಕ ಸರ್ಕಾರದ ವಿರುದ್ಧ ಏಕಾಂಗಿಯಾಗಿ ಸೆಣಸುತ್ತಿದ್ದರು. ಬಿಜೆಪಿಗೆ ನೆಲೆಯೇ ಇಲ್ಲದಿದ್ದಾಗ ಯಡಿಯೂರಪ್ಪ ಗಟ್ಟಿ ದನಿಯಾಗಿದ್ದರು. ಎಚ್.ಡಿ.ದೇವೇಗೌಡರು ಸುಲಭವಾಗಿ ಮಣಿಸಲಾಗದ ವಿರೋಧಿ ನಾಯಕರಾಗಿದ್ದರು. ಮೊನ್ನೆ ಮೊನ್ನೆಯವರೆಗೂ ಸಿದ್ದರಾಮಯ್ಯನವರು ಖಚಿತ ನಿಲುವಿನ ವಿರೋಧಿ ನಾಯಕರಾಗಿದ್ದರು.

ದಶಕಗಳ ಕೆಳಗೆ ಪಾರ್ಲಿಮೆಂಟಿನಲ್ಲಿ ಸೀತಾರಾಂ ಯೆಚೂರಿ, ಅರುಣ್ ಜೇಟ್ಲಿ, ಸುಶ್ಮಾ ಸ್ವರಾಜ್ ಸರ್ಕಾರಗಳನ್ನು ಇಕ್ಕಟ್ಟಿಗೆ ಸಿಲುಕಿಸುತ್ತಿದ್ದರು. ಕಳೆದ ವರ್ಷದವರೆಗೂ ಪಾರ್ಲಿಮೆಂಟಿನಲ್ಲಿದ್ದ ಟಿಎಂಸಿಯ ಮಹುವಾ ಮೊಯಿತ್ರಾ ಗಂಭೀರವಾಗಿ ಹೋಂವರ್ಕ್ ಮಾಡಿಕೊಂಡು ಬಂದು ಪಾರ್ಲಿಮೆಂಟಿನಲ್ಲಿ ಸ್ಪಷ್ಟವಾಗಿ, ದಿಟ್ಟವಾಗಿ ಮಾತನಾಡಿ ಎನ್‌ಡಿಎ ಸರ್ಕಾರವನ್ನು ವಿಮರ್ಶಿಸುತ್ತಿದ್ದರು, ಡಿಜಿಟಲ್ ಮಾಧ್ಯಮಗಳಲ್ಲಿ ಜನಪ್ರಿಯರಾಗಿದ್ದರು. ಮಹುವಾರ ಬಾಯಿ ಮುಚ್ಚಿಸುವಂತೆ ಅವರ ಪಾರ್ಲಿಮೆಂಟ್ ಸದಸ್ಯತ್ವ ರದ್ದಾಗಿದ್ದರ ಹಿನ್ನೆಲೆ ನಿಗೂಢವಾಗಿದೆ, ಸಿಬಿಐ ತನಿಖೆಯೂ ಶುರುವಾಗಿದೆ. ಒಂದು ಕಾಲಕ್ಕೆ ವಿರೋಧ ಪಕ್ಷದ ದೊಡ್ಡ ದನಿಗಳಾಗಿದ್ದ ವಾಜಪೇಯಿ, ಅಡ್ವಾಣಿ ಸರ್ಕಾರದಲ್ಲಿ ಇದ್ದಿದ್ದರೆ, ಮಹುವಾ ತಮ್ಮನ್ನು ವಿರೋಧಿಸಿದ್ದರೂ ಅವರ ವಾದವನ್ನು ಮೆಚ್ಚಿಕೊಳ್ಳುವ ಸಾಧ್ಯತೆಯಿತ್ತು.

ರಾಜ್ಯಸಭೆಯಲ್ಲಿರುವ ಡೆರಿಕ್ ಓಬ್ರಿಯನ್‌ರ ದಕ್ಷ ವಿಶ್ಲೇಷಣೆಗಳಿಗೆ, ಹಿಂದಿನ ಹತ್ತು ವರ್ಷಗಳಿಂದ ಜವಾರಿ ಹಿಂದಿ-ಉರ್ದುವಿನಲ್ಲಿ ಸರ್ಕಾರವನ್ನು ಕುಟುಕಿ, ವಿಮರ್ಶಿಸುತ್ತಿದ್ದ ಮಲ್ಲಿಕಾರ್ಜುನ ಖರ್ಗೆಯವರಿಗೆ ಮಾಧ್ಯಮಗಳಲ್ಲಿ ತಕ್ಕ ಪ್ರಚಾರವೇ ಸಿಕ್ಕಲಿಲ್ಲ. ಖರ್ಗೆಯವರಂತೆ ರಾಹುಲ್ ಗಾಂಧಿ ಪಾರ್ಲಿಮೆಂಟನ್ನು ಗಂಭೀರವಾಗಿ ಬಳಸಿಕೊಂಡಿದ್ದರೆ ಮತ್ತಷ್ಟು ದೊಡ್ಡ ನಾಯಕರಾಗಿ ಬೆಳೆಯಬಹುದಿತ್ತು.

ಹಿಂದಿನ ಐದಾರು ವರ್ಷಗಳಲ್ಲಿ ರಾಹುಲ್ ಗಾಂಧಿಯವರಿಗೂ ಏಕವ್ಯಕ್ತಿ ಸೇನೆಯ ಇಮೇಜ್ ಬೆಳೆದಿದೆ. ಅರವಿಂದ ಕೇಜ್ರಿವಾಲ್ ಇಂಥ ನಾಯಕರಾಗಿ ಹೊಮ್ಮಿದ್ದಾರೆ. ಈ ಇಬ್ಬರ ಬಾಯಿ ಮುಚ್ಚಿಸಲು ಮಾಡುತ್ತಿರುವ ಹೀನ ತಂತ್ರಗಳನ್ನು ಜನ ನೋಡುತ್ತಿದ್ದಾರೆ. ಕೇಜ್ರಿವಾಲ್ ಬಂಧನವು ವಿರೋಧಿ ರಾಜಕಾರಣಕ್ಕೇ ಹೊಸ ತಿರುವು ನೀಡಲಿದೆ. ಬಿಹಾರದ ತರುಣ ತೇಜಸ್ವಿ ಯಾದವ್ ಸ್ಪಷ್ಟ ಗುರಿಯುಳ್ಳ ಗಡಸು ನಾಯಕನಾಗಿ ಬೆಳೆಯುತ್ತಿದ್ದಾರೆ. ಎಲ್ಲ ಕಾಲದಲ್ಲೂ ಜನರ ಒಳಗಿರುವ ದಿಟ್ಟತನಕ್ಕೆ ದನಿಯಾಗುವ ನಾಯಕರು ಸೃಷ್ಟಿಯಾಗುತ್ತಲೇ ಇರುತ್ತಾರೆ ಎಂಬುದನ್ನು ಇವೆಲ್ಲ ಸೂಚಿಸುತ್ತವೆ.

ಒಂದು ಕಾಲಕ್ಕೆ ದಿಟ್ಟ ರಾಜಕೀಯ ನಾಯಕರನ್ನು ಪತ್ರಿಕೆಗಳು ಬೆಂಬಲಿಸಿ, ಬೆಳೆಸಿದ ಆದರ್ಶ ರೀತಿ ಇವತ್ತು ಗತಕಾಲದ ಕತೆಯಂತೆ ಕಾಣುತ್ತಿದೆ. ಒಮ್ಮೊಮ್ಮೆ ಪ್ರಧಾನಮಂತ್ರಿ, ಮುಖ್ಯಮಂತ್ರಿಗಳಿಗಿಂತ ದಿಟ್ಟ ವಿರೋಧಿ ನಾಯಕರಿಗೇ ಹೆಚ್ಚು ಪ್ರಚಾರ ಕೊಟ್ಟ ಪತ್ರಿಕೆಗಳು ಪ್ರಜಾಪ್ರಭುತ್ವವನ್ನು ಉಳಿಸಿ, ಬೆಳೆಸಿವೆ. ಏಕವ್ಯಕ್ತಿ ಸೇನೆಗಳನ್ನು ಜನರೆದುರು ಮತ್ತೆ ಮತ್ತೆ ಬಿಂಬಿಸಿ, ಇಂಥ ವ್ಯಕ್ತಿತ್ವಗಳ ಆತ್ಮವಿಶ್ವಾಸ ಬೆಳೆಯಲು ನೆರವಾಗಿವೆ. ವಿಚಿತ್ರವೆಂದರೆ, ಇವತ್ತು ಜಾಹೀರಾತುಗಳಲ್ಲೂ ಆಳುವ ಪಕ್ಷವೇ, ಮಾಧ್ಯಮ ಗಳು ಪ್ರಕಟಿಸುವ, ಬಿತ್ತರಿಸುವ ಸುದ್ದಿಯಲ್ಲೂ ಆಳುವ ಪಕ್ಷವೇ! ಇನ್ನು ಆಳುವ ಪಕ್ಷದಲ್ಲಂತೂ ಏಕವ್ಯಕ್ತಿ ಪ್ರದರ್ಶನವೇ! ಇಂಥ ಅನೈತಿಕ ಪ್ರಚಾರ ನೀತಿಯನ್ನು ತಮ್ಮ ಮೇಲೆ ತಾವೇ ಹೇರಿಕೊಂಡ ಮಾಧ್ಯಮಗಳು ಪ್ರಜಾಪ್ರಭುತ್ವದ ಹತ್ಯೆಯ ಪಾಲುದಾರರಾಗುತ್ತವೆ.

ಎಂಥ ಸರ್ವಾಧಿಕಾರ, ನಿರಾಶೆಯ ಸ್ಥಿತಿಯಲ್ಲೂ ಬದಲಾವಣೆಯ ಸಾಧ್ಯತೆ ಇದೆಯೆನ್ನುವುದೇ ಪ್ರಜಾಪ್ರಭುತ್ವದ ಅದ್ಭುತ ಗುಣ. ಕಾಲಕಾಲದ ಸವಾಲುಗಳನ್ನು ಎದುರಿಸದೆ, ಇದು ಪ್ರಜಾಪ್ರಭುತ್ವದ ಕೊನೆಯ ಚುನಾವಣೆ ಎಂದು ವಿರೋಧಿ ನಾಯಕರೇ ವಿಧಿವಾದಿಯಂತೆ ಮಾತಾಡುವುದು ವಿರೋಧ ಪಕ್ಷಗಳ ದಿಟ್ಟ ಪರಂಪರೆಗೆ ಅವಮಾನ ಮಾಡಿದಂತೆ. ಯಾಕೆಂದರೆ ದಿಟ್ಟ ನಾಯಕತ್ವವೂ ದಿಟ್ಟ ಮತದಾರ, ಮತದಾರ್ತಿಯರನ್ನು ಸೃಷ್ಟಿಸಬಲ್ಲದು. ಆಧುನಿಕ ಭಾರತದಲ್ಲಿ ಜನರ ಮನಃಸ್ಥಿತಿ ಬದಲಿಸಲು ಗಾಂಧೀಜಿ, ನೆಹರೂ, ಅಂಬೇಡ್ಕರ್, ಪೆರಿಯಾರ್, ಲೋಹಿಯಾ, ಜೆ.ಪಿ., ನಂಬೂದಿರಿಪಾಡ್ ಎಲ್ಲರೂ ಪ್ರಾಥಮಿಕ ಹಂತದಿಂದ ಕೆಲಸ ಮಾಡಿದ್ದಾರೆ, ನಂತರದ ದಿಟ್ಟ ನಾಯಕರು ಅದನ್ನು ಬೇರೆ ಸ್ತರಗಳಲ್ಲಿ ಮುಂದುವರಿಸಿದ್ದಾರೆ.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಅಧಿಕಾರಕ್ಕೆ ಕುತ್ತು ಬಂದಾಗಲೆಲ್ಲ ಜನರನ್ನು ಎಚ್ಚರಿಸಿ, ದಾರಿ ತೋರುವ ದಿಟ್ಟರು ಎಲ್ಲ ರಾಜಕೀಯ ಪಕ್ಷಗಳಲ್ಲೂ ಪಕ್ಷಗಳಾಚೆಗೂ ಹುಟ್ಟುತ್ತಿರುತ್ತಾರೆ. ಎಲ್ಲ ಕಾಲಕ್ಕೂ ಇಂಥ ರಾಜಕಾರಣಕ್ಕೆ ಸ್ಫೂರ್ತಿಯಾಗಬಲ್ಲ ಏಕವ್ಯಕ್ತಿ ಸೇನೆಗಳಂಥ ದಿಟ್ಟ ನಾಯಕರು ತಮ್ಮೊಳಗಿನ ಚಾಲಕ ಶಕ್ತಿಯಿಂದಲೂ ಕಾಲದ ಒತ್ತಾಯದಿಂದಲೂ ಸೃಷ್ಟಿಯಾಗುತ್ತಿರುತ್ತಾರೆ. ಪಕ್ಷ, ಸಂಘಟನೆಗಳ ಬೆಂಬಲ ಇರಲಿ, ಇಲ್ಲದಿರಲಿ, ಇಂಥ ದಿಟ್ಟರು ಬದ್ಧತೆ, ಗಡಸುತನ, ನೈತಿಕತೆ, ನ್ಯಾಯಪರತೆಯ ಫಲವಾಗಿ ಪುಟಿಯುತ್ತಲೇ ಇರುತ್ತಾರೆ. ದೇಶದ ಇಂಥ ಏಕವ್ಯಕ್ತಿ ಸೇನೆಯ ಪರಂಪರೆಯ ಮಾದರಿಗಳನ್ನು ಜನರಿಗೆ ಮತ್ತೆ ಮತ್ತೆ ನೆನಪಿಸುವ, ಮರು ರೂಪಿಸುವ ಮೂಲಕವೇ ಹೊಸ ರಾಜಕಾರಣ ಸೃಷ್ಟಿಯಾಗಬಲ್ಲದು.

ಇಂಥ ದಿಟ್ಟ ರಾಜಕಾರಣ ಮಾಡುವವರ ಬೆಂಬಲಕ್ಕೆ ಕೊನೆಯ ಪಕ್ಷ ಮಾನಸಿಕವಾಗಿಯಾದರೂ ನಿಲ್ಲಬೇಕಾದ ಹೊಣೆ ಸಮಾಜ, ಸಂಸ್ಕೃತಿ, ರಾಜಕಾರಣದಲ್ಲಿ ಕಾಳಜಿಯಿರುವ ಇತರರಿಗೂ ಇರಬೇಕಾಗುತ್ತದೆ. ಹಿಂದಿನ ನೂರು ವರ್ಷಗಳಲ್ಲಿ ಜನರ ಕನಸುಗಳನ್ನು ನನಸಾಗಿಸಲು ಹೋರಾಡಿದ, ಹೋರಾಡುತ್ತಿರುವ ಏಕವ್ಯಕ್ತಿ ಸೇನೆಯಂಥ ರಾಜಕೀಯ ಮಾದರಿಗಳು ನಶಿಸದಂತೆ ರಕ್ಷಿಸುವ ಹೊಣೆ ಮತದಾರ ವಲಯದ ಮೇಲೂ ಇರುತ್ತದೆ. ಮತದಾರ ವಲಯಕ್ಕೆ ಸತ್ಯ ಏನೆಂದು ತಲುಪಿಸಿ ಅವರನ್ನು ತಿದ್ದುವ ಜವಾಬ್ದಾರಿ ರಾಜಕೀಯ ವಲಯಗಳಾಚೆಗಿರುವ ಎಲ್ಲ ಜವಾಬ್ದಾರಿಯುತ ವ್ಯಕ್ತಿಗಳಿಗೂ ಇರುತ್ತದೆ. ಇಂಥ ಮತದಾರ ವಲಯ- ಸಾಮಾಜಿಕ ವಲಯವು ರಾಜಕೀಯ ವಲಯದ ಜೊತೆ ಕೈ ಜೋಡಿಸಿದರೆ ಏಕವ್ಯಕ್ತಿ ಸೇನೆಯಂಥ ದಿಟ್ಟರು ಎಲ್ಲ ಕಾಲದಲ್ಲೂ ಮೂಡುತ್ತಿರುತ್ತಾರೆ.



ಚುರುಮುರಿ



ಲಗ್ನ ಸಂಹಿತೆ!

● ತುರುವೇಕೆರೆ ಪ್ರಸಾದ್

'ನನ್ ಮಗಳಿಗೆ ಲಗ್ನ ಮಾಡ್ಬೇಕು? ಚುನಾವಣೆ ಐತಲ್ಲ, ಅದ್ಕೆ ಪತ್ರಿಕೆ ತೋರ್ಸಿ ಪರ್ಮಿಸನ್ ತಗಬೇಕಲ್ವಾ?' ಹರಟೆಕಟ್ಟೇಲಿ ಕೇಳಿದ ಗುದ್ಲಿಂಗ.

'ಹ್ಞೂಂ ಮತ್ತೆ! ಜನ ಸೇರ್ಸಕ್ಕೆ ಯಾಕೆ ಸುಳ್ಳು ಪತ್ರಿಕೆ ಹೊಡ್ಸಿರಬಾರದು? ಮದ್ವೆ ರಿಜಿಸ್ಟ್ರು ಮಾಡಿಸ್ಕಂಡು ಬರ್ಬೇಕು ಅಂತ ಕಾನೂನು ಮಾಡ್ಬೋದು' ಎಂದು ತಿದಿ ಒತ್ತಿದ ಮಾಲಿಂಗ.

'ಅಷ್ಟೇ ಅಲ್ಲ, ಇನ್ನೂ ಶಾನೆ ಶಾನೆ ಷರತ್ತು ಹಾಕ್ಬಹುದು. ಉದಾಹರಣೆಗೆ, ಮದ್ವೇಲಿ ವಾಲಗ ಊದುಸ್ಬಾರ್ದು ಅಂತ ಹೇಳ್ಬೋದು. ವಾಲಗದ ಸದ್ದಲ್ಲಿ ಯಾರಾದ್ರೂ ರಾಜಕೀಯ ಮಾತಾಡುದ್ರೆ ಗೊತ್ತಾಗಲ್ವಲ್ಲ, ಅದಕ್ಕೇ!'

'ಆಮೇಲೆ ನೀನು ಕಳಸದ ಮೇಲೆ ತೆನೆ, ಗಿನೆ ಮಡಗೋ ಅಂಗಿಲ್ಲ'.

'ಇನ್ನೇನ್ ಪಾರ್ಥೇನಿಯಂ ಇಡಕ್ಕಾಗುತ್ತೇನಾ?'

'ಕಳ್ಳಿ ಗಿಡ ಬೇಕಾರೂ ಮಡಕ್ಕೋ, ಅದು ನಿನ್ ಹಣೆಬರಹ. ಅಂಗೇ ಪಾಣಿಗ್ರಹಣ ಅಂತ ಮಂತ್ರ ಯೋಳಂಗಿಲ್ಲ, ಯಾಕಂದ್ರೆ ಅಂಗಂದ್ರೆ ಕೈ ಇಡಿಯೋದು ಅಂತ ಆಯ್ತದೆ'.

'ಹೌದೌದು, ಆಮೇಲೆ ಬಾಗ್ಲಲ್ಲಿ ಸೆಂಟು ಹೊಡೆದು ತಾವರೆ ಹೂ ಕೈಗೆ ಕೊಡಂಗಿಲ್ಲ, ಜ್ಯೂಸು ಕೊಡಂಗಿಲ್ಲ, ಅಂಗಂತ ಎಣ್ಣೆ ಕೊಟ್‌ಬುಟ್ರೆ? ಆಮ್ಯಾಕೆ ತುಂಡು, ಗುಂಡು ಇಲ್ಲ ಅಂತ ವಿಡಿಯೊ ಮಾಡ್ಸಿ ತೋರುಸ್ಬೇಕು'.

'ಕೊನೆಗೆ ಉಂಡ್ ಓಗೋರ ಕೈಗೆ ತಾಂಬೂಲನೂ ಕೊಡೋ ಅಂಗಿಲ್ಲ ಅನ್ಸುತ್ತೆ. ಚೀಲ್ದೊಳಗೆ ಏನಾರಾ ಕಾಲ್ಚೈನು, ಮೂಗ್ಬಟ್ಟು, ರವಿಕೆ ಪೀಸು ಹಾಕ್ ಕೊಟ್ರೆ ಅಂತ ಅನುಮಾನ ಬರಕಿಲ್ವಾ?'

'ಓಗ್ಲಿ ಬಿಡ್ಲಾ, ಖರ್ಚೇ ಉಳ್ಕಂತು' ಹಿಗ್ಗಿದ ಗುದ್ಲಿಂಗ!

'ಥೂ! ಅದ್ರಲ್ಲೂ ಉಳ್ಸಕ್ಕೆ ನೋಡ್ತೀಯಾ? ಅಲ್ಲಲೇ, ಇಷ್ಟೆಲ್ಲಾ ಆದ್ಮೇಲೆ ನಿನ್ ಮಗಳು, ಅಳಿಯಂಗೆ ಕವರ್ರಲ್ಲಿ ಮುಯ್ಯಿ ಕೊಡಕ್ಕೆ ಬಿಟ್ಟುಬಿಡ್ತಾರಾ? ಅದೂ ಬಂದ್, ಎಂಟಾಣೆ ಹುಟ್ಟಲ್ಲ' ಎಂದ ಪರ್ಮೇಶಿ.

'ಅಯ್ಯೋ, ಯಾರ್‍ಯಾರ್ದೋ ಮದ್ವೆಗೆಲ್ಲಾ ಓಗಿ ಮುಯ್ಯಿ ಮಾಡಿ ಬಂದಿವ್ನಿ. ಇದು ಶಾನೆ ಅನ್ಯಾಯ' ಎಂದು ಬೊಮ್ಮಡಿ ಹೊಡೆದ ಗುದ್ಲಿಂಗ. ಎಲ್ಲಾ ಗೊಳ್ ಎಂದು ನಕ್ಕರು.

ದಿನದ ಟ್ವೀಟ್


ಎಫ್‌ಐಆರ್ ದಾಖಲಾಗಲಿ



ಬೆಂಗಳೂರಿನಲ್ಲಿ ಉಂಟಾಗಿರುವ ತೀವ್ರ ನೀರಿನ ಕೊರತೆಗೆ ಪ್ರಮುಖ ಕಾರಣ, ಅಧಿಕ ಸಂಖ್ಯೆಯಲ್ಲಿದ್ದ ಕೆರೆಗಳು, ಜಲ ಮೂಲಗಳ ಕಣ್ಮರೆಯೇ ಆಗಿದೆ. ಇನ್ನಷ್ಟು ಕೆರೆಗಳನ್ನು ರಿಯಲ್ ಎಸ್ಟೇಟ್ ವ್ಯವಸ್ಥೆಯು ನುಂಗಿ ನೀರು ಕುಡಿಯುವವರೆಗೆ ಕಾಯದೆ, ಇದನ್ನೊಂದು ಅಪರಾಧ ಎಂದು ಪರಿಗಣಿಸಿ, ಇಂತಹದಕ್ಕೆ ಅವಕಾಶ ಮಾಡಿಕೊಟ್ಟ ಬಿಲ್ಡರ್‌ಗಳು ಮತ್ತು ಅಧಿಕಾರಿಗಳ ವಿರುದ್ಧ ನಾವು ಎಫ್‌ಐಆರ್ ದಾಖಲಿಸಬಾರದೇಕೆ?
#WorldWaterDay

ದೇವಿಂದರ್ ಶರ್ಮಾ, ಲೇಖಕ

ಕಿಡಿನುಡಿ



ಪ್ರಾಣ ಪ್ರತಿಷ್ಠಾಪನೆಯಲ್ಲಿ ಪಾಲ್ಗೊಳ್ಳಲು ಬರಲಿದ್ದವರ ಸಲುವಾಗಿ (ಅಯೋಧ್ಯೆಯಲ್ಲಿ) ನೂರಾರು ಪರಿಸರಸ್ನೇಹಿ ಶೌಚಾಲಯಗಳನ್ನು ನಿರ್ಮಿಸಲಾಗಿತ್ತು. ಏನಾಯಿತೆಂದು ಊಹಿಸಬಲ್ಲಿರಾ? ಅವುಗಳಲ್ಲಿದ್ದ ಬಲ್ಬುಗಳನ್ನು ಜನ ಕದ್ದೊಯ್ದರು. ಎಲ್ಲ ಬಲ್ಬುಗಳನ್ನೂ! ಇದು ಶಿಕ್ಷಣದ ಕೊರತೆಯಲ್ಲ. ಬಡತನದ ಕಾರಣದಿಂದಲೂ ಅಲ್ಲ. ಇದಕ್ಕೆ ಪ್ರಾಮಾಣಿಕತೆಯ ಕೊರತೆ ಕಾರಣ ಮತ್ತು ಅದು ಸಮರ್ಥನೆ ಮಾಡಿಕೊಳ್ಳುವಂತಹದ್ದಲ್ಲ. ದೇಶದ ಸಾರ್ವಜನಿಕ ಸ್ಥಳಗಳ ಬಗೆಗೆ ಜನರಲ್ಲಿ ಮಾಲೀಕತ್ವದ ಭಾವನೆಯನ್ನು ಹುಟ್ಟುಹಾಕುವಲ್ಲಿ ನಮ್ಮ ವ್ಯವಸ್ಥೆ ವಿಫಲವಾಗಿದೆ. ಸಾಮಾಜಿಕ ನಡವಳಿಕೆ ಬದಲಾಗುವವರೆಗೂ ಕಣ್ಗಾವಲು ವ್ಯವಸ್ಥೆ ಮತ್ತು ಭಾರಿ ದಂಡವೊಂದೇ ಏಕೈಕ ಮಾರ್ಗ. ಇದು ನಾಚಿಕೆಗೇಡು!

ನಿವೇದಿತಾ ತಿವಾರಿ, ನಿರ್ದೇಶಕಿ, ವಿಷುಯಲ್ ಕಂಟೆಂಟ್ ವಿಭಾಗ, 'ಬೃಹತ್' ಶೈಕ್ಷಣಿಕ ಸಂಶೋಧನಾ ಸಂಸ್ಥೆ

25 ವರ್ಷಗಳ ಹಿಂದೆ

ಮಂಗಳವಾರ, 23-3-1999

● ವೇಳಾಪಟ್ಟಿ ಪ್ರಕಟಿಸಿದ ಚುನಾವಣಾ ಆಯೋಗಕ್ಕೆ ಪಟೇಲ್ ತರಾಟೆ

ಬೆಂಗಳೂರು, ಮಾರ್ಚ್ 22– ಗ್ರಾಮ ಪಂಚಾಯಿತಿಗಳಿಗೆ ಚುನಾವಣೆ ನಡೆಸುವ ಸಂಬಂಧ ವೇಳಾಪಟ್ಟಿ ಪ್ರಕಟಿಸಿರುವ ರಾಜ್ಯ ಚುನಾವಣಾ ಆಯೋಗದ ಕ್ರಮವನ್ನು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ವಿಧಾನಸಭೆಯಲ್ಲಿ ಇಂದು ಪರೋಕ್ಷವಾಗಿ ತರಾಟೆಗೆ ತೆಗೆದುಕೊಂಡರು.

'ಆರು ವಾರದೊಳಗೆ ಚುನಾವಣೆ ನಡೆಸುವಂತೆ ಹೈಕೋರ್ಟ್ ಆದೇಶಿಸಿತು. ಹಳೆಯ ಕಾನೂನು ಪ್ರಕಾರ ಚುನಾವಣೆ ನಡೆಸುವುದಾಗಿ ಆಯೋಗ ತಿಳಿಸಿದೆ. ಹೊಸ ಕಾನೂನು ಜಾರಿಯಲ್ಲಿರುವುದು ಆಯೋಗದ ಗಮನಕ್ಕೆ ಬಂದಿಲ್ಲವೇ?' ಎಂದರು.

● ಭಾರತೀಯ ವಿಜ್ಞಾನ ಸಂಸ್ಥೆ ಆವರಣದಲ್ಲಿ ಮಾನ್ಸಾಂಟೊ ಘಟಕ

ಬೆಂಗಳೂರು, ಮಾರ್ಚ್ 22– ಕರ್ನಾಟಕದಲ್ಲಿ ವಿವಾದದ ಅಲೆ ಎಬ್ಬಿಸಿರುವ ಮಾನ್ಸಾಂಟೊ ಕಂಪನಿಯ ಅತ್ಯಾಧುನಿಕ ಸಂಶೋಧನಾ ಕೇಂದ್ರವೊಂದು ನಗರದ ಭಾರತೀಯ ವಿಜ್ಞಾನ ಸಂಸ್ಥೆಯ ಆವರಣದಲ್ಲಿ ಯಾವುದೇ ಸದ್ದುಗದ್ದಲವಿಲ್ಲದೆ ಅಸ್ತಿತ್ವಕ್ಕೆ ಬಂದಿದೆ.

ಬಹುರಾಷ್ಟ್ರೀಯ ಕಂಪನಿಯೊಂದಕ್ಕೆ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಆವರಣದಲ್ಲಿ ಪ್ರಯೋಗಾಲಯ ನಿರ್ಮಾಣ ಮಾಡಲು ಇದೇ ಮೊದಲು ಅವಕಾಶ ನೀಡಿದ್ದು, ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ಮಾನ್ಸಾಂಟೊ ಈ ಪ್ರಯೋಗಾಲಯವನ್ನು ನಿರ್ಮಾಣ ಮಾಡುತ್ತಿದೆ.

50 ವರ್ಷಗಳ ಹಿಂದೆ

ಶನಿವಾರ, 23-3-1974

● ಅದೇ ಮಾಮೂಲಿ: ವಸೂಲಿ ರೀತಿ ಬೇರೆ

ಬೆಂಗಳೂರು, ಮಾರ್ಚ್ 22– ಸಬ್ ರಿಜಿಸ್ಟ್ರಾರ್ ಕಚೇರಿಗಳಲ್ಲಿ ಪತ್ರ ರಿಜಿಸ್ಟರ್ ಮಾಡಿಸುತ್ತಿದ್ದವರಿಂದ ಪಡೆಯುತ್ತಿದ್ದ ಮಾಮೂಲಿ ಈಗ ಕಚೇರಿಯ ಬಾಗಿಲ ಹೊರಗೇ ನಡೆಯುವ ವ್ಯವಹಾರ.

ಕಚೇರಿಯ ಮಾಮೂಲು ತಪ್ಪಿಸಲು ಸಚಿವರು ಕ್ರಮ ಕೈಗೊಳ್ಳಲಾರಂಭಿಸಿದ ಮೇಲೆ ಆಫೀಸನ್ನು ಬಿಟ್ಟು ವ್ಯವಹಾರವು ಪತ್ರ ಮಾರುವವರ ಹತ್ತಿರವೇ ನಡೆಯಲು ಶುರುವಾಗಿದೆ. ಜೊತೆಗೆ ಕೆಲಸ ಇಲ್ಲದೆ ಇರುವವರೂ ಅಲ್ಲಿ ಬಂದು ಮಾಮೂಲಿಯ ವಸೂಲಿಯಲ್ಲಿ ತೊಡಗುತ್ತಾರಂತೆ– ಇಂದು ಸಚಿವ ಎಚ್.ಹುಚ್ಚಮಾಸ್ತಿಗೌಡರು ವಿಧಾನ ಪರಿಷತ್ತಿನಲ್ಲಿ ಮಾಮೂಲಿ ವಸೂಲಿಯ ಸ್ಥಳ ಬದಲಾದ ಪರಿಸ್ಥಿತಿಯನ್ನು ವಿವರಿಸಿದರು.

'ಮೊದಲು ಕಚೇರಿಗೆ ಹೋಗುವಾಗ ತಮ್ಮಲ್ಲಿದ್ದ ಹಣ ಘೋಷಿಸಿಕೊಳ್ಳಬೇಕು ಎಂದು ಸೂಚನೆ ಕೊಡಲಾಗಿತ್ತು. ಜೇಬಿನಲ್ಲಿ ಐದೇ ರೂಪಾಯಿ ಇದ್ದರೂ ನೂರು ರೂಪಾಯಿ ಇದೆ ಅಂತ ಘೋಷಿಸಿಕೊಳ್ಳಲು ಅದರಿಂದ ಅವಕಾಶವಾಯಿತು' ಎಂದರು.

ಸಂಗತ

ಬಣ್ಣಬಣ್ಣದ ಆಹಾರ: ಇರಲಿ ಎಚ್ಚರ

ಕಣ್ಣಿಗೆ ಹಿತಕರವಾಗಿ ಕಾಣುವ ಆಹಾರವೆಲ್ಲ ಆರೋಗ್ಯಕ್ಕೆ ಪೂರಕ ಎಂದೇನಿಲ್ಲ

● ಡಾ. ಕೆ.ಎಸ್.ಚೈತ್ರಾ

ಪುಟ್ಟಪುಟ್ಟ ಹೆಜ್ಜೆ ಇಡುತ್ತಾ, ತೊದಲು ಮಾತಿನಲ್ಲಿ ಮಗು 'ಗೋಪಿ ಮಂಜೂರಿ ಬೇಕು' ಎಂದು ಗಲಾಟೆ ಮಾಡುತ್ತಿತ್ತು. ಅಮ್ಮ 'ಆ ಗಾಡಿ ಇಲ್ಲ, ಪಾನಿಪುರಿ ತಿನ್ನೋಣ' ಎಂದು ಸಮಾಧಾನ ಮಾಡಿದಳು. ಹಿಂದೆ ನಡೆಯುತ್ತಿದ್ದ ನಾನು ಕಣ್ಣಾಡಿಸಿದರೆ, ಸಂಜೆಯಾದೊಡನೆ ಝಗಮಗ ಬೆಳಕಲ್ಲಿ ದೊಡ್ಡ ಬಾಣಲೆಯಲ್ಲಿ ಬಿಡುವಿಲ್ಲದೇ ಕೆಂಪಾದ ಗೋಬಿ ಹುರಿಯುತ್ತಿದ್ದ ಅದೆಷ್ಟೋ ಗಾಡಿಗಳು ಕಾಣಿಸಲಿಲ್ಲ. ಇದಕ್ಕೆ ಕಾರಣ, ಕೆಲ ದಿನಗಳ ಹಿಂದಷ್ಟೇ ಕರ್ನಾಟಕದಲ್ಲಿ ರಾಸಾಯನಿಕ ಬಳಸಿ ಮಾಡುವ ಗೋಬಿ ಮಂಚೂರಿ ಮತ್ತು ಬಾಂಬೆಮಿಠಾಯಿಯ ಮಾರಾಟವನ್ನು ನಿಷೇಧಿಸಿರುವುದು.

ಆಹಾರ ಇಲಾಖೆ ಅಧಿಕಾರಿಗಳು ಅದಾಗಲೇ ಮಾರಾಟವಾಗುತ್ತಿದ್ದ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯದಲ್ಲಿ ಪರಿಶೀಲಿಸಿದಾಗ, ರೋಡಮೈನ್ ಬಿ, ಸನ್‌ಸೆಟ್ ಯೆಲ್ಲೊ ಮತ್ತು ಟೆಟ್ರಾಜಿನ್ ಎಂಬ ರಾಸಾಯನಿಕಗಳು ಕಂಡುಬಂದಿದ್ದವು. ಪ್ಲಾಸ್ಟಿಕ್ ಉದ್ಯಮ, ಸಿಂಥೆಟಿಕ್ ಬಣ್ಣಗಳಲ್ಲಿ ಬಳಸುವ ಈ ರಾಸಾಯನಿಕಗಳು ಆಹಾರದ ಮೂಲಕ ದೇಹದೊಳಗೆ ಪ್ರವೇಶಿಸಿದಾಗ ಚರ್ಮದಲ್ಲಿ ತುರಿಕೆ, ಕಣ್ಣಿನ ಸಮಸ್ಯೆ, ಶ್ವಾಸಕೋಶದ ಸೋಂಕು ಮತ್ತು ವಿಶೇಷವಾಗಿ ಮಕ್ಕಳಲ್ಲಿ ದೀರ್ಘಕಾಲದ ಬಳಕೆಯಿಂದ ಕ್ಯಾನ್ಸರ್ ಕೂಡ ಬರುವ ಸಾಧ್ಯತೆ ಇದೆ.

ತಿನ್ನುವ ಆಹಾರ ಕಣ್ಣಿಗೆ ಆಕರ್ಷಕವಾಗಿರಬೇಕು, ನಂತರ ರುಚಿಯ ವಿಷಯ. ಹಾಗಾಗಿಯೇ ಆಹಾರ ಸೇವನೆಯಲ್ಲಿ ಬಣ್ಣಕ್ಕೆ ಮಹತ್ವವಿದೆ. ಇದನ್ನು ಮನಗಂಡು ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು ಆಹಾರ ಪದಾರ್ಥಗಳಲ್ಲಿ ಕೆಲವು ಅಧಿಕೃತ ಬಣ್ಣಗಳನ್ನು ಬಳಸಲು ಅನುಮತಿ ನೀಡಿದೆ.

ರೋಡಮೈನ್ ಬಿ ಮತ್ತು ಉಳಿದವು ಹಾನಿಕಾರಕ ಎಂದು ವರದಿಯಾಗಿರುವುದರಿಂದ ಅವನ್ನು ಹೊರಗಿಡಲಾಗಿದೆ. ಆದರೆ ಗ್ರಾಹಕರ ಮನಸೆಳೆಯಲು, ಕಡಿಮೆ ಬೆಲೆಗೆ ಸಿಗುವ ಈ ರಾಸಾಯನಿಕಗಳನ್ನು ಮತ್ತು ಗರಿಗರಿಯಾಗಿ ಬರಲು ಕೆಲವು ಕಡೆ ಸೋಪಿನ ಪುಡಿಯನ್ನು ಕೂಡ ಬಳಸಲಾಗುತ್ತಿತ್ತು ಎಂಬ ಅಂಶಗಳು ಬೆಳಕಿಗೆ ಬಂದು ನಿಷೇಧಿಸಲಾಯಿತು. ಈ ನಿಷೇಧದ ನಂತರ, ಎಲ್ಲಾ ಕಡೆ ಬಹುಜನಪ್ರಿಯ ತಿನಿಸುಗಳಲ್ಲಿ ಒಂದಾದ ಗೋಬಿ ಮಂಚೂರಿ ವ್ಯಾಪಾರ ಕುಸಿದಿದೆ. ಬೆಂಗಳೂರಿನಲ್ಲಂತೂ ಶೇಕಡ 80ರಷ್ಟು ಕಡಿಮೆಯಾಗಿದ್ದು, ಚಿಕ್ಕಪುಟ್ಟ ವ್ಯಾಪಾರಿಗಳು ನಷ್ಟ ಅನುಭವಿಸುವಂತಾಗಿದೆ.

'ನಮ್ಮ ಗ್ರಾಹಕರಲ್ಲಿ ಬೇರೆ ಊರುಗಳಿಂದ ಬಂದು ಇಲ್ಲಿ ನೆಲೆಸಿ ಸಣ್ಣ ಉದ್ಯೋಗದಲ್ಲಿ ಇರುವವರೇ ಹೆಚ್ಚು. ಮಧ್ಯಾಹ್ನ ಊಟಕ್ಕೆ ಹೋಟೆಲ್‌ಗೆ ಹೋದರೆ ಖರ್ಚು ಹೆಚ್ಚು. ನಮ್ಮ ಬಳಿ ರೈಸ್‌ಬಾತ್, ನೆಂಚಿಕೊಳ್ಳಲು ಗೋಬಿ ಮಂಚೂರಿ ಸಾಕಾಗಿತ್ತು. ನಮ್ಮ ಬದುಕೂ ಸಾಗುತ್ತಿತ್ತು. ಈಗ ಬ್ಯಾನ್‌ನಿಂದ ರೈಸ್ ಐಟಂ ಕೂಡಾ ಸೇಲ್ ಆಗ್ತಿಲ್ಲ. ಆಹಾರಕ್ಕೆ ಬಣ್ಣ ಬಳಸಬಾರದು ಸರಿ, ಜೊತೆಗೆ ಟೇಸ್ಟಿಂಗ್ ಪೌಡರ್ ಕೂಡ ಹಾಕುವಂತಿಲ್ಲ. ಬಳಸಿದರೆ ದಂಡ, ಜೈಲು ಅಂತ ಹೇಳಿದ್ದಾರೆ. ಇದ್ಯಾವುದನ್ನೂ ಹಾಕದೆ ಆಹಾರ ತಯಾರಿಸಲು ನಾವು ರೆಡಿ. ಆದರೆ ಬಣ್ಣವಿಲ್ಲ, ರುಚಿ ಇಲ್ಲ, ಗ್ರಾಹಕರನ್ನು ತೃಪ್ತಿಪಡಿಸುವುದು ಹೇಗೆ?'

'ಪರ್ಮಿಷನ್ ಇರೋ ಉತ್ತಮ ಗುಣಮಟ್ಟದ ಬಣ್ಣ ಮತ್ತು ಟೇಸ್ಟಿಂಗ್ ಪೌಡರ್ ತುಂಬಾ ದುಬಾರಿ, ಬೇಗ ಸಿಗುವುದೂ ಇಲ್ಲ. ಅವನ್ನು ಹಾಕಿ ಲಾಭ ಗಳಿಸುವುದು ಸಾಧ್ಯವಿಲ್ಲ. ಹೀಗಾಗಿ, ಬದಲಿ ವ್ಯವಸ್ಥೆ ಮಾಡದೆ ಬದುಕು ನಡೆಸುವುದು ಬಹಳ ಕಷ್ಟ' ಎನ್ನುವುದು ಈ ವ್ಯಾಪಾರಿಗಳ ಅಳಲು.

'ಗೋಬಿ ಮಂಚೂರಿ ಮಾಡಲು ಉಪಯೋಗಿಸುವ ಹೂಕೋಸಿಗೆ ಬೇರೆಲ್ಲ ತರಕಾರಿಗಳಿಗಿಂತ ಅತಿ ಹೆಚ್ಚು ಕ್ರಿಮಿನಾಶಕವನ್ನು ಸಿಂಪಡಿಸಿರುತ್ತಾರೆ. ಹೀಗಾಗಿ, ಉಪ್ಪು ನೀರಿನಲ್ಲಿ ಮುಳುಗಿಸಿಟ್ಟು ಸ್ವಚ್ಛವಾಗಿ ತೊಳೆದು ಅಡುಗೆ ಮಾಡುವುದು ಮುಖ್ಯ. ಕುಡಿಯುವ ನೀರಿಗೂ ಕೊರತೆ ಇರುವ ಸಮಯದಲ್ಲಿ ಈ ರೀತಿಯ ಸ್ವಚ್ಛತೆ ಕಷ್ಟವೇ. ಅದರೊಂದಿಗೆ ನೆಂಚಿಕೊಳ್ಳಲು ಕೊಡುವ ಸಾಸ್‌ನಲ್ಲಿ ಕೂಡ ಕೃತಕ ಬಣ್ಣವಿದ್ದು ಅಪಾಯಕಾರಿ. ಕರಿಯುವ ಎಣ್ಣೆಯನ್ನು ಪದೇಪದೇ ಬಳಸುವುದೂ ಒಳ್ಳೆಯದಲ್ಲ. ಬಾಂಬೆಮಿಠಾಯಿಯಲ್ಲಿ ಬಣ್ಣ ಗಾಢವಾದಷ್ಟೂ ಅಪಾಯ ಹೆಚ್ಚು. ಜತೆಗೆ ಸಕ್ಕರೆ ಅಂಶವೂ ಹೆಚ್ಚಿರುತ್ತದೆ. ಹೀಗಾಗಿ ಇವು ತಿನ್ನಲು ಸೂಕ್ತವಾದ ಆಹಾರವಲ್ಲ.



ಗೋಬಿಮಂಚೂರಿ ನಿಷೇಧವಾದ ಸಂದರ್ಭದಲ್ಲಿ ಜನರು ಪಾನಿಪುರಿ, ಮಸಾಲಾಪುರಿಯಂಥ ಚಾಟ್ಸ್‌ಗೆ ಮೊರೆ ಹೋಗುತ್ತಿದ್ದಾರೆ. ಇವುಗಳಲ್ಲಿ ಬಳಸುವ ಹಸಿರು ಬಟಾಣಿಯಲ್ಲಿ ಮಲಾಚೈಟ್ ಗ್ರೀನ್ ಎನ್ನುವ ಬಣ್ಣ ಬಳಸಲಾಗುತ್ತದೆ. ಸಿಹಿತಿಂಡಿ, ಕಬಾಬ್‌ಗಳಲ್ಲಿ ಬಣ್ಣಕ್ಕಾಗಿ ಬಹಳಷ್ಟು ರಾಸಾಯನಿಕಗಳು ಬಳಕೆಯಾಗುತ್ತವೆ. ಹೊರಗೆ ಆಹಾರ ಸೇವಿಸುವಾಗ ತಯಾರಿಸುವವರ ವೈಯಕ್ತಿಕ ನೈರ್ಮಲ್ಯ, ಆಹಾರ ತಯಾರಿಸುವ, ತಿನ್ನುವ ಪಾತ್ರೆಗಳ ಸ್ವಚ್ಛತೆ, ಶುದ್ಧನೀರಿನ ಲಭ್ಯತೆ, ಸುತ್ತಲ ಪರಿಸರ ಇವೆಲ್ಲವೂ ಗಮನಿಸಬೇಕಾದ ಅಂಶಗಳು.

ಈಗಂತೂ ಮಕ್ಕಳಿಗೆ ರಜೆಯ ಸಮಯ. 'ಪ್ರವಾಸ ಮಾಡುವಾಗ, ಹೊರಗೆ ತಿನ್ನುವಾಗ ಜಾಗರೂಕರಾಗಿರಿ' ಎನ್ನುವುದು ತಜ್ಞರ ಅಭಿಪ್ರಾಯ.

ಕಡಿಮೆ ಬೆಲೆಗೆ ಸುಲಭವಾಗಿ ಸಿಗುವ, ಬಾಯಿಗೆ ಹಿತವೆನಿಸುವ ರಸ್ತೆಬದಿಯ ಆಹಾರ ಅನೇಕರ ಹೊಟ್ಟೆತುಂಬಿಸುತ್ತಿದೆ. ಮಾತ್ರವಲ್ಲ, ಪ್ರವಾಸಿಗರಿಗೂ ಅಚ್ಚುಮೆಚ್ಚು. ಆದರೆ ರಸ್ತೆಬದಿಯಲ್ಲಿ ಆಹಾರ ಮಾರಾಟ ಮಾಡುವ ಹೆಚ್ಚಿನವರಿಗೆ ಸರಿಯಾದ ಜಾಗವಿಲ್ಲ. ಕಾನೂನಿನ ಮಾನ್ಯತೆ ಸಿಕ್ಕಿಲ್ಲ. ಆಹಾರ ತಯಾರಿಕೆಯಲ್ಲಿ ಬಳಸಬೇಕಾದ ನಿಯಮಗಳ ಬಗ್ಗೆ ಗೊತ್ತಿಲ್ಲ. ಹೀಗಾಗಿ, ಆರೋಗ್ಯದ ದೃಷ್ಟಿಯಿಂದ ನಿಷೇಧ ಸರಿಯಾದರೂ ಈ ಎಲ್ಲ ಅಂಶಗಳ ಬಗ್ಗೆ ಮಾಹಿತಿ ಮತ್ತು ಅಗತ್ಯ ನೆರವು ದೊರೆತು ಸುರಕ್ಷಿತ ಆಹಾರ ಸಿಗುವಂತಾಗಲಿ!

ವಾಚಕರ ವಾಣಿ

ಹೆಲ್ಮೆಟ್ ಕಡ್ಡಾಯ: ಪೊಲೀಸರಿಗೊಂದು ನಿಯಮವೇ?

ರಾಜ್ಯದ ಎಲ್ಲ ಪೊಲೀಸರು ದ್ವಿಚಕ್ರ ವಾಹನ ಚಾಲನೆ ವೇಳೆ ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು ಎಂಬ ಹಿರಿಯ ಅಧಿಕಾರಿಗಳ ಆದೇಶ (ಪ್ರ.ವಾ., ಮಾರ್ಚ್ 20) ಸೂಕ್ತವಾಗಿದೆ. ಆದರೆ ಸುರಕ್ಷತೆಯ ದೃಷ್ಟಿಯಿಂದ ಪೊಲೀಸರೂ ಹೆಲ್ಮೆಟ್ ಧರಿಸುವುದು ಕಡ್ಡಾಯ ಎಂಬ ಅರಿವು ಇದುವರೆಗೆ ಇರಲಿಲ್ಲವೇ? ಸಾರ್ವಜನಿಕರಿಗೊಂದು ಪೊಲೀಸರಿಗೊಂದು ನಿಯಮ ಎಂದು ಇರುವುದಿಲ್ಲ ಅಲ್ಲವೇ? ಹೆಲ್ಮೆಟ್ ಧರಿಸದ ಸಾರ್ವಜನಿಕರಿಗೆ ದಂಡ ವಿಧಿಸುವ ತಾವು ಅದನ್ನು ಧರಿಸದಿದ್ದರೆ ತಮ್ಮನ್ನು ಕೇಳುವವರಾರು ಎಂಬ ಧೋರಣೆ ಕೆಲವು ಪೊಲೀಸರದ್ದಾಗಿರುತ್ತದೆ. ಹೀಗಾಗಿ, ಅವರು ದ್ವಿಚಕ್ರ ವಾಹನ ಚಾಲನೆಯಲ್ಲಿದ್ದಾಗ ಹೆಲ್ಮೆಟ್ ಧರಿಸದಿರುವುದು, ಅರ್ಧ ತಲೆಯನ್ನಷ್ಟೇ ಮುಚ್ಚುವ ಹೆಲ್ಮೆಟ್ ಧರಿಸುವುದು, ಸಾರ್ವಜನಿಕ ಸಾರಿಗೆ ಬಸ್‌ಗಳಲ್ಲಿ ಮುಂಬಾಗಿಲಲ್ಲಿ ನಿಂತು ಪ್ರಯಾಣಿಸುವುದು, ಪಾರ್ಕಿಂಗ್‌ರಹಿತ ಸ್ಥಳಗಳಲ್ಲಿ ವಾಹನ ನಿಲ್ಲಿಸುವಂತಹ ಅನೇಕ ನಿಯಮಬಾಹಿರ ಕೃತ್ಯಗಳನ್ನು ಮಾಡುತ್ತಾರೆ. ಪೊಲೀಸರನ್ನು ಎದುರು ಹಾಕಿಕೊಳ್ಳಬಾರದು ಎಂಬ ಕಾರಣದಿಂದ ಸಾರ್ವಜನಿಕರು ಇದನ್ನೆಲ್ಲ ಪ್ರಶ್ನಿಸಲು ಹೋಗುವುದಿಲ್ಲ. ತಮಗೆ ವಿಶೇಷ ಸವಲತ್ತುಗಳೇನಿಲ್ಲ, ಸಾರ್ವಜನಿಕರಿಗೆ ಅನ್ವಯಿಸುವ ನಿಯಮಗಳು ತಮಗೂ ಅನ್ವಯಿಸುತ್ತವೆ ಎಂಬುದನ್ನು ಪೊಲೀಸರು ಮನಗಾಣಲಿ.

ಜಿ.ಬೈರೇಗೌಡ, ಕೊಡಿಗೇಹಳ್ಳಿ, ನೆಲಮಂಗಲ

ಕಿಚ್ಚು ಹಚ್ಚುವ ಕಾರ್ಯಕ್ರಮ ಬೇಡ

ಈ ದಿನಗಳಲ್ಲಿ ಕೆಲವು ದೃಶ್ಯ ಮಾಧ್ಯಮಗಳು ಬಿತ್ತರಿಸುವ ಸುದ್ದಿಗಳನ್ನು ನೋಡುತ್ತಿದ್ದರೆ, ಇವು ಕಟ್ಟುವ ಕ್ರಿಯೆಗಿಂತ ಕೆಡಹುವ ಕ್ರಿಯೆಗೇ ಹೆಚ್ಚು ಆದ್ಯತೆ ಕೊಡುತ್ತಿವೆಯೇನೋ ಎಂದು ಅನ್ನಿಸದೇ ಇರದು. ಸುದ್ದಿಯನ್ನು ತ್ವರಿತವಾಗಿ ಕೊಡಬೇಕೆಂಬ ಧಾವಂತದಲ್ಲಿ ಮಾನವೀಯತೆಯನ್ನು ಮರೆತು ದೌರ್ಜನ್ಯ, ಹಿಂಸೆಗೆ ಪ್ರೇರಣೆ ನೀಡುವ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವುದು, ಈ ಮೂಲಕ ಸೂಕ್ಷ್ಮ ನಡೆ ಮತ್ತು ಸಂವೇದನೆಯನ್ನು ಮರೆತಿರುವುದು ನಾಡಿಗೆ ಶೋಭೆ ತರುವಂತಹದ್ದಲ್ಲ. ಲೈಂಗಿಕತೆ, ಅತ್ಯಾಚಾರ, ಕೊಲೆ, ಅಪಘಾತದಂತಹ ಸಂಗತಿಗಳನ್ನು ಅತಿರಂಜಿತವಾಗಿ ಬಿತ್ತರಿಸುವ ಮೂಲಕ ನೋಡುಗರಲ್ಲಿ ಭಯವನ್ನುಂಟು ಮಾಡುತ್ತಿವೆ.

ಮಾತು ಮನವನ್ನು ಅರಳಿಸಬೇಕೇ ವಿನಾ ಕೆರಳಿಸಬಾರದು. ಆದರೆ ನಮ್ಮ ದೃಶ್ಯ ಮಾಧ್ಯಮಗಳು ರಾಮನಗರ ಯುದ್ಧ, ರಣಕಹಳೆ, ಪಕ್ಷದಲ್ಲಿ ಬೆಂಕಿ, ಟಿಕೆಟ್ ವಂಚಿತರ ಅಗ್ನಿಜ್ವಾಲೆ, ಗೂಳಿ ಕಾಳಗ, ವಿಪತ್ತು ಫಿಕ್ಸಾ? ಭೂಮಿಗೆ ಕಂಟಕ!, ಮಾತಿನ ಬಾಂಬ್ ಸಿಡಿಸಿದ್ದಾರೆ, ನಗರ್ತಪೇಟೆ ದಂಗಲ್... ಎಂಬಂತಹ ಶೀರ್ಷಿಕೆಗಳ ಮೂಲಕ ಸಮಾಜದ ಸಾಮರಸ್ಯವನ್ನು ಕದಡಿ, ವೀಕ್ಷಕರ ಮನಸ್ಸಿನಲ್ಲಿ ಕಿಚ್ಚು ಹಚ್ಚುತ್ತಿವೆ. ದೃಶ್ಯ ಮಾಧ್ಯಮಗಳ ಈ ಬಗೆಯ ಸುದ್ದಿಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಭಾಷೆಯು ಸಂವಹನ ಸಾಧನವಷ್ಟೇ ಅಲ್ಲ ಸಂಸ್ಕೃತಿಯ ವಾಹಕವೂ ಹೌದು. ಒಂದು ಜನಾಂಗವನ್ನು ನಾಶ ಮಾಡಬೇಕಾದರೆ ಅಲ್ಲಿನ ಜನರಾಡುವ ಭಾಷೆಯನ್ನು ನಾಶ ಮಾಡಿದರೆ ಸಾಕು ಎಂದು ಭಾಷಾತಜ್ಞರು ಹೇಳುತ್ತಾರೆ. ಇದನ್ನು ಮನಗಂಡು, ಭಾಷೆಯ ದುರ್ಬಳಕೆ ಮೇಲೆ ಕಡಿವಾಣ ಹಾಕಬೇಕು. ಟಿಆರ್‌ಪಿಗಿಂತ ಸಮಾಜದ ಸ್ವಾಸ್ಥ್ಯವೇ ಮುಖ್ಯ ಎಂಬುದನ್ನು ದೃಶ್ಯ ಮಾಧ್ಯಮಗಳು ಅರಿತು ಆರೋಗ್ಯಪೂರ್ಣ ಸಮಾಜ ಕಟ್ಟಲು ಸಹಕರಿಸಬೇಕು.

ರೇವಣ್ಣ ಎಂ.ಜಿ., ಕೃಷ್ಣರಾಜಪೇಟೆ, ಮಂಡ್ಯ

ವ್ಯಾಕರಣ ?!

ಸ್ವರಕ್ಕೆ ಸ್ವರ ಕೂಡಿದರೆ
ವ್ಯಾಕರಣದಲ್ಲಿ
ಸವರ್ಣದೀರ್ಘ ಸಂಧಿ,
ಗಂಟು ಪ್ಲಸ್ ನಂಟಿನೊಂದಿಗೆ
ಹೈಕಮಾಂಡ್ ಪರವಾದರೆ
ರಾಜಕಾರಣದಲ್ಲಿ
ಟಿಕೆಟ್ ಪಡೆಯಲು
ಸುವರ್ಣಮಾರ್ಗ ಸಂಧಿ!

ಮ.ಗು. ಬಸವಣ್ಣ
ನಂಜನಗೂಡು

ರೈಲಿನಲ್ಲಿ ಬೇಕು ನಿಲ್ದಾಣದ ಮಾಹಿತಿ

ಭಾರತೀಯ ರೈಲ್ವೆಯ ಪ್ಯಾಸೆಂಜರ್, ಎಕ್ಸ್‌ಪ್ರೆಸ್ ಮತ್ತು ಸೂಪರ್ ಫಾಸ್ಟ್ ರೈಲುಗಳಲ್ಲಿ ಪ್ರಯಾಣದ ಸಮಯದಲ್ಲಿ ನಿಲ್ದಾಣದ ವಿವರಗಳನ್ನು ಪ್ರಕಟಿಸುವ ವ್ಯವಸ್ಥೆ ಇಲ್ಲದಿರುವುದರಿಂದ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗಿದೆ. ಅದರಲ್ಲೂ ರಾತ್ರಿ ವೇಳೆಯಲ್ಲಿ ಪ್ರಯಾಣ ಮಾಡುವವರಿಗೆ ನಿಲ್ದಾಣದ ಮಾಹಿತಿಯನ್ನು ನೀಡುವುದು ಅತ್ಯಂತ ಅಗತ್ಯ. ಏಕೆಂದರೆ, ರಾತ್ರಿ ವೇಳೆಯಲ್ಲಿ ಮೊದಲೇ ನಿದ್ದೆಯ ಮಂಪರಿನಲ್ಲಿ ಇರುವಂತಹ ಪ್ರಯಾಣಿಕರು ತಮ್ಮದಲ್ಲದ ಯಾವುದೋ ನಿಲ್ದಾಣದಲ್ಲಿ ಇಳಿಯುವ ಸಾಧ್ಯತೆ ಇರುತ್ತದೆ.

ಈಗಾಗಲೇ ಮೆಟ್ರೊ ರೈಲು, ಬಿಎಂಟಿಸಿ ಬಸ್ಸುಗಳಲ್ಲಿ ನಿಲ್ದಾಣದ ವಿವರ ಪ್ರಕಟಿಸುವ ವ್ಯವಸ್ಥೆ ಇದೆ. ಭಾರತೀಯ ರೈಲ್ವೆ ಸಹ ಇಂತಹ ವ್ಯವಸ್ಥೆಯನ್ನು ಸಮರ್ಪಕವಾಗಿ ಜಾರಿಗೆ ತರಲಿ.

ಶಿವರಾಜು ಎ.ಆರ್., ಜೆಟ್ಟಿ ಅಗ್ರಹಾರ

ಸುಳ್ಳುಜಾತಿ ಪ್ರಮಾಣಪತ್ರ: ಕಠಿಣ ಶಿಕ್ಷೆಯಾಗಲಿ

ವ್ಯಕ್ತಿಯೊಬ್ಬರು ಪರಿಶಿಷ್ಟ ಜಾತಿಗೆ ಸೇರದೇ ಇದ್ದರೂ ಅದರ ಸುಳ್ಳುಜಾತಿ ಪ್ರಮಾಣಪತ್ರ ನೀಡಿ, ಕಾನ್‌ಸ್ಟೆಬಲ್ ಆಗಿ ಸರ್ಕಾರಿ ನೌಕರಿ ಮಾಡುತ್ತಿದ್ದು, ಇದನ್ನು ಗಂಭೀರವಾಗಿ ಪರಿಗಣಿಸಿದ ಬೆಂಗಳೂರು ನಗರ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯವು ಅವರಿಗೆ ಶಿಕ್ಷೆ ವಿಧಿಸಿರುವ ವಿಷಯ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವುದು ಗಮನಾರ್ಹ ಸಂಗತಿ. ಒಂದು ಕಾಲದಲ್ಲಿ, ಅಸ್ಪೃಶ್ಯರು ಎನಿಸಿಕೊಳ್ಳುವ ಪರಿಶಿಷ್ಟ ಜಾತಿಯವರನ್ನು ಮುಟ್ಟಿದರೆ ಹಾಗೂ ಅವರ ನೆರಳು ತಮ್ಮ ಮೇಲೆ ಬಿದ್ದರೆ ಅಪವಿತ್ರ ಹಾಗೂ ಅಪಚಾರವಾಗುತ್ತದೆ ಎಂದು ಮೇಲ್ವರ್ಗದವರು ತಿಳಿದುಕೊಂಡಿದ್ದರು. ಆದರೆ ಈಗ ಅವರೇ ಸರ್ಕಾರಿ ನೌಕರಿ ಪಡೆಯುವ ಉದ್ದೇಶದಿಂದ ಅಧಿಕಾರಿಗಳ ಕಣ್ಣಿಗೆ ಮಣ್ಣೆರಚಿಯೋ ಅಥವಾ ಹಣಬಲದಂತಹ ವಾಮಮಾರ್ಗಗಳಿಂದಲೋ ಪರಿಶಿಷ್ಟ ಜಾತಿಯ ಪ್ರಮಾಣಪತ್ರ ಪಡೆದು ಸರ್ಕಾರಿ ನೌಕರಿ ಗಿಟ್ಟಿಸಿಕೊಳ್ಳಲು ಬಯಸುತ್ತಿದ್ದಾರೆ. ಇಂಥವರಿಗೆ ಶಿಕ್ಷೆ ವಿಧಿಸುವುದು ಸ್ವಾಗತಾರ್ಹ.

ಈಗ ಪೊಲೀಸ್ ಇಲಾಖೆಯಲ್ಲಿ ಈ ಪ್ರಕರಣ ಬೆಳಕಿಗೆ ಬಂದಿದೆ. ಇನ್ನೂ ಬೇರೆ ಬೇರೆ ಇಲಾಖೆಗಳಲ್ಲಿ ಅದೆಷ್ಟೋ ವ್ಯಕ್ತಿಗಳು ಹೀಗೆ ಸರ್ಕಾರವನ್ನು ವಂಚಿಸಿ ನೌಕರಿ ಗಿಟ್ಟಿಸಿಕೊಂಡಿರುವ ಸಾಧ್ಯತೆ ಇರಬಹುದು. ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯವು ಈ ಬಗ್ಗೆ ಕೂಲಂಕಷವಾಗಿ ತನಿಖೆ ನಡೆಸಿ, ಇಂತಹ ಪ್ರಕರಣಗಳು ಭವಿಷ್ಯದಲ್ಲಿ ಮರುಕಳಿಸದಂತೆ ನೋಡಿಕೊಳ್ಳಬೇಕಾಗಿದೆ.

ಜಯವೀರ ಎ.ಕೆ., ಖೇಮಲಾಪುರ, ರಾಯಬಾಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕರ್ನಾಟಕದ ಕ್ರಿಕೆಟ್ ಕಿರೀಟಕ್ಕೆ

ರಣಜಿ ಟ್ರೋಫಿ



ಆ ಕಾಲದಲ್ಲಿ ಕ್ರಿಕೆಟ್ ಆಡುವವರು ಮತ್ತು ನೋಡುವವರಿಬ್ಬರಿಗೂ ಇದ್ದುದು ಒಂದೇ ಭಾವ– ಅದು ಪ್ರೀತಿಯಷ್ಟೇ. ಅಂತಹ ಕಾಲಘಟ್ಟದಲ್ಲಿ ಎರ್ರಪಳ್ಳಿ ಪ್ರಸನ್ನ ನಾಯಕತ್ವದ ತಂಡವು ಕರ್ನಾಟಕಕ್ಕೆ ಮೊಟ್ಟಮೊದಲ ರಣಜಿ ಟ್ರೋಫಿ ಗೆದ್ದುಕೊಟ್ಟ ಸಾಧನೆಗೆ ಈಗ ಚಿನ್ನದ ಸಂಭ್ರಮ. 1974 ಮಾರ್ಚ್ 23ರಿಂದ 27ರವರೆಗೆ ರಾಜಸ್ಥಾನದ ಎದುರು ಜೈಪುರದಲ್ಲಿ ನಡೆದ ಫೈನಲ್‌ನಲ್ಲಿ ತಂಡವು ಅಮೋಘ ಜಯ ಸಾಧಿಸಿತ್ತು. ಭಾರತ ತಂಡದಲ್ಲಿ ಆಡುತ್ತಿದ್ದ ಐವರು ಖ್ಯಾತನಾಮರೊಂದಿಗೆ ಇದ್ದ ಇನ್ನುಳಿದ ಪ್ರತಿಭಾವಂತರೂ ಈ ಜಯಕ್ಕೆ ತಮ್ಮದೇ ಆದ ಕಾಣಿಕೆ ನೀಡಿದ್ದರು. ಎಲ್ಲರೂ ತಂಡವಾಗಿ ಆಡಿದ ಫಲವಾಗಿ ಪ್ರಶಸ್ತಿ ದಕ್ಕಿತು.

ನಿರೂಪಣೆ: ಗಿರೀಶ ದೊಡ್ಡಮನಿ

ಜಯ–ವಿಜಯ ಜತೆಯಾಟ



ಆ ದಿನವನ್ನು ಮರೆಯಲಾಗದು. ಜೈಪುರದಲ್ಲಿ ರಣಜಿ ಟ್ರೋಫಿ ಜಯಿಸಿದ ನಂತರ ರೈಲಿನಲ್ಲಿ ದೀರ್ಘ ಪ್ರಯಾಣ ಮಾಡಿ ಬೆಂಗಳೂರು ರೈಲು ನಿಲ್ದಾಣಕ್ಕೆ ತಲುಪಿದಾಗ ಜನ ಕಿಕ್ಕಿರಿದು ಸೇರಿದ್ದರು. ಆ ಜನರ ನಡುವೆ ಇದ್ದ ನನ್ನ ಕುಟುಂಬದ ಸದಸ್ಯರನ್ನು ಭೇಟಿಯಾಗಲೂ ಸಾಧ್ಯವಾಗಲಿಲ್ಲ. ಮೇಯರ್ ನಾಗಣ್ಣ ಅವರು ಬಂದು ನಮ್ಮನ್ನು ಗೌರವಿಸಿದ್ದರು. ಕೆಎಸ್‌ಸಿಎ, ಮೈಸೂರು ಸೇರಿದಂತೆ ಹಲವೆಡೆ ಪಾರ್ಟಿಗಳು ಇದ್ದವು. ಮೂರು ದಿನಗಳ ನಂತರವೇ ಮನೆಯವರೊಂದಿಗೆ ಮಾತನಾಡಲು ಸಾಧ್ಯವಾಗಿದ್ದು.


ರಣಜಿ ಟ್ರೋಫಿ ಟೂರ್ನಿ ಶುರುವಾಗಿ ನಾಲ್ಕು ದಶಕಗಳ ನಂತರ ಮೊದಲ ಬಾರಿಗೆ ಜಯಿಸಿದ್ದ ಟ್ರೋಫಿ ಅದಾಗಿದ್ದರಿಂದ ಈ ರೀತಿಯ ಉತ್ಸವ ಮನೆ ಮಾಡಿತ್ತು. ಅಲ್ಲದೇ ಆ ಟೂರ್ನಿಯೂ ನಮಗೆ ವಿಶೇಷವಾದದ್ದು. ಎಲ್ಲಕ್ಕಿಂತ ಮುಖ್ಯವಾಗಿ ಸೆಮಿಫೈನಲ್‌ನಲ್ಲಿ ಬಲಾಢ್ಯ ಬಾಂಬೆ (ಮುಂಬೈ) ತಂಡವನ್ನು ಮಣಿಸಿದ್ದು ಮತ್ತು ಫೈನಲ್‌ನಲ್ಲಿ ರಾಜಸ್ಥಾನವನ್ನು ಮಣಿಸಿದ್ದು ಸಾಹಸಗಾಥೆಗಳೇ ಆಗಿವೆ.

ವೈಯಕ್ತಿಕವಾಗಿ ನನಗೆ ರಾಜಸ್ಥಾನ ಎದುರಿನ ಫೈನಲ್‌ನಲ್ಲಿ ಎರಡೂ ಇನಿಂಗ್ಸ್‌ಗಳಲ್ಲಿ ಅರ್ಧಶತಕ ಗಳಿಸಿದ್ದು ಹೆಮ್ಮೆಯ ಸಂಗತಿ. ಫೈನಲ್‌ಗೂ ಮುನ್ನ ರಾಜಸ್ಥಾನದ ಸ್ಪಿನ್ನರ್ ಸಲೀಂ ದುರಾನಿ ಅವರು ಗಾಯಗೊಂಡಿದ್ದರು. ಆದರೂ ಅವರನ್ನು ನಾಯಕ ಹನುಮಂತ್ ಸಿಂಗ್ ಅವರು ಆಡಿಸಿದರು. ಅಲ್ಲದೇ ವಿಶಿ (ಜಿ.ಆರ್.ವಿಶ್ವನಾಥ್) ಹಾಗೂ ಬ್ರಿಜೇಶ್ ವಿಕೆಟ್‌ಗಳನ್ನು ಗಳಿಸಿಕೊಡುವ ಹೊಣೆಯನ್ನೂ ಅವರಿಗೆ ನೀಡಿದ್ದರು. ಇಡೀ ಟೂರ್ನಿಯಲ್ಲಿ ವಿಶಿ ಮತ್ತು ಬ್ರಿಜೇಶ್ ಅವರಿಬ್ಬರೂ ಬೌಲರ್‌ಗಳಿಗೆ ಸಿಂಹಸ್ವಪ್ನರಾಗಿದ್ದರು. ದುರಾನಿ ಅವರು ವಿಶಿಯ ವಿಕೆಟ್ ಬೇಗನೆ ಗಳಿಸುವಲ್ಲಿ ಯಶಸ್ವಿಯಾಗಿದ್ದರು. ಬ್ರಿಜೇಶ್ ಅವರನ್ನೂ ಸಿ.ಜಿ. ಜೋಶಿ ಔಟ್ ಮಾಡಿದರು. ವಿ.ಎಸ್. ವಿಜಯಕುಮಾರ್ (66 ರನ್) ಅರ್ಧಶತಕ ಗಳಿಸಿದ್ದರು. ಆದರೂ ತಂಡವು 99 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿತ್ತು. ಆಗ ನಾನು ಮತ್ತು ವಿಜಯಕೃಷ್ಣ ಜೊತೆಯಾಟದಲ್ಲಿ 76 ರನ್ ಸೇರಿಸಿದೆವು. ಆಗ ಪ್ರಜಾವಾಣಿ ಪತ್ರಿಕೆಯಲ್ಲಿ 'ಜಯ–ವಿಜಯ ಜೊತೆಯಾಟ' ಎಂಬ ಶೀರ್ಷಿಕೆಯಲ್ಲಿ ವರದಿ ಬಂದಿತ್ತು. ಶಾಲೆಯ ದಿನಗಳಿಂದಲೂ ನಾನು–ವಿಜಯಕೃಷ್ಣ ಜೊತೆಯಾಗಿ ಕೂಡಿ, ಆಡಿ ಬೆಳೆದವರು. ತಂಡವು 256 ರನ್ ಗಳಿಸಿತು. ಆ ದಿನಗಳಲ್ಲಿ ಅತ್ಯಂತ ಬಲಿಷ್ಠ ಬೌಲಿಂಗ್ ವಿಭಾಗ ನಮ್ಮದಾಗಿತ್ತು. ವಿ.ಎಸ್. ವಿಜಯಕುಮಾರ್ (4ವಿಕೆಟ್), ಪ್ರಸನ್ನ (4) ಹಾಗೂ ಚಂದ್ರಾ (2) ಮಿಂಚಿದರು. ಇದರಿಂದಾಗಿ ರಾಜಸ್ಥಾನ ತಂಡವು ದೊಡ್ಡ ಹಿನ್ನಡೆ ಅನುಭವಿಸಿತು. ಆದರೆ ಎರಡನೇ ಇನಿಂಗ್ಸ್‌ನಲ್ಲಿ ಮರುಹೋರಾಟಕ್ಕೆ ನಿಂತ ಆತಿಥೇಯ ತಂಡದಬೌಲಿಂಗ್‌ಗೆ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಬೇಗನೇ ಔಟಾದರು. ಈ ಹಂತದಲ್ಲಿ ನಾನು ಮತ್ತು ಕಿರ್ಮಾನಿ ಸೇರಿ 114 ರನ್‌ಗಳ ಜೊತೆಯಾಟವಾಡಿದರು. ಇದರಿಂದಾಗಿ ರಾಜಸ್ಥಾನಕ್ಕೆ ದೊಡ್ಡ ಗೆಲುವಿನ ಗುರಿ (313 ರನ್) ನೀಡಿದೆವು.

ನಂತರ ಚಂದ್ರ ಮತ್ತು ಪ್ರಸನ್ನ ಜೋಡಿಯ ಸ್ಪಿನ್ ಮೋಡಿಯ ಮುಂದೆ ರಾಜಸ್ಥಾನದ ಬ್ಯಾಟರ್‌ಗಳ ಆಟ ನಡೆಯಲಿಲ್ಲ. ತಂಡದಲ್ಲಿ ಪರಸ್ಪರ ವಿಶ್ವಾಸ, ಪ್ರೀತಿ ಮತ್ತು ಹೊಂದಾಣಿಕೆಯ ಗುಣಗಳಿಗೆ ಅಂದು ಯಶಸ್ಸು ಒಲಿದಿತ್ತು. ಕಳೆದ ಐವತ್ತು ವರ್ಷಗಳಲ್ಲಿ ಕ್ರಿಕೆಟ್ ಬಹಳಷ್ಟು ಬದಲಾಗಿದೆ. ಆಗ ನಾವು ತಂಡಕ್ಕೆ ಆಡುತ್ತಿದ್ದೆವು. ಈಗ ದುಡ್ಡಿಗೆ ಮಹತ್ವ ಇದೆ. ಆಟಗಾರರಿಗೆ ಉತ್ತಮ ದುಡ್ಡು ಸಿಗುತ್ತಿದೆ. ನಾವು ಕೆಲವು ಬಾರಿ ₹10 ಸಂಭಾವನೆ ಪಡೆದದ್ದೂ ಇದೆ.

ಕರ್ನಾಟಕವು ಒಟ್ಟು ಮೂರು ಬಾರಿ ರಣಜಿ ಟ್ರೋಫಿ ಜಯಿಸಿದಾಗಲೂ ನಾನು ಆಡಿದ್ದೆ. ಅದು ತೃಪ್ತಿದಾಯಕ.

ಎ.ವಿ. ಜಯಪ್ರಕಾಶ್





1973– 74ನೇ ಸಾಲಿನ ರಣಜಿ ಟ್ರೋಫಿ ಚಾಂಪಿಯನ್ಸ್ ಕರ್ನಾಟಕ (ನಿಂತವರು ಎಡದಿಂದ) ಸಿದ್ದರಾಮ ಬಿ, ರಘುನಾಥ್; ಆರ್ ಸುಧಾಕರ್ ರಾವ್; ಕೆ. ಲಕ್ಷ್ಮಣ್; ಸಂಜಯ್ ದೇಸಾಯಿ, ಎ.ವಿ ಜಯಪ್ರಕಾಶ್; ಬ್ರಿಜೇಶ್ ಪಟೇಲ್; ವಿಜಯಪ್ರಕಾಶ್ ಮತ್ತು (ಕುಳಿತವರು) ಬಿ.ವಿಜಯಕೃಷ್ಣ, ಬಿ.ಎಸ್ ಚಂದ್ರಶೇಖರ್; ಸಿ ನಾಗರಾಜ್ (ಮ್ಯಾನೇಜರ್), ಇಎಎಸ್ ಪ್ರಸನ್ನ (ನಾಯಕ), ಜಿ.ಆರ್ ವಿಶ್ವನಾಥ್; ಸೈಯ್ಯದ್ ಕಿರ್ಮಾನಿ ಮತ್ತು ವಿ.ಎಸ್ ವಿಜಯಕುಮಾರ್ ಟ್ರೋಫಿಯೊಂದಿಗೆ

ಮುಂಬೈ ಓಟಕ್ಕೆ ಪ್ರಸನ್ನ ಕಡಿವಾಣ



ಸತತ 15 ವರ್ಷಗಳವರೆಗೆ ರಣಜಿ ಟ್ರೋಫಿ ಜಯಿಸಿದ್ದ ಬಾಂಬೆ (ಮುಂಬೈ) ತಂಡದ ಓಟಕ್ಕೆ ತಡೆ ಬಿದ್ದಿದ್ದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ. ಸುನಿಲ್ ಗಾವಸ್ಕರ್, ಅಜಿತ್ ವಾಡೇಕರ್, ಏಕನಾಥ್ ಸೋಲ್ಕರ್ ಅವರಂತಹ ಖ್ಯಾತನಾಮ ಆಟಗಾರರು ಇದ್ದ ತಂಡವನ್ನು ಸೋಲಿಸುವುದು ಹೇಗೆಂದು ತೋರಿಸಿಕೊಟ್ಟ ಶ್ರೇಯ ಎರ್ರಪಳ್ಳಿ ಪ್ರಸನ್ನ ಅವರ ಬಳಗಕ್ಕೇ ಸಲ್ಲಬೇಕು.

ಅದರಲ್ಲೂ ಗಾವಸ್ಕರ್ ಅವರನ್ನು ಔಟ್ ಮಾಡಿದ ಪ್ರಸನ್ನ ಅವರ 'ಮ್ಯಾಜಿಕ್ ಬಾಲ್' ಹಾಗೂ ಅಜಿತ್ ವಾಡೇಕರ್ ಅವರ ರನೌಟ್‌ಗೆ ಕಾರಣವಾದ ಸುಧಾಕರ್ ರಾವ್ ಅವರ ಫೀಲ್ಡಿಂಗ್ ಎಂದೆಂದಿಗೂ ನೆನಪಿನಲ್ಲಿ ಉಳಿಯುತ್ತವೆ. ಅಲ್ಲದೇ ಎರಡು ಜೊತೆಯಾಟಗಳು ಹಾಗೂ ಎರಡು ಶತಕಗಳೂ ಪ್ರಮುಖವಾಗಿವೆ.

2ನೇ ವಿಕೆಟ್ ಜೊತೆಯಾಟದಲ್ಲಿ ಜಿ. ಆರ್. ವಿಶ್ವನಾಥ್ (162) ಹಾಗೂ ಸಂಜಯ್ ದೇಸಾಯಿ 105 ರನ್ ಸೇರಿಸಿದರು. ಮೂರನೇ ವಿಕೆಟ್ ಪಾಲುದಾರಿಕೆಯಲ್ಲಿ ವಿಶ್ವನಾಥ್ ಮತ್ತು ಪಟೇಲ್ (106) ಅವರು 166 ರನ್‌ಗಳನ್ನು ಸೇರಿಸಿದರು. ಬಾಂಬೆ ತಂಡವು ಬಹಳ ಎಚ್ಚರಿಕೆಯಿಂದ ಇನಿಂಗ್ಸ್ ಆರಂಭಿಸಿತು. 30 ರನ್ ಗಳಿಸಿದ್ದ ಗಾವಸ್ಕರ್ ಅವರು, ಪ್ರಸನ್ನ ಎಸೆತದಲ್ಲಿ ಕ್ಲೀನ್ ಬೌಲ್ಡ್ ಆದರು. ಆ ಎಸೆತಕ್ಕೆ ಸ್ವತಃ ಗಾವಸ್ಕರ್ ಅವರೇ ಅಚ್ಚರಿಗೊಂಡಿದ್ದರು. ಈ ಎಸೆತವನ್ನು ಹೈದರಾಬಾದ್ ಆಫ್‌ಸ್ಪಿನ್ನರ್ ವೆಂಕಟರಾಮನ್ ರಾಮನಾರಾಯಣ ಅವರು, 'ಮ್ಯಾಜಿಕ್ ಬಾಲ್' ಎಂದು ಬಣ್ಣಿಸಿದ್ದರು. ಸ್ವತಃ ಗಾವಸ್ಕರ್ ಅವರೇ ಮೈದಾನದಿಂದ ಹೊರನಡೆಯುವಾಗ ತಮ್ಮ ಒಂದು ಕೈಯಿಂದ ಬ್ಯಾಟ್ ತಟ್ಟುತ್ತ (ಚಪ್ಪಾಳೆ) ಮೆಚ್ಚುಗೆ ವ್ಯಕ್ತಪಡಿಸಿದ್ದರಂತೆ. ಮೂರನೇ ವಿಕೆಟ್ ಜೊತೆಯಾಟದಲ್ಲಿ ವಾಡೇಕರ್ ಮತ್ತು ಮಂಕಡ್ 121 ರನ್ ಸೇರಿಸಿದ್ದರು. 62 ರನ್ ಗಳಿಸಿದ್ದ ವಾಡೇಕರ್ ಅವರನ್ನು ರನ್‌ಔಟ್ ಮಾಡುವಲ್ಲಿ ಸುಧಾಕರ್ ರಾವ್ ಚುರುಕುತನ ತೋರಿದ್ದು ಪಂದ್ಯಕ್ಕೆ ತಿರುವು ನೀಡಿತು. ಪ್ರಸನ್ನ ಅವರ ಇನ್ನೊಂದು ಓವರ್‌ನಲ್ಲಿ ಮಂಕಡ್ ಸ್ವೀಪ್ ಮಾಡಿದ ಚೆಂಡನ್ನು ಎ.ವಿ. ಜಯಪ್ರಕಾಶ್ ಕ್ಯಾಚ್ ಮಾಡಿದರು. ಮುಂಬೈ 307ಕ್ಕೆ ಎಲ್ಲ ವಿಕೆಟ್ ಕಳೆದುಕೊಂಡು ಇನಿಂಗ್ಸ್ ಹಿನ್ನಡೆ ಅನುಭವಿಸಿತು. ಪ್ರಸನ್ನ ಐದು ಮತ್ತು ಚಂದ್ರಶೇಖರ್ 4 ವಿಕೆಟ್ ಗಳಿಸಿದರು. ಎರಡನೇ ಇನಿಂಗ್ಸ್‌ನಲ್ಲಿ ಬ್ರಿಜೇಶ್ ಮತ್ತು ಸುಧಾಕರ್ ತಲಾ ಅರ್ಧಶತಕ ಗಳಿಸಿದರು. ಕರ್ನಾಟಕವು 8 ವಿಕೆಟ್‌ಗಳಿಗೆ 279 ರನ್ ಗಳಿಸಿತು. ಮುಂಬೈಗೆ 358 ರನ್‌ಗಳ ಕಠಿಣ ಗುರಿಯೊಡ್ಡಿತು. ವಿಕೆಟ್ ನಷ್ಟವಿಲ್ಲದೇ 84 ರನ್ ಗಳಿಸಿದ ಮುಂಬೈ ರಣಜಿ ಟೂರ್ನಿಯಿಂದ ಹೊರಬಿತ್ತು. ಪಂದ್ಯ ಡ್ರಾ ಆಯಿತು.

ಎಚ್.ಆರ್. ಗೋಪಾಲಕೃಷ್ಣ, (ಕ್ರಿಕೆಟ್ ಅಂಕಿಅಂಶ ತಜ್ಞರು)



ಅವಿಸ್ಮರಣೀಯ

ಸೆಮಿಫೈನಲ್‌ನಲ್ಲಿ ಪ್ರಸನ್ನ ಅವರದ್ದು ಗಾವಸ್ಕರ್ ಔಟ್ ಮಾಡಿದ ಎಸೆತವಷ್ಟೇ ಅಲ್ಲ. ಅವರ ಒಂದು ಸ್ಪೆಲ್ ಇಡೀ ಪಂದ್ಯವನ್ನೇ ಬದಲಿಸಿಬಿಟ್ಟಿತ್ತು. ಅದ್ಭುತ ನಾಯಕತ್ವ ಮತ್ತು ಅಮೋಘ ಬೌಲಿಂಗ್ ಅವರದ್ದು. ತಂಡವಾಗಿ ಆಡುವ ಗುಣ ಎಲ್ಲರಲ್ಲಿಯೂ ಇತ್ತು. ಹಣ, ಟಿವಿ ಪ್ರಸಾರ ಇರದ ದಿನಗಳು ಅವು. ರೈಲಿನಲ್ಲಿ ಪ್ರಯಾಣ ಮಾಡಬೇಕಿತ್ತು. ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ನನ್ನ ಆರಂಭದ ದಿನಗಳಾಗಿದ್ದವು. ದಿಗ್ಗಜ ಆಟಗಾರರೊಂದಿಗೆ ಆಡಿದ್ದು ಅವಿಸ್ಮರಣೀಯ.

ಸಂಜಯ್ ದೇಸಾಯಿ



'ಅದ್ವಿತೀಯ ತಂಡ'

50 ವರ್ಷಗಳು ಕಳೆದುಹೋಗಿದ್ದೇ ಗೊತ್ತಾಗಲಿಲ್ಲ. ನಾನು 12ನೇ ಆಟಗಾರನಾಗಿದ್ದೆ. ನಮ್ಮ ತಂಡದಲ್ಲಿದ್ದವರ ಪೈಕಿ ವಿಜಯಕೃಷ್ಣ, ವಿಜಯಕುಮಾರ್ ಹಾಗೂ ಕೆ. ಲಕ್ಷ್ಮಣ ನಮ್ಮೊಂದಿಗೆ ಇಲ್ಲ ಇವತ್ತು. ಬಳಗದಲ್ಲಿ ಐದು ಜನ ಭಾರತದ ಆಟಗಾರರು ತಂಡದಲ್ಲಿದ್ದರು. ಉಳಿದವರೂ ಪ್ರತಿಭಾವಂತರು. ಪಿಚ್ ನೋಡಲು ಯಾರೂ ಹೋಗುತ್ತಿರಲಿಲ್ಲ. ಮೂರು ಓವರ್ ಆದ್ರೆ, ಆಮೇಲೆ ಗೊತ್ತಾಗುತ್ತೆ ಪಿಚ್ ಹೇಗಿದೆ ಎಂದು ನಾಯಕ ಪ್ರಸನ್ನ ಹೇಳುತ್ತಿದ್ದರು. ಅವರವರ ಹೊಣೆಯನ್ನು ಎಲ್ಲರೂ ಅರಿತಿದ್ದರು. ಗುಂಟೂರು ಪಂದ್ಯ ಆಡಿದಾಗ ನನಗೆ ₹50 ಸಂಭಾವನೆ ಸಿಕ್ಕಿತ್ತು.

ಸಿದ್ಧರಾಮ



ಪ್ರಸನ್ನ ಎಸೆತ ಮರೆಯಲಾಗದು

ನಾನು 11ರ ಬಳಗದಲ್ಲಿ ಆಡಲಿಲ್ಲ. ಆದರೆ ಪ್ರಸನ್ನ ಅವರು ಸೆಮಿಫೈನಲ್‌ನಲ್ಲಿ ಗಾವಸ್ಕರ್ ಅವರನ್ನು ಔಟ್ ಮಾಡಿದ್ದು ಕಣ್ಣಿಗೆ ಕಟ್ಟಿದ ಹಾಗೆ ಇದೆ. ಅದೊಂದು ಅಮೋಘವಾದ ಎಸೆತ. ಬಾಂಬೆ ಮೇಲೆ ಗೆದ್ದಾಗ ಟ್ರೋಫಿ ಜಯಿಸಿದಷ್ಟೇ ಖುಷಿ. ನಾನು ಆಗಷ್ಟೇ ತಂಡದಲ್ಲಿ ಸ್ಥಾನ ಪಡೆದಿದ್ದೆ. ಎಂತಹ ದೊಡ್ಡ ಸಂಭ್ರಮಾಚರಣೆ ನಡೆದಿತ್ತು ಎಂದರೆ, ಹೇಳಲು ಪದಗಳು ಸಾಲದು ಅಂಥ ದೊಡ್ಡ ಸಾಧನೆ. ಫೈನಲ್‌ನಲ್ಲಿಯೂ ಅಷ್ಟೇ. ತಂಡವು ಅಮೋಘ ಆಟವಾಡಿತ್ತು.

ಎಸ್. ವಿಜಯಪ್ರಕಾಶ್(ಮೈಸೂರು)



ಅಜಿತ್ ರನೌಟ್

ನಾಯಕ ಪ್ರಸನ್ನ ಅವರು ನನ್ನನ್ನು ಪಾಯಿಂಟ್ ಬಳಿ ಫೀಲ್ಡಿಂಗ್‌ಗೆ ನಿಯೋಜಿಸಿದ್ದರು. ವಾಡೇಕರ್ ಮತ್ತು ಮಂಕಡ್ ಬ್ಯಾಟಿಂಗ್ ಮಾಡುತ್ತಿದ್ದರು. ಪಾಲುದಾರಿಕೆ ಬೆಳೆಯುತ್ತಲೇ ಇತ್ತು. ನಾವು ಒಂದು ಅವಕಾಶಕ್ಕಾಗಿ ಕಾಯುತ್ತಿದ್ದೆವು. ವಾಡೇಕರ್ ಒಂದು ರನ್ ಪಡೆಯಲು ಧಾವಿಸಿದರು. ಆ ಸಂದರ್ಭದಲ್ಲಿ ನಾನು ರಭಸದಿಂದ ಧಾವಿಸಿದೆ. ಚೆಂಡನ್ನು ತಡೆದು ಎತ್ತಿಕೊಂಡೆ. ವಾಡೇಕರ್ ರನ್‌ಔಟ್ ಮಾಡಲು ಕಾರಣನಾದೆ. ಪಂದ್ಯಕ್ಕೆ ತಿರುವು ನೀಡುವಲ್ಲಿ ಅದು ಪ್ರಮುಖವಾಯಿತೆಂಬುದೇ ಹೆಮ್ಮೆ.

ಸುಧಾಕರ್ ರಾವ್



ಜಯ ತಂದ ಪ್ರಗತಿ

ಆ ಟೂರ್ನಿಯ ಮೊದಲ ಪಂದ್ಯ ಕೇರಳದ ವಿರುದ್ಧ ನಡೆದಿತ್ತು. ಅದರಲ್ಲಿ ಆಡಿದ್ದೆ. ಟೈಫಾಯ್ಡ್ ಆಗಿದ್ದರಿಂದ ಫೈನಲ್‌ಗೆ ಹೋಗಲಿಲ್ಲ. ಆದರೆ ಆ ಟ್ರೋಫಿ ಜಯದಿಂದಾಗಿ ಕರ್ನಾಟಕ ಕ್ರಿಕೆಟ್ ಬಹಳ ದೊಡ್ಡ ಉನ್ನತಿ ಕಂಡಿತು. ವಯೋಮಿತಿಯ ಕ್ರಿಕೆಟ್ ಆರಂಭವಾಯಿತು. ರಾಜ್ಯದಲ್ಲಿ ದೊಡ್ಡ ದೊಡ್ಡ ಟರ್ಫ್ ಮೈದಾನಗಳು ನಿರ್ಮಾಣವಾಗಿವೆ. ಭಾರತ ತಂಡವನ್ನು ನಿರಂತರವಾಗಿ ರಾಜ್ಯದಿಂದ ಒಬ್ಬರಾದರೂ ಪ್ರತಿನಿಧಿಸುತ್ತಿದ್ದಾರೆ. ನಾನು ಆಯ್ಕೆಗಾರನಾಗಿ, ಕೋಚ್ ಆಗಿ ಸೇವೆ ಸಲ್ಲಿಸಿದೆ.

ಅರುಣಕುಮಾರ್



ಪಿಚ್‌ಗೆ ಕಾವಲು

ಆ ಟೂರ್ನಿಯ ಸೆಮಿಫೈನಲ್‌ನಲ್ಲಿ ಬಲಿಷ್ಠ ಮುಂಬೈ ತಂಡವನ್ನು ಸೋಲಿಸಿದ್ದ ಕರ್ನಾಟಕವು ರಣಜಿ ಟ್ರೋಫಿ ಗೆದ್ದೇ ಗೆಲ್ಲುತ್ತದೆಂಬ ವಿಶ್ವಾಸ ನಮ್ಮದಾಗಿತ್ತು. ನಾನು, ವಿ.ವೈ. ರಾಮನರಸಿಂಹ, ರಾಜಾರಾವ್, ಕುಮಾರಿ, ರಾಮಕೃಷ್ಣ ಹಾಗೂ ಶಂಕರ್ ಸೇರಿ ಜೈಪುರಕ್ಕೆ ಹೋಗಿದ್ದೆವು. ಪಂದ್ಯದ ಹಿಂದಿನ ದಿನ ಅಲ್ಲಿ ಗಾಳಿ ಜೋರಾಗಿತ್ತು. ಕ್ರೀಡಾಂಗಣದಲ್ಲಿ ಸಿದ್ಧವಾಗಿದ್ದ ಪಿಚ್ ಗುಣಮಟ್ಟವನ್ನು ಬದಲಿಸುವ ಅನುಮಾನ ಬಲವಾಗಿತ್ತು. ನಾವು ಇಡೀ ರಾತ್ರಿ ಮೈದಾನದಲ್ಲಿಯೇ ಕುಳಿತು ಪಿಚ್ ಕಾದಿದ್ದೆವು.

ಟಿ. ಸುರೇಶ್, ಅಭಿಮಾನಿ

ಸೋಲಿಸಬ್ಯಾಡ ಗೆಲಿಸಯ್ಯ...



ಬಹಿರಂಗದ ಕತ್ತಲೆ ಬೆಳಕಿನೊಂದಿಗೆ ಅಂತರಂಗದ ಮಬ್ಬು ಬೆಳಕಿನ ಸಂಘರ್ಷದ ಕಥನ 'ಲೈನ್‌ಮ್ಯಾನ್'. ಭಿನ್ನ ಆಲೋಚನೆ ಹಾಗೂ ಪ್ರಯತ್ನದ ಸಿನಿಮಾಗಳ ಪಟ್ಟಿಯಲ್ಲಿ ನಿಲ್ಲುವ ಈ ಸಿನಿಮಾ, ಮಾನವೀಯತೆಯ ಪರಿಧಿಯಲ್ಲಿ ಸಕಲ ಜೀವರಾಶಿಯೊಂದಿಗೆ ಪ್ರಕೃತಿಯೂ ಸೇರಿಕೊಳ್ಳಬೇಕಾದ ಅಗತ್ಯವನ್ನು ಪ್ರತಿಪಾದಿಸುತ್ತದೆ.

ನಾವೇ ಸೃಜಿಸಿಕೊಂಡ ಸವಲತ್ತುಗಳ ಗೈರುಹಾಜರಿ ನಮ್ಮನ್ನು ಯಾವೆಲ್ಲ ಬಗೆಯಲ್ಲಿ ಕ್ಷೋಭೆಗೊಳಮಾಡುತ್ತದೆ ಎನ್ನುವುದು ಸಿನಿಮಾದ ಕಥೆ. ಪಕ್ಷಿಯೊಂದರ ಮೊಟ್ಟೆಗಳನ್ನು ಉಳಿಸಿಕೊಳ್ಳುವ ಸವಾಲಿನಲ್ಲಿ ಊರು ಗೆಲ್ಲುತ್ತದೆಯೋ ಸೋಲುತ್ತದೆಯೋ ಎನ್ನುವ ಕೌತುಕದೊಂದಿಗೆ ಕಥೆ ಹಬ್ಬಿಕೊಳ್ಳುತ್ತದೆ. ಬಹಿರಂಗ ಕತ್ತಲಾದಾಗ ಅಂತರಂಗ ಬೆಳಕಾಗುವುದು ಸಹಜ. ಈ ಪ್ರಕೃತಿಸಹಜ ವಿದ್ಯಮಾನದಿಂದ ನಾವು ಎಷ್ಟು ದೂರ ಹೋಗಿದ್ದೇವೆ, ಅದರ ಪರಿಣಾಮಗಳೇನು ಎನ್ನುವುದನ್ನು ನೆನಪಿಸುತ್ತ, ಆತ್ಮಾವಲೋಕನಕ್ಕೆ ಒತ್ತಾಯಿಸುವಲ್ಲಿ ಸಿನಿಮಾದ ಗೆಲುವಿದೆ.

ಊರೊಂದರ ನೈತಿಕತೆಗೆ ಪ್ರಕೃತಿ ಒಡ್ಡಿದ ಸವಾಲನ್ನು ಅಲ್ಲಿನ ಜನ ಹೇಗೆ ನಿರ್ವಹಿಸುತ್ತಾರೆ ಎನ್ನುವುದು ಚಿತ್ರಕಥೆಯಲ್ಲಿರುವ ಕೌತುಕ. ತಾಯ್ತನದ ಆಯಾಮವೂ ಕಥೆಯಲ್ಲಿದೆ. ಊರಿಗೇ ತಾಯಿಯಂತಿರುವ, ಸಾವಿರಾರು ಹೆರಿಗೆಗಳನ್ನು ಮಾಡಿಸಿರುವ ಸೂಲಗಿತ್ತಿಯೊಬ್ಬಳ ನೂರನೇ ವರ್ಷದ ಹುಟ್ಟುಹಬ್ಬ ಊರಿನ ಸಂಭ್ರಮವಾಗುತ್ತದೆ. ಇನ್ನೊಂದು ಕಡೆಗೆ ಪಕ್ಷಿಯೊಂದರ ತಾಯ್ತನದ ಹಕ್ಕಿನ ಪ್ರಶ್ನೆಯಿದೆ. ತಾಯಿಯಾಗಲು ಪತ್ನಿಗೆ ಸಮಸ್ಯೆಯಿರುವುದನ್ನು ಮುಚ್ಚಿಟ್ಟು, ತನ್ನನ್ನೇ ದುರ್ಬಲನನ್ನಾಗಿ ಬಿಂಬಿಸಿಕೊಳ್ಳುವ ಗಂಡಿನೊಳಗೂ ತಾಯ್ತನವಿದೆ. ತಾಯ್ತನದ ಸಂಭ್ರಮ ಮತ್ತು ಸಂಘರ್ಷಗಳನ್ನು ಘನತೆಯಿಂದ ಕಟ್ಟಿಕೊಡುವ ನಿರ್ದೇಶಕರ ಪ್ರಯತ್ನ ಪ್ರಾಮಾಣಿಕವಾಗಿದೆ. ಸಮಸ್ಯೆಯಿರುವುದು ಕೆಲವು ಪಾತ್ರಗಳ ಪರಿಕಲ್ಪನೆಯಲ್ಲಿ. ಮನರಂಜನೆ ಹೆಸರಿನಲ್ಲಿ ರೂಪುಗೊಂಡಿರುವ ಈ ಪಾತ್ರಗಳು, ಸಿನಿಮಾದ ಗಾಂಭೀರ್ಯವನ್ನು ತೆಳುಮಾಡುವಂತಿವೆ. ಪರಿಸರ ಹೋರಾಟಗಾರ ಗುಬ್ಬಚ್ಚಿ ಲವರ್ ಪಾತ್ರಕ್ಕಂತೂ ಸ್ಪಷ್ಟ ತಾತ್ವಿಕತೆಯಿಲ್ಲದೆ, ಅವಕಾಶವಾದಿಯಂತೆ ವಿದೂಷಕನಂತೆ ಚಿತ್ರಣಗೊಂಡಿದೆ.

ಸೂಲಗಿತ್ತಿಯಾಗಿ ಬಿ. ಜಯಶ್ರೀ ಹಾಗೂ ಲೈನ್‌ಮ್ಯಾನ್ ಪಾತ್ರದಲ್ಲಿ ತ್ರಿಗುಣ್, ಹೆಂಡತಿಯನ್ನು ಪ್ರೀತಿಸುವ ಗಂಡನ ಪಾತ್ರದಲ್ಲಿ ಮೈಕೊ ನಾಗರಾಜ್ ಪಾತ್ರ ನಿರ್ವಹಣೆ ಸೊಗಸಾಗಿದೆ. ಮಣಿಕಾಂತ್ ಕದ್ರಿ ಸಂಗೀತ ಸಂಯೋಜನೆಯ ಗೀತೆಗಳು ಗಮನಸೆಳೆಯುವಂತಿದ್ದರೂ, ಹಿನ್ನೆಲೆ ಸಂಗೀತ ಅಬ್ಬರದಿಂದ ಕೂಡಿದೆ. ಜನಪದರ 'ಸಿದ್ದಯ್ಯ ಸ್ವಾಮಿ ಬನ್ನಿ...' ಗೀತೆಯನ್ನು ಊರಿನ ಚಿತ್ರಣ ಕಟ್ಟಿಕೊಡಲು ಬಳಸಿಕೊಂಡಿರುವ ಕ್ರಮ ಚೆನ್ನಾಗಿದೆ.

'ರನ್ ಆ್ಯಂಟನಿ' ಸಿನಿಮಾದಲ್ಲಿ ಪ್ರೇಮ ಹಾಗೂ ಮಾನವೀಯತೆಯೊಂದಿಗೆ ಭಯೋತ್ಪಾದನೆಯ ಮುಖಾಮುಖಿಯನ್ನು ಚಿತ್ರಿಸಿದ್ದ ರಘು ಶಾಸ್ತ್ರಿ ಅವರ ಭಿನ್ನ ಕಥನಗಳ ನಿರೂಪಣೆಯ ಹಂಬಲ 'ಲೈನ್‌ಮ್ಯಾನ್'ನಲ್ಲೂ ಸ್ಪಷ್ಟವಾಗಿದೆ. ಚಂದಕವಾಡಿ ಗ್ರಾಮದ ವಿದ್ಯುತ್ ಸ್ಥಾವರವನ್ನು ನಮ್ಮ ಎದೆಗೂಡನ್ನಾಗಿಸುವುದು ಅವರಿಗೆ ಸಾಧ್ಯವಾಗಿದೆ. ಚಿತ್ರಕಥೆಯನ್ನು ಮತ್ತಷ್ಟು ನೇರ್ಪುಗೊಳಿಸುವ ಸಂಯಮವನ್ನು ರೂಢಿಸಿಕೊಂಡಲ್ಲಿ ನಿರ್ದೇಶಕರು ಕನ್ನಡ ಚಿತ್ರರಂಗಕ್ಕೂ ಲೈನ್‌ಮ್ಯಾನ್ ಆಗಬಲ್ಲ ಸಾಧ್ಯತೆಯಿದೆ.

ಸಿನಿಮಾದ ಕೊನೆಯ ದೃಶ್ಯ ಕಾವ್ಯಾತ್ಮಕವಾಗಿದೆ. ಮೊಟ್ಟೆಯೊಂದಿಗೆ ಆಧುನಿಕತೆಯ ಹೆಸರಿನಲ್ಲಿ ನಮ್ಮ ಮನಸ್ಸು–ಯೋಚನೆಗಳಲ್ಲಿ ಮೈದಳೆದ ಮೊಟ್ಟೆಗಳೂ ಒಡೆದುಕೊಳ್ಳುತ್ತವೆ; ಕೋಶದಿಂದ ಹೊರಬರುವ ಮರಿಗಳು ಜೀವಕಾರುಣ್ಯದ ರೂಪಕಗಳಂತೆ ಕಾಣಿಸುತ್ತವೆ. ಇದೊಂದು ದೃಶ್ಯ ಸಾಕು, ಸಿನಿಮಾದ ಅರೆಕೊರೆಗಳನ್ನು ಸಹಿಸಿಕೊಳ್ಳಲು.

– ರಘುನಾಥ ಚ.ಹ.

ನಾವು ನೋಡಿದ ಸಿನಿಮಾ

ಲೈನ್‌ಮ್ಯಾನ್ (ಕನ್ನಡ)

- **ನಿರ್ದೇಶನ:** ರಘು ಶಾಸ್ತ್ರಿ
- **ನಿರ್ಮಾಣ:** ಪರ್ಪಲ್ ರಾಕ್ ಸಂಸ್ಥೆ
- **ತಾರಾಗಣ:** ತ್ರಿಗುಣ್, ಕಾಜಲ್ ಕುಂದರ್, ಬಿ.ಜಯಶ್ರೀ, ಮೈಕೊ ನಾಗರಾಜ್, ಹರಿಣಿ, ಕಮಲ ಮತ್ತಿತರರು

ಪದಬಂಧ 5629


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅನಿರೀಕ್ಷಿತ ಘಟನೆಯಿದು (4)
3.ನೀರು ಧುಮ್ಮಿಕ್ಕುವ ಸ್ಥಳ (4)
5.ಅಚ್ಚರಿ ಈ ರೀತಿ ಬಂದಿದೆ (3)
7.ತೂರಾಡಿದಾಗ ಮೆತ್ತಿದ ಕೆಸರು! (2)
8.ಆದರ ತೋರಿ ಹೇಳಿದ ಬೆಲೆ (2)
10.ಲಿಖಿತ ಮೂಲಕ ಮಾಡಿಕೊಳ್ಳುವ ಅರಿಕೆ(3)
11.ಐಶ್ವರ್ಯ ಇಲ್ಲಿದೆ (3)
13.ಪುಢಾರಿ ಜೊತೆಯಲ್ಲಿರುವ ಶತ್ರು (2)
15.ಪ್ರೀತಿಪಾತ್ರ ಸ್ನೇಹಿತ (2)
16.ಆನೆಯನ್ನು ಹತೋಟಿಯಲ್ಲಿಡಲು ಬಳಸುವ ಸಾಧನ (3)
18.ಗಳಿಕೆ ಕೊನೆಗಿದ್ದರೂ ಇದು ನಿಂದೆ! (4)
19.ಈತ ಸೂರ್ಯನ ಮಗ (4)

ಮೇಲಿಂದ ಕೆಳಕ್ಕೆ

1.ಭಾರತೀಯ ವೈದ್ಯಶಾಸ್ತ್ರ (4)
2.ಕವಿತೆ ಬರೆಯುವವನು (2)
3.ಯಜಮಾನನಿಗೆ ದೊರೆತಿರುವ ಗೆಲುವು (2)
4.ವಸ್ತುಗಳನ್ನು ತೂಗುವ ಸಾಧನ (3)
6.ಇದು ಸುಡುಗಾಡು (3)
7.ಬೇರೊಂದು ದೇಶಕ್ಕೆ ಕಳಿಸುವ ರಾಜಪ್ರತಿನಿಧಿ (4)
9.ತಾಪತ್ರಯದಲ್ಲೇ ಹಾಕಿದ ಪುಸ್ತಕದ ಮೇಲುಹೊದಿಕೆ (4)
12.ತಪರಾಕು ಸಿಕ್ಕ ಮೇಲೆ ಈ ಹೊಗಳಿಕೆ!(3)
14.ಪುರಕ್ಕೆ ಬಂದಿರುವವನು ಗೌರವಿಸಲ್ಪಟ್ಟ ವ್ಯಕ್ತಿ (4)
15.ಶಿವನ ಕುದುರೆ ಇಲ್ಲಿ ಹಾರಿ ಬಂದಿದೆ (3)
16.ಹತೋಟಿಯನ್ನು ಹೀಗೆನ್ನಿ (2)
17.ಶರಧಿಯಲ್ಲಿ ಬಿದ್ದಿರುವ ಬಾಣ (2)



5628ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಸ್ತಿಭಾರ 3.ಅಭಿಜಾತ
5.ಅನಾದಿ 7.ಪಲ್ಲವಿ
9.ಮರುಕ
10.ಲೋಕಕಲ್ಯಾಣ 11.ಗುಲಾಮ
12.ಕಡಸು 14.ಬಣವೆ
16.ಹಿಮಾನಿಲ 17.ಅನುಲೇಪ

ಮೇಲಿಂದ ಕೆಳಕ್ಕೆ:
1.ಅಪರೂಪ 2.ಭಾಜ್ಯ
4.ತಲೆಹೋಕ 6.ನಾಮಕರಣ
8.ವಿಲೋಮ 9.ಮಣಕ
11.ಗುಣಾಗ್ರಹಿ 13.ಸುರಚಾಪ
15.ಹೇನು

ಸುಡೊಕು 6014

		5	6		2			3
	3	1			4	6		
6				1			5	9
	8	3		6				4
1				4				8
2			8		1	5	6	
					3			
4		2		9			3	1
	1		4		6		7	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6013 ಸುಡೊಕು

8	7	6	1	4	9	3	2	5
1	3	4	5	2	7	8	6	9
5	9	2	6	3	8	7	4	1
2	1	5	9	7	3	6	8	4
6	4	7	8	1	2	9	5	3
3	8	9	4	5	6	1	7	2
9	2	8	3	6	5	4	1	7
7	6	1	2	9	4	5	3	8
4	5	3	7	8	1	2	9	6

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಮಾರ್ಚ್ 23, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ತ್ರಯೋದಶಿ ಗಂ. 07-18 **ನಕ್ಷತ್ರ:** ಪೂರ್ವಫಲ್ಗುನಿ **ಅಹೋರಾತ್ರ ಯೋಗ:** ಶೂಲ ಗಂ. 19-34 **ಕರಣ:** ತೈತಿಲ ಗಂ. 07-18, ಮೀನ ಮಾಸದ 09 ನೇ ದಿನ, **ಮಳೆನಕ್ಷತ್ರ:** ಉತ್ತರಾಭಾದ್ರ 2.
ರಾಹುಕಾಲ : ಬೆಳಿಗ್ಗೆ 09-00 - 10-30
ಸೂರ್ಯೋದಯ : 06-36 ಸೂರ್ಯಾಸ್ತ : 06-38
ಮುಸ್ಲಿಂ ದಿನಾಂಕ : 12 ರಂಜಾನ್
ಅದೃಷ್ಟ ಸಂಖ್ಯೆ : 8, 12

ಮೇಷ: ಇಂದು ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಹೆಣಗಾಡಬೇಕಾಗಬಹುದು. ಕಾರ್ಯವು ನಿರ್ವಿಘ್ನವಾಗಿ ನೆರವೇರಲು ವಿಘ್ನೇಶ್ವರನ ಸ್ತೋತ್ರ ಪಠಿಸಿ. ಪಾದರಕ್ಷೆಯ ಮಾರಟಗಾರರಿಗೆ ಲಾಭ.

ವೃಷಭ: ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯಕವಾಗುತ್ತದೆ. ಹೂವು ಮತ್ತು ಹಣ್ಣಿನ ಬೆಳೆಗಾರರಿಗೆ, ವ್ಯಾಪಾರಿಗಳಿಗೆ ಹೆಚ್ಚಿನ ಲಾಭ ದೊರೆಯುತ್ತದೆ. ಹಣ್ಣು–ತರಕಾರಿ ವ್ಯಾಪಾರದಿಂದ ಬಹಳಷ್ಟು ಲಾಭ ಇರಲಿದೆ.

ಮಿಥುನ: ಇತರರಿಗಿಂತ ಭಿನ್ನವಾದ ಹಾಗೂ ಧನಾತ್ಮಕವಾದ ನಿರ್ಧಾರವನ್ನು ತಗೆದುಕೊಳ್ಳುವಿರಿ. ಉದ್ಯೋಗದಲ್ಲಿ ಅನಿರೀಕ್ಷಿತ ಲಾಭ ಅಥವಾ ಬಡ್ತಿ ಇರುವುದು. ಅವಿವಾಹಿತರಿಗೆ ವಿವಾಹ ಯೋಗವು ಕೂಡಿ ಬರುವುದು.

ಕರ್ಕಾಟಕ: ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ ಆಸಕ್ತಿಯಿಂದ ಯಶಸ್ಸು ಪಡೆಯುವಿರಿ. ವೃತ್ತಿ ಜೀವನ ಹಾಗೂ ದಿನಚರಿಯು ಎಂದಿನಂತೆ ವ್ಯವಸ್ಥಿತವಾಗಿರುವುದು. ಸಾಮಾಜಿಕ ಬದುಕಿನಲ್ಲಿ ಹೊಸ ಹುರುಪು ಕಾಣಲಿದ್ದೀರಿ.

ಸಿಂಹ: ದುರಹಂಕಾರ ವ್ಯಕ್ತಪಡಿಸಿದಲ್ಲಿ ತೊಂದರೆಗೆ ಸಿಲುಕುವ ಸಂಭವವಿದೆ. ಮನೆಯವರೊಂದಿಗೆ ಸಣ್ಣ ವಿಹಾರವು ಸಂತಸ ತರುವುದು. ಗುಂಪು ಚಟುವಟಿಕೆಗಳಿಗೆ ಮುಂದಾಳತ್ವ ಅಗತ್ಯವಾಗಿರುವುದು.

ಕನ್ಯಾ: ಸಾಲದ ರೂಪದಲ್ಲಿ ಸ್ನೇಹಿತರಿಗೆ ನೀಡಿದ ಹಣವು ಇನ್ನೊಬ್ಬ ಸ್ನೇಹಿತನ ನೆರವಿನಿಂದ ಹಿಂದಿರುಗಲಿದೆ. ವೃತ್ತಿರಂಗದಲ್ಲಿ ನೂತನ ಸ್ಥಾನಮಾನ ದೊರೆತು ಸಂತಸವಾಗುತ್ತದೆ. ಆನಂದವನ್ನು ಹೆಚ್ಚಿಸುತ್ತದೆ.

ತುಲಾ : ಉದ್ಯಮಿ ಹಾಗೂ ಅಧಿಕಾರಿಗಳಿಗೆ ಎಲ್ಲವೂ ಅವರ ನಿಯಂತ್ರಣಕ್ಕೆ ಸಿಗುವುದರಿಂದ ನೆಮ್ಮದಿ ಉಂಟಾಗುತ್ತದೆ. ಗಂಡನ ಹಣಕಾಸಿನ ಪರಿಸ್ಥಿತಿಗೆ ಹೆಂಡತಿಯು ಸಹಕರಿಸಿದರೆ ಕುಟುಂಬದ ಗೌರವವನ್ನು ಕಾಪಾಡಬಹುದು.

ವೃಶ್ಚಿಕ: ಧನಾಗಮನಕ್ಕೆ ಹಲವು ರೀತಿಯ ಅವಕಾಶಗಳಿದ್ದರೂ ಕಠಿಣ ಪರಿಶ್ರಮ ಮತ್ತು ಬುದ್ಧಿವಂತಿಕೆ, ಆತ್ಮವಿಶ್ವಾಸದ ಅಗತ್ಯವಿರುತ್ತದೆ. ವಿಶೇಷವಾಗಿ ಹಣಕಾಸಿನ ವಿಚಾರದಲ್ಲಿ ಎಚ್ಚರಿಕೆಯಿಂದ ಇರಿ.

ಧನು: ಆಸ್ತಿಯ ಬಗ್ಗೆ ಯೋಚಿಸದೇ, ಶ್ರಮದಿಂದ ದುಡಿಯುವ ಬಗ್ಗೆ ಗಮನಹರಿಸಿ. ವ್ಯಾಪಾರ ಹಾಗೂ ವಾಣಿಜ್ಯೋದ್ಯಮ ವ್ಯವಹಾರಗಳಿಗೆ ಇದು ಒಳ್ಳೆಯ ದಿನ. ಬರಹಗಾರರಿಗೆ ಉತ್ತೇಜನದ ಕೊರತೆ ಕಾಡಲಿದೆ.

ಮಕರ: ಕೆಲಸ ಕಾರ್ಯಗಳಲ್ಲಿ ಕಷ್ಟ-ನಷ್ಟಗಳು ಎದುರಾಗಬಹುದು, ಹಾಗೆಂದು ಕರ್ತವ್ಯವನ್ನು ನಿರ್ಲಕ್ಷಿಸಬೇಡಿ. ಹಿಮ್ಮುಖ ಚಲನೆಯೂ ಸರಿಯಲ್ಲ. ಬದುಕನ್ನು ವ್ಯವಸ್ಥೆಗೆ ತರಲು ಮಾರ್ಗದರ್ಶಕರ ಸಲಹೆಯನ್ನು ಪಡೆಯಿರಿ.

ಕುಂಭ: ಮನಸ್ಸಿನ ಚಂಚಲ ಸ್ವಭಾವದಿಂದ ಇಂದಿನ ಕಾರ್ಯದಲ್ಲಿ ವಿಫಲರಾಗುವ ಸನ್ನಿವೇಶಗಳಿರುವುದು. ಮದುವೆಯಂಥ ಶುಭ ಸಮಾರಂಭ ನಡೆಯುವ ಸಾಧ್ಯತೆಗಳಿವೆ. ಸಂಸಾರದಲ್ಲಿ ನೆಮ್ಮದಿಯ ಜೀವನವಿರುವುದು.

ಮೀನ: ವೈದ್ಯರ ಸಲಹೆಯಂತೆ ದೇಹಾರೋಗ್ಯಕ್ಕಾಗಿ ಆಹಾರ ಸೇವನೆಯಲ್ಲಿ ಕೆಲವು ನಿರ್ಬಂಧಗಳನ್ನು, ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗಬಹುದು. ನಿರೀಕ್ಷೆಗೆ ತಕ್ಕ ಪ್ರತಿಕ್ರಿಯೆಯಿಂದ ಮಾನಸಿಕ ನೆಮ್ಮದಿ ಉಂಟಾಗುತ್ತದೆ.

ಹನುಮಂತಯ್ಯ, ರಕ್ಷಾ, ಬೋಸ್, ತುಕಾರಾಂ ಕಣಕ್ಕಿಳಿಸಲು ನಿರ್ಧಾರ: ಪ್ರಕಟಣೆಯಷ್ಟೇ ಬಾಕಿ

ಕಾಂಗ್ರೆಸ್ ಪಟ್ಟಿ ಬಹುತೇಕ ಅಂತಿಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲವು ಸುತ್ತಿನ ಚರ್ಚೆಗಳ ಬಳಿಕ ಅಳೆದು–ತೂಗಿ ಬಾಕಿ ಉಳಿದಿದ್ದ ನಾಲ್ಕು ಲೋಕಸಭಾ ಕ್ಷೇತ್ರಗಳಿಗೂ ಅಭ್ಯರ್ಥಿಗಳನ್ನು ಅಂತಿಮಗೊಳಿಸುವಲ್ಲಿ ಕಾಂಗ್ರೆಸ್ ನಾಯಕರು ಯಶಸ್ವಿಯಾಗಿದ್ದಾರೆ. ಕೋಲಾರದಿಂದ ಎಲ್. ಹನುಮಂತಯ್ಯ, ಚಿಕ್ಕಬಳ್ಳಾಪುರದಿಂದ ರಕ್ಷಾ ರಾಮಯ್ಯ, ಚಾಮರಾಜನಗರದಿಂದ ಸುನಿಲ್ ಬೋಸ್ ಮತ್ತು ಬಳ್ಳಾರಿಯಿಂದ ಶಾಸಕ ಇ. ತುಕಾರಾಂ ಅವರನ್ನು ಕಣಕ್ಕಿಳಿಸುವ ನಿರ್ಧಾರಕ್ಕೆ 'ಕೈ' ವರಿಷ್ಠರು ಬಂದಿದ್ದಾರೆ.

ಎರಡು ಹಂತಗಳಲ್ಲಿ 24 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿರುವ ಕಾಂಗ್ರೆಸ್, ನಾಲ್ಕು ಕ್ಷೇತ್ರಗಳನ್ನಷ್ಟೇ ಬಾಕಿ ಇರಿಸಿಕೊಂಡಿದೆ. ರಾಜ್ಯ ಕಾಂಗ್ರೆಸ್ ಉಸ್ತುವಾರಿಯಾಗಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ನಾಲ್ಕೂ ಕ್ಷೇತ್ರಗಳ ಟಿಕೆಟ್ ಆಕಾಂಕ್ಷಿಗಳು, ಶಾಸಕರು ಮತ್ತು ಪ್ರಮುಖ ಮುಖಂಡರ ಜತೆ ಶುಕ್ರವಾರ ಸಭೆ ನಡೆಸಿದರು. ಎಲ್ಲರ ಮನವೊಲಿಸಿ ಅಭ್ಯರ್ಥಿಗಳ ಹೆಸರುಗಳನ್ನು ಅಂತಿಮಗೊಳಿಸಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

'ನಾಲ್ಕೂ ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆಯನ್ನು ಅಂತಿಮಗೊಳಿಸಲಾಗಿದೆ. ಆದರೆ, ಕಾಂಗ್ರೆಸ್‌ನ ಕೇಂದ್ರ ಚುನಾವಣಾ ಸಮಿತಿ (ಸಿಇಸಿ) ಸಭೆ ಇದೇ 25ಕ್ಕೆ ನಿಗದಿಯಾಗಿದ್ದು, ಅಲ್ಲಿ ಅನುಮೋದನೆಯಾದ ಬಳಿಕವೇ ಅಧಿಕೃತವಾಗಿ ಪ್ರಕಟಿಸಬೇಕಿದೆ' ಎಂದು ಮೂಲಗಳು ಹೇಳಿವೆ.

ಕೋಲಾರ ಲೋಕಸಭಾ ಕ್ಷೇತ್ರದಲ್ಲಿ ರಾಜ್ಯಸಭೆಯ ಮಾಜಿ ಸದಸ್ಯ ಎಲ್. ಹನುಮಂತಯ್ಯ, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ ಅವರ ಅಳಿಯ ಕೆ.ಜಿ. ಚಿಕ್ಕಪೆದ್ದಣ್ಣ (ಹಿರಿಯ ಉಪ ನೋಂದಣಾಧಿಕಾರಿ) ಮತ್ತು ಮಗ ನರಸಿಂಹರಾಜು ಪ್ರಬಲ ಆಕಾಂಕ್ಷಿಗಳು. ದಲಿತ ಚಳವಳಿಯ ಮುಖಂಡ ಸಿ.ಎಂ. ಮುನಿಯಪ್ಪ ಕೂಡ ಟಿಕೆಟ್ ಬಯಸಿದ್ದರು. ಕೊನೆಯ ಹಂತದಲ್ಲಿ ಅಳಿಯ ಚಿಕ್ಕಪೆದ್ದಣ್ಣ ಅವರನ್ನೇ ಕಣಕ್ಕಿಳಿಸುವಂತೆ ಮುನಿಯಪ್ಪ ಪಟ್ಟು ಹಿಡಿದಿದ್ದರು.

ವರಿಷ್ಠರ ಮಧ್ಯ ಪ್ರವೇಶದ ಬಳಿಕ ಮುನಿಯಪ್ಪ ಪಟ್ಟು ಸಡಿಲಿಸಿದ್ದಾರೆ. ಹನುಮಂತಯ್ಯ ಅವರ ಸ್ಪರ್ಧೆಗೆ ಬೆಂಬಲ ಸೂಚಿಸಿದ್ದಾರೆ. ಹನುಮಂತಯ್ಯ ಅವರನ್ನು ಗೆಲುವಿನ ದಡ ಮುಟ್ಟಿಸುವ ಹೊಣೆಯನ್ನು ಮುನಿಯಪ್ಪ ಅವರಿಗೇ ವಹಿಸಲಾಗಿದೆ ಎಂದು ಮುಖಂಡರೊಬ್ಬರು ತಿಳಿಸಿದರು.

ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ಯುವ ಕಾಂಗ್ರೆಸ್ ಮುಖಂಡ ರಕ್ಷಾ ರಾಮಯ್ಯ, ಮಾಜಿ ಸಂಸದ ಎಂ. ವೀರಪ್ಪ ಮೊಯಿಲಿ ಮತ್ತು ಮಾಜಿ ಶಾಸಕ ಎಚ್.ಎನ್. ಶಿವಶಂಕರ ರೆಡ್ಡಿ ಟಿಕೆಟ್ ಬಯಸಿದ್ದರು. ರಕ್ಷಾ ಮತ್ತು ಶಿವಶಂಕರ ರೆಡ್ಡಿ ಮಧ್ಯೆ ತೀವ್ರ ಹಣಾಹಣಿ ಇತ್ತು. ಎಲ್ಲರ ಮಧ್ಯೆ ಸಹಮತ ಮೂಡಿಸಿದ ಬಳಿಕ ರಕ್ಷಾ ಅವರನ್ನು ಕಣಕ್ಕಿಳಿಸುವ ನಿರ್ಧಾರಕ್ಕೆ ಬರಲಾಗಿದೆ ಎಂದು ಗೊತ್ತಾಗಿದೆ.

ಸಚಿವರ ಪುತ್ರ ಕಣಕ್ಕೆ: ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅವರನ್ನು ಕಣಕ್ಕಿಳಿಸುವ ಇರಾದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಪಕ್ಷದ ನಾಯಕರಿಗೆ ಇತ್ತು. ಆದರೆ, ಮಗ ಸುನಿಲ್ ಬೋಸ್ ಅವರಿಗೆ ಟಿಕೆಟ್ ನೀಡುವಂತೆ ಮಹದೇವಪ್ಪ ಪಟ್ಟುಹಿಡಿದಿದ್ದರು. ಸುನಿಲ್ ಬೋಸ್ ಸ್ಪರ್ಧೆಗೆ ಕ್ಷೇತ್ರ ವ್ಯಾಪ್ತಿಯ ಶಾಸಕರ ತೀವ್ರ ವಿರೋಧವೂ ಇತ್ತು. ಮಾಜಿ ಶಾಸಕ ಜಿ.ಎನ್. ನಂಜುಂಡಸ್ವಾಮಿ ಪ್ರಬಲ ಆಕಾಂಕ್ಷಿಯಾಗಿದ್ದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಬೆಂಬಲದಿಂದ ಟಿಕೆಟ್ ಪಡೆಯುವ ಪ್ರಯತ್ನ ನಡೆಸಿದ್ದರು.

'ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಏಳು ಶಾಸಕರಿದ್ದಾರೆ. ಎಲ್ಲರೂ ಸುನೀಲ್ ಬೋಸ್ ಸ್ಪರ್ಧೆಗೆ ಶುಕ್ರವಾರದ ಸಭೆಯಲ್ಲಿ ಬೆಂಬಲ ಸೂಚಿಸಿದರು. ಅವರನ್ನೇ ಕಣಕ್ಕಿಳಿಸುವ ನಿರ್ಧಾರವನ್ನು ಕೈಗೊಳ್ಳಲಾಗಿದೆ' ಎಂದು ಮೂಲಗಳು ತಿಳಿಸಿವೆ.


ಹನುಮಂತಯ್ಯ
ರಾಜ್ಯಸಭೆ ಮಾಜಿ ಸದಸ್ಯ


ಸುನಿಲ್ ಬೋಸ್
ಸಚಿವ ಎಚ್.ಸಿ. ಮಹದೇವಪ್ಪ ಮಗ


ರಕ್ಷಾರಾಮಯ್ಯ
ವಿಧಾನಪರಿಷತ್ತಿನ ಸದಸ್ಯ ಎಂ.ಆರ್. ಸೀತಾರಾಂ ಮಗ


ಇ. ತುಕಾರಾಂ
ಶಾಸಕ

ಪುತ್ರಿ ಬದಲು ಅಪ್ಪನೇ ಅಭ್ಯರ್ಥಿ

ಬಳ್ಳಾರಿ ಲೋಕಸಭಾ ಕ್ಷೇತ್ರದಲ್ಲಿ ತಮ್ಮ ಮಗಳು ಚೈತನ್ಯಾ (ಸೌಪರ್ಣಿಕಾ) ತುಕಾರಾಂ ಅವರಿಗೆ ಟಿಕೆಟ್ ಬಯಸಿದ್ದ ಸಂಡೂರು ಶಾಸಕ ಇ. ತುಕಾರಾಂ ಅವರನ್ನೇ ಕಣಕ್ಕಿಳಿಸಲು ಕಾಂಗ್ರೆಸ್ ವರಿಷ್ಠರು ನಿರ್ಧರಿಸಿದ್ದಾರೆ.

ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಮತ್ತು ಸಚಿವ ಬಿ. ನಾಗೇಂದ್ರ ಅವರ ಅಣ್ಣ ವೆಂಕಟೇಶ್ ಪ್ರಸಾದ್ ಕೂಡ ಟಿಕೆಟ್ ಆಕಾಂಕ್ಷಿಗಳಾಗಿದ್ದರು. ತುಕಾರಾಂ ಅಥವಾ ನಾಗೇಂದ್ರ ಅವರನ್ನೇ ಕಣಕ್ಕಿಳಿಸುವ ಯೋಚನೆ ಪಕ್ಷದ ವರಿಷ್ಠರಲ್ಲಿತ್ತು.

ಚಿತ್ರದುರ್ಗಕ್ಕೆ ಕಾರಜೋಳ ಬಿಜೆಪಿ ಅಭ್ಯರ್ಥಿ?

ಪ್ರಜಾವಾಣಿ ವಾರ್ತೆ



ನವದೆಹಲಿ: ಚಿತ್ರದುರ್ಗ (ಮೀಸಲು) ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿಯು ಮಾಜಿ ಸಚಿವ ಗೋವಿಂದ ಕಾರಜೋಳ ಅವರನ್ನು ಕಣಕ್ಕಿಳಿಸುವ ಸಂಭವವಿದೆ. ಕ್ಷೇತ್ರದ ಸಂಸದರಾಗಿರುವ ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಅವರಿಗೆ ಟಿಕೆಟ್ ನೀಡಲು ವರಿಷ್ಠರಿಗೆ ಒಲವಿಲ್ಲ.

ಕ್ಷೇತ್ರದಲ್ಲಿ ನಾರಾಯಣಸ್ವಾಮಿ ಅವರಿಗೆ ಆಡಳಿತ ವಿರೋಧಿ ಅಲೆ ತೀವ್ರವಾಗಿದೆ. ಕ್ಷೇತ್ರದಲ್ಲಿ ಅಚ್ಚರಿಯ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಕಮಲ ಪಾಳಯ ಯೋಜಿಸಿತ್ತು. ಈ ಸಂಬಂಧ ಮಾದಾರ ಚನ್ನಯ್ಯ ಸ್ವಾಮೀಜಿ ಅವರನ್ನು ಸಂಪರ್ಕಿಸಿತ್ತು. ಆದರೆ, ಅವರು ಚುನಾವಣಾ ರಾಜಕಾರಣಕ್ಕೆ ಬರಲು ನಿರಾಕರಿಸಿದ್ದರು.

ಪಕ್ಷದ ಪರವಾಗಿ ರಾಜ್ಯದಾದ್ಯಂತ ಚುನಾವಣಾ ಪ್ರಚಾರದಲ್ಲಿ ತೊಡಗುವಂತೆ ನಾರಾಯಣಸ್ವಾಮಿ ಅವರಿಗೆ ಸೂಚಿಸಲಾಗಿದೆ. 2028ರ ವಿಧಾನಸಭಾ ಚುನಾವಣೆಯಲ್ಲಿ ಆನೇಕಲ್ ಕ್ಷೇತ್ರದ ಟಿಕೆಟ್ ನೀಡುವುದಾಗಿ ವರಿಷ್ಠರು ವಾಗ್ದಾನ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಾಗಲಕೋಟೆ ಜಿಲ್ಲೆಯವರಾದ ಕಾರಜೋಳ, ಪರಿಶಿಷ್ಟ ಜಾತಿಯ ಎಡಗೈ ಪಂಗಡಕ್ಕೆ ಸೇರಿದವರು. ಕಳೆದ ವರ್ಷ ನಡೆದ ವಿಧಾನಸಭಾ ಚುನಾವಣೆಯಲ್ಲಿ ಅವರು ಸೋತಿದ್ದರು. ಬಿ.ಎಸ್.ಯಡಿಯೂರಪ್ಪ ಸರ್ಕಾರದಲ್ಲಿ ಅವರು ಉಪಮುಖ್ಯಮಂತ್ರಿಯಾಗಿದ್ದರು.

ಚಿತ್ರದುರ್ಗ ಕ್ಷೇತ್ರಕ್ಕೆ ಮಾಜಿ ಸಂಸದ ಬಿ.ಎನ್.ಚಂದ್ರಪ್ಪ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ. ಚಿತ್ರದುರ್ಗ, ಉತ್ತರ ಕನ್ನಡ, ರಾಯಚೂರು, ಬೆಳಗಾವಿ ಹಾಗೂ ಚಿಕ್ಕಬಳ್ಳಾಪುರ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಬಿಜೆಪಿ ಈವರೆಗೆ ಪ್ರಕಟಿಸಿಲ್ಲ. ಒಂದೆರಡು ದಿನಗಳಲ್ಲಿ ಪಟ್ಟಿ ಪ್ರಕಟವಾಗುವ ನಿರೀಕ್ಷೆ ಇದೆ.

ಬಿಜೆಪಿ ಬಿಡುವುದಿಲ್ಲ– ಯಡಿಯೂರಪ್ಪಗೆ ಅಭಯ

ಮಾಧುಸ್ವಾಮಿ ಮನ ಒಲಿಕೆ

ಪ್ರಜಾವಾಣಿ ವಾರ್ತೆ

ತುಮಕೂರು: ಲೋಕಸಭೆ ಟಿಕೆಟ್ ಸಿಗದೆ ಅಸಮಾಧಾನಗೊಂಡಿದ್ದ ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಮನವೊಲಿಸುವಲ್ಲಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಸಫಲರಾಗಿದ್ದಾರೆ.

ತುರುವೇಕೆರೆ ತಾಲ್ಲೂಕಿನ ಮಾಜಿ ಶಾಸಕ ಮಸಾಲ ಜಯರಾಮ್ ತೋಟದ ಮನೆಗೆ ಶುಕ್ರವಾರ ಮಾಧುಸ್ವಾಮಿ ಅವರನ್ನು ಕರೆಸಿಕೊಂಡು ಒಂದು ಗಂಟೆಗೂ ಹೆಚ್ಚು ಸಮಯ ಚರ್ಚಿಸಿದರು. ಬಿಜೆಪಿ ತೊರೆಯದಂತೆ ಮನವಿ ಮಾಡಿದ್ದು, 'ಪಕ್ಷ ಬಿಡುವುದಿಲ್ಲ' ಎಂದು ಮಾಧುಸ್ವಾಮಿ ಅಭಯ ನೀಡಿದ್ದಾರೆ.

ಸಭೆ ನಂತರ ಮಾತನಾಡಿದ ಯಡಿಯೂರಪ್ಪ, 'ಟಿಕೆಟ್ ಸಿಗದೆ ಮಾಧುಸ್ವಾಮಿ ಅಸಮಾಧಾನಗೊಂಡಿದ್ದು ಗೊತ್ತಾಯಿತು. ಈಗ ಎಲ್ಲ ವಿಚಾರ ಮನದಟ್ಟು ಮಾಡಿಕೊಟ್ಟಿದ್ದೇನೆ. ಅಭ್ಯರ್ಥಿಗಳ ಬಗ್ಗೆ ವರಿಷ್ಠರು ನಿರ್ಧರಿಸಿದ್ದಾರೆ. ಅದರಲ್ಲಿ ನನ್ನ ಪಾತ್ರ ಇಲ್ಲ ಎಂದು ಸ್ಪಷ್ಟಪಡಿಸಿದ್ದೇನೆ. ಪಕ್ಷ ಬಿಡದಂತೆ ಮನವೊಲಿಸಿದ್ದೇನೆ. ಅವರು ಪಕ್ಷದಲ್ಲೇ ಮುಂದುವರಿಯುವ ಭರವಸೆ ನೀಡಿದ್ದಾರೆ. ಸೋಮಣ್ಣ ಬೆಂಬಲಿಸುವ ವಿಚಾರ ಅವರಿಗೆ ಬಿಟ್ಟಿದ್ದು. ಈ ಬಗ್ಗೆ ಚರ್ಚೆ ನಡೆದಿಲ್ಲ' ಎಂದು ಸ್ಪಷ್ಟಪಡಿಸಿದರು.

ಮಾಧುಸ್ವಾಮಿ ಮಾತನಾಡಿ, 'ಬಿಜೆಪಿ ತೊರೆಯಲು ನಿರ್ಧರಿಸಿದ್ದೆ. ಆದರೆ, ಪಕ್ಷ ಬಿಡದಂತೆ ಯಡಿಯೂರಪ್ಪ ಕೇಳಿಕೊಂಡಿದ್ದು, ಹಿರಿಯರ ಮಾತಿಗೆ ಬೆಲೆಕೊಟ್ಟು ಪಕ್ಷದಲ್ಲೇ ಉಳಿಯಲು ನಿರ್ಧರಿಸಿದ್ದೇನೆ. ಲೋಕಸಭೆ ಚುನಾವಣೆ ಬಗ್ಗೆ ಏನೂ ಹೇಳಬೇಡಿ ಎಂದಿದ್ದೇನೆ. ಸೋಮಣ್ಣ ಅವರನ್ನು ಬೆಂಬಲಿಸಬೇಕೆ? ಬೇಡವೆ? ಎಂಬ ಬಗ್ಗೆ ನಿರ್ಧರಿಸಿಲ್ಲ' ಎಂದು ಸ್ಪಷ್ಟಪಡಿಸಿದರು.

ಮುಖಂಡರಾದ ಬೈರತಿ ಬಸವರಾಜ್, ಗೋಪಾಲಯ್ಯ ಇತರ ಮುಖಂಡರು ಸಂಧಾನ ಸಭೆಯಲ್ಲಿ ಭಾಗವಹಿಸಿದ್ದರು.

ಕಾಂಗ್ರೆಸ್ ಸೇರಲ್ಲ ಕರಡಿ ಸಂಗಣ್ಣ

ಕೊಪ್ಪಳ: 'ಬಿಜೆಪಿಯಿಂದ ಟಿಕೆಟ್ ಕೈ ತಪ್ಪಿದರೂ ಕಾಂಗ್ರೆಸ್ ಸೇರುವ ವಿಚಾರ ನನ್ನ ಮುಂದೆ ಇಲ್ಲ' ಎಂದು ಸಂಸದ ಸಂಗಣ್ಣ ಕರಡಿ ಸ್ಪಷ್ಟಪಡಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಪಕ್ಷಕ್ಕೆ ಬರುವಂತೆ ಸಚಿವ ಶಿವರಾಜ ತಂಗಡಗಿ ಆಹ್ವಾನ ನೀಡಿದ್ದಾರೆ. ಅವರಿಗೆ ಧನ್ಯವಾದಗಳು. ಆದರೆ, ಕಾಂಗ್ರೆಸ್ ಸೇರುವುದಿಲ್ಲ' ಎಂದರು.

ಕಾಂಗ್ರೆಸ್ ಪದಾಧಿಕಾರಿಗಳ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ತಂಗಡಗಿ, 'ಹಿರಿಯ ರಾಜಕಾರಣಿ ಸಂಗಣ್ಣ ಅವರು ಪಕ್ಷಕ್ಕೆ ಬಂದರೆ ಸ್ವಾಗತ. ಬರುವಂತೆ ಮನವಿ ಮಾಡುತ್ತೇನೆ' ಎಂದಿದ್ದರು.

24ರಂದು ಸಭೆ: ಟಿಕೆಟ್ ಕೈ ತಪ್ಪಿದ್ದರಿಂದ ಬೇಸರಗೊಂಡಿರುವ ಸಂಗಣ್ಣ ಕರಡಿ ಅವರು ವರಿಷ್ಠರೊಂದಿಗೆ ಚರ್ಚಿಸಲು ಮಾ. 24ರಂದು ಬೆಂಗಳೂರಿನಲ್ಲಿ ಸಭೆ ನಿಗದಿಯಾಗಿದೆ. ಶಾಸಕ ಅರವಿಂದ ಬೆಲ್ಲದ ಹಾಗೂ ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ ಅವರು ಶುಕ್ರವಾರ ಸಂಸದರ ಮನೆಗೆ ಭೇಟಿ ನೀಡಿ ಚರ್ಚಿಸಿದರು.

ಬಿಜೆಪಿ ಮನುವಾದಿ: ಸಿ.ಎಂ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಬಿಜೆಪಿಯು ಮಾರಕ ಮನುವಾದಿ ಮನಸ್ಥಿತಿಯನ್ನು ಹೊಂದಿದೆ. ಮನುಸ್ಮೃತಿಯ ಪ್ರತಿಪಾದನೆಯಂತೆ ಅಸಮಾನತೆ ಮತ್ತು ಜಾತಿ ವ್ಯವಸ್ಥೆ ಮುಂದುವರಿಯಬೇಕು ಎಂದು ಆ ಪಕ್ಷ ಬಯಸುತ್ತದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ರಾಜ್ಯ ಕಾಂಗ್ರೆಸ್ ಉಸ್ತುವಾರಿಯಾಗಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಶುಕ್ರವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

'ದೇಶದಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಬೇಕು ಹಾಗೂ ರೈತರ ಸಮಸ್ಯೆಗಳಿಗೆ ಪರಿಹಾರ ದೊರಕಬಾರದು ಎಂಬುದು ಬಿಜೆಪಿಯ ಆಸೆ. ಈ ಕಾರಣದಿಂದ ಅದು ಕಾಂಗ್ರೆಸ್‌ನ ಹೋರಾಟಗಳನ್ನು ತಡೆಯುವ ಪ್ರಯತ್ನ ಮಾಡುತ್ತಿದೆ' ಎಂದರು.

'ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ), ಪುಲ್ವಾಮಾ ದಾಳಿ, ಅಯೋಧ್ಯೆಯಂತಹ ವಿಷಯಗಳ ಹೆಸರಿನಲ್ಲಿ ಇನ್ನೂ ಎಷ್ಟು ವರ್ಷ ಮತದಾರರನ್ನು ಭಾವನಾತ್ಮಕವಾಗಿ ಮರಳು ಮಾಡುತ್ತೀರಿ? ಜನರ ಜೀವನದ ಸಮಸ್ಯೆಗಳಿಗೆ ನೆಪಮಾತ್ರಕ್ಕೂ ಸ್ಪಂದಿಸದ ನೀವು, ಭಾವನಾತ್ಮಕವಾಗಿ ಕೆರಳಿಸುವ ಕೆಲಸವನ್ನು ಮಾತ್ರ ಮಾಡುತ್ತಿದ್ದೀರಿ. ಭಾರತದ ಜನರು ಈ ಚುನಾವಣೆಯಲ್ಲಿ ನಿಮ್ಮನ್ನು ಅಧಿಕಾರದಿಂದ ಕೆಳಕ್ಕೆ ಇಳಿಸುತ್ತಾರೆ' ಎಂದು ಬಿಜೆಪಿ ವಿರುದ್ಧ ಹರಿಹಾಯ್ದರು.

'ಕಾಂಗ್ರೆಸ್ ಪಕ್ಷವು ಚುನಾವಣೆ ಎದುರಿಸದಂತೆ ಕಿರುಕುಳ ನೀಡುವ ಕೆಲಸವನ್ನು ಬಿಜೆಪಿ ಮಾಡುತ್ತಿದೆ. ಬ್ರಿಟೀಷರ ವಿರುದ್ಧ ಹೋರಾಟ ನಡೆಸಿದ ಇತಿಹಾಸವಿರುವ ಕಾಂಗ್ರೆಸ್ ಪಕ್ಷ ಇಂತಹ ಬೆದರಿಕೆಗಳಿಗೆ ಮಣಿಯುವುದಿಲ್ಲ' ಎಂದರು.

ಸರ್ವಾಧಿಕಾರಿ ಧೋರಣೆ: ಸುರ್ಜೇವಾಲಾ ಮಾತನಾಡಿ, 'ಪ್ರಧಾನಿ ನರೇಂದ್ರ ಮೋದಿ ಅವರು ಹಿಟ್ಲರ್ ಮಾದರಿಯ ಸರ್ವಾಧಿಕಾರಿ ಧೋರಣೆಯನ್ನು ಪ್ರದರ್ಶಿಸುತ್ತಿದ್ದಾರೆ. ಅದರ ಭಾಗವಾಗಿಯೇ ಕಾಂಗ್ರೆಸ್ ಪಕ್ಷದ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲಾಗಿದೆ' ಎಂದು ದೂರಿದರು.

'ನಮ್ಮ ಪಕ್ಷದ 11 ಬ್ಯಾಂಕ್ ಖಾತೆಗಳನ್ನು ಆದಾಯ ತೆರಿಗೆ ಇಲಾಖೆ ಮೂಲಕ ಸ್ಥಗಿತಗೊಳಿಸಲಾಗಿದೆ. ಇದರಿಂದಾಗಿ ಜಾಹೀರಾತು ಪ್ರಕಟಣೆ, ನಾಯಕರ ಪ್ರವಾಸಕ್ಕೆ ವೆಚ್ಚ ಮಾಡಲು ನಮ್ಮ ಬಳಿ ಹಣವಿಲ್ಲ' ಎಂದರು.

'ಸಾಂವಿಧಾನಿಕ ಸಂಸ್ಥೆಗಳ ದುರ್ಬಳಕೆ'

'ಈ ಚುನಾವಣೆಯಲ್ಲಿ ಬಿಜೆಪಿ ಸೋಲಿನ ಭೀತಿ ಎದುರಿಸುತ್ತಿದೆ. ಸೋಲು ತಪ್ಪಿಸಿಕೊಳ್ಳಲು ರಾಜಭವನಗಳೂ ಸೇರಿದಂತೆ ಸಾಂವಿಧಾನಿಕ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

'ವಿರೋಧಪಕ್ಷಗಳ ಬ್ಯಾಂಕ್ ಖಾತೆಗಳ ಮುಟ್ಟುಗೋಲು, ಮುಖ್ಯಮಂತ್ರಿ ಬಂಧನದಂತಹ ಕ್ರಮಗಳ ಮೂಲಕ ಚುನಾವಣೆಯಲ್ಲಿ ಗೆಲ್ಲಲು ಬಿಜೆಪಿ ಪ್ರಯತ್ನಿಸುತ್ತಿದೆ. ಈ ಪ್ರಯತ್ನದಲ್ಲಿ ಯಶಸ್ಸು ದೊರಕುವುದಿಲ್ಲ' ಎಂದರು.

ಸ್ಪರ್ಧೆ: ಎರಡು ದಿನಗಳಲ್ಲಿ ನಿರ್ಧಾರ–ವೀಣಾ



ಬಾಗಲಕೋಟೆ: 'ಲೋಕಸಭಾ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಬೇಕೇ, ಬೇಡವೇ ಎಂಬ ವಿಷಯವಾಗಿ ಎರಡು ದಿನಗಳಲ್ಲಿ ನಿರ್ಧರಿಸುವೆ' ಎಂದು ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ವೀಣಾ ಕಾಶಪ್ಪನವರ ಹೇಳಿದ್ದಾರೆ.

ಅಭಿಮಾನಿಗಳ ಬಳಗ ಶುಕ್ರವಾರ ಆಯೋಜಿಸಿದ್ದ ಸ್ವಾಭಿಮಾನಿ ಕಾರ್ಯಕರ್ತರ ಸಮಾವೇಶದಲ್ಲಿ 'ಪಕ್ಷೇತರರಾಗಿ ಸ್ಪರ್ಧಿಸಿ' ಎಂದು ಅಭಿಮಾನಿಗಳು ಒತ್ತಾಯಿಸಿದ ಹಿನ್ನೆಲೆಯಲ್ಲಿ ವೀಣಾ ಅವರು ಕಾಲಾವಕಾಶ ಕೋರಿದರು.

ವೀಣಾ ಅವರ ಪತಿ, ಶಾಸಕ ವಿಜಯಾನಂದ ಕಾಶಪ್ಪನವರ ಮಾತನಾಡಿ, '50 ವರ್ಷಗಳಿಂದ ಕಾಶಪ್ಪನವರ ಕುಟುಂಬ ಕಾಂಗ್ರೆಸ್‌ನಲ್ಲಿದೆ. ಹುಟ್ಟಿದ್ದು, ಇರೋದು ಮತ್ತು ಸಾಯೋದು ಕಾಂಗ್ರೆಸ್‌ನಲ್ಲೇ. ನಿಮ್ಮ ಮನೆಯಲ್ಲಿ ಯಾರ್‍ಯಾರು, ಎಷ್ಟು ಪಕ್ಷದಲ್ಲಿದ್ದಾರೆ ತಿಳಿಸಿ' ಎಂದು ಸವಾಲು ಹಾಕಿದರು. 'ನನ್ನ ತಾಕತ್ತಿನ ಬಗ್ಗೆ ಮಾತನಾಡಬೇಡಿ. ವ್ಯವಹಾರ ಮಾಡಿ ಟಿಕೆಟ್ ತಗೊತಿರಿ. ಗೆಲ್ಲುತ್ತೀರಾ? ಕಾಶಪ್ಪನವರ ಕುಟುಂಬಕ್ಕೆ ಪ್ರಶ್ನಿಸಿದರೆ ಬಗ್ಗುವವನಲ್ಲ' ಎಂದು ಕಾಂಗ್ರೆಸ್ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದರು.

'ಕಾರ್ಯಕರ್ತರಿಗೆ, ಸಮುದಾಯದ ಗುರುಗಳಿಗೆ ಕಾರ್ಯಕ್ರಮಕ್ಕೆ ಹೋಗದಂತೆ ಧಮ್ಕಿ ಹಾಕಿದ್ದಾರೆ. ಗೂಂಡಾಗಿರಿ ನಡೆಯಲ್ಲ. ಯಾವ ಪಕ್ಷದಲ್ಲಿದ್ರಿ, ಯಾವಾಗ ಬಂದ್ರಿ ನನಗೂ ಗೊತ್ತಿದೆ. ವೈಯಕ್ತಿಕ ವಿಷಯಕ್ಕೆ ಬಂದ್ರೆ ಎದುರಿಸಲು ಸಿದ್ಧನಿದ್ದೇನೆ. ಪಕ್ಷಕ್ಕೆ ಮಾತ್ರ ತಲೆಬಾಗುತ್ತೇನೆ' ಎಂದು ಹೇಳಿದರು.

ಕಣ್ಣೀರಿಟ್ಟ ವೀಣಾ: 'ಮನೆ ಮಗಳು ಎಂದು ಗೌರವಿಸುವ ಜಿಲ್ಲೆಯ ಜನರ ಕನಸು ನನಸುಗೊಳಿಸಲು, ಜಿಲ್ಲೆ ಅಭಿವೃದ್ಧಿಪಡಿಸಲು ಅವಕಾಶ ಕೊಡಿ ಎಂದು ಉಡಿಯೊಡ್ಡಿ ಬೇಡಿಕೊಂಡೆ' ಎಂದು ವೀಣಾ ಕಣ್ಣೀರು ಹಾಕಿದರು. 'ಬಾಗಲಕೋಟೆಯವರು ಅಸಮರ್ಥರಾ? ಕೈಲಾಗದವರಾ? ಪಂಚಮಸಾಲಿ ಮೀಸಲಾತಿಗಾಗಿ 750 ಕಿ.ಮೀ. ಪಾದಯಾತ್ರೆ ಮಾಡಿದವರು ನಾವು. ಆಗ ಬರದವರಿಗೆ ಈಗ ಟಿಕೆಟ್‌ಗಾಗಿ ಸಮಾಜ ಬೇಕಾಯಿತಾ ಎಂದರು.

ಕೇಳ್ರಪ್ಪೋ ಕೇಳಿ...



ಮತದಾನ ಮಾಡಿ...

ಮಂಗಳೂರಿನ ವಿಶ್ವವಿದ್ಯಾನಿಲಯ ಕಾಲೇಜಿನ ರವೀಂದ್ರ ಕಲಾಭವನದಲ್ಲಿ ಶುಕ್ರವಾರ ಆಯೋಜಿಸಿದ್ದ ಮತದಾನ ಜಾಗೃತಿ ಅಭಿಯಾನದಲ್ಲಿ ಯಕ್ಷಗಾನ ಕಲಾವಿದರು ಗಮನಸೆಳೆದರು –ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್.

ಶಿವಮೊಗ್ಗ–ಸೀರೆ, ಹಾವೇರಿ– ಮದ್ಯ, ಬಳ್ಳಾರಿ–ಕುಕ್ಕರ್ ವಶ

ದಾಳಿ ಸುದ್ದಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ/ ಹಾವೇರಿ/ ಬಳ್ಳಾರಿ: ಶಿವಮೊಗ್ಗದ ಕೆ.ಆರ್. ಪುರಂ ಬಡಾವಣೆಯ ಖಾಸಗಿ ಉಗ್ರಾಣದ ಮೇಲೆ ದಾಳಿ ನಡೆಸಿರುವ ಚುನಾವಣಾ ಅಧಿಕಾರಿಗಳು, ಅಲ್ಲಿ ದಾಖಲೆಗಳಿಲ್ಲದೆ ಸಂಗ್ರಹಿಸಿ ಇಟ್ಟಿದ್ದ ₹ 1.10 ಕೋಟಿ ಮೌಲ್ಯದ ಸೀರೆಗಳನ್ನು ವಶಪಡಿಸಿಕೊಂಡಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ.ಮಿಥುನ್ ಕುಮಾರ್ ಹಾಗೂ ಅಧಿಕಾರಿಗಳ ತಂಡ ಖಚಿತ ಮಾಹಿತಿ ಆಧರಿಸಿ ಈ ದಾಳಿ ನಡೆಸಿದೆ. ಉಗ್ರಾಣ ಬೆಂಗಳೂರಿನ ವ್ಯಕ್ತಿಯೊಬ್ಬರಿಗೆ ಸೇರಿದೆ ಎಂದು ತಿಳಿದುಬಂದಿದೆ.

'ಚುನಾವಣೆ ಹಿನ್ನೆಲೆಯಲ್ಲಿ ಮತದಾರರಿಗೆ ಹಂಚಲು ಸೀರೆಗಳನ್ನು ತಂದಿರಿಸಲಾಗಿತ್ತೇ ಎಂಬುದು ಇನ್ನೂ ಖಚಿತಪಟ್ಟಿಲ್ಲ. ಸೂಕ್ತ ದಾಖಲೆಗಳು ಲಭ್ಯವಾಗದ ಕಾರಣ ಸೀರೆಗಳನ್ನು ವಾಣಿಜ್ಯ ತೆರಿಗೆ ಇಲಾಖೆ ಸುಪರ್ದಿಗೆ ವಹಿಸಲಾಗಿದೆ. ಪರಿಶೀಲನೆ ನಡೆದಿದೆ' ಎಂದು ಜಿಲ್ಲಾಧಿಕಾರಿ ಗುರುದತ್ತ ಹೆಗಡೆ 'ಪ್ರಜಾವಾಣಿ'ಗೆ ತಿಳಿಸಿದರು.

ಹಾವೇರಿ ವರದಿ: 'ಸಮರ್ಪಕ ದಾಖಲೆಪತ್ರಗಳು ಇಲ್ಲದೇ ಎರಡು ಲಾರಿಗಳಲ್ಲಿ ಸಾಗಣೆ ಮಾಡುತ್ತಿದ್ದ ₹1.20 ಕೋಟಿ ಮೊತ್ತದ ಮದ್ಯ ವಶಪಡಿಸಿಕೊಳ್ಳಲಾಗಿದೆ' ಎಂದು ಜಿಲ್ಲಾಧಿಕಾರಿ ರಘುನಂದನ ಮೂರ್ತಿ ತಿಳಿಸಿದರು.

'ಮಾರ್ಚ್ 18ರಂದು ಮದ್ಯ ಸಾಗಿಸುತ್ತಿದ್ದ ವಾಹನಕ್ಕೆ ಜಿಪಿಎಸ್ ಅಳವಡಿಸಿದ ಹಾಗೂ ಸರಕು ರವಾನೆಯಾದ ದಿನಾಂಕ ಮತ್ತು ಸಮಯ ನಮೂದು ಮಾಡದೇ ಮದ್ಯ ಸಾಗಾಣಿಕೆ ಮಾಡುತ್ತಿದ್ದ ಲಾರಿಯನ್ನು ಅಬಕಾರಿ ಅಧಿಕಾರಿ ವಶಕ್ಕೆ ಪಡೆದಿದ್ದಾರೆ. 550 ಪೆಟ್ಟಿಗೆಯಲ್ಲಿದ್ದ 4,755.6 ಬಲ್ಕ್ ಲೀಟರ್ ಮದ್ಯ ಮತ್ತು ಲಾರಿ ಜಪ್ತು ಮಾಡಿ ವಾಹನದ ಚಾಲಕ ಮತ್ತು ಡಿಸ್ಟಿಲರಿ ಸನ್ನದುದಾರರ ವಿರುದ್ಧ ಮೊಕದ್ದಮೆ ದಾಖಲಿಸಲಾಗಿದೆ' ಎಂದರು.

'ಎರಡನೇ ಪ್ರಕರಣದಲ್ಲಿ ₹15.30 ಲಕ್ಷ ಮೌಲ್ಯದ 9,450 ಬಲ್ಕ್ ಲೀಟರ್ ಫ್ರೀಜ್ಡ್ ಬಿಯರ್ ಹಾಗೂ ಸಾಗಾಣಿಕೆ ವಾಹನದ ಮೊತ್ತದ ₹ 40 ಲಕ್ಷ ಒಳಗೊಂಡಂತೆ ₹55.30 ಲಕ್ಷ ಮೌಲ್ಯದ ಮದ್ಯ ಹಾಗೂ ಲಾರಿ ವಶಪಡಿಕೊಂಡು ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದರು.

ಬಳ್ಳಾರಿ ವರದಿ: ನಗರದಲ್ಲಿ ಸೂಕ್ತ ದಾಖಲೆ ಇಲ್ಲದ 300 ಕುಕ್ಕರ್, 150 ಸ್ಟೌ, 66 ಸೀಲಿಂಗ್ ಫ್ಯಾನ್ ಸೇರಿ ಒಟ್ಟು ₹2.58 ಲಕ್ಷ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ತಿಳಿಸಿದ್ದಾರೆ.



ಶಿವಮೊಗ್ಗದ ಕೆ.ಆರ್.ಪುರಂನ ಖಾಸಗಿ ಉಗ್ರಾಣದ ಮೇಲೆ ದಾಳಿ ನಡೆಸಿದ ಚುನಾವಣಾಧಿಕಾರಿಗಳು ಹಾಗೂ ಪೊಲೀಸರ ತಂಡ ಸೀರೆಗಳನ್ನು ವಶಪಡಿಸಿಕೊಂಡ ನಂತರ ಅಲ್ಲಿನ ಸಿಬ್ಬಂದಿಯಿಂದ ಮಾಹಿತಿ ಪಡೆಯಿತು

ಐ.ಟಿ ಕಾರ್ಯಾಚರಣೆ ₹1.13 ಕೋಟಿ ನಗದು ವಶ

ಬೆಂಗಳೂರು: ಚುನಾವಣಾ ಅಕ್ರಮ ತಡೆಯಲು ಬೆಂಗಳೂರಿನ ವಿವಿಧೆಡೆ ಕಾರ್ಯಾಚರಣೆ ನಡೆಸಿರುವ ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು, ₹ 1.39 ಕೋಟಿ ನಗದು ಮತ್ತು ₹ 90 ಲಕ್ಷ ಮೌಲ್ಯದ ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ನಡೆಸಿರುವ ಕಾರ್ಯಾಚರಣೆಯಲ್ಲಿ ಸಂಪಂಗಿ ರಾಮನಗರದಲ್ಲಿ ₹ 28.75 ಲಕ್ಷ, ಕೋರಮಂಗಲದ ಎರಡು ಸ್ಥಳಗಳಲ್ಲಿ ಒಟ್ಟು ₹ 1.10 ಕೋಟಿ ನಗದನ್ನು ವಶಪಡಿಸಿಕೊಳ್ಳಲಾಗಿದೆ. ಮುರುಗೇಶಪಾಳ್ಯದಲ್ಲಿ ₹ 71.16 ಲಕ್ಷ ಮೌಲ್ಯದ ಚಿನ್ನ ಹಾಗೂ ₹ 9 ಲಕ್ಷ ಮೌಲ್ಯದ ವಜ್ರವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.


ಚುನಾವಣಾ ಅಕ್ರಮ ತಡೆಯ ಕಾರ್ಯಾಚರಣೆಗಳಲ್ಲಿ ಈವರೆಗೆ ₹ 9.64 ಕೋಟಿ ನಗದು, ₹ 1.78 ಕೋಟಿ ಮೌಲ್ಯದ ಉಚಿತ ಉಡುಗೊರೆಗಳು, ₹ 22.85 ಕೋಟಿ ಮೌಲ್ಯದ ಮದ್ಯ, ₹ 53 ಲಕ್ಷ ಮೌಲ್ಯದ ಮಾದಕವಸ್ತು, ₹ 36.41 ಕೋಟಿ ಮೌಲ್ಯದ ಚಿನ್ನ, ವಜ್ರ, ಬೆಳ್ಳಿ ವಶಕ್ಕೆ ಪಡೆಯಲಾಗಿದೆ ಎಂದು ವಿವರ ನೀಡಿದ್ದಾರೆ.

ಗುಸುಗುಸು

ಮತ್ತದೇ 'ಹುಲಿ' ಬಂದ್ರೆ ಏನ್ ಗತಿ?

ಉತ್ತರ ಕನ್ನಡ ಲೋಕಸಭೆ ಕ್ಷೇತ್ರವನ್ನು ಸತತವಾಗಿ ಸಂಸತ್‌ನಲ್ಲಿ ಪ್ರತಿನಿಧಿಸುತ್ತಿರುವ ಅನಂತಕುಮಾರ ಹೆಗಡೆ ಅವರಿಗೆ 'ಹಿಂದೂ ಹುಲಿ' ಎಂಬುದು ಅವರ ಬೆಂಬಲಿಗರು ನೀಡಿರುವ ಬಿರುದು! ಕಾಡಿನ ಹುಲಿಯಂತೆ ಈ 'ಹುಲಿ'ಯೂ ಬಹಿರಂಗವಾಗಿ ಕಾಣಿಸಿಕೊಳ್ಳುವುದು ಅಪರೂಪ ಎಂಬುದು ಅವರ ವಿರೋಧಿಗಳ ಟೀಕೆ.

ಅದೇನೆ ಇರಲಿ, ಈ ಸಲದ ಚುನಾವಣೆ ಕಣ ರಂಗೇರುತ್ತಿರುವ ಹೊತ್ತಲ್ಲೂ ಕ್ಷೇತ್ರದಲ್ಲಿ ಮತ್ತದೇ 'ಹುಲಿ' ಚರ್ಚೆಯಲ್ಲಿದೆ. ಬಿಜೆಪಿ ಅಭ್ಯರ್ಥಿಗಳಾಗಲು ಹಲವು ಆಕಾಂಕ್ಷಿಗಳು ಹುಟ್ಟಿಕೊಂಡಿದ್ದರು. ಅವರಲ್ಲಿ ವಿಧಾನಸಭೆ ಮಾಜಿ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಪತ್ರಕರ್ತ ಹರಿಪ್ರಕಾಶ ಕೋಣೆಮನೆ, ಚಕ್ರವರ್ತಿ ಸೂಲಿಬೆಲೆ, ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರ ಮೊಮ್ಮಗ ಶಶಿಭೂಷಣ ಹೆಗಡೆ, ಮಾಜಿ ಶಾಸಕಿ ರೂಪಾಲಿ ನಾಯ್ಕ, ಹೀಗೆ ಹಲವು ಆಕಾಂಕ್ಷಿಗಳು ಇದ್ದರು. ಅವರೆಲ್ಲರೂ ತಮ್ಮದೇ ವ್ಯಾಪ್ತಿಯಲ್ಲಿ ಪ್ರಚಾರ ಆರಂಭಿಸಿದ್ದೂ ಆಗಿತ್ತು. ಭರ್ಜರಿ ಸಿದ್ಧತೆ ನಡೆದಿತ್ತು.



'ಅನಂತಕುಮಾರ ಹೆಗಡೆ ಹೇಗಿದ್ದರೂ ಕ್ಷೇತ್ರದಲ್ಲಿ ಜನರ ಎದುರು ಬರುವುದು ಅಪರೂಪ. ಈ ಸಲವಂತೂ ಅವರಿಗೆ ಅನಾರೋಗ್ಯ ಸಮಸ್ಯೆ ಉಂಟಾಗಿರಬಹುದು. ಅವರು ಹೊರಬಂದರೂ ಹೈಕಮಾಂಡ್ ಅವರಿಗೆ ಸೊಪ್ಪು ಹಾಕುವುದು ಅನುಮಾನ. ಹೀಗಾಗಿ ನಾವೇ ಒಂದು ಕೈ ನೋಡಿಬಿಡೋಣ' ಎಂದು ಆಕಾಂಕ್ಷಿಗಳು ಊರೂರು ಸುತ್ತಿ ಕಾರ್ಯಕರ್ತರನ್ನೆಲ್ಲ ಮಾತನಾಡಿಸಿ ಬಂದು ವಿಶ್ರಾಂತಿಗೆ ಕುಳಿತಾಗಲೇ ಅವರಿಗೆ 'ಹುಲಿ ಗುಹೆಯಿಂದ ಹೊರಬಿದ್ದಿದೆ' ಎಂಬ ಸುದ್ದಿ ತಲುಪಿತ್ತು.

ಹುಲಿ ಗುಹೆಯಿಂದ ಹೊರಬಂದು ಗರ್ಜಿಸುತ್ತ ಅಲ್ಲಲ್ಲಿ ಓಡಾಡಿದ್ದೇ ತಡ ಕೆಲವು ಆಕಾಂಕ್ಷಿಗಳು ಪಕ್ಕಕ್ಕೆ ಸರಿದರು. ಮತ್ತೆ ಕೆಲವರು ಹುಲಿ ಸುಮ್ಮನಾಗಿಸಲು ದೆಹಲಿ, ನಾಗ್ಪುರ ಓಡಾಡಿ ಬಂದರು. ಈಗ ಕೆಲವು ದಿನದಿಂದ ಹುಲಿ ಮತ್ತೆ ಸುಮ್ಮನಾಗಿದೆ. ಮತ್ತದೇ ಹುಲಿ ನಿಂತರೆ ಐದು ವರ್ಷ ನಮ್ಮ ಗತಿ ಏನು? ಎಂಬುದು ಕ್ಷೇತ್ರದ ಜನರ ಗುಸುಗುಸು.

ಜಿಗಿ ನೆಗೆದಾಟ



ಮರಿತಿಬ್ಬೇಗೌಡ (ಮಂಡ್ಯ)

ಕಾಂಗ್ರೆಸ್ → ಜೆಡಿಎಸ್ → ಕಾಂಗ್ರೆಸ್



ಎನ್. ಅಪ್ಪಾಜಿಗೌಡ (ಮಂಡ್ಯ)

ಜೆಡಿಎಸ್ → ಕಾಂಗ್ರೆಸ್

ಎಂಥಾ ಮಾತು!



ಸೋಮಣ್ಣ ಅವರಿಗೆ ನನ್ನ ಒಂದು ವೋಟ್ ಹಾಕದಿದ್ದರೆ ಏನಾಗುತ್ತದೆ? ನನ್ನ ಹೆಂಡತಿಯೂ ವೋಟ್ ಹಾಕಲ್ಲ ಎಂದು ಅವರೇ ಹೇಳಿಕೊಂಡಿದ್ದಾರೆ. ಸೋಮಣ್ಣ ಅವರಿಗೆ ಬೆಂಬಲ ನೀಡುವಂತೆ ಒತ್ತಡ ಹಾಕಬೇಡಿ ಎಂದು ಬಿ.ಎಸ್.ಯಡಿಯೂರಪ್ಪ ಅವರಿಗೆ ಹೇಳಿದ್ದೇನೆ. ಚುನಾವಣೆಯಲ್ಲಿ ಯಾರನ್ನು ಬೆಂಬಲಿಸಬೇಕು ಎಂಬ ಬಗ್ಗೆ ನಿರ್ಧಾರ ಕೈಗೊಂಡಿಲ್ಲ. ಇನ್ನೂ ಒಂದು ತಿಂಗಳು ಸಮಯವಿದೆ. ಮುಂದೆ ನೋಡೋಣ. ಸೋಮಣ್ಣ ಅವರಿಗೆ ನಾಲ್ಕೈದು ದಿನ ಬಿಟ್ಟು ಮನೆಗೆ ಬರುವಂತೆ ಹೇಳಿದ್ದೇನೆ. ಬರಬೇಡ ಎಂದು ಹೇಳಿಲ್ಲ. ಯಾರು ಬಂದರೂ ಸ್ವಾಗತ. ಆತಿಥ್ಯ ಮಾಡುತ್ತೇನೆ.

ಜೆ.ಸಿ.ಮಾಧುಸ್ವಾಮಿ, ಮಾಜಿ ಸಚಿವ



ಕಾಂಗ್ರೆಸ್ ಅಧಿಕೃತ ವಿರೋಧ ಪಕ್ಷವಾಗಲಿ, ವಿರೋಧಿ ನಾಯಕ ಸ್ಥಾನ ಸಿಗಲಿ ಸಾಕು. ಹತ್ತು ವರ್ಷಗಳಿಂದ ಕಾಂಗ್ರೆಸ್ ಸ್ಥಿತಿ ಹೇಗಿದೆ ಎಂಬುದು ಎಲ್ಲರಿಗೂ ಗೊತ್ತು. ಮೂರು ರಾಜ್ಯದಲ್ಲಿ ಮಾತ್ರ ಕಾಂಗ್ರೆಸ್ ಸರ್ಕಾರ ಇದೆ. ಆ ಪಕ್ಷ 50ಕ್ಕಿಂತ ಹೆಚ್ಚು ಸ್ಥಾನ ಗೆಲ್ಲುವುದಿಲ್ಲ ಎಂದು ಸಮೀಕ್ಷೆ ಹೇಳುತ್ತಿವೆ. 40ಕ್ಕೂ ಹೆಚ್ಚು ಸ್ಥಾನಗಳನ್ನು ಗೆದ್ದು ತೋರಿಸಲಿ ಎಂದು ಮಮತಾ ಬ್ಯಾನರ್ಜಿ ಸವಾಲು ಹಾಕಿದ್ದಾರೆ. ಮೊದಲು ಇಂಡಿಯಾ ಒಕ್ಕೂಟವನ್ನು ಕಾಂಗ್ರೆಸ್‌ನವರು ಸರಿ ಮಾಡಿಕೊಳ್ಳಲಿ. ಲೋಕಸಭಾ ಚುನಾವಣೆ ಬಳಿಕ ಒಕ್ಕೂಟದಲ್ಲಿ ಏನೇನು ಜಗಳವಾಗುತ್ತೆ ನೋಡಿಕೊಳ್ಳಲಿ.

–ಪ್ರಲ್ಹಾದ ಜೋಶಿ, ಧಾರವಾಡ ಲೋಕಸಭಾ ಕ್ಷೇತ್ರದ ಅಭ್ಯರ್ಥಿ

ಕ್ಷೇತ್ರ ಮಹಾತ್ಮೆ



ಮೈಸೂರು–ಕೊಡಗು

ನಾಡಿನ ಸಾಂಸ್ಕೃತಿಕ ರಾಜಧಾನಿ ಮೈಸೂರು, ವೀರಪುತ್ರರ ಕರ್ಮಭೂಮಿ ಕೊಡವರ ನಾಡು ಕೊಡಗನ್ನು ಒಳಗೊಂಡ ಲೋಕಸಭಾ ಕ್ಷೇತ್ರ ಕಾಂಗ್ರೆಸ್–ಬಿಜೆಪಿಗೆ ಪ್ರತಿಷ್ಠಿತ ಕಣ. 'ಉಗ್ರ' ಹಿಂದುತ್ವವಾದಿ ಪ್ರತಾಪಸಿಂಹ ಎರಡು ಬಾರಿ ಪ್ರತಿನಿಧಿಸಿದ್ದ ಕ್ಷೇತ್ರದಲ್ಲೀಗ, ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕಮಲ ಪಡೆಯ ಹೊಸಮುಖ. ರಾಜವಂಶದ ಎದುರು, ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ರಾಜ್ಯಾಡಳಿತದ ಮುಖ್ಯಸ್ಥರಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ತಮ್ಮ ಆಪ್ತರಲ್ಲಿ ಒಬ್ಬರಾದ ಲಕ್ಷ್ಮಣ ಅವರನ್ನು ಮುಂದೆ ನಿಲ್ಲಿಸಿದ್ದಾರೆ. ಲಕ್ಷ್ಮಣರ ಬೆನ್ನಿಗೆ ಸಿದ್ದ'ರಾಮ'ಯ್ಯ ಇದ್ದಾರೆ. ಯತೀಂದ್ರರೂ ಜತೆ ಸೇರಿದ್ದಾರೆ. ಯದುವೀರರ ಹಿಂದೆ, ಮಾಜಿ ಸಚಿವ 'ರಾಮ'ದಾಸ್ ನಿಂತಿದ್ದಾರೆ. ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಹೆಚ್ಚು ಸ್ಥಾನ ಗೆದ್ದಿದ್ದು, ಅಧಿಕಾರದ ಚುಕ್ಕಾಣಿ ಹಿಡಿದಿರುವ ಸಿದ್ದರಾಮಯ್ಯನವರಿಗೆ ತವರು ಜಿಲ್ಲೆಯಲ್ಲಿ 'ಹಸ್ತ' ಅರಳಿಸುವ ಹುಮ್ಮಸ್ಸು. ಅಲ್ಲಿನ ಸೋಲು–ಗೆಲುವು ಅವರ ಸಾಮರ್ಥ್ಯ, ಜನಪ್ರಿಯತೆಯ ಸತ್ವಪರೀಕ್ಷೆಯೂ ಆಗಲಿದೆ. ಅಭ್ಯರ್ಥಿ ಬದಲಿಸಿ, ರಾಜವಂಶಸ್ಥರನ್ನು ಕಣಕ್ಕೆ ದೂಡಿರುವ ಬಿಜೆಪಿಗೂ ಕೂಡ ಅವರನ್ನು ಗೆಲ್ಲಿಸಿಕೊಳ್ಳುವ ಸವಾಲು. ಕಳೆದ ಎರಡು ಮೂರು ಚುನಾವಣೆಗಳಲ್ಲಿ ಜೆಡಿಎಸ್ ಪಾತ್ರ ಇಲ್ಲಿ ಪ್ರಧಾನವಾಗಿ ಕೆಲಸ ಮಾಡಿದೆ. ಹೀಗಾಗಿಯೇ, ಈ ಕ್ಷೇತ್ರವನ್ನು ಜೆಡಿಎಸ್ ಕೇಳಿತ್ತು. ಮೈತ್ರಿ ಅಭ್ಯರ್ಥಿ ಯದುವೀರ್ ಪರವಾಗಿ ಜೆಡಿಎಸ್ ಎಷ್ಟರಮಟ್ಟಿಗೆ ತನ್ನ ಶಕ್ತಿ ಧಾರೆ ಎರೆಯಲಿದೆಯೇ ಎಂಬುದು ಪ್ರಶ್ನಾರ್ಥಕ. ಸಿದ್ದರಾಮಯ್ಯ–ಯದುವೀರ್ ಯಾರಿಗೆ ಗೆಲುವಿನ ಹಾರ?

ಪ್ರಿಯಾಂಕ್ ಖರ್ಗೆ ವಿರುದ್ಧ ಬಿಜೆಪಿ ದೂರು

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಪ್ರಧಾನಿ ನರೇಂದ್ರಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರನ್ನು ಉದ್ದೇಶಿಸಿ ಸಚಿವ ಪ್ರಿಯಾಂಕ್ ಖರ್ಗೆ 'ಚೋರ್ ಗುರು ಚಾಂಡಾಲ್ ಶಿಷ್ಯ' ಎಂದು 'ಎಕ್ಸ್' ಮಾಡುವ ಮೂಲಕ ಅಪಮಾನ ಮಾಡಿದ್ದಾರೆ' ಎಂದು ಚುನಾವಣಾ ಆಯೋಗಕ್ಕೆ ಬಿಜೆಪಿ ದೂರು ನೀಡಿದೆ.

ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರ ಬಂಧನದ ಹಿನ್ನೆಲೆಯಲ್ಲಿ ಪ್ರಧಾನಿ ವಿರುದ್ಧ ಆಕ್ಷೇಪಾರ್ಹ ಪೋಸ್ಟ್ ಮಾಡಿರುವ ಪ್ರಿಯಾಂಕ್ ವಿರುದ್ಧ ಕ್ರಮ ಜರುಗಿಸಬೇಕು ಎಂದು ವಿಧಾನಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಅಸಾಂವಿಧಾನಿಕ ಪದ ಬಳಕೆ ಆಕ್ಷೇಪಾರ್ಹ. ಪ್ರಿಯಾಂಕ್ ಅವರನ್ನು ಬಂಧಿಸಬೇಕು ಎಂದು ಒತ್ತಾಯಿಸಿದರು.

ಇದೇ ವಿಚಾರವಾಗಿ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಸದಾಶಿವನಗರದಲ್ಲಿರುವ ಖರ್ಗೆ ನಿವಾಸಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ್ದು, ಪೊಲೀಸರು ವಶಕ್ಕೆ ಪಡೆದು, ಬಳಿಕ ಬಿಡುಗಡೆ ಮಾಡಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಲೋಕಸಭೆ ಚುನಾವಣಾ ವೇಳಾಪಟ್ಟಿ ಪ್ರಕಟಗೊಂಡ ಬೆನ್ನಲ್ಲೇ, 'ಕಳೆದ 10 ವರ್ಷಗಳ ನಮ್ಮ ಸಾಧನೆಗಳ ಪಟ್ಟಿ ಹಿಡಿದುಕೊಂಡು ಮತದಾರರ ಬಳಿಗೆ ಹೋಗುತ್ತೇವೆ' ಎಂದು ಹೇಳಿದ್ದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, 'ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಸಂವಿಧಾನವನ್ನು ಸರ್ವಾಧಿಕಾರದಿಂದ ಕಾಪಾಡಲು ಲಭಿಸುವ ಕೊನೆಯ ಅವಕಾಶ ಇದು' ಎಂದಿದ್ದರು. 'ಎನ್‌ಡಿಎ' ಮತ್ತು 'ಇಂಡಿಯಾ' ಮೈತ್ರಿಕೂಟವು ಭಿನ್ನ ಸಿದ್ಧಾಂತ, ಭರವಸೆಗಳ ಮೂಲಕ ಮತದಾರರ ಮನಗೆಲ್ಲಲು ಹೊರಟಿವೆ. ಈ ಬಾರಿಯ ಚುನಾವಣಾ ಫಲಿತಾಂಶವನ್ನು ರೂಪಿಸಬಲ್ಲ ಮತ್ತು ಪ್ರಚಾರದ ಅವಧಿಯಲ್ಲಿ ಸದ್ದು ಮಾಡಲಿರುವ ಪ್ರಮುಖ ವಿಷಯಗಳತ್ತ ಒಂದು ನೋಟ...

ಮತ ಸೆಳೆಯಲು ಬಿಜೆಪಿ – ಕಾಂಗ್ರೆಸ್ ರಣತಂತ್ರ • ಹಲವು ವಿಷಯಗಳು ಮುನ್ನೆಲೆಗೆ

ಪ್ರಚಾರ ಭರಾಟೆಗೆ ವಿಚಾರಗಳ ಕಾವು

ರಾಮಮಂದಿರ



ಅಯೋಧ್ಯೆಯಲ್ಲಿ ಈಚೆಗೆ ನಡೆದ ರಾಮಮಂದಿರದ ಉದ್ಘಾಟನೆಯು ಬಿಜೆಪಿಯ ಉತ್ಸಾಹ ಹೆಚ್ಚಿಸಿದೆ. ಜನವರಿ 22ರಂದು ನಡೆದ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮವನ್ನು ಬಿಜೆಪಿಯು 'ರಾಷ್ಟ್ರೀಯ ಸಂಭ್ರಮ'ವಾಗಿ ಬಿಂಬಿಸುವಲ್ಲಿ ಯಶಸ್ವಿಯಾಗಿತ್ತು. ಸಮಾರಂಭದಲ್ಲಿ ಕಾಂಗ್ರೆಸ್ ನಾಯಕರು ಪಾಲ್ಗೊಳ್ಳದ್ದನ್ನು ಬಿಜೆಪಿ, ಟೀಕೆಯ ಅಸ್ತ್ರವಾಗಿ ಬಳಸಿಕೊಳ್ಳುವ ಸಾಧ್ಯತೆಯಿದೆ. ಮಂದಿರ ವಿಚಾರದಲ್ಲಿ ಮತ ಸೆಳೆಯಲು ತನಗೆ ಲಭಿಸುವ ಸಣ್ಣ ಅವಕಾಶವನ್ನೂ ಬಿಜೆಪಿ ಬಿಟ್ಟುಕೊಡದು. ಜನರ ಭಾವನೆಗಳೊಂದಿಗೆ ಬೆಸೆದುಕೊಂಡಿರುವ ರಾಮಮಂದಿರ ವಿಚಾರ ಮುಂದಿಟ್ಟು ಎನ್‌ಡಿಎ ನಡೆಸುವ ಪ್ರಚಾರಕ್ಕೆ ಪ್ರತ್ಯುತ್ತರ ನೀಡುವ ಸವಾಲು 'ಇಂಡಿಯಾ' ಮೈತ್ರಿಕೂಟದ ಮುಂದಿದೆ.





ಸೈದ್ಧಾಂತಿಕ ಭಿನ್ನತೆ


ಬಿಜೆಪಿ ಮತ್ತು ಕಾಂಗ್ರೆಸ್ ಭಿನ್ನ ತತ್ವಗಳನ್ನು ಮುಂದಿಟ್ಟುಕೊಂಡು ಈ ಚುನಾವಣೆ ಎದುರಿಸುತ್ತಿದ್ದು, ಪ್ರಚಾರ ಅಭಿಯಾನವು ಸಿದ್ಧಾಂತಗಳ ನಡುವಣ ಹೋರಾಟವಾಗಿ ಪರಿಣಮಿಸಲಿದೆ. ಪ್ರಚಾರದ ಅವಧಿಯಲ್ಲಿ ಜನರ ಭಾವನೆಗಳನ್ನು ಹಿಡಿದಿಟ್ಟುಕೊಳ್ಳುವ ಪ್ರಯತ್ನವನ್ನು ಎರಡೂ ಮೈತ್ರಿಕೂಟಗಳುನಡೆಸುವುದುಖಚಿತ.

ಅಮೃತ ಕಾಲದ ಎದುರು ಅನ್ಯಾಯ ಕಾಲ

ಬಿಜೆಪಿಯು 10 ವರ್ಷಗಳ ಆಡಳಿತದಲ್ಲಿ ಮಾಡಿದ ಸಾಧನೆಗಳನ್ನು ಮತದಾರರ ಮುಂದಿಡಲು ಸಿದ್ಧತೆ ನಡೆಸಿದೆ. ಕಾಂಗ್ರೆಸ್ ಪಕ್ಷವು ಒಂದು ದಶಕದ ಅವಧಿಯನ್ನು 'ಅನ್ಯಾಯ ಕಾಲ' ಎಂದು ಟೀಕಿಸಿ, ಸರ್ಕಾರದ ವೈಫಲ್ಯಗಳನ್ನು ಎತ್ತಿತೋರಿಸಲು ಗಮನ ಹರಿಸಿದೆ.

ಚುನಾವಣಾ ಬಾಂಡ್

ಕಳೆದ ಕೆಲ ದಿನಗಳಿಂದ ಸದ್ದು ಮಾಡುತ್ತಿರುವ ಚುನಾವಣಾ ಬಾಂಡ್, ಪ್ರಚಾರದ ಅವಧಿಯಲ್ಲೂ ಪ್ರತಿಧ್ವನಿಸಲಿದೆ. ಬಾಂಡ್‌ಗಳ ಮಾಹಿತಿ ಬಹಿರಂಗವಾದ ಬೆನ್ನಲ್ಲೇ ಪಕ್ಷಗಳು ಪರಸ್ಪರ ಆರೋಪ, ಪ್ರತ್ಯಾರೋಪದಲ್ಲಿ ತೊಡಗಿವೆ. ಒಟ್ಟು ಖರೀದಿಯಾದ ಬಾಂಡ್‌ಗಳಲ್ಲಿ ಶೇ 50ರಷ್ಟು ಬಿಜೆಪಿಗೆ ಸಂದಾಯವಾಗಿದ್ದು, ದೇಣಿಗೆ ಸಂಗ್ರಹದ ಕುರಿತು ಸುಪ್ರೀಂ ಕೋರ್ಟ್ ಉಸ್ತುವಾರಿಯಲ್ಲಿ ಉನ್ನತಮಟ್ಟದ ತನಿಖೆ ನಡೆಸಬೇಕು ಎಂದು ಮಲ್ಲಿಕಾರ್ಜುನ ಖರ್ಗೆ ಆಗ್ರಹಿಸಿದ್ದಾರೆ. ಬಾಂಡ್‌ಗಳ ಮೂಲಕ ದೊರೆತ ಹಣವನ್ನು ಕಾಂಗ್ರೆಸ್ ವಾಪಸ್ ಮಾಡಲು ಸಿದ್ಧವಿದೆಯೇ ಎಂದು ಬಿಜೆಪಿ ಕೇಳಿದೆ. ಪ್ರಚಾರದ ವೇಳೆ ಈ ವಿಷಯ ಇನ್ನಷ್ಟು ಚರ್ಚೆಗೆ ಗ್ರಾಸವಾಗಲಿದೆ.



ನಿರುದ್ಯೋಗ

ಆಡಳಿತ ಪಕ್ಷವನ್ನು ಟೀಕಿಸಲು 'ಇಂಡಿಯಾ' ಮೈತ್ರಿಕೂಟದ ಬತ್ತಳಿಕೆಯಲ್ಲಿರುವ ಪ್ರಮುಖ ಅಸ್ತ್ರಗಳಲ್ಲಿ ಒಂದು ನಿರುದ್ಯೋಗ ಸಮಸ್ಯೆ. ರಾಹುಲ್ ಗಾಂಧಿ ಅವರು ತಮ್ಮ 'ಭಾರತ್ ಜೋಡೊ ನ್ಯಾಯ ಯಾತ್ರೆ'ಯುದ್ದಕ್ಕೂ ನಿರುದ್ಯೋಗ ಸಮಸ್ಯೆಯ ಬಗ್ಗೆ ಜನರ ಗಮನ ಸೆಳೆಯುವ ಕೆಲಸ ಮಾಡಿದ್ದರು. ಯುಪಿಎ ಅವಧಿಗೆ ಹೋಲಿಸಿದರೆ ನಮ್ಮ ಸರ್ಕಾರ 1.5ರಷ್ಟು ಅಧಿಕ ಉದ್ಯೋಗಾವಕಾಶ ಸೃಷ್ಟಿಸಿದೆ ಎಂಬುದು ಪ್ರಧಾನಿ ಹೇಳಿಕೆ.

ಪೌರತ್ವ ತಿದ್ದುಪಡಿ ಕಾಯ್ದೆ

ಪಶ್ಚಿಮ ಬಂಗಾಳ, ಅಸ್ಸಾಂ, ತಮಿಳುನಾಡು ಒಳಗೊಂಡಂತೆ ಕೆಲವು ರಾಜ್ಯಗಳಲ್ಲಿ ಚುನಾವಣಾ ಪ್ರಚಾರದ ಸಮಯದಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ವಿಚಾರವು ಮುನ್ನೆಲೆಗೆ ಬರಲಿದೆ. ಚುನಾವಣೆ ದಿನಾಂಕ ಪ್ರಕಟಣೆಗೆ ಕೆಲವೇ ದಿನಗಳಿರುವಾಗ ಸಿಎಎ ಜಾರಿ ಘೋಷಣೆ ಮಾಡಿದ್ದು, ಮತಗಳಿಸಲು ಬಿಜೆಪಿ ನಡೆಸಿದ ತಂತ್ರ ಎಂದೇ ವಿಶ್ಲೇಷಿಸಲಾಗಿದೆ.

ಮೋದಿ 'ಗ್ಯಾರಂಟಿ'ಗೆ 'ನ್ಯಾಯ'ದ ಸವಾಲು

ಚುನಾವಣಾ ವೇಳಾಪಟ್ಟಿ ಘೋಷಣೆಗೆ ಎರಡು ವಾರಗಳು ಇದ್ದಾಗ ಪ್ರಧಾನಿ ಅವರು ವಿವಿಧ ರಾಜ್ಯಗಳಿಗೆ ಪ್ರವಾಸ ಕೈಗೊಂಡು ಹಲವಾರು ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದ್ದರು. ಅಭಿವೃದ್ಧಿಯ ವಿಚಾರದ ಬಗ್ಗೆ ಮಾತನಾಡುತ್ತಾ 'ಇದು ಮೋದಿ ಗ್ಯಾರಂಟಿ' ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದರು. ಇದನ್ನು ಎದುರಿಸಲು ಕಾಂಗ್ರೆಸ್ ಪಕ್ಷವು 'ನ್ಯಾಯ' ಭರವಸೆಗಳ ಮೂಲಕ ಮತದಾರರ ಬಳಿ ತೆರಳುವ ತಂತ್ರ ಹಾಕಿಕೊಂಡಿದೆ. ಸಮಾಜದ ವಿವಿಧ ವರ್ಗಗಳ ಜನರಿಗೆ ಐದು 'ನ್ಯಾಯ'ಗಳ ಭರವಸೆ ನೀಡಿದೆ. ಪಕ್ಷದ ಪ್ರಚಾರದ ವಿಷಯ ಈ ಭರವಸೆಗಳನ್ನು ಕೇಂದ್ರವಾಗಿಟ್ಟುಕೊಂಡು ಇರಲಿದೆ.

ಗಯಾ: ಮಾಂಝಿ ಎನ್‌ಡಿಎ ಅಭ್ಯರ್ಥಿ

ಪಟ್ನಾ (ಪಿಟಿಐ): ಬಿಹಾರದ ಮಾಜಿ ಮುಖ್ಯಮಂತ್ರಿ ಜಿತನ್ ರಾಮ್ ಮಾಂಝಿ ಅವರು ಗಯಾ ಲೋಕಸಭಾ ಕ್ಷೇತ್ರದಲ್ಲಿ ಎನ್‌ಡಿಎ ಅಭ್ಯರ್ಥಿಯಾಗಿ ಸ್ಪರ್ಧಿಸಲಿದ್ದಾರೆ ಎಂದು ಹಿಂದುಸ್ತಾನ್ ಅವಾಮ್ ಮೋರ್ಚಾ (ಎಚ್‌ಎಎಂ) ಘೋಷಿಸಿದೆ.



ಮಾಂಝಿ ಅವರ ಸ್ಪರ್ಧೆಗೆ ಎಚ್‌ಎಎಂ ರಾಷ್ಟ್ರೀಯ ಅಧ್ಯಕ್ಷ ಹಾಗೂ ಮಾಂಝಿ ಅವರ ಪುತ್ರ ಸಂತೋಷ್ ಸುಮನ್ ಅವರು ಅನುಮೋದನೆ ನೀಡಿದ್ದಾರೆ ಎಂದು ಪಕ್ಷದ ಹೇಳಿಕೆ ಶುಕ್ರವಾರ ತಿಳಿಸಿದೆ.

ಬಿಹಾರದಲ್ಲಿ ಬಿಜೆಪಿಯು 17 ಕ್ಷೇತ್ರಗಳಲ್ಲಿ ಕಣಕ್ಕೆ ಇಳಿಯುತ್ತಿದ್ದರೆ, ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಜೆಡಿಯುಗೆ 16 ಕ್ಷೇತ್ರಗಳನ್ನು ನೀಡಿದೆ. ಚಿರಾಗ್ ಪಾಸ್ವಾನ್ ಅವರ ಲೋಕ ಜನಶಕ್ತಿ ಪಕ್ಷಕ್ಕೆ (ರಾಮ್ ವಿಲಾಸ್) ಐದು ಕ್ಷೇತ್ರಗಳನ್ನು ಹಾಗೂ ಎಚ್‌ಎಎಂ ಪಕ್ಷಕ್ಕೆ ಗಯಾ ಕ್ಷೇತ್ರವನ್ನು ನೀಡಲಾಗಿತ್ತು. ಗಯಾ ಸೇರಿದಂತೆ ಹಲವು ಕ್ಷೇತ್ರಗಳಿಗೆ ಆರ್‌ಜೆಡಿ ಅಭ್ಯರ್ಥಿಗಳನ್ನು ಪ್ರಕಟಿಸಿದ ಬಳಿಕ ಮಾಂಝಿ ಅವರ ಉಮೇದುವಾರಿಕೆಯನ್ನು ಘೋಷಿಸಲಾಗಿದೆ.

ಲಖನೌ: ಆಜಾದ್ ನಾಮಪತ್ರ ಸಲ್ಲಿಕೆ

ಲಖನೌ: ಆಜಾದ್ ಸಮಾಜ್ ಪಕ್ಷದ ನಾಯಕ ಚಂದ್ರಶೇಖರ್ ಆಜಾದ್ ಮತ್ತು ಸಮಾಜವಾದಿ ಪಕ್ಷದ ಮನೋಜ್ ಕುಮಾರ್ ಅವರು ನಗೀನಾ (ಎಸ್‌ಸಿ ಮೀಸಲು) ಕ್ಷೇತ್ರದಿಂದ ಶುಕ್ರವಾರ ನಾಮಪತ್ರ ಸಲ್ಲಿಸಿದರು.

ದಲಿತ ನಾಯಕ ಚಂದ್ರಶೇಖರ್ ಆಜಾದ್ 2014ರಲ್ಲಿ 'ಭೀಮ್ ಆರ್ಮಿ'ಯನ್ನು ಸ್ಥಾಪಿಸಿದ್ದರು. ಇವರ ಜತೆಗೆ ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಅಭ್ಯರ್ಥಿಯಾಗಿ ಹರ್‌ಕಿಶೋರ್ ಸಿಂಗ್ ಮೊರಾದಾಬಾದ್ ಕ್ಷೇತ್ರದಿಂದ ಹಾಗೂ ರಾಷ್ಟ್ರೀಯ ಸಮಾಜ ದಳ (ಆರ್) ಅಭ್ಯರ್ಥಿಯಾಗಿ ಸಂಜಯ್ ಕುಮಾರ್ ಭಾರ್ತಿ ಅವರು ರಾಮ್‌ಪುರ ಕ್ಷೇತ್ರದಿಂದ ಶುಕ್ರವಾರ ನಾಮಪತ್ರ ಸಲ್ಲಿಸಿದರು.

ಬಿಜು ಜನತಾ ದಳ ಜತೆ ಮುರಿದು ಬಿದ್ದ ಮೈತ್ರಿ ಮಾತುಕತೆ

ಒಡಿಶಾ: ಬಿಜೆಪಿ ಏಕಾಂಗಿ ಸ್ಪರ್ಧೆ

ಭುವನೇಶ್ವರ (ಪಿಟಿಐ): ಒಡಿಶಾದಲ್ಲಿ ಬಿಜೆಪಿಯು ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಯನ್ನು ಏಕಾಂಗಿಯಾಗಿ ಎದುರಿಸಲಿದೆ ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಮನಮೋಹನ್ ಸಮಾಲ್ ಶುಕ್ರವಾರ ತಿಳಿಸಿದರು.

ಇದರೊಂದಿಗೆ ಆಡಳಿತಾರೂಢ ಬಿಜು ಜನತಾ ದಳ (ಬಿಜೆಡಿ) ಜತೆಗೆ ಬಿಜೆಪಿಯು ಬಹು ದಿನಗಳಿಂದ ನಡೆಸುತ್ತಿದ್ದ ಮೈತ್ರಿ ಮಾತುಕತೆ ವಿಫಲವಾದಂತಾಗಿದೆ.

'ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಭಾರತ ಮತ್ತು ಒಡಿಶಾ ಅಭಿವೃದ್ಧಿಗಾಗಿ ಲೋಕಸಭೆಯ 21 ಮತ್ತು ವಿಧಾನಸಭೆಯ 147 ಕ್ಷೇತ್ರಗಳಲ್ಲಿ ಬಿಜೆಪಿಯು ಏಕಾಂಗಿಯಾಗಿ ಚುನಾವಣೆ ಎದುರಿಸಲಿದೆ. ಯಾವುದೇ ಪಕ್ಷದೊಂದಿಗೆ ಮೈತ್ರಿ ಇಲ್ಲ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರಕ್ಕೆ ಕಳೆದ 10 ವರ್ಷಗಳಿಂದ ವಿವಿಧ ಸಂದರ್ಭಗಳಲ್ಲಿ ಬೆಂಬಲ ವ್ಯಕ್ತಪಡಿಸಿದ್ದಕ್ಕಾಗಿ ಬಿಜೆಡಿ ಅಧ್ಯಕ್ಷ ಮತ್ತು ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರಿಗೆ ಸಮಾಲ್ ಧನ್ಯವಾದ ತಿಳಿಸಿದರು.

ಬಿಜೆಡಿ ಸ್ಪಷ್ಟನೆ: ಬಿಜೆಪಿಯ ಹೇಳಿಕೆಯ ಬೆನ್ನಲ್ಲೇ ಬಿಜೆಡಿಯೂ ಈ ಸಂಬಂಧ ಸ್ಪಷ್ಟನೆ ನೀಡಿದೆ. ಒಡಿಶಾದ 21 ಲೋಕಸಭಾ ಕ್ಷೇತ್ರಗಳು ಮತ್ತು 147 ವಿಧಾನಸಭಾ ಕ್ಷೇತ್ರಗಳಲ್ಲಿ ಪಕ್ಷವು ಸ್ಪರ್ಧಿಸಲಿದೆ ಎಂದು ಬಿಜೆಡಿ ಸಂಘಟನಾ ಕಾರ್ಯದರ್ಶಿ ಪ್ರಣವ್ ಪ್ರಕಾಶ್ ದಾಸ್ ಹೇಳಿದ್ದಾರೆ. 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, ಬಿಜೆಡಿ ರಾಜ್ಯದಲ್ಲಿ ಮೂರನೇ ನಾಲ್ಕರಷ್ಟು ಸ್ಥಾನಗಳಲ್ಲಿ ಗೆಲ್ಲಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪಕ್ಷ ತೊರೆದ ಬಿಜೆಡಿ ಸಂಸದ

ಕಟಕ್ (ಪಿಟಿಐ): ಬಿಜೆಡಿಯ ಹಿರಿಯ ಸಂಸದ ಮತ್ತು ಪಕ್ಷದ ಸಂಸ್ಥಾಪಕರಲ್ಲಿ ಒಬ್ಬರಾದ ಭರ್ತೃಹರಿ ಮಹತಾಬ್ ಅವರು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ಶುಕ್ರವಾರ ರಾಜೀನಾಮೆ ಸಲ್ಲಿಸಿದರು. ಕಟಕ್ ಲೋಕಸಭಾ ಕ್ಷೇತ್ರದಿಂದ ಆರು ಬಾರಿ ಸಂಸದರಾಗಿ ಆಯ್ಕೆಯಾಗಿರುವ ಮಹತಾಬ್, 'ಬಿಜೆಡಿ ಅಧ್ಯಕ್ಷ ಮತ್ತು ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರಿಗೆ ರಾಜೀನಾಮೆ ಪತ್ರ ಕಳುಹಿಸಿದ್ದೇನೆ' ಎಂದು ಹೇಳಿದರು. ಪಕ್ಷದಲ್ಲಿ ಸ್ವತಂತ್ರವಾಗಿ ಕೆಲಸ ಮಾಡಲು ಅವಕಾಶ ಇಲ್ಲದ ಕಾರಣ ರಾಜೀನಾಮೆ ನೀಡಿದ್ದೇನೆ ಎಂದು ತಿಳಿಸಿದರು.

ತಮಿಳುನಾಡು: 14 ಕ್ಷೇತ್ರಗಳಿಗೆ ಬಿಜೆಪಿ ಅಭ್ಯರ್ಥಿ ಘೋಷಣೆ

ನವದೆಹಲಿ (ಪಿಟಿಐ): ತಮಿಳುನಾಡಿನ 14 ಲೋಕಸಭಾ ಕ್ಷೇತ್ರಗಳಿಗೆ ಮತ್ತು ಪುದುಚೇರಿಯ ಏಕೈಕ ಕ್ಷೇತ್ರಕ್ಕೆ ಬಿಜೆಪಿ ಶುಕ್ರವಾರ ಅಭ್ಯರ್ಥಿಗಳನ್ನು ಘೋಷಿಸಿದೆ.

ಪುದುಚೇರಿಯಲ್ಲಿ ಸಚಿವ ನಮಃಶಿವಾಯಮ್ ಅವರನ್ನು ಬಿಜೆಪಿ ಕಣಕ್ಕಿಳಿಸಿದೆ.

ತನ್ನ ಮಿತ್ರಪಕ್ಷವಾದ ಪಟ್ಟಾಳ್ ಮಕ್ಕಳ್ ಕಚ್ಚಿ (ಪಿಎಂಕೆ)ಗೆ ಬಿಜೆಪಿಯು 10 ಕ್ಷೇತ್ರಗಳನ್ನು ಬಿಟ್ಟುಕೊಟ್ಟಿದ್ದು, ಉಳಿದ ಕೆಲವು ಕ್ಷೇತ್ರಗಳನ್ನು ಮೈತ್ರಿಕೂಟದಲ್ಲಿರುವ ಇತರ ಸಣ್ಣ ಪಕ್ಷಗಳಿಗೆ ನೀಡಿದೆ.

ಪಕ್ಷವು ಗುರುವಾರ 9 ಲೋಕಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿತ್ತು.

ನಾಮಪತ್ರ ಸಲ್ಲಿಕೆ



ಮೆರವಣಿಗೆಯ ರಂಗು

ಅಸ್ಸಾಂನ ಸೋನಿತ್‌ಪುರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಪ್ರೇಮ್‌ಲಾಲ್ ಕುಂಜು ಅವರು ನಾಮಪತ್ರ ಸಲ್ಲಿಸುವ ವೇಳೆ ತೇಜ್‌ಪುರ್‌ನಲ್ಲಿ ಶುಕ್ರವಾರ ಅಭಿಮಾನಿಗಳ ಮೆರವಣಿಗೆ -ಪಿಟಿಐ ಚಿತ್ರ

ಮಗಳಿಂದ ಕಿಡ್ನಿ ಪಡೆದು ಟಿಕೆಟ್ ಕೊಟ್ಟ ಲಾಲು: ಸಾಮ್ರಾಟ್

ಪಟ್ನಾ (ಪಿಟಿಐ): 'ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಅವರು ಟಿಕೆಟ್‌ಗಳನ್ನು ಮಾರುವುದರಲ್ಲಿ ಪ್ರವೀಣರಾಗಿದ್ದು, ಪ್ರಸ್ತುತ ಲೋಕಸಭಾ ಚುನಾವಣೆಯಲ್ಲಿಯೂ ಆಕಾಂಕ್ಷಿಗಳಿಗೆ ತಮ್ಮ ಪಕ್ಷದ ಟಿಕೆಟ್‌ಗಳನ್ನು ಮಾರುತ್ತಿದ್ದಾರೆ' ಎಂದು ಬಿಹಾರ ಬಿಜೆಪಿ ಅಧ್ಯಕ್ಷ ಮತ್ತು ರಾಜ್ಯದ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಗಂಭೀರ ಆರೋಪ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಚೌಧರಿ, 'ತಮ್ಮ ಮಗಳನ್ನೂ ಬಿಡದ ಲಾಲು, ಮೊದಲು ಅವರಿಂದ ಕಿಡ್ನಿ ಪಡೆದುಕೊಂಡು ನಂತರ ಚುನಾವಣಾ ಟಿಕೆಟ್ ನೀಡಿದ್ದಾರೆ' ಎಂದು ಹೇಳಿದ್ದಾರೆ.

ಚೌಧರಿ ಆರೋಪವನ್ನು ತೀವ್ರವಾಗಿ ಖಂಡಿಸಿರುವ ಲಾಲು ಪುತ್ರಿ ರೋಹಿಣಿ ಆಚಾರ್ಯ, 'ಕೀಳು ಚಿಂತನೆ, ಕೀಳು ಮಾತು, ಕೀಳು ವರ್ತನೆ'ಯ ಜನರಿಗೆ



ಸಾಮ್ರಾಟ್

ನಾನು ಜನತಾ ನ್ಯಾಯಾಲಯದಲ್ಲಿ ಉತ್ತರಿಸುವುದಾಗಿ ಪ್ರತಿಕ್ರಿಯಿಸಿದ್ದಾರೆ.

ಈ ಬಗ್ಗೆ 'ಎಕ್ಸ್' ವೇದಿಕೆಯಲ್ಲಿ ಪೋಸ್ಟ್ ಮಾಡಿರುವ ರೋಹಿಣಿ, 'ಲಾಲೂಜಿ ನನ್ನ ತಂದೆ. ತಂದೆಯೆಡೆಗಿನ ಪ್ರೀತಿ ಮತ್ತು ಕರ್ತವ್ಯ ಪ್ರಜ್ಞೆಯಿಂದ ನಾನು ಅವರಿಗೆ ಒಂದು ಕಿಡ್ನಿ ನೀಡಿದ್ದೇನೆ. ಕುಟುಂಬಕ್ಕಾಗಿ ಮತ್ತು ಜನ್ಮಭೂಮಿ ಬಿಹಾರಕ್ಕಾಗಿ ಪ್ರಾಣ ತ್ಯಾಗ ಮಾಡಲೂ ನಾನು ಸಿದ್ಧ' ಎಂದು ಹೇಳಿದ್ದಾರೆ.

ತಂದೆ –ತಾಯಿ ನನಗೆ ದೇವರಿಗಿಂತ ದೊಡ್ಡವರು ಎಂದಿರುವ ರೋಹಿಣಿ, ತಾನು ಸದಾ ಅವರಿಗೆ ಋಣಿಯಾಗಿದ್ದೇನೆ ಎಂದು ತಿಳಿಸಿದ್ದಾರೆ.

ಸಿಂಗಪುರದಲ್ಲಿ ನೆಲೆಸಿರುವ ಲಾಲು ಪುತ್ರಿ ರೋಹಿಣಿ, ತಮ್ಮ ತಂದೆಗೆ 2022ರಲ್ಲಿ ಒಂದು ಕಿಡ್ನಿ ದಾನ ಮಾಡಿದ್ದರು. ಅವರು ಸರಣ್ ಕ್ಷೇತ್ರದಿಂದ ಆರ್‌ಜೆಡಿ ಅಭ್ಯರ್ಥಿಯಾಗಿ ಸ್ಪರ್ಧಿಸುವ ಮೂಲಕ ಚುನಾವಣಾ ರಾಜಕೀಯಕ್ಕೆ ಪದಾರ್ಪಣೆ ಮಾಡಿದ್ದಾರೆ.

ಸಾಮ್ರಾಟ್ ಚೌಧರಿ ಅವರು ಕುಶ್ವಾಹ ಸಮುದಾಯಕ್ಕೆ ಸೇರಿದ್ದು, ಸಮುದಾಯದ ಮುಖಂಡರೂ ಅವರ ಹೇಳಿಕೆಯನ್ನು ಖಂಡಿಸಿದ್ದಾರೆ.

'ನಮ್ಮ ಸಮಾಜ ಮತ್ತು ಸಮುದಾಯ ಎಂದಿಗೂ ಅಗ್ಗದ ಹೇಳಿಕೆಗಳು ಮತ್ತು ಅಗ್ಗದ ಭಾಷೆಯನ್ನು ಬೆಂಬಲಿಸುವುದಿಲ್ಲ' ಎಂದು ಕುಶ್ವಾಹ ಸಮುದಾಯಕ್ಕೆ ಸೇರಿದ ಆರ್‌ಜೆಡಿ ಮುಖಂಡ ಮಧು ಮಂಜರಿ ಕುಶ್ವಾಹ ಹೇಳಿದ್ದಾರೆ.

ಪ್ರಾದೇಶಿಕ ಪಕ್ಷಗಳ ದುರ್ಬಲಗೊಳಿಸುವತ್ತ ಬಿಜೆಪಿ ಚಿತ್ತ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಯು ಬಿಜೆಪಿ ಹಾಗೂ ಕಾಂಗ್ರೆಸ್‌ನ ಜತೆಗೆ ಪ್ರಾದೇಶಿಕ ಪಕ್ಷಗಳಿಗೂ ನಿರ್ಣಾಯಕ. ಕೆಲವೊಂದು ಪ್ರಾದೇಶಿಕ ಪಕ್ಷಗಳು ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ತೆಕ್ಕೆಯಲ್ಲಿದ್ದರೆ, ಇನ್ನೂ ಕೆಲವು ಪಕ್ಷಗಳು 'ಇಂಡಿಯಾ' ಮೈತ್ರಿಕೂಟದಲ್ಲಿ ಗುರುತಿಸಿಕೊಂಡು ಕಮಲ ಪಾಳಯದ ವಿರುದ್ಧ ಜಂಗೀಕುಸ್ತಿಗೆ ಸಜ್ಜಾಗಿವೆ.

ಬಿಎಸ್‌ಪಿ, ಬಿಜೆಡಿ, ವೈಎಸ್‌ಆರ್‌ಸಿಪಿಯಂತಹ ಪಕ್ಷಗಳು ಆಡಳಿತ– ವಿಪಕ್ಷಗಳ ಗುಂಪುಗಳಿಂದ ಅಂತರ ಕಾಯ್ದುಕೊಂಡು ಚುನಾವಣೆಯ ನಂತರದ 'ಅವಕಾಶ'ಕ್ಕಾಗಿ ಕಾಯುತ್ತಿವೆ. ಬಿಎಸ್‌ಪಿ, ಟಿಆರ್‌ಎಸ್, ಜೆಡಿಎಸ್‌ನಂತಹ ಪಕ್ಷಗಳಿಗೆ ಈ ಚುನಾವಣೆ ಅಸ್ತಿತ್ವದ ಪ್ರಶ್ನೆ. ಮಿಷನ್–370'ರ ಜಪ ಜಪಿಸುತ್ತಿರುವ ಕಮಲ ಪಾಳಯವು ಪ್ರಾದೇಶಿಕ ಪಕ್ಷಗಳ ನೆಲೆ ದುರ್ಬಲಗೊಳಿಸುವತ್ತ ದೃಷ್ಟಿ ನೆಟ್ಟಿದೆ.

ತಮಿಳುನಾಡಿನಲ್ಲಿ 2019ರಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಡಿಎಂಕೆ ಮೈತ್ರಿಕೂಟ ಗೆದ್ದಿತ್ತು. ಎಐಎಡಿಎಂಕೆಯು ಬಿಜೆಪಿ ಸಖ್ಯ ತೊರೆದಿದೆ. ಸನಾತನ ಧರ್ಮದಂತಹ ವಿಷಯಗಳನ್ನು ಮುಂದಿಟ್ಟುಕೊಂಡು ಹಾಗೂ ಸಣ್ಣ ಪಕ್ಷಗಳ ಮೈತ್ರಿಕೂಟ ಮಾಡಿಕೊಂಡು ಬಿಜೆಪಿ ಆಕ್ರಮಣಕಾರಿ ಪ್ರಚಾರ ನಡೆಸುತ್ತಿದೆ.

ಪಶ್ಚಿಮ ಬಂಗಾಳದಲ್ಲಿ ಕಳೆದ ಸಲ ಬಿಜೆಪಿ 18 ಸ್ಥಾನಗಳನ್ನು ಗೆದ್ದು ಗಮನಾರ್ಹ ಸಾಧನೆ ಮಾಡಿತ್ತು. ಪೌರತ್ವ ತಿದ್ದುಪಡಿ ಕಾಯ್ದೆ ಜಾರಿಯಿಂದಾಗಿ ರಾಜ್ಯದಲ್ಲಿ ಪಕ್ಷದ ನೆಲೆ ಇನ್ನಷ್ಟು ವಿಸ್ತಾರವಾಗಲಿದೆ ಎಂಬ ವಿಶ್ವಾಸದಲ್ಲಿ ಕಮಲ ಪಾಳಯ ಇದೆ. ಸಂದೇಶ್ ಖಾಲಿ ಹಿಂಸಾಚಾರದ ಪರಿಣಾಮ ಹಾಗೂ ಆಡಳಿತ ವಿರೋಧಿ ಅಲೆಯನ್ನು ಟಿಎಂಸಿ ಹೇಗೆ ಎದುರಿಸುತ್ತದೆ ಎಂಬುದು ಕುತೂಹಲಕಾರಿ. 'ಇಂಡಿಯಾ' ಮೈತ್ರಿಕೂಟದಿಂದ ದೂರ ಸರಿದಿರುವ ಪಕ್ಷವು ಎಲ್ಲ ಕ್ಷೇತ್ರಗಳಲ್ಲೂ ಸ್ಪರ್ಧಿಸುತ್ತಿದೆ.

2019ರಲ್ಲಿ ಪ್ರಾದೇಶಿಕ ಪಕ್ಷಗಳ ಸಾಧನೆ

ಉತ್ತರ ಪ್ರದೇಶ	
ಎಸ್‌ಪಿ	5
ಬಿಎಸ್‌ಪಿ	10
ಮಹಾರಾಷ್ಟ್ರ	
ಶಿವಸೇನಾ *	18
ಎನ್‌ಸಿಪಿ*	4
ಎಐಎಂಐಎಂ	1
ಒಡಿಶಾ	
ಬಿಜೆಡಿ	12
ಜಾರ್ಖಂಡ್	
ಎಜೆಎಸ್‌ಯು	1
ಜೆಎಂಎಂ	1
ತಮಿಳುನಾಡು	
ಡಿಎಂಕೆ	23
ಎಐಎಡಿಎಂಕೆ	1
ಬಿಹಾರ	
ಜೆಡಿಯು	16
ಲೋಕ ಜನಶಕ್ತಿ ಪಕ್ಷ	6
ಆಂಧ್ರ ಪ್ರದೇಶ	
ವೈಎಸ್‌ಆರ್‌ಸಿಪಿ	22
ಟಿಡಿಪಿ	3
ತೆಲಂಗಾಣ	
ಬಿಆರ್‌ಎಸ್	9
ಎಐಎಂಐಎಂ	1
ಪಶ್ಚಿಮ ಬಂಗಾಳ	
ಟಿಎಂಸಿ	12
ಕರ್ನಾಟಕ	
ಜೆಡಿಎಸ್	1
ಪಂಜಾಬ್	
ಶಿರೋಮಣಿ ಅಕಾಲಿ ದಳ	2
ಎಎಪಿ	1

ಒಡಿಶಾದ ಪ್ರಾದೇಶಿಕ ಪಕ್ಷ ಬಿಜೆಡಿಯು ದೆಹಲಿಯಲ್ಲಿ ಬಿಜೆಪಿಗೆ ಆಪ್ತ ಮಿತ್ರ ಹಾಗೂ ರಾಜ್ಯದಲ್ಲಿ ಶತ್ರು. ಬಿಜೆಡಿಗೆ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಪ್ರಮುಖ ಶಕ್ತಿ. ಸಮರ್ಥ ಉತ್ತರಾಧಿಕಾರಿಯನ್ನು ಕಂಡುಕೊಳ್ಳಲು ಅವರು ಹೆಣಗಾಡುತ್ತಿದ್ದಾರೆ. ಈ ಅವಕಾಶವನ್ನು ಬಳಸಿಕೊಂಡು ರಾಜ್ಯದಲ್ಲಿ ನೆಲೆ ವಿಸ್ತರಿಸಲು ಬಿಜೆಪಿ ಹವಣಿಸುತ್ತಿದೆ.

ಉತ್ತರ ಪ್ರದೇಶದಲ್ಲಿ ಕಳೆದ ಸಲ ಮೈತ್ರಿ ಮಾಡಿಕೊಂಡು ಕಣಕ್ಕಿಳಿದಿದ್ದ ಎಸ್‌ಪಿ ಹಾಗೂ ಬಿಎಸ್‌ಪಿ ಈ ಸಲ ಪ್ರತ್ಯೇಕವಾಗಿ ಸ್ಪರ್ಧಿಸುತ್ತಿವೆ. ಆರ್‌ಎಲ್‌ಡಿ ಎನ್‌ಡಿಎ ಮೈತ್ರಿಕೂಟಕ್ಕೆ ಸೇರ್ಪಡೆಯಾಗಿದೆ. ಬಿಎಸ್‌ಪಿ ನಾಯಕಿ ಮಾಯಾವತಿ ಮೌನ ಕಂಡು ಪಕ್ಷದ ನಾಯಕರು ಗುಳೆ ಹೊರಟಿದ್ದಾರೆ. ಎಸ್‌ಪಿ ಹಾಗೂ ಕಾಂಗ್ರೆಸ್ ಜತೆಗೂಡಿ ಹೋರಾಟಕ್ಕೆ ಅಣಿಯಾಗಿವೆ.

ಮಹಾರಾಷ್ಟ್ರದಲ್ಲಿ ಶಿವಸೇನಾ ಹಾಗೂ ಎನ್‌ಸಿಪಿ ಛಿದ್ರವಾಗಿವೆ. ಶಿವಸೇನಾದ ಏಕನಾಥ ಶಿಂದೆ ಬಣ ಹಾಗೂ ಎನ್‌ಸಿಪಿಯ ಅಜಿತ್ ಪವಾರ್ ಬಣ ಎನ್‌ಡಿಎ ಮೈತ್ರಿಕೂಟದಲ್ಲಿದ್ದರೆ, ಶಿವಸೇನಾದ ಉದ್ಧವ್ ಠಾಕ್ರೆ ಬಣ ಹಾಗೂ ಶರದ್ ಪವಾರ್ ಬಣ 'ಇಂಡಿಯಾ' ಮೈತ್ರಿಕೂಟದಲ್ಲಿವೆ. ಉದ್ಧವ್ ಠಾಕ್ರೆ ಹಾಗೂ ಶರದ್ ಪವಾರ್ ಅನುಕಂಪದ ಅಲೆಯನ್ನು ನೆಚ್ಚಿಕೊಂಡಿದ್ದಾರೆ.

ಬಿಹಾರದಲ್ಲಿ ಕಳೆದ ಸಲ ಒಂದು ಸ್ಥಾನಕ್ಕೆ ತೃಪ್ತಿಪಟ್ಟಿದ್ದ ಆರ್‌ಜೆಡಿ–ಕಾಂಗ್ರೆಸ್–ಎಡ ಪಕ್ಷಗಳ ಕೂಟವು ಈ ಸಲ ಗಣನೀಯ ಸಾಧನೆ ಮಾಡುವ ನಂಬಿಕೆಯಲ್ಲಿವೆ. ಯಾದವ, ಮುಸ್ಲಿಂ ಹಾಗೂ ದಲಿತ ಮತಗಳ ಮೇಲೆ ಆರ್‌ಜೆಡಿ ಕಣ್ಣಿಟ್ಟಿದೆ.

ಕಾಂಗ್ರೆಸ್ ರಾಷ್ಟ್ರೀಯ ವಕ್ತಾರ ರೋಹನ್ ಗುಪ್ತಾ ರಾಜೀನಾಮೆ

ಅಹಮದಾಬಾದ್ (ಪಿಟಿಐ): ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ವಕ್ತಾರರಾಗಿದ್ದ ರೋಹನ್ ಗುಪ್ತಾ ಅವರು 'ಅವಮಾನ' ಮತ್ತು 'ಚಾರಿತ್ರ್ಯಹರಣ'ದ ಕಾರಣಕ್ಕೆ ಪಕ್ಷದ ಪ್ರಾಥಮಿಕ ಸದಸ್ಯತ್ವ ಮತ್ತು ಇತರ ಎಲ್ಲ ಹುದ್ದೆಗಳಿಗೆ ಶುಕ್ರವಾರ ರಾಜೀನಾಮೆ ಸಲ್ಲಿಸಿದ್ದಾರೆ. ಇದರಿಂದ ಲೋಕಸಭಾ ಚುನಾವಣೆಯ ಸಮಯದಲ್ಲಿ ಪಕ್ಷಕ್ಕೆ ಹಿನ್ನಡೆಯಾದಂತಾಗಿದೆ.

ಗುಪ್ತಾ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ತಮ್ಮ ರಾಜೀನಾಮೆ ಪತ್ರವನ್ನು ಬರೆದಿದ್ದು, ಅದನ್ನು 'ಎಕ್ಸ್' ವೇದಿಕೆಯಲ್ಲೂ ಹಂಚಿಕೊಂಡಿದ್ದಾರೆ.

ಕಾಂಗ್ರೆಸ್ ಪಕ್ಷವು ಗುಪ್ತಾ ಅವರನ್ನು ಅಹಮದಾಬಾದ್ ಪೂರ್ವ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಎಂದು ಘೋಷಿಸಿತ್ತು. ಆದರೆ, ತಮ್ಮ ತಂದೆಯ ಅನಾರೋಗ್ಯದ ನೆಪವೊಡ್ಡಿ ಗುಪ್ತಾ ಕಣದಿಂದ ಹಿಂದೆ ಸರಿದಿದ್ದರು.

'ಪಕ್ಷದ ಸಂವಹನ ವಿಭಾಗಕ್ಕೆ ಸಂಬಂಧಿಸಿದ ಹಿರಿಯ ನಾಯಕರೊಬ್ಬರಿಂದ ನಾನು ಕಳೆದ ಎರಡು ವರ್ಷದಿಂದ ನಿರಂತರ ಅವಮಾನ ಮತ್ತು ಚಾರಿತ್ರ್ಯಹರಣ ಅನುಭವಿಸಿದ್ದೇನೆ. ಅದೇ ಹೊತ್ತಿಗೆ ಖಾಸಗಿ ಬಿಕ್ಕಟ್ಟು ನಾನು ರಾಜೀನಾಮೆ ನಿರ್ಧಾರ ತೆಗೆದುಕೊಳ್ಳಲು ಕಾರಣವಾಗಿದೆ' ಎಂದು ಅವರು ಪತ್ರದಲ್ಲಿ ವಿವರಿಸಿದ್ದಾರೆ.

ರಾಜೀನಾಮೆ ನಿರ್ಧಾರವು ಅತ್ಯಂತ ಕಠಿಣವಾಗಿತ್ತು. ಆದರೆ, ತನ್ನ ಆತ್ಮಗೌರವ ಕಾಪಾಡಿಕೊಳ್ಳಲು ಅನಿವಾರ್ಯವಾಗಿತ್ತು ಎಂದು ಗುಪ್ತಾ ತಿಳಿಸಿದ್ದಾರೆ.

ರೋಹನ್ ಗುಪ್ತಾ ಅವರ ತಂದೆ ರಾಜ್‌ಕುಮಾರ್ ಗುಪ್ತಾ ಎರಡು ದಶಕಗಳ ಹಿಂದೆ ಕಾಂಗ್ರೆಸ್‌ನಿಂದ ಅಹಮದಾಬಾದ್ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತಿದ್ದರು. ಅವರು ತಮ್ಮ ಮಗ ರೋಹನ್ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದನ್ನು ತೀವ್ರವಾಗಿ ವಿರೋಧಿಸಿದ್ದರು.

ಎಂಥಾ ಮಾತು!



ತಮ್ಮ ಅಧಿಕಾರದ ಅವಧಿ ಅಂತ್ಯವಾಗುತ್ತಿರುವುದರಿಂದ ಪ್ರಧಾನಿ ಮೋದಿ ನಿದ್ದೆ ಕಳೆದುಕೊಂಡಿದ್ದಾರೆ. ಸೋಲಿನ ಭಯ ಅವರ ಮುಖದಲ್ಲಿ ಪ್ರತಿಫಲಿಸುತ್ತಿದೆ. ಬಿಜೆಪಿಯ ಸೋಲಿನ ಭಯವೇ ಅರವಿಂದ ಕೇಜ್ರಿವಾಲ್ ಬಂಧನಕ್ಕೆ ಕಾರಣವಾಗಿದೆ. ಚುನಾವಣಾ ಬಾಂಡ್‌ಗಳ ರೀತಿಯಲ್ಲಿಯೇ ಅವರು ಪಿಎಂ ಕೇರ್ಸ್ ನಿಧಿಗಾಗಿಯೂ ಹಣ ಸಂಗ್ರಹಿಸಿದ್ದಾರೆ. ಜೂನ್ ತಿಂಗಳಲ್ಲಿ 'ಇಂಡಿಯಾ' ಗೆದ್ದು ಅಧಿಕಾರ ಹಿಡಿಯುವುದರೊಂದಿಗೆ ಪಿಎಂ ಕೇರ್ಸ್ ಕುರಿತ ಎಲ್ಲ ರಹಸ್ಯಗಳೂ ಬಯಲಾಗಲಿವೆ. 'ಆಯುಷ್ಮಾನ್ ಭಾರತ್'ನಂಥ ಯೋಜನೆಗಳ ಮೂಲಕ ₹7 ಲಕ್ಷ ಕೋಟಿ ಮೊತ್ತದ ಅವ್ಯವಹಾರ ನಡೆದಿರುವುದರ ಬಗ್ಗೆ ಸಿಎಜಿ ವರದಿಯಲ್ಲಿ ವಿವರಿಸಲಾಗಿದೆ.

ಎಂ.ಕೆ.ಸ್ಟಾಲಿನ್, ತಮಿಳುನಾಡು ಮುಖ್ಯಮಂತ್ರಿ



ಲೋಕಸಭಾ ಚುನಾವಣೆಯಲ್ಲಿ ವಿರೋಧ ಪಕ್ಷಗಳ ಮೈತ್ರಿಕೂಟವು ಜಯಗಳಿಸುವ ಮೂಲಕ 2004ರ ಇತಿಹಾಸ ಮರುಕಳಿಸಲಿದೆ. 'ಇಂಡಿಯಾ ಶೈನಿಂಗ್' ಎಂಬ ಪ್ರಚಾರ ಅಭಿಯಾನವನ್ನು ನಡೆಸಿಯೂ ಆಗ ಬಿಜೆಪಿಯು ಸೋಲನುಭವಿಸಿತ್ತು. 'ಯುವನ್ಯಾಯ', 'ನಾರಿ ನ್ಯಾಯ', 'ಶ್ರಮಿಕ್ ನ್ಯಾಯ', 'ಕಿಸಾನ್ ನ್ಯಾಯ' ಮತ್ತು 'ಹಿಸ್ಸೇದಾರಿ ನ್ಯಾಯ' ಮತ್ತು 25 ಗ್ಯಾರಂಟಿಗಳ ಮೂಲಕ 'ಇಂಡಿಯಾ' ಒಕ್ಕೂಟವು ಚುನಾವಣೆಯನ್ನು ಎದುರಿಸಲಿದೆ. ನಮ್ಮ ಗ್ಯಾರಂಟಿಗಳು ಒಬ್ಬ ವ್ಯಕ್ತಿಯದ್ದಲ್ಲ. ನಮ್ಮ ಅನುಭವದ ಆಧಾರದಲ್ಲಿ ಇದನ್ನು ನೀಡುತ್ತಿದ್ದೇವೆ

ಜೈರಾಮ್ ರಮೇಶ್, ಕಾಂಗ್ರೆಸ್ ನಾಯಕ

ಕ್ಷೇತ್ರ ಮಹಾತ್ಮೆ



ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕಣಕ್ಕಿಳಿದಿರುವುದರಿಂದ ಕೇರಳದ ವಯನಾಡ್ ಲೋಕಸಭಾ ಕ್ಷೇತ್ರವು ಈ ಬಾರಿಯೂ ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗಿದೆ. ಈ ಕ್ಷೇತ್ರದಲ್ಲಿ ಕಳೆದ ಬಾರಿ ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟಿದ್ದ ಆಡಳಿತಾರೂಢ ಎಲ್‌ಡಿಎಫ್ ಮೈತ್ರಿಕೂಟದ ಜೊತೆಗಿರುವ ಸಿಪಿಐ, ಈ ಬಾರಿ ಆನಿ ರಾಜಾ ಅವರನ್ನು ಸ್ಪರ್ಧೆಗಿಳಿಸುವ ಮೂಲಕ ಕಣವನ್ನು ಇನ್ನಷ್ಟು ರಂಗೇರಿಸಿದೆ. ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜಾ ಅವರ ಪತ್ನಿ ಆನಿ ಅವರು ಸಿಪಿಐ ಮಹಿಳಾ ಘಟಕದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯೂ ಹೌದು. ಹಲವು ಹೋರಾಟಗಳ ಮೂಲಕ ಮುಂಚೂಣಿಗೆ ಬಂದಿರುವ ಆನಿ ಅವರು ರಾಹುಲ್ ಅವರಿಗೆ ಪ್ರಬಲ ಸ್ಪರ್ಧೆ ನೀಡಲು ಮುಂದಾಗಿದ್ದಾರೆ. ಮುಸ್ಲಿಮರ ಮತಗಳ ಮೇಲೆ ಕಣ್ಣಿಟ್ಟಿರುವ ಬಿಜೆಪಿಯು ಪಕ್ಷದ ರಾಷ್ಟ್ರೀಯ ಉಪಾಧ್ಯಕ್ಷ ಅಬ್ದುಲ್ಲಾ ಕುಟ್ಟಿ ಅವರನ್ನು ಅಖಾಡಕ್ಕೆ ಇಳಿಸುವ ಸಾಧ್ಯತೆಯಿದೆ. ಈ ಬಾರಿ ರಾಹುಲ್ ಗಾಂಧಿ ಅವರನ್ನು ವಯನಾಡ್‌ನಿಂದ ಸ್ಪರ್ಧೆಗಿಳಿಸಬಾರದು ಎಂದು 'ಇಂಡಿಯಾ' ಮೈತ್ರಿಕೂಟದ ಭಾಗವಾಗಿರುವ ಸಿಪಿಎಂ, ಕಾಂಗ್ರೆಸ್ ಅನ್ನು ಆರಂಭದಿಂದಲೇ ಒತ್ತಾಯಿಸಿತ್ತು. ಆದರೆ ರಾಜ್ಯ ನಾಯಕರ ಒತ್ತಡಕ್ಕೆ ಮಣಿದು ಮತ್ತು ಪಕ್ಷಕ್ಕೆ ಸುರಕ್ಷಿತ ಕ್ಷೇತ್ರವೆಂದು ಕಂಡುಕೊಂಡಿರುವ ಕಾರಣ ಕಾಂಗ್ರೆಸ್, ರಾಹುಲ್ ಅವರನ್ನೇ ಮತ್ತೆ ಕಣಕ್ಕಿಳಿಸಿದೆ. 'ಇಂಡಿಯಾ' ಒಕ್ಕೂಟದ ಜೊತೆಗೆ ಗುರುತಿಸಿಕೊಂಡರೂ, ಕೇರಳದಲ್ಲಿ ಪ್ರತಿಸ್ಪರ್ಧಿಯಾಗಿರುವ ಕಾಂಗ್ರೆಸ್‌ಗೆ ಸಿಪಿಎಂ ಮತ್ತು ಅದರ ನೇತೃತ್ವದ ಎಲ್‌ಡಿಎಫ್ ಮೈತ್ರಿಕೂಟವು ಪ್ರಬಲ ಸ್ಪರ್ಧೆ ನೀಡುತ್ತಿದೆ.

ಮುಖಾಮುಖಿ ಜೋಧಪುರ (ರಾಜಸ್ಥಾನ)



ಗಜೇಂದ್ರ ಸಿಂಗ್ ಶೆಖಾವತ್
ಬಿಜೆಪಿ

ಗಜೇಂದ್ರ ಸಿಂಗ್ ಶೆಖಾವತ್ ಅವರು ಬಿಜೆಪಿಯ ಅಧಿಕಾರದ ಏಣಿಯ ಮೂಲಕ ಮೇಲೇರಿ ಬಂದ ಮುಖಂಡ. ಸದ್ಯ ಕೇಂದ್ರ ಜಲಶಕ್ತಿ ಸಚಿವರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು ಪಕ್ಷದ ವರಿಷ್ಠರ ನೆಚ್ಚಿನ ಅಭ್ಯರ್ಥಿಯೂ ಹೌದು. ರಾಜಸ್ಥಾನದಲ್ಲಿ 2023ರಲ್ಲಿ ಬಿಜೆಪಿ ಮರಳಿ ಅಧಿಕಾರಕ್ಕೇರಿದ ಸಂದರ್ಭದಲ್ಲಿ ಮುಖ್ಯಮಂತ್ರಿ ಹುದ್ದೆಗೆ ಶೆಖಾವತ್ ಅವರ ಹೆಸರು ಕೇಳಿಬಂದಿತ್ತು. ಜಲಜೀವನ ಅಭಿಯಾನವನ್ನು ಸಮರ್ಥವಾಗಿ ನಿಭಾಯಿಸಿರುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರ ಪ್ರಶಂಸೆಗೂ ಪಾತ್ರರಾಗಿದ್ದಾರೆ. ರಜಪೂತ ಕುಟುಂಬದಿಂದ ಬಂದಿರುವ ಶೆಖಾವತ್, 1992ರಲ್ಲಿ ಜೋಧಪುರದ ಜಯ ನಾರಾಯಣ ವ್ಯಾಸ ವಿಶ್ವವಿದ್ಯಾಲಯದಲ್ಲಿ ಕಲಿಯುತ್ತಿದ್ದಾಗಲೇ ರಾಜಕೀಯ ಕ್ಷೇತ್ರಕ್ಕೆ ಪ್ರವೇಶಿಸಿದ್ದರು. ಕಲಾ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಇವರು, ತತ್ವಶಾಸ್ತ್ರದಲ್ಲಿ ಎಂ.ಫಿಲ್ ಪಡೆದಿದ್ದಾರೆ. 2014ರಲ್ಲಿ ಜೋಧಪುರ ಲೋಕಸಭಾ ಕ್ಷೇತ್ರದಿಂದ 4 ಲಕ್ಷ ಮತಗಳಿಗಿಂತಲೂ ಹೆಚ್ಚು ಅಂತರದಲ್ಲಿ ಗೆದ್ದು ಸಂಸತ್ ಪ್ರವೇಶಿಸಿದ್ದರು. 2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ನಾಯಕ ಅಶೋಕ್ ಗೆಹಲೋತ್ ಅವರ ಮಗ ವೈಭವ್ ಅವರನ್ನು ಪರಾಭವಗೊಳಿಸಿದ್ದರು.


V/S



ಕರಣ್ ಸಿಂಗ್ ಉಚಿಯಾರ್ಡ
ಕಾಂಗ್ರೆಸ್

ಕರಣ್ ಸಿಂಗ್ ಉಚಿಯಾರ್ಡ ಅವರು ರಾಜಕೀಯದಲ್ಲಿ ಅನನುಭವಿಯಾದರೂ ಸಾಕಷ್ಟು ಹಣದ ಬಲ ಹೊಂದಿರುವವರು. ಆರಂಭದಲ್ಲಿ ಕಾಂಪೌಂಡರ್ ಕೆಲಸ ಮಾಡಿದ್ದ ಅವರು, 1996ರಿಂದಲೂ ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ದೈತ್ಯರಾಗಿ ಬೆಳೆದಿದ್ದಾರೆ. ಕರಣ್ ಸಿಂಗ್ ಅವರ ಆಶಾಪೂರ್ಣ ಬಿಲ್ಡ್‌ಕಾನ್ ಕಂಪನಿಯು ಐಷಾರಾಮಿ ಮನೆ, ಬಂಗಲೆಗಳನ್ನು ನಿರ್ಮಿಸುವಲ್ಲಿ ಹೆಸರುವಾಸಿಯಾಗಿದೆ. ಗಾಳಿಯಂತ್ರ (ವಿಂಡ್‌ಮಿಲ್) ಯೋಜನೆಯನ್ನೂ ಅವರು ಕೈಗೆತ್ತಿಕೊಂಡಿದ್ದಾರೆ. ಹಣಬಲವು ಕರಣ್ ಸಿಂಗ್ ಪರವಾಗಿದ್ದರೂ ಅವರು ಗೆಲ್ಲುವ ಸಾಧ್ಯತೆ ಕಡಿಮೆ ಎಂದು ವಿಶ್ಲೇಷಿಸಲಾಗಿದೆ. ಕಾಂಗ್ರೆಸ್ ನಾಯಕ ಅಶೋಕ್ ಗೆಹಲೋತ್ ಅವರನ್ನು ಕಡೆಗಣಿಸಿ ಸಚಿನ್ ಪೈಲಟ್ ಅವರೊಂದಿಗೆ ಕರಣ್ ಗುರುತಿಸಿಕೊಂಡಿದ್ದಾರೆ. ಇವರು ಕೂಡ ರಜಪೂತರಾದರೂ ಶೆಖಾವತ್ ಅವರ ಗೆಲುವಿನ ಅಂತರವನ್ನು ಕಡಿಮೆಗೊಳಿಸಬಹುದಷ್ಟೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಬಿಜೆಪಿಯ ಪ್ರಬಲ ಅಭ್ಯರ್ಥಿಯ ವಿರುದ್ಧ ಅಖಾಡಕ್ಕೆ ಇಳಿದಿರುವ ಕರಣ್ ಸಿಂಗ್ ಅವರು ಹರಕೆಯ ಕುರಿಯಾಗಲು ಸಂತೋಷವಾಗಿಯೇ ಒಪ್ಪಿಕೊಂಡಿದ್ದಾರೆ.

ಷೇರುಪೇಟೆ ವಹಿವಾಟು 190



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,011
ಇಂದಿನ ಅಂತ್ಯ	22,096
▲	84
ದಿನದ ಗರಿಷ್ಠ	22,180

ವಿನಿಮಯ ದರ

$ ಡಾಲರ್	83.61
£ ಪೌಂಡ್	105.31
€ ಯುರೊ	90.37
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹470
12 ಕ್ಕೆ	₹63
ಮೈಸೂರು	
100ಕ್ಕೆ	₹472

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1500 (1500)
ಸೋಯಾ (ರಿಫೈನ್ಡ್)	₹995 (1000)
ಸೂರ್ಯಕಾಂತಿ (ರಿಫೈನ್ಡ್)	₹970 (975)
ಪಾಮೋಲಿನ್	₹945 (958)

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1400-2000
ಮಧ್ಯಮ	₹800-1400
ಸಣ್ಣ	₹200-1000

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹180
ಆರ್‌ಎಸ್‌ಎಸ್-5	₹172
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹162

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹272-439
ದ್ವಿತಳಿ (ಬಿ.ವಿ)	₹271-566

ಬಳ್ಳಾರಿ ಎಪಿಎಂಸಿ: 3ನೇ ದಿನವೂ ಬಂದ್

ವರ್ತಕರು, ದಲ್ಲಾಳಿಗಳ ನಡುವಿನ ಸಂಘರ್ಷ • ಶೇಂಗಾ ವಹಿವಾಟು ಸ್ಥಗಿತ, ರೈತರ ಮೇಲೆ ಪರಿಣಾಮ

• ಹರಿಶಂಕರ್ ಆರ್.

ಬಳ್ಳಾರಿ: ಬಳ್ಳಾರಿಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ (ಎಪಿಎಂಸಿ) ಶೇಂಗಾ ವಹಿವಾಟು ಮೂರು ದಿನಗಳಿಂದ ಸ್ಥಗಿತಗೊಳ್ಳಲು ವರ್ತಕರು ಮತ್ತು ದಲ್ಲಾಳಿಗಳ ನಡುವಿನ ಬಹುದಿನಗಳ ಸಂಘರ್ಷವೇ ಕಾರಣ. ಇದರ ನೇರ ಪರಿಣಾಮ ಎಪಿಎಂಸಿ, ರೈತರು, ಹಮಾಲಿಗಳು, ಕೂಲಿಗಳ ಮೇಲೆ ಆಗಿದೆ.

ವರ್ತಕರೊಬ್ಬರು ₹3 ಕೋಟಿ ಮೌಲ್ಯದ ಶೇಂಗಾವನ್ನು ದಲ್ಲಾಳಿಗಳ ಮೂಲಕ ಖರೀದಿಸಿ, ಹಣ ಪಾವತಿಸದೇ ಮಾರ್ಚ್ 18ರಿಂದ ತಲೆ ಮರೆಸಿ ಕೊಂಡಿದ್ದಾರೆ. ಇದು ದಲ್ಲಾಳಿಗಳ ಆಕ್ರೋಶಕ್ಕೆ ಕಾರಣವಾಗಿದೆ.

'ಬಳ್ಳಾರಿ ಎಪಿಎಂಸಿಗೆ ಕರ್ನಾಟಕದಿಂದ ಅಲ್ಲದೇ ಆಂಧ್ರ ಪ್ರದೇಶದ ಅನಂತಪುರ ಮತ್ತು ಕರ್ನೂಲು ಜಿಲ್ಲೆಗಳಿಂದ ಶೇಂಗಾ ಬರುತ್ತದೆ. ವ್ಯಾಪಾರ ನಡೆದ ದಿನವೇ ವರ್ತಕರು ದಲ್ಲಾಳಿಗಳಿಗೆ



ಶೇಂಗಾ ಮಾರಾಟ ಸ್ಥಗಿತಗೊಂಡಿರುವ ಹಿನ್ನೆಲೆಯಲ್ಲಿ ಬಣಗುಡುತ್ತಿರುವ ಬಳ್ಳಾರಿಯ ಎಪಿಎಂಸಿ ಆವರಣ

ಮತ್ತು ದಲ್ಲಾಳಿಗಳು ರೈತರಿಗೆ ಹಣ ಪಾವತಿಸಬೇಕು. ಈ ಪ್ರಕ್ರಿಯೆ ಹಲವು ದಿನಗಳಿಂದ ನಡೆದಿದ್ದರೂ ದಲ್ಲಾಳಿಗಳಿಗೆ ವರ್ತಕರಿಂದ ಸಕಾಲಕ್ಕೆ ಹಣ ಪಾವತಿಯಾಗುತ್ತಿಲ್ಲ ಎಂಬ ಆರೋಪವಿದೆ. ಈ ಮುಸುಕಿನ ಗುದ್ದಾಟ ಈಗ ತಾರಕಕ್ಕೇರಿದೆ' ಎಂದು ಮೂಲಗಳು ತಿಳಿಸಿವೆ.

'ಮೂರು ತಿಂಗಳಲ್ಲಿ ವರ್ತಕರಿಂದ ದಲ್ಲಾಳಿಗಳಿಗೆ ₹8 ಕೋಟಿ ಬಾಕಿ ಬರಬೇಕಿದೆ. ಚುನಾವಣಾ ನೀತಿ ಸಂಹಿತೆ ನೆಪ ಹೇಳಿ ಹಣ ಪಾವತಿ ಮತ್ತಷ್ಟು ವಿಳಂಬ ಮಾಡಲಾಗುತ್ತಿದೆ. ಹೀಗೆಯೇ ಮುಂದುವರಿದರೆ ರೈತರಿಗೆ ಏನು ಹೇಳುವುದು? ಒಮ್ಮೆ ರೈತರು ನಂಬಿಕೆ ಕಳೆದುಕೊಂಡರೆ, ಅವರನ್ನು ಪುನಃ ಎಪಿಎಂಸಿಗೆ ಕರೆತರುವುದು ಕಷ್ಟ. ಅದಕ್ಕೆ ವಹಿವಾಟು ನಿಲ್ಲಿಸಿದ್ದೇವೆ' ಎಂದು ದಲ್ಲಾಳಿಗಳ ಸಂಘದ ಮುಖಂಡ ಗುರುಸ್ವಾಮಿ ಹೇಳಿದರು.

'ಇದು ಸಣ್ಣ ವಿಚಾರ. ಇದನ್ನೇ ಮುಂದಿಟ್ಟುಕೊಂಡು ಮಾರುಕಟ್ಟೆಯನ್ನೇ ಸ್ಥಗಿತಗೊಳಿಸಿದ್ದು ಸರಿಯಲ್ಲ. ಮಾತುಕತೆ ಮೂಲಕ ವಿಚಾರ ಬಗೆಹರಿಸಿಕೊಳ್ಳ ಬಹುದಿತ್ತು. ಹೀಗೆ ಏಕಾಏಕಿ ವಹಿವಾಟು ಬಂದ್ ಮಾಡಿದರೆ, ಮಾರುಕಟ್ಟೆಯ ಮೇಲಿನ ನಂಬಿಕೆ ಹಾಳಾಗುತ್ತದೆ' ಎಂಬುದು ವರ್ತಕ ಸಂಘದ ಮುಖಂಡ ಪಾಲಣ್ಣ ಅವರ ಕಳವಳ.

'ಶೇಂಗಾ ಕ್ವಿಂಟಲ್‌ಗೆ ₹8 ಸಾವಿರದ ವರೆಗೆ ಮಾರಾಟವಾಗುತ್ತಿದೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈ ಸಲ ಮಾರುಕಟ್ಟೆಗೆ ಬಂದ ಶೇಂಗಾ ಪ್ರಮಾಣ ಕಡಿಮೆ. ನಿತ್ಯ 22 ಸಾವಿರ ಚೀಲದವರೆಗೆ ಶೇಂಗಾ ಆವಕ ಆಗುತ್ತಿದೆ' ಎಂದು ಎಪಿಎಂಸಿ ಕಾರ್ಯದರ್ಶಿ ನಂಜುಂಡಸ್ವಾಮಿ ತಿಳಿಸಿದರು.

> **ಸಮಸ್ಯೆ ಬಗ್ಗೆ ಚರ್ಚಿಸಲು ವರ್ತಕ ಸಂಘದವರನ್ನು ಆಹ್ವಾನಿಸಿದರೂ, ಸ್ಪಂದಿಸಿಲ್ಲ. ಇನ್ನು ಮುಂದೆ ಹಣವಿಟ್ಟರಷ್ಟೇ ವ್ಯಾಪಾರ ಎಂಬ ಷರತ್ತಿನೊಂದಿಗೆ ನಾವು ಕೆಲಸ ಮಾಡುತ್ತೇವೆ**
> **ಚಿದಾನಂದಪ್ಪ,** ಅಧ್ಯಕ್ಷ, ದಲ್ಲಾಳಿಗಳ ಸಂಘ

> **ಮಾರುಕಟ್ಟೆ ಬಂದ್ ಮಾಡಿದ್ದು ತಪ್ಪು. ಇಲ್ಲಿನ ಉತ್ಪನ್ನ ಬೇರೆಯವರ ಪಾಲಾದರೆ ದಲ್ಲಾಳಿಗಳಿಗೆ ಅಥವಾ ವರ್ತಕರಿಗೆ ಏನು ಲಾಭ? ಶೀಘ್ರವೇ ವಿವಾದ ಬಗೆಹರಿಯಲಿದೆ**
> **ರಮೇಶ್,** ಅಧ್ಯಕ್ಷ, ವರ್ತಕರ ಸಂಘ

> **ದಲ್ಲಾಳಿಗಳಿಗೆ, ವರ್ತಕರಿಗೆ ನೋಟಿಸ್ ನೀಡಲಾಗಿದೆ. ಸಂಧಾನ ಮಾತುಕತೆ ನಡೆಯುತ್ತಿರುವ ಮಾಹಿತಿ ಇದೆ ಸಮಸ್ಯೆ ಬಗೆಹರಿಯದಿದ್ದರೆ ಕ್ರಮ ಜರುಗಿಸಲಾಗುವುದು**
> **ನಂಜುಂಡಸ್ವಾಮಿ,** ಎಪಿಎಂಸಿ ಕಾರ್ಯದರ್ಶಿ

ಚಿನ್ನದ ದರ ₹875, ಬೆಳ್ಳಿ ₹760 ಇಳಿಕೆ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಚಿನ್ನ ಮತ್ತು ಬೆಳ್ಳಿ ದರ ಇಳಿಕೆ ಆಗಿದೆ.

ಚಿನ್ನದ ದರ 10 ಗ್ರಾಂ. ಗೆ ₹875 ಇಳಿಕೆಯಾಗಿ ₹66,575ರಂತೆ ಮಾರಾಟ ವಾಯಿತು. ಬೆಳ್ಳಿ ಧಾರಣೆ ಕೆ.ಜಿಗೆ ₹760 ಇಳಿಕೆಯಾಗಿ ₹76,900ಕ್ಕೆ ಮುಟ್ಟಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,167 ಡಾಲರ್ ಮತ್ತು 24.45 ಡಾಲರ್‌ನಂತೆ ಮಾರಾಟವಾಗಿವೆ.

2ನೇ ಮದುವೆಯಾದ ಜೊಮಾಟೊ ಸಿಇಒ

ನವದೆಹಲಿ (ಪಿಟಿಐ): ಜೊಮಾಟೊ ಸಂಸ್ಥಾಪಕ ಮತ್ತು ಸಿಇಒ ದೀಪಿಂದರ್ ಗೋಯಲ್ ಅವರು ಮೆಕ್ಸಿಕದ ರೂಪದರ್ಶಿ ಹಾಗೂ ಉದ್ಯಮಿ ಗ್ರೇಸಿಯಾ ಮುನೋಜ್ ಅವರನ್ನು 2ನೇ ಮದುವೆ ಆಗಿದ್ದಾರೆ.

41 ವರ್ಷದ ಗೋಯಲ್ ಈ ಹಿಂದೆ ಕಾಂಚನ್ ಜೋಶಿ ಅವರನ್ನು ಮದುವೆಯಾಗಿದ್ದರು. ಇವರಿಬ್ಬರೂ ದೆಹಲಿಯ ಐಐಟಿಯಲ್ಲಿ ಒಂದೇ ವಿಭಾಗದಲ್ಲಿ ವ್ಯಾಸಂಗ ಮಾಡಿದ್ದರು. ಗ್ರೇಸಿಯಾ, ಭಾರತದಲ್ಲಿ ಐಷಾರಾಮಿ ಗ್ರಾಹಕ ಉತ್ಪನ್ನಗಳ ಕ್ಷೇತ್ರದಲ್ಲಿ ತನ್ನದೇ ಆದ ನವೋದ್ಯಮವನ್ನು ನಡೆಸುತ್ತಿದ್ದಾರೆ ಮತ್ತು ರೂಪದರ್ಶಿಯಾಗಿಯೂ ಕೆಲಸ ಮಾಡುತ್ತಿದ್ದಾರೆ. ಕೆಲವು ತಿಂಗಳ ಹಿಂದೆ ಅವರು ಮದುವೆ ಆಗಿದ್ದಾರೆ ಎಂದು ಮೂಲಗಳು ಪಿಟಿಐಗೆ ತಿಳಿಸಿವೆ.

ಗ್ರೇಸಿಯಾ ಮೆಟ್ರೊಪಾಲಿಟನ್ ಫ್ಯಾಷನ್ ವೀಕ್-2022 ವಿಜೇತೆಯೂ ಹೌದು.

ರಫಾ ಮೇಲೆ ದಾಳಿ; ಇಸ್ರೇಲ್‌ನ ಪ್ರಮಾದ– ಬ್ಲಿಂಕೆನ್

ಕೈರೊ(ಈಜಿಪ್ಟ್)(ಎಪಿ): ಗಾಜಾ ಪಟ್ಟಿಯ ದಕ್ಷಿಣಕ್ಕಿರುವ ರಫಾ ನಗರ ಮೇಲೆ ಇಸ್ರೇಲ್ ಸೇನೆ ನಡೆಸಿದ ದಾಳಿ ಒಂದು 'ಪ್ರಮಾದ'ವಾಗಿದೆ. ಹಮಾಸ್ ಬಂಡುಕೋರರು ಈಗಾಗಲೇ ತೀವ್ರ ಹಿನ್ನಡೆ ಅನುಭವಿಸುತ್ತಿದ್ದು, ಅವರನ್ನು ಮಟ್ಟ ಹಾಕುವುದಕ್ಕಾಗಿ ಇಂತಹ ದಾಳಿಯ ಅಗತ್ಯ ಇರಲಿಲ್ಲ ಎಂದು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಆ್ಯಂಟೊನಿ ಬ್ಲಿಂಕೆನ್ ಹೇಳಿದ್ದಾರೆ.

'ಇಸ್ರೇಲ್ ಸೇನೆಯ ಇಂತಹ ನಡೆಯಿಂದ ಅಮೆರಿಕ ಮತ್ತು ಇಸ್ರೇಲ್ ನಡುವಿನ ಸಂಬಂಧಕ್ಕೆ ಮತ್ತಷ್ಟು ಧಕ್ಕೆಯಾಗಲಿದೆ' ಎಂದು ಪ್ರತಿಪಾದಿಸಿದ್ದಾರೆ.

30, 31ರಂದು ಬ್ಯಾಂಕ್ ರಜೆ ಇಲ್ಲ

ಮುಂಬೈ (ಪಿಟಿಐ): ಸರ್ಕಾರದ ಜೊತೆ ವ್ಯವಹರಿಸುವ ಆರ್‌ಬಿಐ ಕಚೇರಿಗಳು ಮತ್ತು ಎಲ್ಲ ಬ್ಯಾಂಕ್‌ಗಳು ತೆರಿಗೆದಾರರ ಅನುಕೂಲಕ್ಕಾಗಿ ಮಾರ್ಚ್ 30 ಮತ್ತು 31ರಂದು ಎಂದಿನಂತೆ ಕಾರ್ಯನಿರ್ವಹಿಸಲಿವೆ.

2023-24ರ ಹಣಕಾಸು ವರ್ಷವು ಮುಕ್ತಾಯ ಆಗುತ್ತಿರುವುದರಿಂದ ಕೊನೆಯ ಎರಡು ದಿನಗಳಾದ ಶನಿವಾರ ಮತ್ತು ಭಾನುವಾರ ಸಾಮಾನ್ಯ ದಿನದಂತೆಯೇ ಬ್ಯಾಂಕ್‌ಗಳು ಕಾರ್ಯ ನಿರ್ವಹಿಸಲಿವೆ. ಗ್ರಾಹಕರ ಅನುಕೂಲಕ್ಕಾಗಿ ಈ ವಿಶೇಷ ಕ್ರಮ ಕೈಗೊಳ್ಳಲಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತಿಳಿಸಿದೆ.

ನ್ಯಾಷನಲ್ ಎಲೆಕ್ಟ್ರಾನಿಕ್ ಫಂಡ್ಸ್ ಟ್ರಾನ್ಸ್‌ಫರ್ (ಎನ್‌ಇಎಫ್‌ಟಿ) ಮತ್ತು ರಿಯಲ್ ಟೈಮ್ ಗ್ರಾಸ್ ಸೆಟಲ್‌ಮೆಂಟ್ (ಆರ್‌ಟಿಜಿಎಸ್) ವ್ಯವಸ್ಥೆಯ ಮೂಲಕ ವಹಿವಾಟುಗಳು ಮಾರ್ಚ್ 31ರವರೆಗೆ ಮುಂದುವರಿಯಲಿವೆ. ಸರ್ಕಾರದ ರಶೀದಿಗಳು ಮತ್ತು ಪಾವತಿಗಳನ್ನು ಸುಲಭಗೊಳಿಸಲು, ದೇಶದಾದ್ಯಂತ ವಿಶೇಷ ಕ್ಲಿಯರಿಂಗ್ ಕಾರ್ಯಾಚರಣೆಗಳನ್ನು ನಡೆಸಲು ಅಗತ್ಯ ವ್ಯವಸ್ಥೆಗಳನ್ನು ಮಾಡಲಾಗಿದೆ. ಸರ್ಕಾರಿ ಖಾತೆಗಳಿಗೆ ಸಂಬಂಧಿಸಿದ ಎಲ್ಲಾ ಚೆಕ್‌ಗಳನ್ನು ಅಂತಹ ಕ್ಲಿಯರಿಂಗ್‌ನಲ್ಲಿ ಪ್ರಸ್ತುತಪಡಿಸಬಹುದು ಎಂದು ಹೇಳಿದೆ.

ಮುಂಬೈ ಧಾರಣೆ

ಶೇಂಗಾ 22-03-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1510 (1510)
ಒಂದು ವಾರದ ಡೆಲಿವರಿ	1505 (1505)
ಸೋಯಾ ಕಚ್ಚಾ	945 (965)
ಪಾಮ್ ವಾರದ ಡೆಲಿವರಿ	943 (960)
ಸೂರ್ಯಕಾಂತಿ ಎಣ್ಣೆ ಕಚ್ಚಾ	900 (925)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ **₹66,050** (66,500)

ಬೆಳ್ಳಿ ಕೆ.ಜಿ **₹74,100** (75,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರು ಸೂಚ್ಯಂಕಗಳು ಏರಿಕೆ

ನವದೆಹಲಿ (ಪಿಟಿಐ): ಷೇರು ಸೂಚ್ಯಂಕಗಳು ಸತತ ಮೂರನೇ ದಿನವಾದ ಶುಕ್ರವಾರವೂ ಏರಿಕೆ ಕಂಡಿವೆ.



ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 190 ಅಂಶ ಏರಿಕೆಯಾಗಿ 72,831ಕ್ಕೆ ಸ್ಥಿರಗೊಂಡಿತು. ದಿನದ ವಹಿವಾಟಿನಲ್ಲಿ ಒಂದು ಹಂತದಲ್ಲಿ 73,115ಕ್ಕೆ ಮುಟ್ಟಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 84 ಅಂಶ ಹೆಚ್ಚಳವಾಗಿ 22,096ಕ್ಕೆ ಅಂತ್ಯಗೊಂಡಿತು.

ಸನ್‌ಫಾರ್ಮಾ, ಮಾರುತಿ, ಇಂಡಸ್‌ಇಂಡ್ ಬ್ಯಾಂಕ್, ಟೈಟನ್, ಐಟಿಸಿ, ಟಾಟಾ ಮೋಟರ್ಸ್, ಲಾರ್ಸೆನ್ ಆ್ಯಂಡ್ ಟೂಬ್ರೊ ಮತ್ತು ಜೆಎಸ್‌ಡಬ್ಲ್ಯು ಕಂಪನಿಗಳ ಷೇರಿನ ಮೌಲ್ಯ ಏರಿಕೆ ಆಗಿದೆ.

ಐ.ಟಿ.ಷೇರು ಇಳಿಕೆ: ಅಮೆರಿಕದ ತಂತ್ರಜ್ಞಾನ ಕಂಪನಿ ಆಕ್ಸೆಂಚರ್ 2023-24ರ ಹಣಕಾಸು ವರ್ಷದಲ್ಲಿ ತನ್ನ ವರಮಾನ ಅಂದಾಜನ್ನು ಕಡಿಮೆಗೊಳಿಸಿದ ನಂತರ ಐಟಿ ವಲಯದ ಷೇರು ಮೌಲ್ಯ ಶೇ 3ರಷ್ಟು ಇಳಿಕೆ ಕಂಡಿತು. ಇನ್ಫೊಸಿಸ್, ವಿಪ್ರೊ, ಎಚ್‌ಸಿಎಲ್ ಟೆಕ್ನಾಲಜೀಸ್, ಟಿಸಿಎಸ್ ಮತ್ತು ಬಜಾಜ್ ಫಿನ್‌ಸರ್ವ್ ಷೇರಿನ ಮೌಲ್ಯ ಇಳಿದಿದೆ.

ಹೋಳಿ ಹಬ್ಬದ ಅಂಗವಾಗಿ ಷೇರುಪೇಟೆಗೆ ಸೋಮವಾರ ರಜೆ ಇರಲಿದೆ.

ಜೂನ್‌ನಲ್ಲಿ ಬಜಾಜ್ ಆಟೊದಿಂದ ಸಿಎನ್‌ಜಿ ಬೈಕ್

ಪುಣೆ (ಪಿಟಿಐ): ಸಿಎನ್‌ಜಿಯ ಮೊದಲ ದ್ವಿಚಕ್ರ ವಾಹನ ಜೂನ್‌ನಲ್ಲಿ ಮಾರುಕಟ್ಟೆಗೆ ಬರಲಿದೆ ಎಂದು ಪ್ರಮುಖ ಬೈಕ್ ತಯಾರಕ ಕಂಪನಿ ಬಜಾಜ್ ಆಟೊ ಶುಕ್ರವಾರ ತಿಳಿಸಿದೆ.

ಸಿಎನ್‌ಜಿಯ ಮೋಟರ್ ಬೈಕ್ ಸರಣಿಯನ್ನು ಬಜಾಜ್ ಆಟೊ ಅಭಿವೃದ್ಧಿಪಡಿಸುತ್ತಿದೆ. ಪೆಟ್ರೋಲ್ ಆಧಾರಿತ ದ್ವಿಚಕ್ರ ವಾಹನಗಳಿಗಿಂತಲೂ ಈ ಬೈಕ್‌ಗಳ ಬೆಲೆ ಹೆಚ್ಚಾಗಿರುತ್ತದೆ. ಗ್ರಾಹಕರಿಗೆ ಅನುಕೂಲವಾಗುವಂತೆ ಪೆಟ್ರೋಲ್ ಮತ್ತು ಸಿಎನ್‌ಜಿ ಇಂಧನ ಟ್ಯಾಂಕ್ ಅಳವಡಿಸಬೇಕಾದ್ದರಿಂದ ಬೆಲೆಯೂ ಹೆಚ್ಚಿರುತ್ತದೆ. ಹೆಚ್ಚು ಇಂಧನ ದಕ್ಷತೆ ಬಯಸುವವರನ್ನು ದೃಷ್ಟಿಯಲ್ಲಿ ಇರಿಸಿಕೊಂಡು ಈ ವಾಹನ ವಿನ್ಯಾಸ ಮಾಡಲಾಗಿದೆ. ಭಿನ್ನ ಬ್ರ್ಯಾಂಡ್ ಅಡಿಯಲ್ಲಿ ವಾಹನವನ್ನು ಬಿಡುಗಡೆ ಮಾಡಲಾಗುವುದು ಎಂದು ಬಜಾಜ್ ಆಟೊ ವ್ಯವಸ್ಥಾಪಕ ನಿರ್ದೇಶಕ ರಾಜೀವ್ ಬಜಾಜ್ ತಿಳಿಸಿದ್ದಾರೆ.

ಬಜಾಜ್ ಸಮೂಹವು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಅಡಿಯಲ್ಲಿ ಮುಂದಿನ 5 ವರ್ಷದೊಳಗೆ ₹5 ಸಾವಿರ ಕೋಟಿಯನ್ನು ಖರ್ಚು ಮಾಡಲು ನಿರ್ಧರಿಸಿದೆ.

ಸಿಎಸ್‌ಆರ್ ಕಾರ್ಯಕ್ರಮಗಳ ಮೂಲಕ 2 ಕೋಟಿ ಯುವಕರಿಗೆ ಕೌಶಲ ತರಬೇತಿ ನೀಡಲಿದೆ. ಇದರಿಂದ ಅವರು ಉದ್ಯೋಗಿಗಳು ಮತ್ತು ಉದ್ಯಮಿಗಳಾಗಲು ಸಹಾಯ ಮಾಡುತ್ತದೆ ಮತ್ತು ದೇಶದ ಆರ್ಥಿಕತೆ ಕೂಡ ಬೆಳವಣಿಗೆ ಆಗುತ್ತದೆ ಎಂದು ಹೇಳಿದರು.

ಈಗಾಗಲೇ ಸಮೂಹವು 10 ವರ್ಷದಲ್ಲಿ ಸಿಎಸ್‌ಆರ್ ಅಡಿ ವಿವಿಧ ಸಾಮಾಜಿಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದು, ಇದಕ್ಕಾಗಿ ₹4 ಸಾವಿರ ಕೋಟಿ ಖರ್ಚು ಮಾಡಿದೆ ಎಂದು ಅವರು ಹೇಳಿದರು.

ಮಾರುಕಟ್ಟೆ ಧಾರಣೆ

ಬಂಟ್ವಾಳ (ಅಡಿಕೆ)	
ಕೋಕ	18000-28500
ಹೊಸತು	28500-35500
ಹಳತು	35500-44000
ಚಿತ್ರದುರ್ಗ	
ಅಪಿ	47739-48169
ಬೆಟ್ಟೆ	34519-34959
ಕೆಂಪುಗೋಟು	29000-29400
ರಾಶಿ	47229-47689
ಕಾರ್ಕಳ	
ಹೊಸತು	25000-35500
ಹಳತು	30000-44500
ಪುತ್ತೂರು	
ಕೋಕ	11500-26000
ಹೊಸತು	26500-35500
ಶಿವಮೊಗ್ಗ	
ಬೆಟ್ಟೆ	43199-53909
ಗೊರಬಲು	17000-37399
ರಾಶಿ	30399-49799
ಸರಕು	40000-82930
ಸಿದ್ದಾಪುರ	
ಬಿಳಿಗೋಟು	26109-28909
ಚಾಲಿ	35599-35699
ಕೋಕ	24100-27899
ಹೊಸಚಾಲಿ	32599-35399
ಕೆಂಪುಗೋಟು	29469-32899
ರಾಶಿ	42809-46699
ತಟ್ಟಿಬೆಟ್ಟೆ	38019-42089
ಶಿರಸಿ	
ಬೆಟ್ಟೆ	36160-44061
ಬಿಳಿಗೋಟು	23399-31353
ಚಾಲಿ	31209-35681
ಕೆಂಪುಗೋಟು	26800-34199
ರಾಶಿ	42208-46969
ಯಲ್ಲಾಪುರ	
ಬಿಳಿಗೋಟು	21019-30199
ಚಾಲಿ	31812-38359
ಕೋಕ	14899-25899
ಕೆಂಪುಗೋಟು	24899-33899
ರಾಶಿ	43210-54989
ತಟ್ಟಿಬೆಟ್ಟೆ	35999-42499

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹7800-8840
ಬೆಂಗಳೂರು	₹10800-11200
ಪುತ್ತೂರು	₹5500-8600
ತುರುವೇಕೆರೆ	₹7600-8800

ಇಂಧನ, ವ್ಯಾಪಾರ, ಬಾಹ್ಯಾಕಾಶ, ಕೃಷಿ ಕ್ಷೇತ್ರದಲ್ಲಿ ಸಹಕಾರ ವೃದ್ಧಿ

ಹಲವು ಒಪ್ಪಂದಕ್ಕೆ ಭಾರತ– ಭೂತಾನ್ ಸಹಿ

ತಿಂಪು (ಭೂತಾನ್) (ಪಿಟಿಐ): ಇಂಧನ, ವ್ಯಾಪಾರ, ಡಿಜಿಟಲ್ ಸಂಪರ್ಕ, ಬಾಹ್ಯಾಕಾಶ ಮತ್ತು ಕೃಷಿ ವಲಯದಲ್ಲಿ ಸಹಕಾರ ಸೇರಿ ಹಲವು ಒಪ್ಪಂದಗಳಿಗೆ ಭಾರತ ಮತ್ತು ಭೂತಾನ್ ಶುಕ್ರವಾರ ಸಹಿ ಹಾಕಿವೆ. ಉಭಯ ರಾಷ್ಟ್ರಗಳ ನಡುವೆ ರೈಲು ಸಂಪರ್ಕ ಕಲ್ಪಿಸುವ ಯೋಜನೆಗೂ ಒಡಂಬಡಿಕೆ (ಎಂಒಯು) ಅಂತಿಮಗೊಳಿಸಲಾಯಿತು.

ದೇಶದ 'ನೆರೆಹೊರೆ ಮೊದಲು' ನೀತಿಯ ಭಾಗವಾಗಿ ಹಿಮಾಲಯದ ರಾಷ್ಟ್ರದೊಂದಿಗಿನ ಭಾರತದ ಅನನ್ಯ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಲು ಪ್ರಧಾನಿ ಮೋದಿ ಭೂತಾನ್‌ಗೆ ಎರಡು ದಿನಗಳ ಭೇಟಿ ನೀಡಿದ್ದಾರೆ.

ಪ್ರಧಾನಿ ಮೋದಿ ಮತ್ತು ಭೂತಾನ್ ಪ್ರಧಾನಿ ಶೆರಿಂಗ್ ಟೊಬ್ಗೆ ಅವರ ಸಮ್ಮುಖದಲ್ಲಿ ಒಡಂಬಡಿಕೆ ಮಾಡಿಕೊಳ್ಳಲಾಯಿತು.



ಭೂತಾನ್ ರಾಜಧಾನಿ ತಿಂಪುವಿನ ತಶಿಚ್ಫೊ ಡಿಜಾಂಗ್ ಅರಮನೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಭೂತಾನ್ ದೊರೆ ಜಿಗ್ಮೆ ಖೇಸರ್ ನಾಮ್‌ಗ್ಯೆಲ್ ವಾಂಗ್ಚುಕ್ ಮಾತುಕತೆ ನಡೆಸಿದರು– ಪಿಟಿಐ ಚಿತ್ರ

ಮೋದಿಯವರ ಗೌರವಾರ್ಥ ಟೊಬ್ಗೆ ಅವರು ಏರ್ಪಡಿಸಿದ್ದ ಔತಣಕೂಟದಲ್ಲಿ ಉಭಯ ನಾಯಕರು ಭೇಟಿಯಾಗಿ, ದ್ವಿಪಕ್ಷೀಯ ಸಂಬಂಧಗಳ ಕುರಿತು ಚರ್ಚೆ ನಡೆಸಿದರು.

> **ಈ ಪ್ರಶಸ್ತಿಯನ್ನು 140 ಕೋಟಿ ಭಾರತೀಯರಿಗೆ ಅರ್ಪಿಸುತ್ತೇನೆ. ಉಭಯ ದೇಶಗಳ ಸ್ನೇಹವು ಹೊಸ ಮಜಲಿಗೆ ತಲುಪಲಿದೆ**
> **ನರೇಂದ್ರ ಮೋದಿ,** ಭಾರತದ ಪ್ರಧಾನಿ

ಮೋದಿಗೆ ಅತ್ಯುನ್ನತ ನಾಗರಿಕ ಪ್ರಶಸ್ತಿ

ಭಾರತದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಭೂತಾನ್ ತನ್ನ ಅತ್ಯುನ್ನತ ನಾಗರಿಕ ಪ್ರಶಸ್ತಿ 'ಆರ್ಡರ್ ಆಫ್ ದಿ ಡ್ರುಕ್ ಗ್ಯಾಲ್ಪೊ' ನೀಡಿ ಶುಕ್ರವಾರ ಗೌರವಿಸಿದೆ.

'ಭಾರತ-ಭೂತಾನ್ ಸಂಬಂಧಗಳ ವೃದ್ಧಿಗೆ ನೀಡಿದ ಅತ್ಯುತ್ತಮ ಕೊಡುಗೆ ಮತ್ತು ಭೂತಾನ್ ಹಾಗೂ ಅಲ್ಲಿನ ಜನರಿಗೆ ಸಲ್ಲಿಸಿದ ವಿಶಿಷ್ಟ ಸೇವೆಗಾಗಿ ಮೋದಿ ಅವರಿಗೆ ಈ ಪ್ರಶಸ್ತಿ ನೀಡಲಾಗಿದೆ'. ಈ ಪ್ರಶಸ್ತಿ ಪಡೆದ ಮೊದಲ ವಿದೇಶಿ ಗಣ್ಯ ಎನ್ನುವ ಶ್ರೇಯಕ್ಕೂ ಮೋದಿ ಭಾಜನರಾದರು.

ಅಮೆರಿಕ: ರಾಮ ಮಂದಿರ ರಥಯಾತ್ರೆ 25ರಿಂದ ಆರಂಭ

ವಾಷಿಂಗ್ಟನ್ (ಪಿಟಿಐ): 'ಅಮೆರಿಕದಾದ್ಯಂತ ಸಂಚರಿಸುವ ರಾಮ ಮಂದಿರ ರಥಯಾತ್ರೆಯು ಮಾರ್ಚ್ 25ರಂದು ಷಿಕಾಗೊದಲ್ಲಿ ಆರಂಭವಾಗಲಿದೆ' ಎಂದು ಅಮೆರಿಕದ ವಿಶ್ವ ಹಿಂದೂ ಪರಿಷತ್‌ನ (ವಿಎಚ್‌ಪಿಎ) ಪ್ರಧಾನ ಕಾರ್ಯದರ್ಶಿ ಅಮಿತಾಬ್ ಮಿತ್ತಲ್ ತಿಳಿಸಿದ್ದಾರೆ.

'ಅಮೆರಿಕದ 48 ರಾಜ್ಯಗಳ 851 ದೇಗುಲಗಳನ್ನು ಈ ರಥಯಾತ್ರೆ ಹಾದು ಹೋಗಲಿದ್ದು, 60 ದಿನಗಳಲ್ಲಿ 8 ಸಾವಿರ ಮೈಲುಗಳಿಗಿಂತ ಹೆಚ್ಚಿನ ದೂರ ಸಾಗಲಿದೆ' ಎಂದು ಹೇಳಿದ್ದಾರೆ. 'ಭಗವಾನ್ ಶ್ರೀರಾಮ, ಸೀತಾ ದೇವಿ, ಲಕ್ಷ್ಮಣ, ಹನುಮಂತನ ವಿಗ್ರಹಗಳ ಜೊತೆಗೆ ಅಯೋಧ್ಯೆಯಲ್ಲಿನ ಶ್ರೀರಾಮ ಮಂದಿರದ ವಿಶೇಷ ಪ್ರಸಾದ, ಪ್ರಾಣ ಪ್ರತಿಷ್ಠಾಪನೆ ಸಂದರ್ಭದಲ್ಲಿ ಪೂಜಿಸಿದ ಕಳಸದ ಅಕ್ಷತೆಯು ಯಾತ್ರೆಯೊಟ್ಟಿಗಿರಲಿದೆ' ಎಂದು ಮಿತ್ತಲ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ರಾಮಮಂದಿರದ ಉದ್ಘಾಟನೆಯು ವಿಶ್ವದಾದ್ಯಂತ ಇರುವ 1.5 ಶತಕೋಟಿ ಹಿಂದೂಗಳ ಹೃದಯದಲ್ಲಿ ಹೊಸ ಶಕ್ತಿಯನ್ನು ತುಂಬಿದೆ. ನಂಬಿಕೆಯನ್ನು ಮತ್ತಷ್ಟು ಬಲಪಡಿಸಿ, ಸಂತಸವನ್ನು ಮೂಡಿಸಿದೆ' ಎಂದಿರುವ ಅವರು, 'ರಥಯಾತ್ರೆಯು ಏ.23ರ ಹನುಮ ಜಯಂತಿಯಂದು ಇಲಿನಾಯ್‌ನ ಶುಗರ್ ಗ್ರೋವ್‌ನಲ್ಲಿ ಸಮಾರೋಪಗೊಳ್ಳಲಿದೆ' ಎಂದಿದ್ದಾರೆ.

'ಶಿಕ್ಷಣ, ಸಬಲೀಕರಣ ಹಾಗೂ ಹಿಂದೂ ಧರ್ಮದ ಜಾಗೃತಿಗಾಗಿ ಕೆನಡಾದ ವಿಶ್ವ ಹಿಂದೂ ಪರಿಷತ್ ಸಹ ರಾಮನ ರಥಯಾತ್ರೆಯನ್ನು ಪ್ರತ್ಯೇಕವಾಗಿ ಆಯೋಜಿಸಲಿದೆ. ಇದು 150ಕ್ಕೂ ಹೆಚ್ಚು ದೇಗುಲಗಳ ಮಾರ್ಗದಲ್ಲಿ ಸಂಚರಿಸಲಿದೆ' ಎಂದು ಅಮೆರಿಕದ ಎಲ್ಲ ದೇಗುಲಗಳ ಅತ್ಯುನ್ನತ ಸಂಸ್ಥೆಯಾದ ಹಿಂದೂ ಮಂದಿರ ಸಬಲೀಕರಣ ಮಂಡಳಿಯ (ಎಚ್‌ಎಂಇಸಿ) ತೇಜಲ್ ಶಾ ತಿಳಿಸಿದ್ದಾರೆ.

ಉಕ್ರೇನ್ ವಿದ್ಯುತ್ ಸ್ಥಾವರದ ಮೇಲೆ ರಷ್ಯಾ ದಾಳಿ; ಮೂವರ ಸಾವು

ಕೀವ್ (ಎಪಿ): ಉಕ್ರೇನ್‌ನ ಅತ್ಯಂತ ದೊಡ್ಡ ಜಲವಿದ್ಯುತ್ ಸ್ಥಾವರ ಸೇರಿದಂತೆ ದೇಶದ ಬಹುಪಾಲು ವಿದ್ಯುತ್ ಸೌಕರ್ಯಗಳನ್ನು ಗುರಿಯಾಗಿಸಿ ರಷ್ಯಾ ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆಸಿದೆ. ಇದರಿಂದ ಹಲವೆಡೆ ವಿದ್ಯುತ್ ಪೂರೈಕೆ ವ್ಯತ್ಯಯಗೊಂಡಿದೆ. ಅಲ್ಲದೆ, ದಾಳಿಯಿಂದ ಮೂವರು ನಾಗರಿಕರು ಹತರಾಗಿದ್ದಾರೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

'ರಾತ್ರಿ ವೇಳೆ ಡ್ರೋನ್ ಮತ್ತು ರಾಕೆಟ್ ದಾಳಿ ನಡೆದಿದೆ. ಇತ್ತೀಚಿನ ದಿನಗಳಲ್ಲಿ ದೇಶದ ಇಂಧನ ವಲಯಗಳ ಮೇಲೆ ನಡೆದ ಅತ್ಯಂತ ದೊಡ್ಡ ದಾಳಿ ಇದು. ರಷ್ಯಾದ ಗುರಿ ಹಾನಿ ಮಾಡುವುದಷ್ಟೇ ಆಗಿಲ್ಲ, ಕಳೆದ ವರ್ಷದಂತೆ ನಮ್ಮ ಇಂಧನ ವ್ಯವಸ್ಥೆಗೆ ದೊಡ್ಡಮಟ್ಟದಲ್ಲಿ ಅಡಚಣೆ ಮಾಡುವುದಾಗಿದೆ' ಎಂದು ಉಕ್ರೇನ್ ಇಂಧನ ಸಚಿವ ಜರ್ಮನ್ ಗಲುಶ್‌ಚೆಂಕೊ ತಿಳಿಸಿದ್ದಾರೆ.

ಈ ದಾಳಿಯಲ್ಲಿ ಯುರೋಪ್‌ನ ಅತಿ ದೊಡ್ಡ ಝಪೊರಿಝಿಯಾ ಅಣು ವಿದ್ಯುತ್ ಸ್ಥಾವರಕ್ಕೆ ವಿದ್ಯುತ್ ಪೂರೈಸುವ ನಿಪ್ರೊ ಜಲವಿದ್ಯುತ್ ಸ್ಥಾವರದಲ್ಲಿ ಬೆಂಕಿ ಹೊತ್ತಿಕೊಂಡಿದೆ. ಸ್ಥಾವರಕ್ಕೆ ವಿದ್ಯುತ್ ಪೂರೈಸುತ್ತಿದ್ದ 750 ಕೆ.ವಿ ಮಾರ್ಗ ಕಡಿತವಾಗಿದೆ. ಕಡಿಮೆ ಕೆ.ವಿ ಸಾಮರ್ಥ್ಯದ ಮಾರ್ಗ ಕಾರ್ಯನಿರ್ವಹಿಸುತ್ತಿದೆ ಎಂದು ಅಂತರರಾಷ್ಟ್ರೀಯ ಅಣುಶಕ್ತಿ ಸಂಸ್ಥೆಯ ಮುಖ್ಯಸ್ಥ ರಾಫೆಲ್ ಗ್ರಾಸ್ಸಿ ಶುಕ್ರವಾರ ತಿಳಿಸಿದ್ದಾರೆ.

ಝಪೊರಿಝಿಯಾ ಅಣುಸ್ಥಾವರವನ್ನು ರಷ್ಯಾ ಪಡೆಗಳು ಆಕ್ರಮಿಸಿವೆ. ಸ್ಥಾವರದ ಸುತ್ತಲೂ ಕದನ ನಡೆಯುತ್ತಿದ್ದು, ಸಂಭಾವ್ಯ ಅಣು ದುರಂತದ ಆತಂಕ ಎದುರಾಗಿದೆ.

ಕಳೆದ ರಾತ್ರಿಯ ದಾಳಿಯಲ್ಲಿ ಒಬ್ಬರು ಮೃತಪಟ್ಟು, ಎಂಟು ಜನ ಗಾಯಗೊಂಡಿದ್ದಾರೆ ಎಂದು ಝಪೊರಿಝಿಯಾ ಪ್ರಾದೇಶಿಕ ಗವರ್ನರ್ ಇವಾನ್ ಫೆಡೊರೊವ್ ಹೇಳಿದ್ದಾರೆ. ಖ್ಮೆಲ್‌ನಿಟ್‌ಸ್ಕಿ ಪ್ರದೇಶದಲ್ಲಿ ಇಬ್ಬರು ನಾಗರಿಕರು ಸಾವನ್ನಪ್ಪಿದ್ದಾರೆ ಎಂದು ಆಂತರಿಕ ವ್ಯವಹಾರಗಳ ಸಚಿವಾಲಯ ಹೇಳಿದೆ.

ಗಡಿ ಸಮೀಪದ ಬೆಲ್ಗೊರೊಡ್ ಪ್ರದೇಶ ಮತ್ತು ಕರ್ಸ್ಕ್ ಪ್ರದೇಶದ ಟೆಟ್‌ಕಿನೊ ಪಟ್ಟಣದ ಮೇಲೆ ಉಕ್ರೇನ್ ಪಡೆಗಳು ಶೆಲ್ ದಾಳಿ ನಡೆಸಿವೆ. ಇದರಲ್ಲಿ ವ್ಯಕ್ತಿಯೊಬ್ಬರು ಸತ್ತಿದ್ದು, ಮೂವರು ಗಾಯಗೊಂಡಿದ್ದಾರೆ ಎಂದು ರಷ್ಯಾ ಅಧಿಕಾರಿಗಳು ಹೇಳಿದ್ದಾರೆ.



ಚುನಾವಣಾ ಬಾಂಡ್: 'ಸುಪ್ರೀಂ' ಮೇಲ್ವಿಚಾರಣೆಯಲ್ಲಿ ತನಿಖೆಗೆ ಸಾಮಾಜಿಕ ಹೋರಾಟಗಾರರ ಒತ್ತಾಯ

'ಸ್ವತಂತ್ರ ಭಾರತದ ಅತಿದೊಡ್ಡ ಹಗರಣ'

• ಶೆಮಿನ್ ಜಾಯ್

ನವದೆಹಲಿ: 'ಸ್ವತಂತ್ರ ಭಾರತದ 'ಅತಿ ದೊಡ್ಡ ಭ್ರಷ್ಟಾಚಾರ ಹಗರಣ'ವಾದ ಚುನಾವಣಾ ಬಾಂಡ್ ಕುರಿತು ಸುಪ್ರೀಂ ಕೋರ್ಟ್ ತನ್ನ ಮೇಲ್ವಿಚಾರಣೆಯಲ್ಲಿ ವಿಶೇಷ ತನಿಖಾ ತಂಡದಿಂದ (ಎಸ್ಐಟಿ) ತನಿಖೆ ನಡೆಸಬೇಕು. ಜೊತೆಗೆ, ಚುನಾವಣಾ ಬಾಂಡ್ ಮೂಲಕ ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡಿ ಹಲವು ಕಂಪನಿಗಳು ಹಲವು ಅನುಕೂಲಗಳನ್ನು ಪಡೆದುಕೊಂಡಿವೆ. ಆದ್ದರಿಂದ, ಕಾರ್ಪೊರೇಟ್–ರಾಜಕೀಯದ ಮಧ್ಯೆ ನಡೆದ ಅಪವಿತ್ರ ಮೈತ್ರಿಯ ಕುರಿತು ಎಲ್ಲ ಮಾಹಿತಿಗಳು ಬಹಿರಂಗಗೊಳ್ಳಬೇಕು' ಎಂದು ಹೋರಾಟಗಾರರು, ವಕೀಲರು ಶುಕ್ರವಾರ ಸುಪ್ರೀಂ ಕೋರ್ಟ್‌ಗೆ ಒತ್ತಾಯಪಡಿಸಿದ್ದಾರೆ.

'ಹಲವು ಕಂಪನಿಗಳು ಬಿಜೆಪಿ ಪಕ್ಷಕ್ಕೆ ಕೋಟಿ ಕೋಟಿ ದೇಣಿಗೆ ನೀಡಿ, ಕೋಟಿ ಕೋಟಿ ಮೊತ್ತದ ಯೋಜನೆಗಳ ಗುತ್ತಿಗೆ ಪಡೆದುಕೊಂಡಿವೆ. ಕೇಂದ್ರದಲ್ಲಿ ಆಡಳಿತದಲ್ಲಿರುವ ಬಿಜೆಪಿ ಪಕ್ಷಕ್ಕೆ ದೇಣಿಗೆ ನೀಡಿ ಕೇಂದ್ರ ತನಿಖಾ ಸಂಸ್ಥೆಗಳ ತನಿಖೆಗಳಿಂದ ಬಚಾವ್ ಆಗಿದ್ದಾರೆ. ಆದ್ದರಿಂದ, ಚುನಾವಣಾ ಬಾಂಡ್ ಮೂಲಕ ದೇಣಿಗೆ ನೀಡಿ, ಕಂಪನಿಗಳು ಹಾಗೂ ಉದ್ಯಮಿಗಳು ಹಲವು ಅನುಕೂಲವನ್ನು ಪಡೆದುಕೊಂಡಿರುವುದು ಇವುಗಳಿಂದ ಸಾಬೀತಾಗಿದೆ. 2ಜಿ ಹಗರಣ ಹಾಗೂ ಕಲ್ಲಿದ್ದಲು ಹಗರಣಗಳಲ್ಲಿ ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ತನಿಖೆ ನಡೆದಂತೆಯೇ ಚುನಾವಣಾ ಬಾಂಡ್ ಹಗರಣದಲ್ಲಿಯೂ ತನಿಖೆ ನಡೆಯಬೇಕು' ಎಂದು ಖ್ಯಾತ ವಕೀಲ ಪ್ರಶಾಂತ್ ಭೂಷಣ್ ಅವರು ಹೇಳಿದರು.


2ಜಿ ಹಗರಣ ಅಥವಾ ಕಲ್ಲಿದ್ದಲು ಹಗರಣದಲ್ಲಿ ಹಣದ ಅವ್ಯವಹಾರ ನಡೆದಿರಲಿಲ್ಲ. ಆದರೂ ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ತನಿಖೆಗೆ ಆದೇಶ ನೀಡಲಾಯಿತು. ಚುನಾವಣಾ ಬಾಂಡ್ ವಿಚಾರದಲ್ಲಿ ಹಣದ ಅವ್ಯವಹಾರ ನಡೆದಿದೆ

ಪ್ರಶಾಂತ್ ಭೂಷಣ್, ಸುಪ್ರೀಂ ಕೋರ್ಟ್ ವಕೀಲ (ಚುನಾವಣಾ ಬಾಂಡ್ ಪ್ರಕರಣದಲ್ಲಿ ಎಡಿಆರ್ ಪರ ವಕಾಲತ್ತು ವಹಿಸಿದ್ದರು)

ಕಾರ್ಪೊರೇಟ್–ರಾಜಕೀಯ ಅಪವಿತ್ರ ಮೈತ್ರಿಯ ಕುರಿತು ಈ ಹಿಂದೆ ಸಾಕ್ಷ್ಯಸಹಿತ ಸಾಬೀತುಪಡಿಸಲು ಸಾಧ್ಯವಾಗುತ್ತಿರಲಿಲ್ಲ. ಆದರೆ, ಈಗ ಇದು ಸಾಧ್ಯವಿಲ್ಲ. ಈ ಅಪವಿತ್ರ ಮೈತ್ರಿಯ ಕುರಿತು ಯಾರೂ ಈಗ ಅಲ್ಲಗಳೆಯಲು ಸಾಧ್ಯವಿಲ್ಲ

ಜಗದೀಪ್ ಚೊಕ್ಕಾರ್, ಸಹ ಸಂಸ್ಥಾಪಕ, ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರೈಟ್ಸ್ (ಚುನಾವಣಾ ಬಾಂಡ್ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಎಡಿಆರ್ ಅರ್ಜಿ ಸಲ್ಲಿಸಿತ್ತು)

ಫ್ಯೂಚರ್ ಗೇಮಿಂಗ್ ಕಂಪನಿ



ಕೆಲವು ಉದಾಹರಣೆಗಳು




ಪ್ರಶಾಂತ್ ಭೂಷಣ್ ಅವರು ಕಾರ್ಪೊರೇಟ್–ರಾಜಕೀಯ ಅಪವಿತ್ರ ಮೈತ್ರಿಯ ಕುರಿತ ಹಲವು ಉದಾಹರಣೆಗಳನ್ನು ನೀಡಿದ್ದಾರೆ.

- 33 ಕಂಪನಿಗಳು ಬಿಜೆಪಿಗೆ ₹1,751 ಕೋಟಿಯಷ್ಟು ದೇಣಿಗೆ ನೀಡಿವೆ. ಇದಕ್ಕೆ ಪ್ರತಿಯಾಗಿ ₹3.7 ಲಕ್ಷ ಕೋಟಿ ಮೊತ್ತದ ಯೋಜನೆಯ ಗುತ್ತಿಗೆ ಪಡೆದುಕೊಂಡಿವೆ
- ಸಿಬಿಐ, ಜಾರಿ ನಿರ್ದೇಶನಾಲಯ ಹಾಗೂ ಆದಾಯ ತೆರಿಗೆ ಇಲಾಖೆಗಳಿಂದ ದಾಳಿಗೆ ಒಳಗಾಗಿದ್ದ 41 ಕಂಪನಿಗಳು, ಬಿಜೆಪಿಗೆ ₹2,471 ಕೋಟಿ ದೇಣಿಗೆ ನೀಡಿವೆ. ಇದಕ್ಕೆ ಪ್ರತಿಯಾಗಿ ಆ ಕಂಪನಿಗಳಿಗೆ ತನಿಖೆಗಳಿಂದ ಮುಕ್ತಿ ಸಿಕ್ಕಿದೆ. ₹2,471 ಕೋಟಿಯಲ್ಲಿ ₹1,698 ಕೋಟಿ ಹಣವು, ತನಿಖಾ ಸಂಸ್ಥೆಗಳ ದಾಳಿಯ ನಂತರ ಬಿಜೆಪಿಗೆ ಸಂದಾಯವಾಗಿದೆ
- 49 ಪ್ರಕರಣಗಳಲ್ಲಿ ವಿವಿಧ ಕಂಪನಿಗಳು ಬಿಜೆಪಿಗೆ ದೇಣಿಗೆ ನೀಡಿದ ಬಳಿಕವಷ್ಟೇ, ₹62 ಸಾವಿರ ಮೌಲ್ಯದ ಯೋಜನೆಗಳ ಗುತ್ತಿಗೆಗಳನ್ನು ಪಡೆದುಕೊಂಡಿವೆ
- 192 ಪ್ರಕರಣಗಳಲ್ಲಿ ವಿವಿಧ ಕಂಪನಿಗಳು ಬಿಜೆಪಿ ದೇಣಿಗೆ ನೀಡುವ ಮೊದಲೇ, ₹551 ಕೋಟಿ ಮೌಲ್ಯದ ಯೋಜನೆಗಳಿಗೆ ಗುತ್ತಿಗೆಗಳನ್ನು ಪಡೆದುಕೊಂಡಿವೆ


ಅಬಕಾರಿ ನೀತಿ ಹಗರಣ ಮಾಫಿ ಸಾಕ್ಷಿಯಿಂದ ದೇಣಿಗೆ

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹಾಗೂ ಬಿಆರ್‌ಎಸ್ ನಾಯಕಿ ಕೆ. ಕವಿತಾ ಅವರ ಬಂಧನಕ್ಕೆ ಕಾರಣಕರ್ತರಾದ ಉದ್ಯಮಿ ಪಿ. ಶರತ್ ಚಂದ್ರ ರೆಡ್ಡಿ ಅವರು ಚುನಾವಣಾ ಬಾಂಡ್ ಮುಖಾಂತರ ಬಿಜೆಪಿಗೆ ₹56.5 ಕೋಟಿ ದೇಣಿಗೆ ನೀಡಿದ್ದಾರೆ. ಶರತ್ ಅವರು ಹೈದರಾಬಾದ್ ಮೂಲದ ಅರಬಿಂದೊ ಫಾರ್ಮಾ ಕಂಪನಿಯ ನಿರ್ದೇಶಕ ಮತ್ತು ದೆಹಲಿ ಅಬಕಾರಿ ನೀತಿ ಹಗರಣದ ಆರೋಪಿ ಕೂಡ. ನಂತರ ಕೆಲವು ತಿಂಗಳ ಬಳಿಕ ಶರತ್ ಅವರು ಪ್ರಕರಣದ ಮಾಫಿ ಸಾಕ್ಷಿಯಾದರು. ಅಬಕಾರಿ ನೀತಿ ಹಗರಣ ಸಂಬಂಧ ಶರತ್ ಅವರನ್ನು 2022ರ ನವೆಂಬರ್ 11ರಂದು ಬಂಧಿಸಲಾಗಿತ್ತು. ಇದಾದ ಐದು ದಿನಗಳ ಬಳಿಕವೇ ಶರತ್ ಅವರು ಚುನಾವಣಾ ಬಾಂಡ್ ಮೂಲಕ ಬಿಜೆಪಿಗೆ ₹5 ಕೋಟಿ ದೇಣಿಗೆ ನೀಡಿದ್ದಾರೆ. ಬಿಜೆಪಿ ಮಾತ್ರವಲ್ಲದೆ ಬಿಆರ್‌ಎಸ್ ಪಕ್ಷಕ್ಕೂ ಶರತ್ ಅವರು ಚುನಾವಣಾ ಬಾಂಡ್ ಮೂಲಕ ₹15 ಕೋಟಿ ದೇಣಿಗೆ ನೀಡಿದ್ದಾರೆ. ಆದರೆ, ದೊಡ್ಡ ಮೊತ್ತದ ದೇಣಿಗೆಯನ್ನು ಶರತ್ ಅವರು ಬಿಜೆಪಿಗೇ ನೀಡಿದ್ದಾರೆ.

ಕ್ವಿಕ್ ಸಪ್ಲೈ ಚೈನ್ ಲಿಮಿಟೆಡ್



ಅರಬಿಂದೊ ಫಾರ್ಮಾ ಕಂಪನಿ



ಬಿಜೆಪಿಗೆ ಎಂಇಐಎಲ್ ದೇಣಿಗೆ ₹584 ಕೋಟಿ

• ಜಯಸಿಂಹ ಆರ್.

ಬೆಂಗಳೂರು: ಚುನಾವಣಾ ಬಾಂಡ್ ಮೂಲಕ ರಾಜಕೀಯ ಪಕ್ಷಗಳಿಗೆ ಅತಿಹೆಚ್ಚು ದೇಣಿಗೆ ನೀಡಿದ ಎರಡನೇ ಕಂಪನಿಯಾದ ಮೇಘ ಎಂಜಿನಿಯರಿಂಗ್ ಮತ್ತು ಇನ್‌ಫ್ರಾಸ್ಟ್ರಕ್ಚರ್ಸ್ ಲಿಮಿಟೆಡ್ (ಎಂಇಐಎಲ್) ಬಿಜೆಪಿ ಒಂದಕ್ಕೇ ₹519 ಕೋಟಿ ದೇಣಿಗೆ ನೀಡಿದೆ ಎಂದು ವರದಿಯಾಗಿದೆ. ಆದರೆ ಚುನಾವಣಾ ಆಯೋಗವು ಬಿಡುಗಡೆ ಮಾಡಿರುವ ದಾಖಲೆಗಳನ್ನು ಪರಿಶೀಲಿಸಿದರೆ, ಈ ಮೊತ್ತವು ಇನ್ನೂ ಹೆಚ್ಚಾಗುತ್ತದೆ. ಎಂಇಐಎಲ್ ಕಂಪನಿಯು ಬಿಜೆಪಿಗೆ ₹584 ಕೋಟಿ ದೇಣಿಗೆ ನೀಡಿದೆ.

ಮೇಘ ಎಂಜಿನಿಯರಿಂಗ್ ಕಂಪನಿಯು ನೇರವಾಗಿ ಬಿಜೆಪಿಗೆ ₹584 ಕೋಟಿ ದೇಣಿಗೆ ನೀಡಿದ್ದರೂ, ದಾಖಲೆಗಳಲ್ಲಿ ಕಂಪನಿಯ ಹೆಸರು ಬದಲಾವಣೆ ಮಾಡಿರುವ ಕಾರಣಕ್ಕೆ ದೇಣಿಗೆಯ ಪೂರ್ಣ ಲೆಕ್ಕ ಸಿಗುವುದಿಲ್ಲ.

'ಮೇಘ ಎಂಜಿನಿಯರಿಂಗ್ ಮತ್ತು ಇನ್‌ಫ್ರಾಸ್ಟ್ರಕ್ಚರ್ಸ್ ಲಿ ಮಿಟೆಡ್ (LI MITED)' ಹೆಸರಿನಲ್ಲಿ ಕಂಪನಿಯು ಒಟ್ಟು ₹519 ಕೋಟಿ ದೇಣಿಗೆಯನ್ನು ನೀಡಿದೆ. ಅಲ್ಲದೆ 'ಮೇಘ ಎಂಜಿನಿಯರಿಂಗ್ ಮತ್ತು ಇನ್‌ಫ್ರಾಸ್ಟ್ರಕ್ಚರ್ಸ್ ಎಲ್‌ಟಿಡಿ (LTD)' ಹೆಸರಿನಲ್ಲಿ ₹60 ಕೋಟಿ ದೇಣಿಗೆಯನ್ನು ಬಿಜೆಪಿಗೆ ನೀಡಿದೆ. ಇದೂ ಅಲ್ಲದೆ, 'ಮೇಘ ಎಂಜಿನಿಯರಿಂಗ್ ಮತ್ತು ಇನ್‌ಫ್ರಾಸ್ಟ್ರಕ್ಚರ್ಸ್ ಲಿಮಿಟೆಡ್ (LIMITED)' ಹೆಸರಿನಲ್ಲೂ ₹5 ಕೋಟಿ ದೇಣಿಗೆ ನೀಡಿದೆ. ಕಂಪನಿ ಉದ್ದೇಶಪೂರ್ವಕವಾಗಿಯೇ ಹೆಸರುಗಳನ್ನು ತಿರುಚಿ ದೇಣಿಗೆ ನೀಡಿದೆಯೇ ಅಥವಾ ಎಸ್‌ಬಿಐ ಮಾಹಿತಿಯನ್ನು ಸಂಗ್ರಹಿಸುವಾಗ ತಪ್ಪಾಗಿ ನಮೂದಿಸಿಕೊಂಡಿದೆಯೇ ಎಂಬುದು ಇನ್ನಷ್ಟೇ ಪತ್ತೆಯಾಗಿದೆ.

ಎಂಇಐಎಲ್ ದೇಣಿಗೆ

₹966 ಕೋಟಿ	ಒಟ್ಟು ದೇಣಿಗೆ
₹584 ಕೋಟಿ	ಬಿಜೆಪಿಗೆ
₹195 ಕೋಟಿ	ಬಿಆರ್‌ಎಸ್‌ಗೆ
₹85 ಕೋಟಿ	ಡಿಎಂಕೆಗೆ
₹8 ಕೋಟಿ	ಜನಸೇನಾ ಪಕ್ಷಕ್ಕೆ
₹18 ಕೋಟಿ	ಕಾಂಗ್ರೆಸ್‌ಗೆ
₹28 ಕೋಟಿ	ಟಿಡಿಪಿಗೆ
₹38 ಕೋಟಿ	ವೈಎಸ್‌ಆರ್‌ಸಿಗೆ
₹10 ಕೋಟಿ	ಜೆಡಿಯುಗೆ

ಇದಿಷ್ಟು ಅಲ್ಲದೆ ಎಂಇಐಎಲ್‌ನ ಅಧೀನ ಸಂಸ್ಥೆಗಳಾದ ಡಬ್ಲ್ಯುಪಿಟಿಸಿಎಲ್ ಕಂಪನಿಯು ಬಿಜೆಪಿಗೆ ₹80 ಕೋಟಿ ದೇಣಿಗೆ ನೀಡಿದೆ. ಎಸ್ಇಪಿಸಿ ಪವರ್ ಲಿಮಿಟೆಡ್ ₹5 ಕೋಟಿ ದೇಣಿಗೆ ನೀಡಿದೆ. ಇವೆಲ್ಲವನ್ನೂ ಲೆಕ್ಕಹಾಕಿದರೆ, ಕಂಪನಿಯು ನೇರವಾಗಿ ಮತ್ತು ತನ್ನ ಅಧೀನ ಸಂಸ್ಥೆಗಳ ಮೂಲಕ ಬಿಜೆಪಿಗೆ ₹669 ಕೋಟಿ ದೇಣಿಗೆ ನೀಡಿದಂತಾಗುತ್ತದೆ. ಈ ಮೊತ್ತವು, ಚುನಾವಣಾ ಬಾಂಡ್ ಮೂಲಕ ಯಾವುದೇ ಒಂದು ಕಂಪನಿಯು ಒಂದೇ ರಾಜಕೀಯ ಪಕ್ಷಕ್ಕೆ ನೀಡಿದ ಅತಿಹೆಚ್ಚಿನ ಮೊತ್ತದ ದೇಣಿಗೆಯಾಗಿದೆ.

₹1.87 ಲಕ್ಷ ಕೋಟಿಗೂ ಹೆಚ್ಚು ಗುತ್ತಿಗೆ: ಎಂಇಐಎಲ್ ಮತ್ತು ಅದರ ಅಧೀನ ಸಂಸ್ಥೆಗಳು ಚುನಾವಣಾ ಬಾಂಡ್ ಮೂಲಕ ರಾಜಕೀಯ ಪಕ್ಷಗಳಿಗೆ ಒಟ್ಟು ₹1,226 ಕೋಟಿ ಮೊತ್ತದ ದೇಣಿಗೆ ನೀಡಿವೆ. ಈ ಕಂಪನಿಗಳಿಗೆ ಕೇಂದ್ರ ಸರ್ಕಾರದಿಂದ ಮತ್ತು ಹಲವು ರಾಜ್ಯ ಸರ್ಕಾರಗಳಿಂದ ಒಟ್ಟು ₹1.87 ಲಕ್ಷ ಕೋಟಿಗೂ ಹೆಚ್ಚು ಮೊತ್ತದ ಗುತ್ತಿಗೆಗಳು ದೊರೆತಿವೆ.

'ಲೋಕಾಯುಕ್ತ ನೇಮಕಕ್ಕೆ ಮಾರ್ಗಸೂಚಿ'

ಚರ್ಚಿಸಲು ವಿರೋಧ ಪಕ್ಷದ ನಾಯಕನಿಗೂ ಅವಕಾಶ ನೀಡಬೇಕು: ಸುಪ್ರೀಂ ಕೋರ್ಟ್ ಸೂಚನೆ

ನವದೆಹಲಿ(ಪಿಟಿಐ): ರಾಜ್ಯಗಳಲ್ಲಿ ಲೋಕಾಯುಕ್ತರ ನೇಮಕಾತಿ ಕುರಿತು ಮುಖ್ಯಮಂತ್ರಿಗಳು, ಹೈಕೋರ್ಟ್‌ಗಳ ಮುಖ್ಯನ್ಯಾಯಮೂರ್ತಿಗಳು ಹಾಗೂ ವಿರೋಧ ಪಕ್ಷಗಳ ನಾಯಕರು ನಡೆಸಬೇಕಾದ ಸಮಾಲೋಚನೆ ಪ್ರಕ್ರಿಯೆಗೆ ಸಂಬಂಧಿಸಿ ಮಾರ್ಗಸೂಚಿಗಳನ್ನು ರಚಿಸುವುದಾಗಿ ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.



ನಿವೃತ್ತ ನ್ಯಾಯಮೂರ್ತಿ ಸತ್ಯೇಂದ್ರ-ಕುಮಾರ್ ಸಿಂಗ್ ಅವರನ್ನು ಲೋಕಾ-ಯುಕ್ತರನ್ನಾಗಿ ನೇಮಕ ಮಾಡಲಾಗಿದೆ. ಈ ನೇಮಕಾತಿ ವೇಳೆ ತಮ್ಮ ಜೊತೆ ಸಮಾಲೋಚನೆ ನಡೆಸಿಲ್ಲ ಎಂದು ದೂರಿ ಮಧ್ಯಪ್ರದೇಶ ವಿಧಾನಸಭೆ ವಿರೋಧ ಪಕ್ಷದ ನಾಯಕ, ಕಾಂಗ್ರೆಸ್‌ನ ಉಮಂಗ್ ಸಿಂಘರ್ ಸಲ್ಲಿಸಿರುವ ಅರ್ಜಿ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ.

ಅಲ್ಲದೇ, ಅರ್ಜಿಗೆ ಸಂಬಂಧಿಸಿ ಮಧ್ಯಪ್ರದೇಶ ಸರ್ಕಾರಕ್ಕೆ ನೋಟಿಸ್ ನೀಡಿದೆ. ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಮೂವರು ಸದಸ್ಯರ ಪೀಠ ಅರ್ಜಿ ವಿಚಾರಣೆ ನಡೆಸಿದೆ. 'ಈ ವಿಷಯ ಇಡೀ ದೇಶದಾದ್ಯಂತ ಪರಿಣಾಮ ಬೀರುವಂಥದ್ದಾಗಿದೆ. ಹೀಗಾಗಿ, ಲೋಕಾಯುಕ್ತರ ನೇಮಕ ಸಂದರ್ಭ ಅನುಸರಿಸಬೇಕಾದ ಪ್ರಕ್ರಿಯೆ ಕುರಿತು ನಿರ್ಧರಿಸುವುದು ಅಗತ್ಯ' ಎಂದು ಪೀಠ ಹೇಳಿದೆ.

'ವಿಪಕ್ಷ ನಾಯಕ, ಲೋಕಾಯುಕ್ತರ ನೇಮಕಾತಿಗೆ ಸಂಬಂಧಿಸಿದ ಸಮಿತಿಯ ಸದಸ್ಯ. ಲೋಕಾಯುಕ್ತ ಹುದ್ದೆಗೆ ಅಂತಿಮಗೊಳಿಸುವ ಹೆಸರುಗಳ ಕುರಿತು ಚರ್ಚೆ ನಡೆಸುವುದಕ್ಕೆ ವಿರೋಧ ಪಕ್ಷದ ನಾಯಕನಿಗೆ ಅವಕಾಶ ನೀಡಲೇಬೇಕು' ಎಂದು ಪೀಠ ಹೇಳಿದೆ.

'ಲೋಕಾಯುಕ್ತ ಹುದ್ದೆಗೆ ನೇಮಕಕ್ಕೆ ಅಂತಿಮಗೊಳಿಸಿದ ಅಭ್ಯರ್ಥಿ ಕುರಿತು ಘೋಷಣೆ ಮಾಡುವ ಮುನ್ನಾದಿನ ವಿಪಕ್ಷ ನಾಯಕನಿಗೆ ಮಾಹಿತಿ ನೀಡಿ, ಒಪ್ಪಿಗೆ ಪಡೆಯುವುದನ್ನು ಒಪ್ಪಲಾಗದು. ಇದಕ್ಕಾಗಿ ಕೆಲ ಮಾರ್ಗಸೂಚಿಗಳನ್ನು ರಚಿಸುವುದು ಅಗತ್ಯ. ಇಲ್ಲದೇ ಹೋದಲ್ಲಿ ಸಮಿತಿಯಲ್ಲಿ ವಿರೋಧ ಪಕ್ಷದ ನಾಯಕನ ಉಪಸ್ಥಿತಿಗೆ ಅರ್ಥವೇ ಇರುವುದಿಲ್ಲ' ಎಂದೂ ಪೀಠ ಹೇಳಿದೆ.

ಅರ್ಜಿದಾರ ಪರ ಹಿರಿಯ ವಕೀಲ ಕಪಿಲ್ ಸಿಬಲ್ ಹಾಜರಿದ್ದರು.

ಕೇಂದ್ರ ಸರ್ಕಾರದ ಪರ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ವಾದ ಮಂಡಿಸಿದರು.

'ಬಂಧಿತನಿಗೆ ಇ.ಡಿ ಲಿಖಿತವಾಗಿ ಕಾರಣ ತಿಳಿಸಬೇಕು'

ನವದೆಹಲಿ (ಪಿಟಿಐ): ಯಾವುದೇ ಪ್ರಕರಣದಲ್ಲಿ ಆರೋಪಿಯನ್ನು ಬಂಧಿಸಿದ ಸಂದರ್ಭದಲ್ಲಿ, ಬಂಧನಕ್ಕೆ ಕಾರಣವಾದ ಅಂಶಗಳನ್ನು ಜಾರಿ ನಿರ್ದೇಶನಾಲಯ (ಇ.ಡಿ) ಆರೋಪಿಗೆ ಲಿಖಿತವಾಗಿ ತಿಳಿಸಬೇಕು. ಈ ವಿಷಯದಲ್ಲಿ ಯಾವುದೇ ವಿನಾಯಿತಿ ಇಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ, ಜಾರಿ ನಿರ್ದೇಶನಾಲಯ (ಇ.ಡಿ), ಗುರುಗ್ರಾಮ ಮೂಲದ ರಿಯಲ್ ಎಸ್ಟೇಟ್ ಸಂಸ್ಥೆ 'ಎಂ3ಎಂ' ಸಮೂಹದ ನಿರ್ದೇಶಕರಾದ ಬಸಂತ್ ಬನ್ಸಲ್ ಹಾಗೂ ಪಂಕಜ್ ಬನ್ಸಲ್ ಅವರನ್ನು ಬಂಧಿಸಿತ್ತು.

ಈ ಇಬ್ಬರನ್ನು ಬಿಡುಗಡೆ ಮಾಡುವಂತೆ ನಿರ್ದೇಶನ ನೀಡಿದ್ದ ಸುಪ್ರೀಂ ಕೋರ್ಟ್, ಇವರ ಬಂಧನಕ್ಕೆ ಸಂಬಂಧಿಸಿ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನೀಡಿದ್ದ ಆದೇಶ ರದ್ದುಗೊಳಿಸಿ ಕಳೆದ ಅಕ್ಟೋಬರ್ 3ರಂದು ತೀರ್ಪು ನೀಡಿತ್ತು.

ಅಲ್ಲದೇ, ಬಂಧನಕ್ಕೆ ಕಾರಣವಾದ ಅಂಶಗಳನ್ನು ಆರೋಪಿಗೆ ಲಿಖಿತವಾಗಿ ತಿಳಿಸುವಂತೆಯೂ ಈ ಆದೇಶದಲ್ಲಿ ಸೂಚಿಸಿತ್ತು. ಅ.3ರ ಈ ತೀರ್ಪನ್ನು ಮರು-ಪರಿಶೀಲಿಸುವಂತೆ ಕೋರಿ ಕೇಂದ್ರ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿರುವ ಸುಪ್ರೀಂ ಕೋರ್ಟ್, ತನ್ನ ತೀರ್ಪಿನಲ್ಲಿ ಯಾವುದೇ ದೋಷ ಇಲ್ಲ. ಹೀಗಾಗಿ, ಮರುಪರಿಶೀಲನೆ ಅಗತ್ಯ ಇಲ್ಲ ಎಂದು ಹೇಳಿದೆ.

ನ್ಯಾಯಮೂರ್ತಿಗಳಾದ ಎ.ಎಸ್.ಬೋಪಣ್ಣ ಮತ್ತು ಸಂಜಯಕುಮಾರ್ ಅವರಿದ್ದ ಪೀಠ ಅರ್ಜಿ ವಿಚಾರಣೆ ನಡೆಸಿದ್ದು, ಮಾರ್ಚ್ 20ರಂದು ಆದೇಶ ಪ್ರಕಟಿಸಿದೆ.

ಅರ್ಜಿ ವಿಚಾರಣೆ ವೇಳೆ ಜಾರಿ ನಿರ್ದೇಶನಾಲಯ ಕಾರ್ಯವೈಖರಿ ಕುರಿತು ಕಟು ಟೀಕೆ ಮಾಡಿದ ನ್ಯಾಯಪೀಠ, 'ಜಾರಿ ನಿರ್ದೇಶನಾಲಯ ಪ್ರತೀಕಾರ ತೀರಿಸಿಕೊಳ್ಳುವ ರೀತಿಯಲ್ಲಿ ವರ್ತಿಸಬಾರದು. ಅತ್ಯಂತ ನ್ಯಾಯಸಮ್ಮತ ಹಾಗೂ ಪ್ರಾಮಾಣಿಕತೆಯಿಂದ ಕಾರ್ಯ ನಿರ್ವಹಿಸಬೇಕು' ಎಂದು ಹೇಳಿದೆ.

ಐ.ಟಿ ಮರುಮೌಲ್ಯಮಾಪನ ಪ್ರಶ್ನಿಸಿದ್ದ ಕಾಂಗ್ರೆಸ್ ಪಕ್ಷ

'ಕೈ' ಅರ್ಜಿ: ಹೈಕೋರ್ಟ್‌ನಿಂದ ವಜಾ

ನವದೆಹಲಿ (ಪಿಟಿಐ): ಆದಾಯ ತೆರಿಗೆ ಇಲಾಖೆಯು ತನ್ನ ವಿರುದ್ಧ ಆರಂಭಿಸಿರುವ ಮರುಮೌಲ್ಯಮಾಪನ ಪ್ರಕ್ರಿಯೆ-ಗಳನ್ನು ಪ್ರಶ್ನಿಸಿ ಕಾಂಗ್ರೆಸ್ ಪಕ್ಷ ಸಲ್ಲಿಸಿದ್ದ ಅರ್ಜಿಗಳನ್ನು ದೆಹಲಿ ಹೈಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ನ್ಯಾಯಮೂರ್ತಿಗಳಾದ ಯಶವಂತ್ ವರ್ಮಾ ಮತ್ತು ಪುರುಷೇಂದ್ರ ಕುಮಾರ್ ಕೌರವ್ ಅವರ ಪೀಠವು, ಈ ಕುರಿತ ರಿಟ್ ಅರ್ಜಿಗಳನ್ನು ವಜಾಗೊಳಿಸಿರುವುದಾಗಿ ತಿಳಿಸಿತು.


ಕಾಂಗ್ರೆಸ್ ಪಕ್ಷವು 2014–15, 2015–16 ಮತ್ತು 2016–17ರ ತೆರಿಗೆ ಮರುಮೌಲ್ಯಮಾಪನ ಪ್ರಕ್ರಿಯೆ-ಗಳನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಿತ್ತು. ಈ ಕುರಿತು ವಿಚಾರಣೆ ನಡೆಸಿದ್ದ ಪೀಠವು ಮಾರ್ಚ್ 20ರಂದು ತನ್ನ ಆದೇಶವನ್ನು ಕಾಯ್ದಿರಿಸಿತ್ತು.

ಕಾಂಗ್ರೆಸ್ ಪಕ್ಷದ ಪರ ಹಾಜರಿದ್ದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಅವರು, ತೆರಿಗೆ ಮರುಮೌಲ್ಯಮಾಪನ ಪ್ರಕ್ರಿಯೆಗಳನ್ನು ಮಿತಿಯಿಂದ ನಿರ್ಬಂಧಿಸಲಾಗಿದೆ ಎಂದು ಪ್ರತಿಪಾದಿಸಿದ್ದರು.

ತೆರಿಗೆ ಪ್ರಾಧಿಕಾರವು ಯಾವುದೇ ಶಾಸನಬದ್ಧ ನಿಬಂಧನೆಗಳನ್ನು ಉಲ್ಲಂಘಿಸಿಲ್ಲ ಎಂದು ಪ್ರತಿಪಾದಿಸಿದ ಐ.ಟಿ ಇಲಾಖೆಯು, ವಶಪಡಿಸಿಕೊಂಡಿರುವ ದಾಖಲೆಗಳ ಪ್ರಕಾರ ಪಕ್ಷವು ಸುಮಾರು ₹520 ಕೋಟಿ ಆದಾಯ ಬಹಿರಂಗಪಡಿಸಿಲ್ಲ ಎಂದು ತಿಳಿಸಿದೆ.

₹ 100 ಕೋಟಿ ಬಾಕಿ ತೆರಿಗೆ ವಸೂಲಿಗೆ ಸಂಬಂಧಿಸಿದಂತೆ ಆದಾಯ ತೆರಿಗೆ ಇಲಾಖೆಯು ಕಾಂಗ್ರೆಸ್‌ಗೆ ನೀಡಿದ್ದ ನೋಟಿಸ್‌ಗೆ ತಡೆಯಾಜ್ಞೆ ನೀಡಲು ಆದಾಯ ತೆರಿಗೆ ಮೇಲ್ಮನವಿ ನ್ಯಾಯಮಂಡಳಿ ಇತ್ತೀಚೆಗೆ ನಿರಾಕರಿಸಿತ್ತು. 2018–19ರ ವರ್ಷದ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಮೌಲ್ಯಮಾಪನ ಅಧಿಕಾರಿಯು ₹100 ಕೋಟಿಗಿಂತ ಹೆಚ್ಚಿನ ತೆರಿಗೆ ಪಾವತಿಸುವಂತೆ ಸೂಚಿಸಿದ್ದರು.

ರಾಹುಲ್ ವಿರುದ್ಧ ಮಾನಹಾನಿ ಪ್ರಕರಣ ಏ.2ಕ್ಕೆ ವಿಚಾರಣೆ ಮುಂದೂಡಿಕೆ



ಸುಲ್ತಾನ್‌ಪುರ (ಉತ್ತರ ಪ್ರದೇಶ) (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ದಾಖಲಾಗಿರುವ ಮಾನನಷ್ಟ ಮೊಕದ್ದಮೆಯ ವಿಚಾರಣೆಯನ್ನು ಉತ್ತರ ಪ್ರದೇಶದ ಸುಲ್ತಾನ್‌ಪುರದ ವಿಶೇಷ ನ್ಯಾಯಾಲಯವು ಶುಕ್ರವಾರ ಏಪ್ರಿಲ್ 2ಕ್ಕೆ ಮುಂದೂಡಿತು.

ಗೃಹ ಸಚಿವ ಅಮಿತ್ ಶಾ ಅವರ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ಬಿಜೆಪಿ ನಾಯಕ ವಿಜಯ್ ಮಿಶ್ರಾ ಅವರು ರಾಹುಲ್ ವಿರುದ್ಧ ದೂರು ದಾಖಲಿಸಿದ್ದರು. ವಿಚಾರಣೆಯು ಶುಕ್ರವಾರದಂದೇ ನಡೆಯಬೇಕಿತ್ತು. ಆದರೆ, ವಿವಿಧ ಬೇಡಿಕೆಗಳಿಗೆ ಒತ್ತಾಯಿಸಿ ವಕೀಲರು ಪ್ರತಿಭಟನೆ ನಡೆಸುತ್ತಿದ್ದಾರೆ. ಹೀಗಾಗಿ ವಿಚಾರಣೆಯನ್ನು ಮುಂದೂಡಬೇಕಾಯಿತು ಎಂದು ಮಿಶ್ರಾ ಪರ ವಕೀಲರಾದ ಸಂತೋಷ್ ಪಾಂಡೆ ತಿಳಿಸಿದರು. 2018ರ ಆಗಸ್ಟ್‌ನಲ್ಲಿ ಈ ಪ್ರಕರಣ ದಾಖಲಿಸಲಾಗಿದೆ. ಕಳೆದ ಡಿಸೆಂಬರ್‌ನಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಹುಲ್ ವಿರುದ್ಧ ನ್ಯಾಯಾಲಯ ವಾರಂಟ್ ಹೊರಡಿಸಿತ್ತು. ಫೆ.20ರಂದು ನ್ಯಾಯಾಲಯಕ್ಕೆ ಹಾಜರಾಗಿದ್ದ ರಾಹುಲ್ ಅವರಿಗೆ ಜಾಮೀನು ಮಂಜೂರಾಗಿತ್ತು.



ಹೋಳಿ ಸಂಭ್ರಮ...

ಹೋಳಿ ಹಬ್ಬದ ಅಂಗವಾಗಿ ಮಧ್ಯಪ್ರದೇಶ ರಾಜಧಾನಿ ಭೋಪಾಲ್‌ನಲ್ಲಿ ಶುಕ್ರವಾರ ಯುವತಿಯರು ಬಣ್ಣಗಳಲ್ಲಿ ಮಿಂದೆದ್ದರು – ಪಿಟಿಐ ಚಿತ್ರ

ಅಟ್ಟಾರಿ ಡ್ರಗ್ಸ್ ಪ್ರಕರಣ: ಮತ್ತಿಬ್ಬರು ಪ್ರಮುಖ ಆರೋಪಿಗಳ ಬಂಧನ

ನವದೆಹಲಿ (ಪಿಟಿಐ): ಪಂಜಾಬ್‌ನ ಅಟ್ಟಾರಿಯಲ್ಲಿ ಸುಮಾರು ₹700 ಕೋಟಿ ಮೌಲ್ಯದ 102 ಕೆ.ಜಿ. ಡ್ರಗ್ಸ್ ವಶಪಡಿಸಿ-ಕೊಳ್ಳಲಾಗಿದ್ದ ಪ್ರಕರಣಕ್ಕೆ ಸಂಬಂಧಿಸಿ ಮತ್ತಿಬ್ಬರು ಪ್ರಮುಖ ಆರೋಪಿಗಳನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬಂಧಿಸಿದೆ ಎಂದು ಅಧಿಕೃತ ಹೇಳಿಕೆ ಶುಕ್ರವಾರ ತಿಳಿಸಿದೆ.

ಪಂಜಾಬ್‌ನ ಫಿರೋಜ್‌ಪುರದ ದೀಪಕ್ ಖುರಾನಾ ಅಲಿಯಾಸ್ ದೀಪು ಮತ್ತು ದೆಹಲಿಯ ಜಾಮಿಯಾ ನಗರದ ಅವತಾರ್ ಸಿಂಗ್ ಅಲಿಯಾಸ್ ಸನ್ನಿ ಬಂಧಿತರು. ಪ್ರಕರಣದಲ್ಲಿ ಈವರೆಗೆ ಒಟ್ಟು ಐವರು ಆರೋಪಿಗಳನ್ನು ಬಂಧಿಸಿದಂತಾಗಿದೆ ಎಂದು ಎನ್‌ಐಎ ಹೇಳಿಕೆಯಲ್ಲಿ ತಿಳಿಸಿದೆ.

ಅಫ್ಗಾನಿಸ್ತಾನದಿಂದ ಅಮೃತಸರದ ಅಟ್ಟಾರಿ ಐಸಿಪಿ ಮೂಲಕ ದೇಶಕ್ಕೆ ಸಾಗಿಸುತ್ತಿದ್ದ ಡ್ರಗ್ಸ್ ಅನ್ನು 2022ರ ಏಪ್ರಿಲ್ 24 ಮತ್ತು 26 ರಂದು ಕಸ್ಟಮ್ಸ್ ಇಲಾಖೆಯು ಜಪ್ತಿ ಮಾಡಿತ್ತು.

ತಲೆ ಮರೆಸಿಕೊಂಡಿರುವ ಆರೋಪಿ, ದುಬೈ ಮೂಲದ ಶಹೀದ್ ಅಹ್ಮದ್ ಅಲಿಯಾಸ್ ಖಾಜಿ ಅಬ್ದುಲ್ ವಾದೂದ್ ನಿರ್ದೇಶನದಂತೆ, ಅಫ್ಗಾನಿಸ್ತಾನದ ಮಜರ್‌–ಎ–ಷರೀಫ್ ನಗರ ನಿವಾಸಿ ನಜೀರ್ ಅಹ್ಮದ್ ಕಾನಿ ಎಂಬಾತ ಭಾರತಕ್ಕೆ ಈ ಡ್ರಗ್ಸ್ ಕಳುಹಿಸಿದ್ದ. ಈ ಡ್ರಗ್ಸ್, ರಜಿ ಹೈದರ್ ಝೈದಿ ಎಂಬಾತನಿಗೆ ತಲುಪಿಸಿದ ನಂತರ, ಅದನ್ನು ದೇಶದ ವಿವಿಧೆಡೆ ತಲುಪಿಸುವ ಸಂಚು ರೂಪಿಸಲಾಗಿತ್ತು ಎಂದು ಎನ್‌ಐಎ ಹೇಳಿದೆ.

ವಿಶ್ವಕಪ್ ಫುಟ್‌ಬಾಲ್ ಅರ್ಹತಾ ಟೂರ್ನಿಯ 'ಎ' ಗುಂಪು

ಭಾರತ–ಅಫ್ಗನ್ ಪಂದ್ಯ ಡ್ರಾ

ಅಭಾ (ಸೌದಿ ಅರೇಬಿಯಾ), (ಪಿಟಿಐ): ಭಾರತ ಮತ್ತು ಅಫ್ಗಾನಿಸ್ತಾನ ತಂಡಗಳ ನಡುವೆ ಫೀಫಾ ವಿಶ್ವ ಕಪ್ ಅರ್ಹತಾ ಟೂರ್ನಿಯ 'ಎ' ಗುಂಪಿನ ಪಂದ್ಯ ಗುರುವಾರ ತಡರಾತ್ರಿ ಗೋಲಿಲ್ಲದೇ 'ಡ್ರಾ' ಆಯಿತು.

ಈ ಫಲಿತಾಂಶದ ನಂತರ ಭಾರತ ಮೂರು ಪಂದ್ಯಗಳಿಂದ ನಾಲ್ಕು ಅಂಕ ಸಂಗ್ರಹಿಸಿ ಗುಂಪಿನಲ್ಲಿ ಎರಡನೇ ಸ್ಥಾನಕ್ಕೇರಿತು. ಕುವೈತ್ ಇಷ್ಟೇ ಪಂದ್ಯಗಳಿಂದ ಮೂರು ಪಾಯಿಂಟ್ಸ್ ಕಲೆಹಾಕಿ ಮೂರನೇ ಸ್ಥಾನದಲ್ಲಿದೆ.

ಅಫ್ಗಾನಿಸ್ತಾನ ಕೊನೆಯ ಸ್ಥಾನದಲ್ಲಿದೆ. ಆಡಿದ ಎರಡೂ ಪಂದ್ಯ ಗೆದ್ದಿರುವ ಕತಾರ್ ಅಗ್ರಸ್ಥಾನದಲ್ಲಿದೆ.

ಭಾರತ ಗುವಾಹಟಿಯಲ್ಲಿ ಮಾರ್ಚ್ 26ರಂದು ಅಫ್ಗಾನಿಸ್ತಾನದ ವಿರುದ್ಧ ತನ್ನ ತವರಿನ ಪಂದ್ಯ ಆಡಲಿದೆ. ಈ ಪಂದ್ಯದ ಗೆಲುವು ಭಾರತದ ಪಾಲಿಗೆ ನಿರ್ಣಾಯಕ.

ದಮಾಕ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ಆರಂಭ ಬಿರುಸಾಗಿಯೆ ಇತ್ತು. ಅಫ್ಗಾನ್ ಆಟಗಾರರು ವೇಗ ಮತ್ತು ದೈಹಿಕ ಬಲದ ನೆರವಿನಿಂದ ಮೇಲುಗೈಗೆ ಪ್ರಯತ್ನಿಸಿದರು.

ಭಾರತ ಆಟಗಾರರು ಚುರುಕಿನ ಪಾಸ್‌ಗಳ ಮೂಲಕ ಹಿಡಿತ ಪಡೆಯಲು ಯತ್ನಿಸಿದರು. ಮೊದಲಾರ್ಧದಲ್ಲಿ ಭಾರತಕ್ಕೆ ಮುನ್ನಡೆ ನೀಡುವ ಎರಡು ಅವಕಾಶಗಳಲ್ಲಿ ಮನ್ವೀರ್ ಸಿಂಗ್ ವಿಫಲರಾದರು.

ಜನವರಿಯಲ್ಲಿ ಭಾರತ ತಂಡಕ್ಕೆ ಆಯ್ಕೆಯಾಗಿದ್ದ ವಿಕ್ರಮ್ ಪ್ರತಾಪ್ ಸಿಂಗ್ ಮೊದಲ ಬಾರಿ ಆಡುವ 11ರಲ್ಲಿ ಸ್ಥಾನ ಪಡೆದರು. ಹೆಚ್ಚಿನ ಅವಧಿಯಲ್ಲಿ ಅವರು ಅಫ್ಗಾನ್ ರಕ್ಷಣಾ ವಿಭಾಗವನ್ನು ಕಾಡಿದರು. 17ನೇ ನಿಮಿಷ ಮನ್ವೀರ್ ಉತ್ತಮ ಅವಕಾಶದಲ್ಲಿ ಎಡವಿದರು. ವಿರಾಮಕ್ಕೆ ಮೊದಲು ಮತ್ತೊಂದು ಅವಕಾಶದಲ್ಲಿ ಲಲಿಯನ್‌ಝುವಾಲಾ ಛಾಂಗ್ಟೆ ಅವರ ಅಡ್ಡಪಾಸ್‌ನಲ್ಲಿ ಅವರು ಗೋಲಿಗೆ ಯತ್ನಿಸಿದರೂ, ಚೆಂಡು ಆಚೆ ಹೋಯಿತು.

ಭಾರತದ ಸ್ವಲ್ಪ ಹಿಡಿತದ ಹೊರತೂ ಅಫ್ಗಾನಿಸ್ತಾನ ತಂಡವೂ ಕೆಲವು ಅವಕಾಶ ಪಡೆದಯಿತು. ಮೊಸಾವೆರ್ ಅಹದಿ ಇಂಥ ಒಂದು ಉತ್ತಮ ಯತ್ನದಲ್ಲಿ ಎಡಗಾಲಿನಿಂದ ಬಲವಾಗಿ ಒದ್ದ ಚೆಂಡನ್ನು ಗುರುಪ್ರೀತ್ ಸಿಂಗ್ ಎರಡೂ ಕೈಗಳಿಂದ ಬಾಚಿಹಿಡಿದರು.

ಮೊದಲಾರ್ಧದಲ್ಲಿ ಮನ್ವೀರ್ ವಿಫಲರಾದರೆ, ಉತ್ತರಾರ್ಧದಲ್ಲಿ ವಿಕ್ರಮ್ ಪ್ರತಾಪ್ ಕೆಲವು ಅವಕಾಶಗಳನ್ನು ವ್ಯರ್ಥಪಡಿಸಿದರು.

62ನೇ ನಿಮಿಷ ಅಫ್ಗಾನಿಸ್ತಾನದ ಪರ ರಹಮದ್ ಅಕ್ಬರಿ ಅವರ ಕೆಳಮಟ್ಟದ ಕ್ರಾಸ್‌ನಲ್ಲಿ ಒಮಿಡ್ ಪೊಪಲಾಝಿ ಬಾಕ್ಸ್ ಸಮೀಪದಿಂದ ಗೋಲಿಗೆ ಯತ್ನ ನಡೆಸಿದರೂ, ರಾಹುಲ್ ಭೆಕೆ ಸಕಾದಲ್ಲಿ ಅಡ್ಡವಾದರು.

'ಸುಪ್ರೀಂ' ಆದೇಶದ ಬೆನ್ನಲ್ಲೇ ಪ್ರಮಾಣ ವಚನ ಬೋಧಿಸಿದ ರಾಜ್ಯಪಾಲ ರವಿ

ಸಚಿವರಾಗಿ ಪೊನ್ಮುಡಿ ಪ್ರಮಾಣ



ಕೆ. ಪೊನ್ಮುಡಿ

ಚೆನ್ನೈ (ಪಿಟಿಐ): ಡಿಎಂಕೆ ನಾಯಕ ಕೆ. ಪೊನ್ಮುಡಿ ಅವರು ತಮಿಳುನಾಡಿನ ಸಚಿವರಾಗಿ ಶುಕ್ರವಾರ ಪ್ರಮಾಣ ವಚನ ಸ್ವೀಕರಿಸಿದರು. ರಾಜ್ಯಪಾಲ ಆರ್.ಎನ್.ರವಿ ಅವರು ಅಧಿಕಾರ ಮತ್ತು ಗೋಪ್ಯತೆಯ ಪ್ರಮಾಣವನ್ನು ಬೋಧಿಸಿದರು. ಪ್ರಮಾಣ ವಚನ ಬೋಧಿಸಲು ನಿರಾಕರಿಸಿದ್ದ ರಾಜ್ಯಪಾಲರಿಗೆ ಸುಪ್ರೀಂ ಕೋರ್ಟ್ ಛೀಮಾರಿ ಹಾಕಿದ ಒಂದು ದಿನದ ಬಳಿಕ ಈ ಬೆಳವಣಿಗೆ ನಡೆದಿದೆ.

ಅಕ್ರಮ ಆಸ್ತಿ ಗಳಿಕೆ ಪ್ರಕರಣದಲ್ಲಿ 2023ರ ಡಿಸೆಂಬರ್ 19ರಂದು ಮದ್ರಾಸ್ ಹೈಕೋರ್ಟ್‌ನಿಂದ ಶಿಕ್ಷೆಗೊಳಗಾದ ಬಳಿಕ ಪೊನ್ಮುಡಿ ಅವರು ಸಚಿವ ಸ್ಥಾನ ಕಳೆದುಕೊಂಡಿದ್ದರು. ಅದಾದ 3 ತಿಂಗಳ ಬಳಿಕ ಅವರು ತಮಿಳುನಾಡಿನ ಉನ್ನತ ಶಿಕ್ಷಣ ಸಚಿವರಾಗಿದ್ದಾರೆ.

ರಾಜಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ಸಚಿವರಾದ ಉದಯನಿಧಿ ಸ್ಟಾಲಿನ್, ಮಾ ಸುಬ್ರಮಣಿಯನ್ ಸೇರಿ ಕೆಲ ಸಚಿವರು ಪಾಲ್ಗೊಂಡಿದ್ದರು.

ಪೊನ್ಮುಡಿ ಅವರಿಗೆ ಈ ಹಿಂದೆ ನೀಡಲಾಗಿದ್ದ ಉನ್ನತ ಶಿಕ್ಷಣ ಖಾತೆಯನ್ನೇ ಹಂಚಿಕೆ ಮಾಡಲಾಗಿದೆ. ಈ ಖಾತೆಯ ಹೊಣೆಯನ್ನು ಹಿಂದುಳಿದ ವರ್ಗಗಳ ಸಚಿವ ಆರ್.ಎಸ್. ರಾಜಕಣ್ಣ-ಪ್ಪನ್ ಅವರಿಗೆ ವಹಿಸಲಾಗಿತ್ತು.

ಪೊನ್ಮುಡಿ ಅವರನ್ನು ಸಚಿವರಾಗಿ ನೇಮಿಸಬೇಕು ಎಂದು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ರಾಜ್ಯಪಾಲ ಆರ್. ಎನ್.ರವಿ ಅವರಿಗೆ ಮಾರ್ಚ್ 13ರಂದು ಶಿಫಾರಸು ಮಾಡಿದ್ದರು. ಅದನ್ನು ನಿರಾಕರಿಸಿದ್ದ ರಾಜ್ಯಪಾಲರು, ಪೊನ್ಮುಡಿ ಅವರ ಶಿಕ್ಷೆ ಅಮಾನತು ಆಗಿದ್ದು, ಪ್ರಕರಣ ಇನ್ನೂ ಸುಪ್ರೀಂ ಕೋರ್ಟ್‌ನಲ್ಲಿ ಇರುವ ಕಾರಣ ಸಚಿವರಾಗಿ ನಿಯುಕ್ತಿಗೊಳಿಸಲು ಸಾಧ್ಯವಿಲ್ಲ ಎಂದಿದ್ದರು. ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತು.

ಈ ಕುರಿತ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ತೀವ್ರ ಕಳವಳ ವ್ಯಕ್ತ-ಪಡಿಸಿತ್ತು. ಪೊನ್ಮುಡಿ ಅವರ ಶಿಕ್ಷೆಯನ್ನು ಅಮಾನತುಗೊಳಿಸಿದ ಬಳಿಕವೂ ರಾಜ್ಯಪಾಲರು ಅವರನ್ನು ಸಚಿವರನ್ನಾಗಿ ನೇಮಿಸಲು ನಿರಾಕರಿಸಿರುವುದು ಸರಿಯಲ್ಲ. ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವ ವಿಚಾರವಾಗಿ 24 ಗಂಟೆಗಳಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್, ರಾಜ್ಯಪಾಲ ರವಿ ಅವರಿಗೆ ಸೂಚಿಸಿತ್ತು.

'ಈ ಮಾತನ್ನು ನಾವು ನ್ಯಾಯಾಲಯದಲ್ಲಿ ಗಟ್ಟಿಯಾಗಿ ಹೇಳಲು ಬಯಸಿರಲಿಲ್ಲ, ಆದರೆ ರಾಜ್ಯಪಾಲರು ಸುಪ್ರೀಂ ಕೋರ್ಟ್‌ನ ಮಾತನ್ನು ಧಿಕ್ಕರಿಸುತ್ತಿದ್ದಾರೆ. ರಾಜ್ಯಪಾಲರಿಗೆ ಸಲಹೆ ನೀಡಿದವರು ಆ ಕೆಲಸವನ್ನು ಸರಿಯಾಗಿ ಮಾಡಿಲ್ಲ. ವ್ಯಕ್ತಿಯೊಬ್ಬ ಅಪರಾಧಿ ಎಂದು ನೀಡಲಾದ ತೀರ್ಪಿಗೆ ಸುಪ್ರೀಂ ಕೋರ್ಟ್ ತಡೆ ನೀಡಿದೆ ಎಂದಾದರೆ, ಸುಪ್ರೀಂ ಕೋರ್ಟ್ ಕೊಟ್ಟ ತಡೆಯು ಜಾರಿಗೆ ಬಂದಿದೆ ಎಂದೇ ಅರ್ಥ' ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ಪೀಠವು ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರಿಗೆ ಹೇಳಿತ್ತು.

'ಆದೇಶ ಉಲ್ಲಂಘನೆ ಉದ್ದೇಶ ಇರಲಿಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: ಪೊನ್ಮುಡಿ ಅವರಿಗೆ ಪ್ರಮಾಣವಚನ ಬೋಧಿಸುವ ವಿಷಯದಲ್ಲಿ ಸುಪ್ರೀಂ ಕೋರ್ಟ್ ಆದೇಶವನ್ನು ನಿರಾಕರಿಸುವ ಯಾವುದೇ ಉದ್ದೇಶವಿರಲಿಲ್ಲ ಎಂದು ರಾಜ್ಯಪಾಲ ಆರ್.ಎನ್.ರವಿ ಅವರು ಸುಪ್ರೀಂ ಕೋರ್ಟ್‌ಗೆ ತಿಳಿಸಿದ್ದಾರೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಪೀಠಕ್ಕೆ ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಅವರು ಈ ಸಂಬಂಧ ಪ್ರಮಾಣಪತ್ರ ಸಲ್ಲಿಸಿದ್ದು, ತೀರ್ಪಿನ ಕೆಲವೊಂದು ಅಂಶಗಳನ್ನು ಆಧರಿಸಿ ಈ ಹಿಂದಿನ ನಿಲುವು ತಳೆದಿದ್ದರು ಎಂದು ತಿಳಿಸಿದರು.

ರಾಜ್ಯಪಾಲರನ್ನು ಪ್ರತಿನಿಧಿಸಿ ನೀಡಿದ್ದ ಈ ಹೇಳಿಕೆಯನ್ನು ಪರಿಗಣಿಸಿದ ಪೀಠ, ಡಿಎಂಕೆ ಈ ಸಂಬಂಧ ಸಲ್ಲಿಸಿದ್ದ ಅರ್ಜಿಯನ್ನು ವಿಲೇವಾರಿ ಮಾಡಿತು.

ಎ.ರಾಜಾ ಖುಲಾಸೆ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ವಿಚಾರಣೆಗೆ ಒಪ್ಪಿಗೆ

ನವದೆಹಲಿ(ಪಿಟಿಐ): 2ಜಿ ತರಂಗಾಂತರ ಹಂಚಿಕೆ ಹಗರಣದಲ್ಲಿ ಮಾಜಿ ಟೆಲಿಕಾಂ ಸಚಿವ ಎ.ರಾಜಾ ಹಾಗೂ ಇತರರನ್ನು ಖುಲಾಸೆಗೊಳಿಸಿದ್ದನ್ನು ಪ್ರಶ್ನಿಸಿ ಸಿಬಿಐ ಸಲ್ಲಿಸಿದ್ದ ಅರ್ಜಿಯ ವಿಚಾರಣೆಗೆ ದೆಹಲಿ ಹೈಕೋರ್ಟ್ ಶುಕ್ರವಾರ ಸಮ್ಮತಿಸಿದೆ.

ನ್ಯಾಯಮೂರ್ತಿ ದಿನೇಶ್ ಕುಮಾರ್ ಶರ್ಮಾ, 'ಲಭ್ಯವಿರುವ ದಾಖಲೆಗಳು, ಕಕ್ಷಿದಾರರ ವಕೀಲರು ಸಲ್ಲಿಸಿರುವ ಹೇಳಿಕೆಗಳನ್ನು ಪರಿಶೀಲಿಸಿದಾಗ, ಸಿಬಿಐ ದಾಖಲಿಸಿರುವ ಪ್ರಕರಣ ಮತ್ತು ಅದಕ್ಕೆ ಸಂಬಂಧಿಸಿದಂತೆ ಸಲ್ಲಿಸ-ಲಾಗಿರುವ ಮೇಲ್ಮನವಿಗಳ ಕುರಿತು ವಿಸ್ತೃತ ವಿಚಾರಣೆ ಅಗತ್ಯವಿದೆ' ಎಂದು ಹೇಳಿದರು.

ಇದೇ ಸಂದರ್ಭದಲ್ಲಿ, 'ಮೇ ನಲ್ಲಿ ಅರ್ಜಿ ವಿಚಾರಣೆಗೆ ಪಟ್ಟಿ ಮಾಡಿ' ಎಂದು ತಿಳಿಸಿದರು. ಹಾಗೆಯೇ ಪ್ರಕರಣದ ಬಗ್ಗೆ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲೂ ಅನುಮತಿ ಇದೆ ಎಂದರು.

ಮೇಲ್ಮನವಿ ಸಲ್ಲಿಸಲು ಅವಕಾಶ ನೀಡಬೇಕೆಂದು ಸಿಬಿಐ 2018ರಲ್ಲಿ ಅರ್ಜಿ ಸಲ್ಲಿಸಿತ್ತು. ಆರು ವರ್ಷಗಳ ನಂತರ ಹೈಕೋರ್ಟ್ ಅನುಮತಿ ನೀಡಿದೆ. 2017ರಲ್ಲಿ ವಿಶೇಷ ನ್ಯಾಯಾಲಯವೊಂದು ರಾಜಾ, ಡಿಎಂಕೆ ಸಂಸದೆ ಕನಿಮೊಳಿ ಮತ್ತು ಇತರರನ್ನು ಖುಲಾಸೆಗೊಳಿಸಿತ್ತು.

ಕಾಮನ್‌ವೆಲ್ತ್ ಗೇಮ್ಸ್: ಹಿಂದೆಸರಿದ ಮಲೇಷ್ಯಾ

ಕ್ವಾಲಾಲಂಪುರ (ಎಎಫ್‌ಪಿ): ವೆಚ್ಚ ಹೆಚ್ಚುತ್ತಿರುವ ಕಾರಣ ಮತ್ತು ಸಿದ್ಧತೆಗೆ ಅವಧಿ ಕಡಿಮೆಯಿರುವ ಕಾರಣ 2026ರ ಕಾಮನ್ವೆಲ್ತ್ ಗೇಮ್ಸ್ ಆತಿಥ್ಯದಿಂದ ಹಿಂದೆಸರಿಯಲು ಮಲೇಷ್ಯಾ ಶುಕ್ರವಾರ ನಿರ್ಧರಿಸಿದೆ.

ಪ್ರಧಾನಿ ಅನ್ವರ್ ಇಬ್ರಾಹಿಂ ನೇತೃತ್ವದಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು. ಈ ಮೊದಲು ಆಸ್ಟ್ರೇಲಿಯಾದ ವಿಕ್ಟೋರಿಯಾ ಪ್ರಾಂತವೂ ಏರುತ್ತಿರುವ ಖರ್ಚುವೆಚ್ಚಗಳ ಹಿನ್ನೆಲೆಯಲ್ಲಿ ಈ ಕ್ರೀಡೆಗಳ ಆತಿಥ್ಯದಿಂದ ಹಿಂದೆ ಸರಿದಿತ್ತು.

2026ರ ಕ್ರೀಡೆಗಳ ಆತಿಥ್ಯ ವಹಿಸಲು ಕಾಮನ್ವೆಲ್ತ್ ಗೇಮ್ಸ್ ಫೆಡರೇಷನ್‌ನ ನೀಡಿದ ಆಹ್ವಾನ ಸ್ವೀಕರಿಸದಿರಲು ನಿರ್ಧರಿಸಲಾಗಿದೆ ಎಂದು ಸಚಿವ ಹನಾ ಯೊ ಹೇಳಿಕೆಯಲ್ಲಿ ತಿಳಿಸಿದ್ದಾರೆ. ₹1042 ಕೋಟಿ ನೀಡುವುದಾಗಿ ಕಾಮನ್ವೆಲ್ತ್ ಗೇಮ್ಸ್ ಫೆಡರೇಷನ್ ಮಲೇಷ್ಯಾಕ್ಕೆ ತಿಳಿಸಿತ್ತು.

'ಒಲಿಂಪಿಕ್ ಅರ್ಹತೆ: ಸೋಲಿನ ಗುಂಗಿನಿಂದ ಹೊರಬರಲಾಗುತ್ತಿಲ್ಲ'



ಸವಿತಾ ಪೂನಿಯಾ


ನವದೆಹಲಿ (ಪಿಟಿಐ): ಭಾರತ ಮಹಿಳಾ ಹಾಕಿ ತಂಡ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸುವಲ್ಲಿ ವಿಫಲವಾಯಿತು. ಆ ಸೋಲಿನ ಗುಂಗಿನಿಂದ ಹೊರ ಬರಲು ಸಾಧ್ಯವಾಗುತ್ತಿಲ್ಲ ಎಂದು ಹಾಕಿ ತಂಡದ ನಾಯಕಿ ಸವಿತಾ ಪೂನಿಯಾ ಹೇಳಿದರು.


'ಜೀವನದಲ್ಲಿ ಒಳ್ಳೆಯ ಕ್ಷಣಗಳನ್ನು ಮರೆಯಲಾಗುವುದಿಲ್ಲ. ಆದರೆ, ಕೆಟ್ಟ ಕ್ಷಣಗಳನ್ನು ಮರೆಯಲಾಗುವುದಿಲ್ಲ. ಒಲಿಂಪಿಕ್ ಅರ್ಹತಾ ಪಂದ್ಯಗಳಲ್ಲಿ ಸೋಲುವುದು ಎಷ್ಟು ಕೆಟ್ಟ ಕ್ಷಣವೆಂದರೆ ಬಹುಶಃ ನಮ್ಮ ಇಡೀ ಜೀವನವನ್ನು ಮರೆಯಲು ಸಾಧ್ಯವಾಗುವು-ದಿಲ್ಲ' ಎಂದು 33 ವರ್ಷದ ಗೋಲ್‌ಕೀಪರ್ ಸವಿತಾ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನ-ದಲ್ಲಿ ತಿಳಿಸಿದ್ದಾರೆ. 'ನಾವು ಒಲಿಂಪಿಕ್ಸ್ ಗೆ ಹೋಗುತ್ತಿಲ್ಲ ಎಂಬುದನ್ನು ಇನ್ನೂ ನಂಬಲು ಸಾಧ್ಯವಿಲ್ಲ. ಆತ್ಮವಿಶ್ವಾಸ ಮತ್ತು ಉತ್ತಮವಾಗಿ ಸಿದ್ಧರಾಗಿದ್ದೆವು. ಆದರೆ, ಕ್ರೀಡೆಯಲ್ಲಿ ಏನನ್ನೂ ಊಹಿಸಲು ಸಾಧ್ಯವಿಲ್ಲ' ಎಂದರು.

'ಅರ್ಹತಾ ಪಂದ್ಯಗಳ ನಂತರ, ನಾವು ಒಂದು ವಾರ ಮನೆಯಲ್ಲಿದ್ದೆವು. ದುಃಖವನ್ನು ಒಳಗೆ ಇಡುವುದರಿಂದ ಯಾವುದೇ ಪ್ರಯೋಜನವಿಲ್ಲ ಮತ್ತು ಅದನ್ನು ಹೊರಹಾಕುವುದು ಅವಶ್ಯಕ. ಈ ವಿರಾಮದ ಸಮಯದಲ್ಲಿ ಯಾರೂ ಒಲಿಂಪಿಕ್ ಅರ್ಹತಾ ಪಂದ್ಯಗಳ ಬಗ್ಗೆ ಮಾತನಾಡಲಿಲ್ಲ' ಎಂದು ಅವರು ಬಹಿರಂಗಪಡಿಸಿದರು.

'ಕ್ರೀಡೆಯ ಬಗ್ಗೆ ಒಳ್ಳೆಯ ವಿಷಯವೆಂದರೆ ಹಿಂದಿನದನ್ನು ಮರೆತು ಬಹಳ ವೇಗವಾಗಿ ಮುಂದುವರಿಯಬೇಕು. ಅದಕ್ಕಾಗಿಯೇ ನಾನು ಸೀನಿಯರ್ ನ್ಯಾಷನಲ್ಸ್ ಆಡಲು ಪುಣೆಗೆ ಬಂದಿದ್ದೇನೆ. ಏಕೆಂದರೆ ಹಾಕಿ ನನ್ನ ಉತ್ಸಾಹವಾಗಿದೆ. ನಾನು ಮೈದಾನದಿಂದ ಹೆಚ್ಚು ದೂರವಿದ್ದರೆ ಅದು ನನಗೆ ಹೆಚ್ಚು ತೊಂದರೆ ನೀಡುತ್ತದೆ' ಎಂದು ಹೇಳಿದರು.




ಚೆನ್ನೈನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಶುಕ್ರವಾರ ಇಂಡಿಯನ್ ಪ್ರೀಮಿಯರ್ ಲೀಗ್ 17ನೇ ಆವೃತ್ತಿಯ ಉದ್ಘಾಟನಾ ಪಂದ್ಯದ ವೇಳೆ ಪಟಾಕಿಗಳನ್ನು ಸಿಡಿಸಲಾಯಿತು. ಪಿಟಿಐ ಚಿತ್ರ


ಸಂಗೀತ ನಿರ್ದೇಶಕ ಎ.ಆರ್.ರೆಹಮಾನ್ ಅವರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಪಿಟಿಐ ಚಿತ್ರ

ಮಿಂಚಿದ ರಚಿನ್ ರವೀಂದ್ರ, ಶಿವಂ ದುಬೆ • ರಾಯಲ್ ಚಾಲೆಂಜರ್ಸ್ ಬೆಂಗಳೂರಿಗೆ ಸೋಲು

ಋತುರಾಜ್ ಬಳಗದ ಶುಭಾರಂಭ

ಚೆನ್ನೈ(ಪಿಟಿಐ): ಯುವನಾಯಕ ಋತುರಾಜ್ ಗಾಯಕವಾಡ ಅವರ ನಾಯಕತ್ವದಲ್ಲಿ ಚೊಚ್ಚಲ ಪಂದ್ಯವಾಡಿದ ಚೆನ್ನೈ ಸೂಪರ್ ಕಿಂಗ್ಸ್ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು. ರಾಯಲ್ ಚಾಲೆಂಜರ್ಸ್ ಬೆಂಗಳೂರು ನಿರಾಶೆ ಅನುಭವಿಸಿತು.

ಚೆಪಾಕ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಚೆನ್ನೈ ತಂಡವು 6 ವಿಕೆಟ್‌ಗಳಿಂದ ಸೋತಿತು. ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಬೆಂಗಳೂರು ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 173 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ಚೆನ್ನೈ ತಂಡವು 18.4 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 176 ರನ್ ಗಳಿಸಿ ಗೆದ್ದಿತು.

ಮಹೇಂದ್ರಸಿಂಗ್ ಧೋನಿ ಅವರು ಈ ಟೂರ್ನಿಯಲ್ಲಿ ನಾಯಕತ್ವ ಬಿಟ್ಟುಕೊಟ್ಟಿದ್ದಾರೆ. ಯುವ ಆಟಗಾರ ಗಾಯಕವಾಡ ತಮ್ಮ ಹೊಣೆಯನ್ನು ಸಮರ್ಥವಾಗಿ ನಿಭಾಯಿಸಿದರು.

ಆರ್‌ಸಿಬಿ ತಂಡದ ಆರಂಭಿಕ ಜೋಡಿ ವಿರಾಟ್ ಕೊಹ್ಲಿ (21; 20ಎ) ಮತ್ತು ನಾಯಕ ಫಫ್ ಡುಪ್ಲೆಸಿ (35; 23ಎ) ಉತ್ತಮ ಆರಂಭ ನೀಡಿದರು. ಆದರೆ ಚೆನ್ನೈ ವೇಗಿ ಮುಸ್ತಫಿಜುರ್ ರೆಹಮಾನ್ (29ಕ್ಕೆ4) ಆರ್‌ಸಿಬಿ ಓಟಕ್ಕೆ ಕಡಿವಾಣ ಹಾಕಿದರು . ಇದರಿಂದಾಗಿ ತಂಡವು 78 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡಿತು.

ಈ ಹಂತದಲ್ಲಿ ಮಿಂಚಿದ ಅನುಜ್ ರಾವತ್ (48; 25ಎ) ಅವರಿಂದಾಗಿ ತಂಡವು ಹೋರಾಟದ ಮೊತ್ತ ಗಳಿಸಿತು. ಅನುಜ್ ಅವರು ತುಷಾರ್ ದೇಶಪಾಂಡೆ ಅವರ ಒಂದೇ ಓವರ್‌ನಲ್ಲಿ 25 ರನ್ ಸಿಡಿಸಿದರು. ಆರನೇ ವಿಕೆಟ್‌ಗೆ ಅವರು ದಿನೇಶ್ ಕಾರ್ತಿಕ್ (ಅಜೇಯ 38, 25 ಎಸೆತ) ಜೊತೆ ಅತ್ಯಮೂಲ್ಯ 95 ರನ್ ಸೇರಿಸಿದರು.

ಗುರಿ ಬೆನ್ನಟ್ಟಿದ ಚೆನ್ನೈ ತಂಡದ ಬ್ಯಾಟಿಂಗ್ ಪಡೆ ಸಾಂಘಿಕ ಹೋರಾಟ ನಡೆಸಿತು. ಆರ್‌ಸಿಬಿಯ ಕ್ಯಾಮರಾನ್ ಗ್ರೀನ್ ಒಬ್ಬರೇ 2 ವಿಕೆಟ್ ಗಳಿಸಿದರು. ಉಳಿದಂತೆ ಯಾರ ಬೌಲಿಂಗ್ ಕೂಡ ಪರಿಣಾಮಕಾರಿಯಾಗಿರಲಿಲ್ಲ.

ಚೆನ್ನೈ ತಂಡದ ಶಿವಂ ದುಬೆ (ಔಟಾಗದೆ 34) ಮತ್ತು ರವೀಂದ್ರ ಜಡೇಜ (ಅಜೇಯ 25) ಬಿರುಸಿನ ಬ್ಯಾಟಿಂಗ್ ಮೂಲಕ ತಂಡವನ್ನು ಗೆಲುವಿನ ದಡ ಸೇರಿಸಿದರು.


ಚೆನ್ನೈ ಸೂಪರ್ ಕಿಂಗ್ಸ್ ತಂಡದ ರಚಿನ್ ರವೀಂದ್ರ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು: 6 ವಿಕೆಟ್‌ಗೆ 173 (20 ಓವರ್)
ಕೊಹ್ಲಿ ಸಿ ರವೀಂದ್ರ ಬಿ ಮುಸ್ತಫಿಜುರ್ 21 (20ಎ, 6x1)
ಡು ಪ್ಲೆಸಿ ಸಿ ರವೀಂದ್ರ ಬಿ ಮುಸ್ತಫಿಜುರ್ 35 (23ಎ, 4x8)
ಪಾಟೀದಾರ್ ಸಿ ಧೋನಿ ಬಿ ಮುಸ್ತಫಿಜುರ್ 0 (3ಎ)
ಮ್ಯಾಕ್ಸ್‌ವೆಲ್ ಸಿ ಧೋನಿ ಬಿ ಚಾಹರ್ 0 (1ಎ)
ಗ್ರೀನ್ ಬಿ ಮುಸ್ತಫಿಜುರ್ 18 (22ಎ, 4x1)
ಅನುಜ್ ರನ್‌ಔಟ್ (ಧೋನಿ) 48 (25ಎ, 4x4, 6x3)
ದಿನೇಶ್ ಔಟಾಗದೇ 38 (26ಎ, 4x3, 6x2)
ಇತರೆ: 13 (ಬೈ 1, ಲೆಗ್‌ಬೈ2, ವೈಡ್ 10)
ವಿಕೆಟ್ ಪತನ: 1–41 (ಫಫ್ ಡುಪ್ಲೆಸಿಸ್, 4.3), 2–41 (ರಜತ್ ಪಾಟೀದಾರ್, 4.6), 3–42 (ಗ್ಲೆನ್ ಮ್ಯಾಕ್ಸ್‌ವೆಲ್, 5.3), 4–77 (ವಿರಾಟ್ ಕೊಹ್ಲಿ, 11.2), 5–78 (ಕ್ಯಾಮರಾನ್ ಗ್ರೀನ್, 11.4), 6–173 (ಅನುಜ್ ರಾವತ್, 19.6)
ಬೌಲಿಂಗ್: ದೀಪಕ್ ಚಾಹರ್ 4–0–37–1, ತುಷಾರ್ ದೇಶಪಾಂಡೆ 4–0–47–0; ಮಹೀಶ ತೀಕ್ಷಣ4–0–36–0; ಮುಸ್ತಫಿಜುರ್ ರೆಹಮಾನ್ 4–0–29–4, ರವೀಂದ್ರ ಜಡೇಜ 4–0–21–0

ಚೆನ್ನೈ ಸೂಪರ್ ಕಿಂಗ್ಸ್: 4 ವಿಕೆಟ್‌ಗೆ 176 (18.4 ಓವರ್)
ಋತುರಾಜ್ ಸಿ ಗ್ರೀನ್ ಬಿ ಯಶ್ ದಯಾಳ್ 15 (15ಎ, 4X3)
ರವೀಂದ್ರ ಸಿ ರಜತ್ ಬಿ ಕರಣ್ 37 (15ಎ, 4X3, 6X3)
ರಹಾನೆ ಸಿ ಮ್ಯಾಕ್ಸ್‌ವೆಲ್ ಬಿ ಗ್ರೀನ್ 27 (19ಎ, 6X2)
ಡ್ಯಾರಿಲ್ ಮಿಚೆಲ್ 22 (18ಎ)
ಶಿವಂ ದುಬೆ ಔಟಾಗದೇ 34 (28ಎ, 4X4, 6X1)
ರವೀಂದ್ರ ಜಡೇಜ ಔಟಾಗದೇ 25 (17ಎ, 6X1)
ಇತರೆ: 16 (ಬೈ 4, ಲೆಗ್ ಬೈ 4, ವೈಡ್ 8)
ವಿಕೆಟ್ ಪತನ: 1–38 (ಋತುರಾಜ್ ಗಾಯಕವಾಡ, 3.6), 2–71 (ರಚಿನ್ ರವೀಂದ್ರ, 6.6), 3–99 (ಅಜಿಂಕ್ಯ ರಹಾನೆ, 10.2), 4–110 (ಡ್ಯಾರಿಲ್ ಮಿಚೆಲ್, 12.3)
ಬೌಲಿಂಗ್: ಮೊಹಮದ್ ಸಿರಾಜ್ 4–0–38–0, ಯಶ್ ದಯಾಳ್ 3–0–28–1, ಅಲ್ಜಾರಿ ಜೋಸೆಫ್ 3.4–0–38–0, ಕರಣ್ ಶರ್ಮಾ 2–0–24–1, ಮಯಂಕ್ ದಾಗರ್ 2–0–6–0, ಕ್ಯಾಮರಾನ್ ಗ್ರೀನ್ 3–0–27–2, ಗ್ಲೆನ್ ಮ್ಯಾಕ್ಸ್‌ವೆಲ್ 1–0–7–0

ಫಲಿತಾಂಶ: ಚೆನ್ನೈ ಸೂಪರ್ ಕಿಂಗ್ಸ್‌ಗೆ ಗೆಲುವು

ಕೆಕೆಆರ್– ಸನ್‌ರೈಸರ್ಸ್ ಪಂದ್ಯ ಇಂದು • ಅಯ್ಯರ್‌ಗೆ ಪರೀಕ್ಷೆ

ಕಮಿನ್ಸ್– ಸ್ಟಾರ್ಕ್ ಮುಖಾಮುಖಿ

ಕೋಲ್ಕತ್ತ (ಪಿಟಿಐ): ಐಪಿಎಲ್ ಹರಾಜಿನಲ್ಲಿ ಅತಿ ದೊಡ್ಡ ಮೊತ್ತ ಪಡೆದ ಆಸ್ಟ್ರೇಲಿಯಾದ ವೇಗದ ಬೌಲರ್‌ಗಳಾದ ಮಿಚೆಲ್ ಸ್ಟಾರ್ಕ್ ಮತ್ತು ಪ್ಯಾಟ್ ಕಮಿನ್ಸ್ ಶನಿವಾರ ನಡೆಯುವ ಪಂದ್ಯದಲ್ಲಿ ಮುಖಾಮುಖಿ ಆಗಿದ್ದಾರೆ. ಸ್ಟಾರ್ಕ್ ಕೋಲ್ಕತ್ತ ನೈಟ್ ರೈಡರ್ಸ್ ತಂಡದಲ್ಲಿದ್ದರೆ, ಕಮಿನ್ಸ್ ಸನ್‌ರೈಸರ್ಸ್ ತಂಡವನ್ನು ಮುನ್ನಡೆಸಲಿದ್ದಾರೆ. ಗಾಯಾಳಾಗಿ ಪುನರಾಗಮನ ಮಾಡುತ್ತಿರುವ ಶ್ರೇಯಸ್ ಅಯ್ಯರ್ ಅವರ ಪ್ರದರ್ಶನದ ಮೇಲೂ ಕಣ್ಣೆರಲಿದೆ.

ಬೆನ್ನುನೋವಿನಿಂದಾಗಿ ಅಯ್ಯರ್ ಕಳೆದ ಋತುವಿನಲ್ಲಿ ಆಡಲು ಆಗಿರಲಿಲ್ಲ. ಈಗ ಮತ್ತೆ ಕೋಲ್ಕತ್ತ ತಂಡದ ನೇತೃತ್ವ ವಹಿಸಿದ್ದಾರೆ. ಇತ್ತೀಚೆಗೆ ಮುಂಬೈ ರಣಜಿ ಫೈನಲ್ ಗೆದ್ದ ಸಂದರ್ಭದಲ್ಲಿ ವಿದರ್ಭ ವಿರುದ್ಧ ಎರಡನೇ ಇನಿಂಗ್ಸ್‌ನಲ್ಲಿ 95 ರನ್ ಹೊಡೆದಿದ್ದರು. ಆದರೆ ಆಗಲೂ ಅವರಿಗೆ ಬೆನ್ನುನೋವು ಕಾಡಿತ್ತು.

ಹಿಂದೆ ಕೆಕೆಆರ್ ತಂಡದ ಯಶಸ್ವಿ ನಾಯಕ ಎನಿಸಿದ್ದ ಗೌತಮ್ ಗಂಭೀರ್ ಈಗ ಮೆಂಟರ್ ಆಗಿದ್ದಾರೆ. ನಿಪುಣ ತಂತ್ರಗಾರ ಚಂದ್ರಕಾಂತ್ ಪಂಡಿತ್ ಆ ತಂಡದ ಮುಖ್ಯ ಕೋಚ್ ಆಗಿದ್ದು ಅವರ ಪಾತ್ರವೂ ಮಹತ್ವದ್ದು.


ಸ್ಟಾರ್ಕ್ ಅವರನ್ನು ಕೆಕೆಆರ್ ತಂಡ ದಾಖಲೆಯ ಮೊತ್ತ ₹24.75 ಕೋಟಿಗೆ ತನ್ನ ತೆಕ್ಕೆಗೆ ಸೆಳೆದುಕೊಂಡಿದೆ. ಈಗ ಎಡಗೈ ವೇಗದ ಬೌಲರ್ ಅದಕ್ಕೆ ತಕ್ಕಂತೆ ಉತ್ತಮ ಪ್ರದರ್ಶನ ನೀಡಬೇಕಾದ ಒತ್ತಡದಲ್ಲಿದ್ದಾರೆ. ಸ್ಟಾರ್ಕ್ ಬಿಟ್ಟರೆ ತಂಡದ ಅನುಭವಿ ಎಂದರೆ ವೆಸ್ಟ್ ಇಂಡೀಸ್‌ನ ಆ್ಯಂಡ್ರೆ ರಸೆಲ್.

ರಹಮಾನುಲ್ಲಾ ಗುರ್ಬಾಜ್, ಫಿಲ್ ಸಾಲ್ಟ್, ವೆಂಕಟೇಶ ಅಯ್ಯರ್, ಶ್ರೇಯಸ್ ಅವರಿಂದ ತಂಡದ ಬ್ಯಾಟಿಂಗ್ ಪ್ರಬಲವಾಗಿದೆ. ರಸೆಲ್ ಮತ್ತು 'ಫಿನಿಷರ್' ರಿಂಕು ಸಿಂಗ್ ಸ್ಫೋಟಕ ಆಟ ಆಡಬಲ್ಲವರು. ಆದರೆ ಸ್ಪಿನ್ ವಿಭಾಗದ ಸ್ವಲ್ಪ ಸೊರಗಿದೆ. ಸುನೀಲ್ ನಾರಾಯಣ್, ವರುಣ್ ಚಕ್ರವರ್ತಿ ಅವರ ಮೇಲೆ ಹೊಣೆಯಿದೆ.

ಮೇಲ್ನೋಟಕ್ಕೆ ಕೆಕೆಆರ್ ಗೆಲ್ಲುವ ನೆಚ್ಚಿನ ತಂಡದಂತೆ ಭಾಸವಾಗುತ್ತಿದೆ.

ಕಮಿನ್ಸ್, ಹರಾಜಿನಲ್ಲಿ ಎರಡನೇ ಅತಿ ಹೆಚ್ಚು (₹20.50 ಕೋಟಿ) ಪಡೆದಿದ್ದರು. ಕೆಲವು ಋತುಗಳಿಂದ ಪಾಯಿಂಟ್ ಪಟ್ಟಿಯ ಕೆಳಭಾಗದಲ್ಲಿ ಕಾಯಂ ಸ್ಥಾನ ಪಡೆಯುತ್ತಿರುವ ಹೈದರಾಬಾದ್ ತಂಡದ ಮನೋಬಲವನ್ನು ವೃದ್ಧಿಸಬೇಕಾದ ಸವಾಲು ಅವರ ಮುಂದಿದೆ.


ಪ್ಯಾಟ್ ಕಮಿನ್ಸ್


ಮಿಚೆಲ್ ಸ್ಟಾರ್ಕ್

ಆದರೆ ಕಮಿನ್ಸ್ ನಾಯಕತ್ವದ ಜೊತೆ ಟ್ರಾವಿಸ್ ಹೆಡ್, ಹೆನ್ರಿಕ್ ಕ್ಲಾಸೆನ್, ಮರ್ಕರಂ ಅವರಂಥ ಬಿರುಸಿನ ಆಟ ಆಡಬಲ್ಲ ಆಟಗಾರರು ಸನ್‌ರೈಸರ್ಸ್ ತಂಡದಲ್ಲಿದ್ದಾರೆ. ಕಮಿನ್ಸ್ ಜೊತೆಗೆ ತಂಡ ಬೌಲಿಂಗ್‌ನಲ್ಲಿ ಹಳೆ ಹುಲಿ ಭುವನೇಶ್ವರ ಕುಮಾರ್, ವಾಷಿಂಗ್ಟನ್ ಸುಂದರ್ ಮತ್ತು ವನಿಂದು ಹಸರಂಗ ಅವರನ್ನು ನೆಚ್ಚಿಕೊಳ್ಳಬೇಕಾಗಿದೆ. ಬಾಂಗ್ಲಾದೇಶ ವಿರುದ್ಧ ಎರಡು ಟೆಸ್ಟ್ ಸರಣಿಯ ಪಂದ್ಯಗಳಿಗೆ ನಿಷೇಧ ಪಡೆದಿರುವ ಆಲ್‌ರೌಂಡರ್ ಹಸರಂಗ ಮೊದಲ ಪಂದ್ಯಕ್ಕೆ ಲಭ್ಯರಿದ್ದಾರೆಯೇ ಎನ್ನುವುದು ಖಚಿತವಾಗಿಲ್ಲ.

ಪಂದ್ಯ ಆರಂಭ: ರಾತ್ರಿ 7.30

ಪಂತ್‌ಗೆ ಮರಳಿ ಅರಳುವ ವಿಶ್ವಾಸ

ಡೆಲ್ಲಿ ಕ್ಯಾಪಿಟಲ್ಸ್–ಪಂಜಾಬ್ ಕಿಂಗ್ಸ್ ಹಣಾಹಣಿ ಇಂದು

ಚಂಡೀಗಡ (ಪಿಟಿಐ): ರಸ್ತೆ ಅಪಘಾತದಲ್ಲಿ ಗಾಯಗೊಂಡು ಹದಿನಾಲ್ಕು ತಿಂಗಳುಗಳ ಕಾಲ ಕ್ರಿಕೆಟ್‌ನಿಂದ ದೂರವಿದ್ದ ರಿಷಭ್ ಪಂತ್ ಇದೀಗ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದಾರೆ.

ಶನಿವಾರ ಇಲ್ಲಿ ನಡೆಯಲಿರುವ ಪಂದ್ಯದಲ್ಲಿ ರಿಷಭ್ ನಾಯಕತ್ವದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಶಿಖರ್ ಧವನ್ ಮುನ್ನಡೆಸಲಿರುವ ಪಂಜಾಬ್ ಕಿಂಗ್ಸ್ ಎದುರು ಸೆಣಸಲಿದೆ.

2022ರ ಡಿಸೆಂಬರ್‌ನಲ್ಲಿ ಸಂಭವಿಸಿದ್ದ ಭೀಕರ ಕಾರು ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ರಿಷಭ್ ಚಿಕಿತ್ಸೆ, ಪುನಶ್ಚೇತನ ಮತ್ತು ತರಬೇತಿಯ ನಂತರ ಈಗ ಆಟಕ್ಕೆ ಸಿದ್ಧರಾಗಿದ್ದಾರೆ. ಹೋದ ವರ್ಷ ಅವರ ಅನುಪಸ್ಥಿತಿಯಲ್ಲಿ ಡೇವಿಡ್ ವಾರ್ನರ್ ತಂಡವನ್ನು ಮುನ್ನಡೆಸಿದ್ದರು.

'ಕಳೆದ ವಾರದಲ್ಲಿ ಪಂತ್ ಬಹಳಷ್ಟು ಅವಧಿ ಬ್ಯಾಟಿಂಗ್ ಅಭ್ಯಾಸ ಮಾಡಿದ್ದಾರೆ. ಅವರು ತಮ್ಮ ದೇಹದ ಸಾಮರ್ಥ್ಯದ ಕುರಿತು ವಿಶ್ವಾಸವನ್ನು ಪಂದ್ಯಗಳಲ್ಲಿ ಆಡುವ ಮೂಲಕ ಮರಳಿ ಪಡೆಯಬಹುದು' ಎಂದು ಡೆಲ್ಲಿ ತಂಡದ ಕೋಚ್ ರಿಕಿ ಪಾಂಟಿಂಗ್ ಹೇಳಿದ್ದಾರೆ.

ಆದರೆ ಅವರು ವಿಕೆಟ್‌ಕೀಪಿಂಗ್ ಹೊಣೆ ನಿಭಾಯಿಸುವ ಕುರಿತು ಇನ್ನೂ ಖಚಿತ ಮಾಹಿತಿ ಇಲ್ಲ. ಡೆಲ್ಲಿ ತಂಡದಲ್ಲಿ ವಾರ್ನರ್, ಪೃಥ್ವಿ ಶಾ, ಯಶ್ ಧುಳ್ ಅವರು ಬ್ಯಾಟಿಂಗ್ ವಿಭಾಗದ ಪ್ರಮುಖರಾಗಿದ್ದಾರೆ. ಬೌಲಿಂಗ್ ವಿಭಾಗವು ಬಲಿಷ್ಠವಾಗಿದೆ. ಅನುಭವಿ ಎನ್ರಿಚ್ ನಾಕಿಯಾ, ಇಶಾಂತ್ ಶರ್ಮಾ, ಜೇ ರಿಚರ್ಡ್ಸನ್, ಸ್ಪಿನ್ನರ್ ಕುಲದೀಪ್ ಯಾದವ್, ಮುಕೇಶ್ ಯಾದವ್ ಹಾಗೂ ಅಕ್ಷರ್ ಪಟೇಲ್ ಅವರು ಪಂದ್ಯ ಗೆಲ್ಲಿಸಿಕೊಡಬಲ್ಲ ಸಮರ್ಥರು.

ಪಂಜಾಬ್ ತಂಡದಲ್ಲಿ ನಾಯಕ ಶಿಖರ್ ಕೂಡ ದೀರ್ಘ ಅವಧಿಯ ನಂತರ ಕಣಕ್ಕೆ ಮರಳುತ್ತಿದ್ದಾರೆ. ಬೌಲಿಂಗ್ ವಿಭಾಗದಲ್ಲಿ ಕಗಿಸೊ ರಬಾಡ, ಸ್ಯಾಮ್ ಕರನ್, ಹರ್ಷಲ್ ಪಟೇಲ್ ಮೇಲೆ ಹೆಚ್ಚು ಭರವಸೆ ಇದೆ. ಕನ್ನಡಿಗ ವಿದ್ವತ್ ಕಾವೇರಪ್ಪ ಅವರಿಗೆ ಅವಕಾಶ ಕುರಿತು ಇನ್ನೂ ಖಚಿತವಾಗಿಲ್ಲ. ಬ್ಯಾಟಿಂಗ್‌ನಲ್ಲಿ ಸಿಕಂದರ್ ರಝಾ, ಆಲ್‌ರೌಂಡರ್‌ಗಳಾದ ಲಿಯಾಮ್ ಲಿವಿಂಗ್‌ಸ್ಟೋನ್, ರಿಷಿ ಧವನ್ ಮೇಲೆ ಹೆಚ್ಚು ಹೊಣೆ ಇದೆ. **ಪಂದ್ಯ ಆರಂಭ: ಮಧ್ಯಾಹ್ನ 3.30**

ರಾಷ್ಟ್ರೀಯ ಥ್ರೋಗಳ ಸ್ಪರ್ಧೆ: ಕರ್ನಾಟಕದ ಇಬ್ಬರಿಗೆ ಬೆಳ್ಳಿ

ಮೂರು ಕೂಟ ದಾಖಲೆ ನಿರ್ಮಾಣ

ಪಟಿಯಾಲಾ: ಮೂರು ಕೂಟ ದಾಖಲೆಗಳು, ಶುಕ್ರವಾರ ಇಲ್ಲಿ ನಡೆದ ಇಂಡಿಯನ್ ಓಪನ್ ಥ್ರೋಗಳ ಸ್ಪರ್ಧೆಯಲ್ಲಿ ಮೂಡಿಬಂದವು.

ಮಹಾರಾಷ್ಟ್ರದ ಅಭಾ ಖತುವಾ ಮಹಿಳೆಯರ ವಿಭಾಗದ ಶಾಟ್‌ಪಟ್ ಚಿನ್ನ ಗೆಲ್ಲುವ ಹಾದಿಯಲ್ಲಿ 17.56 ಮೀ. ಎಸೆತ ದಾಖಲಿಸಿ ತಮ್ಮದೇ ಹಳೆಯ ದಾಖಲೆಯನ್ನು (17.09 ಮೀ.) ಸುಧಾರಿಸಿದರು. ಈ ಸ್ಪರ್ಧೆಯಲ್ಲಿ ರಾಷ್ಟ್ರೀಯ ದಾಖಲೆ (2022ರಲ್ಲಿ 18.06 ಮೀ) ಮನ್‌ಪ್ರೀತ್ ಕೌರ್ ಹೆಸರಿನಲ್ಲಿದೆ.

ಹರಿಯಾಣದ ನಿರ್ಭಯ್ ಸಿಂಗ್, ಪುರುಷರ ಡಿಸ್ಕಸ್ ಥ್ರೋ ಸ್ಪರ್ಧೆಯಲ್ಲಿ 54.89 ಮೀ. ದಾಖಲಿಸುವ ಮೂಲಕ, 2022ರಲ್ಲಿ ಅರ್ಜುನ್ ಹೆಸರಿನಲ್ಲಿದ್ದ 53.28 ಮೀ. ದಾಖಲೆಯನ್ನು ಮುರಿದರು.

ಸ್ಥಳೀಯ ಅಥ್ಲೀಟ್ ದಮನೀತ್ ಸಿಂಗ್ ಹ್ಯಾಮರ್ ಥ್ರೋ ಸ್ವರ್ಣ ಗೆಲ್ಲುವ ಹಾದಿಯಲ್ಲಿ 65.82 ಮೀ ಎಸೆತ ದಾಖಲಿಸಿದರು. ಈ ಹಿಂದಿನ ದಾಖಲೆ ಮಹಿಪಾಲ್ ಸಿಂಗ್ ಯಾದವ್ (2022ರಲ್ಲಿ 54.80 ಮೀ.) ಹೆಸರಿನಲ್ಲಿತ್ತು. ಪಂಜಾಬ್‌ನ ಗುರುದೇವ್ ಸಿಂಗ್ ಎರಡನೇ (61.87) ಮತ್ತು ಉತ್ತರ ಪ್ರದೇಶದ ಮುಕುಲ್ (61.61 ಮೀ.) ಮೂರನೇ ಸ್ಥಾನ ಪಡೆದರು.

ಕರಿಷ್ಮಾಗೆ ಬೆಳ್ಳಿ: ಮಹಿಳೆಯರ ಜಾವೆಲಿನ್ ಥ್ರೊ ಸ್ಪರ್ಧೆಯಲ್ಲಿ ಹರಿಯಾಣದ ಜ್ಯೋತಿ (51.55 ಮೀ.) ಸ್ವರ್ಣ ಗೆದ್ದರು. ಕರ್ನಾಟಕದ ಕರಿಷ್ಮಾ ಎಸ್.ಸನಿಲ್ (51.02 ಮೀ .) ಬೆಳ್ಳಿ ಗೆದ್ದರು.

20 ವರ್ಷದೊಳಗಿನವರ ವಿಭಾಗದ ಜಾವೆಲಿನ್‌ನಲ್ಲಿ ಕರ್ನಾಟಕದ ರಮ್ಯಶ್ರೀ ಜೈನ್ (46.37 ಮೀ.) ಬೆಳ್ಳಿ ಗೆದ್ದರು. ಹರಿಯಾಣದ ದೀಪಿಕಾ (49.75 ಮೀ.) ಚಿನ್ನ ಗೆದ್ದರು.

ಸ್ವಿಸ್ ಓಪನ್ ಬ್ಯಾಡ್ಮಿಂಟನ್: ಸಿಂಧು, ಲಕ್ಷ್ಯ ನಿರ್ಗಮನ

ಕ್ವಾರ್ಟರ್‌ಗೆ ಶ್ರೀಕಾಂತ್, ರಾಜಾವತ್


ಬಾಸೆಲ್ (ಸ್ವಿಜರ್ಲೆಂಡ್), (ಪಿಟಿಐ): ಎರಡು ಬಾರಿಯ ಒಲಿಂಪಿಕ್ ಪದಕವಿಜೇತೆ ಪಿ.ವಿ. ಸಿಂಧು ಮತ್ತು ಲಕ್ಷ್ಯ ಸೇನ್ ಅವರು ಸ್ವಿಸ್ ಓಪನ್ ಸೂಪರ್ 300 ಟೂರ್ನಿಯ ಸಿಂಗಲ್ಸ್‌ನಿಂದ ಹೊರಬಿದ್ದರು. ಆದರೆ ಕಿದಂಬಿ ಶ್ರೀಕಾಂತ್, ಪ್ರಿಯಾಂಶು ರಾಜಾವತ್ ಮತ್ತು ಕಿರಣ್ ಜಾರ್ಜ್ ಅವರು ಗುರುವಾರ ತಡರಾತ್ರಿ ಎಂಟರ ಸುತ್ತಿಗೆ ದಾಪುಗಾಲಿಟ್ಟರು.

ಅಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್ಸ್‌ನ ಎರಡನೇ ಸುತ್ತಿನಲ್ಲಿ ನಿರ್ಗಮಿಸಿದ್ದ ಸಿಂಧು, ಈ ಟೂರ್ನಿಯ ಮಹಿಳಾ ಸಿಂಗಲ್ಸ್ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ವಿಶ್ವ ಜೂನಿಯರ್ ಚಾಂಪಿಯನ್, 17 ವರ್ಷದ ತಮೊಕಾ ಮಿಯಾಝಾಕಿ (ಜಪಾನ್) ಅವರಿಗೆ 21–16, 19–21, 16–21 ರಿಂದ ಸೋತರು.

ಲಕ್ಷ್ಯ ಸೇನ್ ಇನ್ನೊಂದು ಪಂದ್ಯದಲ್ಲಿ 17–21, 15–21 ರಲ್ಲಿ ತೈವಾನ್‌ನ ಲೀ ಚಿಯಾ ಹಾವೊ ಅವರಿಗೆ ಕೇವಲ 38 ನಿಮಿಷಗಳಲ್ಲಿ ಶರಣಾದರು.

ಆದರೆ ಮತ್ತೊಂದು ಪಂದ್ಯದಲ್ಲಿ ಶ್ರೀಕಾಂತ್ 21–16, 21–15 ರಿಂದ ಅಗ್ರ ಶ್ರೇಯಾಂಕದ ಲೀ ಝಿ ಜಿಯಾ (ಮಲೇಷ್ಯಾ) ಅವರನ್ನು ನೇರ ಗೇಮ್‌ಗಳಿಂದ ಹಿಮ್ಮೆಟ್ಟಿಸಿದರು. ರಾಜಾವತ್ ಅವರೂ ಪ್ರಿಕ್ವಾರ್ಟರ್‌ನಲ್ಲಿ ಚೀನದ ಲಿ ಲಾ ಷಿ ಅವರನ್ನು 21–14, 21–13 ರಿಂದ ಸೋಲಿಸಲು ಕಷ್ಟಪಡಲಿಲ್ಲ.

ಕಿರಣ್ ಜಾರ್ಜ್ ಮಾತ್ರ 18–21, 22–20, 21–18 ರಿಂದ ಫ್ರಾನ್ಸ್‌ನ ಅಲೆಕ್ಸ್ ಲೇನಿಯರ್ ಅವರನ್ನು ಸೋಲಿಸಲು ಹೋರಾಟ ನಡೆಸಬೇಕಾಯಿತು. ಈ ಪಂದ್ಯ 71 ನಿಮಿಷಗಳವರೆಗೆ ಬೆಳೆಯಿತು.


ಕಿದಂಬಿ ಶ್ರೀಕಾಂತ್

ಎಂಟರ ಘಟ್ಟದ ಪಂದ್ಯಗಳಲ್ಲಿ ಲೀ ಚಿಯಾ–ಹಾವೊ ಅವರನ್ನು, ರಾಜಾವತ್, ಚೀನಾ ತೈಪೆಯ ಚೌ ತಿಯೆನ್ ಚೆನ್ ಅವರನ್ನು ಎದುರಿಸಲಿದ್ದಾರೆ. ಜಾರ್ಜ್ ಅವರಿಗೆ ಡೆನ್ಮಾರ್ಕ್‌ನ ರಾಸ್ಮಸ್ ಗೆಮ್ಕೆ ಎದುರಾಳಿಯಾಗಿದ್ದಾರೆ.

ಟೆಸ್ಟ್: ಧನಂಜಯ, ಮೆಂಡಿಸ್ ಶತಕ

ಸಿಲ್ಹೆಟ್ (ಬಾಂಗ್ಲಾದೇಶ), (ಎಎಫ್‌ಪಿ): ಸಕಾಲದಲ್ಲಿ ನಾಯಕ ಧನಂಜಯ ಡಿ ಸಿಲ್ವ ಮತ್ತು ಕಮಿಂದು ಮೆಂಡಿಸ್ (ತಲಾ 102) ಶತಕಗಳನ್ನು ದಾಖಲಿಸಿ ಶ್ರೀಲಂಕಾ ತಂಡ ಮೊದಲ ಟೆಸ್ಟ್‌ನಲ್ಲಿ 280 ರನ್‌ಗಳ ಉತ್ತಮ ಮೊತ್ತ ಗಳಿಸಲು ನೆರವಾದರು. ನಂತರ ಆ ತಂಡದ ವೇಗಿಗಳು ಬಾಂಗ್ಲಾ ಬ್ಯಾಟ್ಸಮನ್ನರನ್ನು ಕಾಡಿ ತಂಡಕ್ಕೆ ಮೇಲುಗೈ ಒದಗಿಸಿದರು.

ಶುಕ್ರವಾರ ಆಟ ಮುಗಿದಾಗ ಆತಿಥೇಯ ತಂಡ ಮೊದಲ ಇನಿಂಗ್ಸ್‌ನಲ್ಲಿ 3 ವಿಕೆಟ್‌ಗೆ 32 ರನ್ ಗಳಿಸಿ ಪರದಾಡುತ್ತಿದೆ. ಪ್ರವಾಸಿ ತಂಡದ ಮೊತ್ತಕ್ಕಿಂತ ಇನ್ನೂ 248 ರನ್ ಹಿಂದೆಯಿದೆ. ವಿಶ್ವ ಫೆರ್ನಾಂಡೊ 2 ವಿಕೆಟ್ ಪಡೆದರು. ಇದಕ್ಕೆ ಮೊದಲು ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಲಂಕಾ ಆರಂಭದಲ್ಲಿ ಅಲ್ಪಮೊತ್ತಕ್ಕೆ ಕುಸಿಯುವ ಅಪಾಯದಲ್ಲಿತ್ತು.

ಸ್ಕೋರುಗಳು: ಮೊದಲ ಇನಿಂಗ್ಸ್: ಶ್ರೀಲಂಕಾ: 68 ಓವರುಗಳಲ್ಲಿ 280 (ಧನಂಜಯ ಡಿಸಿಲ್ವ 102, ಕಮಿಂದು ಮೆಂಡಿಸ್ 102; ಖಾಲಿದ್ ಅಹ್ಮದ್ 72ಕ್ಕೆ3, ನಹಿದ್ ರಾಣಾ 87ಕ್ಕೆ3); ಬಾಂಗ್ಲಾದೇಶ: 10 ಓವರುಗಳಲ್ಲಿ 3 ವಿಕೆಟ್‌ಗೆ 32 (ವಿಶ್ವ ಫೆರ್ನಾಂಡೊ 9ಕ್ಕೆ2)

ಈ ಸಾಧನೆ ಮಾಡಿದ ಭಾರತದ ಮೊದಲ ಆಟಗಾರ ಎಂಬ ಹೆಗ್ಗಳಿಕೆ

ಡಬ್ಲ್ಯುಟಿಟಿ ಫೀಡರ್ ಪ್ರಶಸ್ತಿ ಗೆದ್ದ ಸತ್ಯನ್

ನವದೆಹಲಿ (ಪಿಟಿಐ): ಅನುಭವಿ ಜಿ.ಸತ್ಯನ್, ಲೆಬನಾನ್‌ನ ರಾಜಧಾನಿ ಬೇರೂತ್‌ನಲ್ಲಿ ನಡೆದ ಡಬ್ಲ್ಯುಟಿಟಿ ಫೀಡರ್ ಸರಣಿಯ ಟೂರ್ನಿಯಲ್ಲಿ ಪುರುಷರ ಸಿಂಗಲ್ಸ್ ಟ್ರೋಫಿ ಗೆದ್ದುಕೊಂಡರು. ಈ ಸಾಧನೆ ಮಾಡಿದ ಭಾರತದ ಮೊತ್ತಮೊದಲ ಆಟಗಾರ ಎನ್ನುವ ಶ್ರೇಯಸ್ಸು ಅವರದಾಯಿತು.

11ನೇ ಶ್ರೇಯಾಂಕ ಪಡೆದಿದ್ದ ಸತ್ಯನ್, ಗುರುವಾರ ರಾತ್ರಿ ನಡೆದ ಅಂತಿಮ ಪಂದ್ಯದಲ್ಲಿ ಸ್ವದೇಶದ ಮಾನವ್ ಠಕ್ಕರ್ ಅವರನ್ನು 3–1 ರಿಂದ (6–11, 11–7, 11–7, 11–4) ಸೋಲಿಸಿದರು.

ಫೈನಲ್‌ಗೇರುವ ಹಾದಿಯಲ್ಲಿ ಅವರು ಐದನೇ ಶ್ರೇಯಾಂಕ ಪಡೆದಿದ್ದ ಸ್ವದೇಶದ ಆಟಗಾರ ಹರ್ಮಿತ್ ದೇಸಾಯಿ ಅವರನ್ನು 15–13, 6–11, 11–8, 13–11 ರಿಂದ ಮಣಿಸಿದ್ದರು. ನಂತರ ಅಗ್ರ ಶ್ರೇಯಾಂಕದ ಚುವಾಂಗ್ ಚಿ ಯುವಾನ್ (ತೈವಾನ್) ಅವರನ್ನು 11–8, 11–13, 11–8, 11–9 ರಿಂದ ಹಿಮ್ಮೆಟ್ಟಿಸಿದರು.


ಭಾರತದ ಆಟಗಾರ ಜಿ.ಸತ್ಯನ್

2021ರ ನಂತರ ಸತ್ಯನ್ ಮೊದಲ ಬಾರಿ ಅಂತರರಾಷ್ಟ್ರೀಯ ರ‍್ಯಾಂಕಿಂಗ್ ಟೂರ್ನಿಯಲ್ಲಿ ಗೆದ್ದಂತಾಗಿದೆ. ಆ ವರ್ಷ ಅವರು ಐಟಿಟಿಎಫ್ ಇಂಟರ್‌ನ್ಯಾಷನಲ್ ಓಪನ್‌ನಲ್ಲಿ ಚಾಂಪಿಯನ್ ಆಗಿದ್ದರು.

60ರ ಷಿಯಾಗೆ ಪ್ರಶಸ್ತಿ: ಚೀನಾದ ಷಿಯಾ ಲಿಯಾನ್ ನಿ ಮಹಿಳಾ ಸಿಂಗಲ್ಸ್ ಪ್ರಶಸ್ತಿಯನ್ನು ಸುಲಭವಾಗಿ ಗೆದ್ದುಕೊಂಡರು. ಉತ್ತಮ ಲಯದಲ್ಲಿದ್ದ ಅವರು ಫೈನಲ್‌ನಲ್ಲಿ 11–9, 11–5, 11–5 ರಿಂದ ಸುಹ್ ಹ್ಯೊ ವಾನ್ ಅವರನ್ನು ಮಣಿಸಿದರು.

ವಿಶೇಷವೆಂದರೆ ನಿ ಅವರ ವಯಸ್ಸು 60. ವೈಲ್ಡ್ ಕಾರ್ಡ್ ಮೂಲಕ ಈ ಟೂರ್ನಿಗೆ ಪ್ರವೇಶ ಪಡೆದಿದ್ದರು. ಕಳೆದ ವರ್ಷ ಯುಟಿಟಿ ಫೀಡರ್ ಹವಿರೋವ್‌ನಲ್ಲಿ ಅವರು ಮೊದಲ ಪ್ರಶಸ್ತಿ ಪಡೆದಿದ್ದರು. ಚೀನಾ ಮೂಲದ ಅವರು ಹಲವು ವರ್ಷಗಳಿಂದ ಲಕ್ಸಂಬರ್ಗ್‌ನಲ್ಲಿ ನೆಲೆಸಿದ್ದಾರೆ.

ಸೆಮಿಫೈನಲ್‌ನಲ್ಲಿ ಚೆನ್ ಝು ಯು ಅವರನ್ನು 11–7, 11–9, 11–4 ರಿಂದ ಹಿಮ್ಮೆಟ್ಟಿಸಿದ್ದರು.

ಪುರುಷರ ಡಬಲ್ಸ್‌ನಲ್ಲಿ ಭಾರತದ ಮಾನವ್ ಠಕ್ಕರ್– ಮನುಷ್ ಉತ್ಪಲ್‌ಭಾಯ್ ಷಾ ಅವರು ಎರಡನೇ ಸ್ಥಾನ ಪಡೆದರು. ಆ್ಯಂಡಿ ಪೆರೀರಾ–ಯೋರ್ಗೆ ಕಾಂಪೋಸ್ ಅವರು 5–11, 11–7, 13–11, 14–12 ರಿಂದ ಭಾರತದ ಜೋಡಿಯ ಮೇಲೆ ಜಯಗಳಿಸಿ, ಡಬ್ಲ್ಯುಟಿಟಿಯಲ್ಲಿ ಯಶಸ್ಸು ಗಳಿಸಿದ ಚೀನಾದ ಮೊದಲ ಡಬಲ್ಸ್ ಜೋಡಿ ಎನಿಸಿದರು.

ಮಿಕ್ಸೆಡ್ ಡಬಲ್ಸ್‌ನಲ್ಲಿ ದಿಯಾ ಚಿತಾಳೆ–ಮಾನುಷ್ ಶಾ 3–1 ರಿಂದ (11–6, 10–12, 11–6, 11–6) ಮಾನವ್– ಅರ್ಚನಾ ಕಾಮತ್ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದುಕೊಂಡರು.

ಪ್ರಜಾವಾಣಿ ಶನಿವಾರ • ಮಾರ್ಚ್ 23, 2024

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331





ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

WEEKEND CORNER

ಕ್ಲಾಸಿಫೈಡ್ಸ್

REAL ESTATE SELLING

Sites

Anjanapura

ANJANAPURA 7TH Block Site Sale, 40x60 South, Near 80 feet Road, Rs. 7700/- CALL: 9845286583

SALE BDA Anjanapura 5th G Block 30x40 South Facing 95 lakh also 40x60 west facing 9th Block Contact: 9620041313/ 9945373839

Banashankari

BANASHANKARI 6TH STAGE- Surrounding BDA- AVAILABLE/ WANTED 20x30 30x40 40x60, 50x80 SITES, BRINDAVAN ASSOCIATES- 9980863245

BSK 6TH STAGE 40x60 North/ East 7th Block 30x40 West 3rd Block SALE. 9731410616 9901358534

BANASHANKARI 6TH Stage, 9th Block, 30x40, West facing Rs.98 lacs, 40x60, North facing, 1.98Crores. Contact: 9845259332

SALE BSK 6th stage 4th H Block 30x40 west Facing 95 lakh Also 40x60 Facing 6th Block 1.72Cr Negotiable all owners site 9945373839/ 9620041313

Bannerghatta Road

AKSHAYA NAGAR (AKSHAYA GARDEN) PRIME LOCATION RESIDENTIAL 40x60 EAST FACING SITE SALE, 9500/- 9845069739, 9740183922

Devanahalli

30X40 30X50 DC Converted CUDA Approved Plots Sale Chikkaballapur, 30 Minutes From Airport: 9945569909 7676900174

HRBR Layout

ARKAVATY LAYOUT BDASITE SALE 30X40 19TH BLOCK 30 FEET ROAD RS 12500 SFT 9886633233

Kanakapura Road

SALE NARAYANA Nagar 1st Block 40x60 South Facing 500 metre Metro station Kanakapura Road. Contact 9945373839/ 9620041313

Kempegowda Layout

KEMPEGOWDA LAYOUT, COMMERCIAL BDA SITE FOR SALE 20X30, 30X40, 40X60, 50X80 CONTACT KUMAR: 9945119449

SEMI_COMMERCIAL SITE Sale, Nadabrabhu KEMPEGOWDA LAYOUT 8th Block 'D' Sector, 55X100, W/F BDA, NOC, NNA, Conversion land, Leagal Documents, 5250/-sqft. Contact: 9686469799

NADAPRABHU KEMPEGOWDA LAYOUT 9th Block 'A' Sector, 40x60 East facing, Rs. 5350/- sqft. Contact: 9686469799

Nagarabhavi

"NAGARABHAVI BDA 50x80 Commercial & 40x60, 30x40 Residential Site 40 feet Road, Good Location. 9845862388"

Nelamangala

"NELAMANGALA RASHI Developers 30x50 site for sale close to D.Mart Tumkur highway please Contact: 9845268611"

Vijayanagar

VIJAYANAGAR M.C Layout West Residential 40×60 Commercial 60×92 East 60×90 South Facing Sale 9448273220/ 8660075308

Vishweshwariah Layout

"30X40 NORTH-FACING BDA Site No.25,sale 40ft Road (Vishveshwaraiah Layout) BEL-Layout attached near Magadi Road, Good location. 7795531787"



30X40 BDA 4 BHK Triplex Fully Furnished House for SALE at Sir M Visveswaraya layout 1st block Call : 8147115323

20X40 ULLALA Main Road & 30x40 Janabarathi East 7500/- 1st Block 40ft Road SMV Layout North 11250/- BDA Katha: 8550003509

"40X60 ALLOTTEE Site 100ft Road Attach, 6th Block Vishveshwaraiah Layout, Beautiful & Developed Area. 9379776189"

30X40 WEST facing BDA site for sale 7th Block, Vishveshwaraiah Layout, Good location. 9845500019/ 7019314962"

AVAILABLE 20X30 Vishveshwariah Layout 6th Block BDA Site For Sale Rate. 47 Lakhs Contact: 9844603127

"40X60 BDA East facing Site sale Vishveshwaraiah Layout Behind KLE Law College 60ft Road. 7795531787"

40X60 VISHVESHWARAIAH Layout 7th Block 60ft Road And 40x60 Site Sale 5th Block Near Udupi Hotel: 8861417649

BDA VISHWESHWARAIAH Layout 8th Block 20x30 West Facing, South/ West Corner D Group 20x30:- 9019962007

Mysore Road

MYSORE ROAD PROPERTY BUYING AND SELLING FLAT, SITE HOUSE AND LAND CONTACT LOKESH 9886201690.

HRBR Layout

SALE: HRBR- Near JVVihar, 8-BHK, A-Khata, 24 Hour's Cauvery Water, Contact- 8971767744

Padmanabha Nagar

PROPERTY FOR Sale Chikkalasandra Doctor Layout Near Brigade Komarla 2400 Sqft West Facing Contact: 8147734144

"NAGARABHAVI 30X40 West facing 5BHK Newly Duplex House for Sale with Lift & Complete All Fittings. Contact: 9901405391"

J P Nagar

SALE OVER 10 YEAR, SEMI-FURNISHED 2 BHK FLAT 1080 SQFT, WITH ROOFED CAR-PARKING JPNAGAR 5TH PHASE: 9986763007

Chikkaballapura

JP DEVELOPERS Offers Fully Developed E Khata Plots for Sale, ready for construction. CUDA Approved, off DC Office Road, Chickballapur. Mob: 9845522622.

House

Basavanagudi

BDA 30X65 Old House West Face 30 Feet Road Hanumatha Nagar Basavanagudi Good Location: 8050705145

J P Nagar

J.P.NAGAR 6TH PHASE 22x30 NORTH 4 BEDROOM TRIPLEX HOUSE SALE 1,40,00,000/- NEGOTIABLE 9845069739, 9740183922, 9380613718

Ramamurthy Nagar

BRAND NEW Duplex House For SALE 20x30.G+3, Near Rammurthynagar Kalkere park, Price.80Lakh. Contact: 9110499696.

Cunningham Road

QUEENS ROAD, 2031sqft southwest corner property with 21squares old building for sale. 5.4cr. Contact 6363161053. Brokers excuse.

NR Colony

FOR SALE NR Colony Duplex 3900 sq ft N/F House on 17x60 W/F Site With Lift, Car park, Borewell. 4.10 Cr (Negotiable). Contact : 9482119688

Nagarabhavi

"BRAND-NEW 4BHK Triplex House GF_1.shop, 2car_parking, fully_furnished,all amenities,Sale, RHCS_Layout Annapoorneshwari-Nagar, N/E.Corner, Both'Side 40'Feet-Road. 9845463951"

Flat

Hanumanthnagar

SALE 3BHK FURNISHED FLAT Rs. 1.30 crore, Ashok Nagar12.9389N, 77.5610E Rental income 32K 9945455503

Yelahanka

KHB YELAHANKA Vth Phase New Town, S-MIG-B Second floor Flat available for Sale. Price 18 Lakhs. Negotiable. Brokers Excuse. Mob: 9448484697.

Uttarahalli

POORNAPRAGNA LAYOUT Sale 3BHK Deluxe Flats 2250sft 2Carpark & 1850sft 1_Carpark. Lift.& Generator Back-up, All Amenities. Call: 9620249988.

Residential/ Commercial

HRBR Layout

HOUSE SALE 600 SFT NEAR EMPIRE HOTEL GROUND 1BHK, FIRST AND SECOND EACH 2 BHK RENTAL INCOME 60,000 RUPEES 1.35 CRORES:9886633233

Commercial Building

Nagarabhavi

"NAGARABHAVI BDA 30x40 West facing Newly constructed G+4 Commercial Building Rental income 1.60 Lakhs, for sale. 9901405391"

Commercial Land

Banashankari

"40X60 COMMERCIAL property for sale Hosakerehalli 100 feet Ring Road Banashankari 3rd Stage. 9845500019/ 7019314962"

Commerical

Mysore

164.05 SQ mts East facing Corner Commercial plot for sale at prime location call 9980057693

Vijayanagar

500 SQFT Commercial office Space For Sale, Opposite to Vijayanagar Metro Station Contact: 9945569909 7676900174

Industrial & Factory

Tumkur

KIADB TUMKUR Vasanthanarasapura. 2-Acres Corner 18 meter Road, Both Side. 3.50 Cr. A J Pandian: 9379199555. Brokers Excuse

REAL ESTATE BUYING

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha, JP.Nagar 8 & 9 phase immediate settlement. genuine Sellers Contact: 9902038118, 9449060605

WANTED 20X30 or 30x40 Site Anjanapura BDA Layout any Block & any Facing Contact: 9980978986

WANTED BDA SITES ANY MEASUREMENT, Anjanapura, Banashankari 6th Stage JP Nagar 8th & 9th Phase, Narayan Nagar, BCC & BCMC Layout, Vishweshwaraiah Layout. CONTACT: 9845298419

Kanakapura Road

WANTED SITE: 40x60, 30x40 NarayanaNagar, BCMC Layout, Anjanapura BDA, Banashankari 6th.Stage, Gubblala, Agents Excuse. 6363726250.

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

R T Nagar

WANTED SITES in R.T. Nagar, Sultanpalya, Kanakanagar in and around. Genuine sellers Contact: 9845575731.

Vishweshwariah Layout

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact: 9844533371, 9341733480

BDA-SITES WANTED Vishweshwaraiah Layout, Banashankari 6th Stage, 30x40, 40x60, 50x80 Immediate Settlement Contact: 98455-55666

RENTAL PROPERTIES

Accommodation Available

Flats

MYSORE ROAD AVAILABLE LEASE APATMENT FLAT 3BHK INTERIOR DONE VEHICLE PARKING RS. TWENTYNINE LAKHS: 9738223432

House

COX TOWN Rent 3 & 4 BHK Italian Kitchen, Wardrobe, posh, Lift, water. Charles Campbell Road. 9686897004.

Industrial And Factory

PEENYA, NADAKERAPPA Ind`Estate, 6000sqft (3000+3000) 2floors RCC Industrial Buildings For Rent. 15ft`Height Useful`For`all Industries: 8880004847, 9448785764.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PUBLIC NOTICE

COURT NOTICE

PROCLAMATION REQUIRING ATTENDANCE OF DEFENDANT
(Order 5, Rule 20 of the Code of Civil Procedure)

IN THE COURT OF MS. PURVA SAREEN, LD ADJ-01 (SOUTH), SAKET COURTS, NEW DELHI

COL. SURESH CHAND (RETIRED)
VS
KOTAK MAHINDRA BANK

CS DJ 348/2021

TO,
DEFENDANT NO 4.
NEENA DAYAL
PALM FOREST APARTMENT FLAT NO.22A VARTHUR ROAD SIDDARPUR WHITEFIEL BANGALORE KARNATAKA

DEFENDANT NO 6.
NEERAJ ANEJA
INDIRANAGAR BRANCH, BANGALORE, KARNATKA

Whereas you are intentionally evading service of summons it is hereby notified that if you shall not defend the case on 03.04.2024, the day fixed for the final disposal. It will be heard and determined ex-parte.

Given under my hand and the seal of the Court, this of 20.02.2024

JUDGE
Additional District Judge-01
South District, Saket Courts, New Delhi

Seal

MORE Classifieds IN MAIN ISSUE

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರಜಾವಾಣಿ
ಪ್ರಜಾ ಪ್ಲಸ್+
ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

ಇಂದಿನಿಂದ ನಗರದಲ್ಲಿ ಡಾನ್ಸ್ ಜಾತ್ರೆ




A BRAND OF SSKL SAI SILKS (KALAMANDIR) LIMITED
ಯುಗಾದಿ ಸಂಗ್ರಹ
ನೇಕಾರರ ದರದಲ್ಲಿ
ಹೊಸ ಸಂವತ್ಸರ
ಹೊಸ ಪ್ರಾರಂಭ
ಒರಿಜಿನಲ್
ಕಾಂಚೀಪುರಂ
ಬ್ರಾಂಡ್‌ನೊಂದಿಗೆ
WE PROMISE PQR • PRICE • QUALITY • RANGE
KANCHEEPURAM ORIGINAL BRAND
ಕಾಂಚೀಪುರಂ
ವರಮಹಾಲಕ್ಷ್ಮಿ ಸಿಲ್ಕ್‌ಗಳು


A BRAND OF SSKL SAI SILKS (KALAMANDIR) LIMITED
ಯುಗಾದಿ ಹಬ್ಬದ ಕೊಡುಗೆಗಳು
UPTO
30%
OFF
ರೇಷ್ಮೆ ಸೀರೆಗಳು, ಫ್ಯಾನ್ಸಿ ಸೀರೆಗಳು, ಡ್ರೆಸ್ ಮೆಟೀರಿಯಲ್ಸ್,
ಮೆನ್ಸ್‌ವೇರ್ ಮತ್ತು ಕಿಡ್ಸ್‌ವೇರ್‌ಗಳ ಮೇಲೆ
HDFC BANK
GET EXTRA 10% OFF
WITH HDFC BANK CREDIT CARD EMI / DEBIT CARD EMI
*T&C Apply
SCAN AND VISIT OUR WEBSITE FOR STORE LOCATIONS.
ಕಮ್ಮನಹಳ್ಳಿ : 091089 36060, ಮಾರತ್‌ಹಳ್ಳಿ : 091489 46060
ಈ ಕೊಡುಗೆಗಳು ಮಾರತ್‌ಹಳ್ಳಿ ಮತ್ತು ಕಮ್ಮನಹಳ್ಳಿ ಸ್ಟೋರ್ಸ್‌ನಲ್ಲಿ ಮಾತ್ರ
kalamandir Kalamandirfashions
ಕಳಾಮಂದಿರ್®
Symbol Of South

ಹೋಳಿ ಬಣ್ಣ ಕಾಳಜಿ ಬೇಕಣ್ಣ



ಹೋಳಿ ಆಚರಣೆ ಮಾಡುವಾಗ ಚರ್ಮ ಮತ್ತು ಕೂದಲಿನ ಆರೋಗ್ಯದ ಕಡೆಗೂ ಕಾಳಜಿವಹಿಸಬೇಕು. ಈ ಬಗ್ಗೆ ಒಂದಷ್ಟು ಸಲಹೆ ನೀಡಿದ್ದಾರೆ ಬೆಂಗಳೂರಿನ ಚರ್ಮರೋಗ ತಜ್ಞೆ ಡಾ. ದೀಪ್ತಿ ಟಿ.ಎನ್.

ಪ್ರತಿಹಬ್ಬಕ್ಕೂ ಈ ನೆಲದಲ್ಲಿ ತನ್ನದೇ ಆದ ಇತಿಹಾಸ, ಮಹತ್ವವಿದೆ. ಈ ಪೈಕಿ ಯಾವುದೇ ಜಾತಿ, ಧರ್ಮದ ಹಂಗಿಲ್ಲದೆ ವಿವಿಧ ರೀತಿಯಲ್ಲಿ ಆಚರಿಸುವ ಹೋಳಿ ಹಬ್ಬಕ್ಕೆ ವಿಶೇಷ ಪ್ರಾಶಸ್ತ್ಯವಿದೆ.

ಹೋಳಿ ಎಂದರೆ ಬಣ್ಣದೋಕುಳಿಯ ಹಬ್ಬ. ರಂಗುರಂಗಿನ ಬಣ್ಣ ಎರಚುವುದರೊಂದಿಗೆ ಸ್ನೇಹಿತರು, ಬಂಧು-ಬಳಗದವರು, ನೆರೆಹೊರೆಯವರೊಂದಿಗೆ ಪ್ರೀತಿ ಬೆಸೆಯುವ ಹಬ್ಬ. ಹಬ್ಬದ ಸಂಭ್ರಮ ಒಂದೆಡೆಯಾದರೆ ಮತ್ತೊಂದೆಡೆ ಹೋಳಿಯಲ್ಲಿ ಬಳಕೆಯಾಗುವ ಬಣ್ಣಗಳಿಂದ ಚರ್ಮಕ್ಕೆ ಹಾನಿಯಾಗುವ ಸಾಧ್ಯತೆ ಇರುತ್ತದೆ. ಆದರೆ ಇದನ್ನು ಲೆಕ್ಕಿಸದೆ ಅನೇಕ ಮಂದಿ ಹೋಳಿ ಆಚರಿಸಲು ಮುಂದಾಗುತ್ತಾರೆ.


ಹೋಳಿ ಆಚರಣೆಯಲ್ಲಿ ಬಳಸಲಾಗುವ ಸಿಂಥೆಟಿಕ್ ಬಣ್ಣಗಳು ಕೂದಲಿನ ಬುಡದಲ್ಲಿ, ಉಗುರಿನ ಕೆಳಗೆ ಅಥವಾ ಕಿವಿ ಹಿಂಭಾಗದಲ್ಲಿ ಉಳಿದು ಚರ್ಮಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಉಂಟುಮಾಡುತ್ತದೆ. ಹೀಗಾಗಿ ನೈಸರ್ಗಿಕ ಬಣ್ಣಗಳಿಂದ ಹೋಳಿ ಹಬ್ಬದ ಆಚರಣೆ ಮಾಡುವುದು ಸೂಕ್ತ. ನೈಸರ್ಗಿಕ ಬಣ್ಣಗಳನ್ನು ಸ್ವಚ್ಛಗೊಳಿಸುವುದು ಸುಲಭ.

ಹೋಳಿ ಹಬ್ಬಕ್ಕೆ ಬಳಸಲಾಗುವ ಬಣ್ಣಗಳಿಂದ ಆರೋಗ್ಯದ ಮೇಲಾಗುವ ಪರಿಣಾಮಗಳು: ಬಣ್ಣಗಳಲ್ಲಿ ಬಳಸಲಾದ ರಾಸಾಯನಿಕ ಅಂಶಗಳಿಂದ ಚರ್ಮಕ್ಕೆ ಸಂಬಂಧಿಸಿದ ಅಲರ್ಜಿ, ತುರಿಕೆ, ಸುಟ್ಟಂತಹ ಅನುಭವಗಳು ಕಂಡುಬರುತ್ತವೆ. ಕೆಲವರಿಗೆ ಚರ್ಮ ಕೆಂಪಾಗಾಗುವ ಸಾಧ್ಯತೆಯೂ ಇರುತ್ತದೆ.

ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳು ಇಲ್ಲಿವೆ:

- ತ್ವಚೆ, ಕೈ ಕಾಲುಗಳಿಗೆ ಅಗತ್ಯವಿರುವಷ್ಟು ಮಾಯಿಶ್ಚರೈಸರ್ ಮತ್ತು ಸನ್‌ಸ್ಕ್ರೀನ್ ಬಳಸಿ. ಕೂದಲಿಗೆ ಎಣ್ಣೆಯನ್ನು ಹಚ್ಚಿ. ಆದರೆ ಅತಿಯಾಗಿ ಬಳಸದಿರುವುದು ಉತ್ತಮ.
- ಕೈ ಕಾಲಿನ ಉಗುರುಗಳನ್ನು ಸರಿಯಾಗಿ ಟ್ರಿಮ್ ಮಾಡಿ. ಈ ಮೂಲಕವೂ ಉಗುರುಗಳ ಕೆಳಗೆ ಬಣ್ಣ ಶೇಖರಣೆಯಾಗುವುದನ್ನು ತಪ್ಪಿಸಬಹುದು.
- ತುಂಬು ತೋಳಿರುವ ಬಟ್ಟೆಯನ್ನು ಧರಿಸಿ.
- ಕೋಮಲವಾದ ತುಟಿಗಳಿಗೆ ಲಿಪ್ ಬಾಮ್/ ಯಾವುದಾದರೂ ಪೆಟ್ರೋಲಿಯಂ ಜೆಲ್ಲಿಗಳನ್ನು ಹಚ್ಚುವುದು ಒಳಿತು.
- ಬಣ್ಣ ಎರಚುವ ವೇಳೆ ಮಹಿಳೆಯರು ನಿಮ್ಮ ಕೂದಲನ್ನು ಮೇಲೆತ್ತಿ ಕಟ್ಟುವುದು ಒಳಿತು.
- ಹೋಳಿ ಆಚರಣೆಯ ಮುಂಚಿನ ಐದು ದಿನಗಳಲ್ಲಿ ಅಥವಾ ಆಚರಣೆಯ ನಂತರದ ಐದು ದಿನಗಳಲ್ಲಿ ಚರ್ಮಕ್ಕೆ ಸಂಬಂಧಿಸಿದ ಯಾವುದೇ ರೀತಿಯ ಥ್ರೆಡಿಂಗ್, ಬ್ಲೀಚಿಂಗ್, ಲೇಸರ್ ಚಿಕಿತ್ಸೆ, ವಾಕ್ಸಿಂಗ್‌ಗಳನ್ನು ಮಾಡಿಸದಿರುವುದು ಉತ್ತಮ.

ಸಾವಯವ ಬಣ್ಣಗಳ ಬಳಕೆ ಹೆಚ್ಚಲಿ: ಸಿಂಥೆಟಿಕ್ ಬಣ್ಣಗಳಿಗೆ ಪರ್ಯಾಯವಾಗಿ ಸಾವಯವ ಬಣ್ಣಗಳನ್ನು ಬಳಸುವುದು ಸುರಕ್ಷಿತ. ಚರ್ಮರೋಗ ಹೊಂದಿರುವವರು ಯಾವುದೇ ರೀತಿಯ ಬಣ್ಣದ ಬಳಕೆ ಮಾಡದಿರುವುದು ಸೂಕ್ತ. ಹೋಳಿ ಆಚರಣೆಯ ನಂತರ ಆದಷ್ಟು ಬೇಗನೆ ಚರ್ಮವನ್ನು ನೀರಿನಿಂದ ಸ್ವಚ್ಛಗೊಳಿಸುವುದು ಅಗತ್ಯ. ಈ ವೇಳೆ ಚರ್ಮವನ್ನು ಉಜ್ಜುವುದು ಅಥವಾ ಅತಿಯಾದ ಬಿಸಿನೀರಿನಿಂದ ತೊಳೆಯುವುದನ್ನು ಮಾಡಬೇಡಿ. ಹೋಳಿ ನಂತರದ ಎರಡು ದಿನಗಳು ಯಾವುದೇ ರೀತಿಯ ಚರ್ಮದ ಆರೈಕೆ ಚಟುವಟಿಕೆಗಳನ್ನು ಮಾಡಲೂ ಹೋಗಬೇಡಿ.


ಚಿತ್ರ: ಪಿ.ರಂಜು

ಇಂದು ಉಷಾ ಉತ್ತುಪ್ ಸಂಗೀತ ಸಂಜೆ



ಗರುಡಾ ಮಾಲ್ ತನ್ನ 18ನೇ ವರ್ಷಾಚರಣೆಯ ನೆನಪಿಗೆ ಶನಿವಾರ (ಮಾರ್ಚ್ 23) ಸಂಜೆ 6 ಗಂಟೆಗೆ ಗಾಯಕಿ ಉಷಾ ಉತ್ತುಪ್ ಅವರ ಸಂಗೀತ ಸಂಜೆ ಹಮ್ಮಿಕೊಂಡಿದೆ.

ಗರುಡಾ ಮಾಲ್ ಬೆಂಗಳೂರಿನ ಅತ್ಯಂತ ಹಳೆಯ ಮಾಲ್‌ಗಳಲ್ಲಿ ಒಂದಾಗಿದೆ. ಶಾಪಿಂಗ್, ಮನರಂಜನೆ ಪರಿಕಲ್ಪನೆಯಡಿ ಈ ಸುಮಧುರ ಗೀತೆಗಳ ಗಾಯನ ಏರ್ಪಡಿಸಿದ್ದು, 18 ವರ್ಷಗಳ ಈ ಮಹತ್ವದ ಮೈಲಿಗಲ್ಲು ಸಂಭ್ರಮವನ್ನು ಸ್ಮರಣೀಯಗೊಳಿಸಲು ಗರುಡಾ ಮಾಲ್ ಸನ್ನದ್ಧವಾಗಿದೆ.

ಉಷಾ ಉತ್ತುಪ್ ಅವರು ಸಂಗೀತ ಸಂಭ್ರಮದ ಕೇಂದ್ರ ಬಿಂದುವಾಗಿದ್ದು, 76ನೇ ವಯಸ್ಸಿನಲ್ಲೂ ದೇಶದ ಗಮನ ಸೆಳೆಯುವ ಗಾಯಕಿಯಾಗಿ ಗುರುತಿಸಿಕೊಂಡಿದ್ದಾರೆ.

ಡಾನ್ಸ್ ಜಾತ್ರೆ ಇಂದಿನಿಂದ

ಶಾಂಭವಿ ನೃತ್ಯ ಶಾಲೆಯು 11ನೇ ವರ್ಷದ ಡಾನ್ಸ್ ಜಾತ್ರೆಯನ್ನು ಇದೇ ಮಾರ್ಚ್ 23 ಹಾಗೂ 24 ರಂದು ಹಮ್ಮಿಕೊಂಡಿದೆ.

ಈ ಎರಡು ದಿನಗಳ ಡಾನ್ಸ್ ಜಾತ್ರೆಯಲ್ಲಿ ಹೆಸರಾಂತ ನೃತ್ಯ ಕಲಾವಿದರಿಂದ ಪ್ರದರ್ಶನಗಳು, ಕಾರ್ಯಾಗಾರಗಳು, ಏಕವ್ಯಕ್ತಿ, ದ್ವಂದ್ವ ಮತ್ತು ಗುಂಪು ನೃತ್ಯ ಪ್ರದರ್ಶನಗಳು ನಡೆಯಲಿವೆ. ಅದರಲ್ಲಿ ಶಾಸ್ತ್ರೀಯ, ಜನಪದ, ಕಾಂಟೇಂಪರರಿ, ಕ್ರಿಯೇಟಿವ್ ನೃತ್ಯ ಪ್ರದರ್ಶನಗಳು ಇರಲಿವೆ.

23ರಂದು ಸಂಜೆ 6ಕ್ಕೆ- ಉದ್ಘಾಟನೆ: ಕಲಾಕ್ಷಿತಿ ನಿರ್ದೇಶಕ ಡಾ.ಎಂ.ಆರ್.ಕೃಷ್ಣಮೂರ್ತಿ. ಸುಧೀರ್‌ರಾವ್ ಮತ್ತು ತಂಡದಿಂದ ಕೂಚಿಪುಡಿ ನೃತ್ಯಪ್ರದರ್ಶನ. **ಭರತನಾಟ್ಯ:** ನಿರೂಪಮಾ ರಾಜೇಂದ್ರ ಮತ್ತು ತಂಡ. ಕಥಕ್: ಸಂಜುಕ್ತ ಸಿನ್ಹ ಮತ್ತು ತಂಡ.

24ರಂದು ಸಮಾರೋಪ;ಅತಿಥಿ: ನಿರ್ಮಲಾ ಎಲಿಗಾರ್. ಹಿರಿಯ ನೃತ್ಯ ವಿಭಾಗದಲ್ಲಿ ವಿಜೇತರಿಂದ ನೃತ್ಯ ಪ್ರದರ್ಶನ. ಕೂಚಿಪುಡಿ: ಶಾಂಭವಿ ನೃತ್ಯ ಶಾಲೆ, ಭರಟನಾಟ್ಯ: ಶೀಲಾ ಉನ್ನಿಕೃಷ್ಣನ್ ಮತ್ತು ತಂಡ.

23 ರಂದು 10ಕ್ಕೆಗುಂಪು ನೃತ್ಯ ಸ್ಪರ್ಧೆ, 24ರಂದು ಬೆಳಿಗ್ಗೆ 10ಕ್ಕೆ ಏಕವ್ಯಕ್ತಿ ನೃತ್ಯ ಸ್ಪರ್ಧೆಗಳು ನಡೆಯಲಿದೆ. ಪ್ರವೇಶ ಉಚಿತ.

ಕಾರ್ಯಕ್ರಮ ನಡೆಯುವ ಸ್ಥಳ: ಶಂಕರ ಫೌಂಡೇಷನ್, ಕನಕಪುರ ರಸ್ತೆ.


ವೈಜಯಂತಿ ಕಾಶಿ









ರಂಜಾನ್ ಪವಿತ್ರಮಾಸದಲ್ಲಿ ಉಪವಾಸದಷ್ಟೇ ಮಹತ್ವ, ಸಂಜೆಯ ಸಂಭ್ರಮಕ್ಕೂ ಇದೆ. ಸಹಬಾಳ್ವೆ ಎನ್ನುವುದು, ಕೂಡಿ ಬಾಳೋಣ, ಕೂಡಿ ಉಣ್ಣೋಣ ಎಂಬ ಮಾತಿನಲ್ಲಿ ಸಾಕಾರವಾಗುತ್ತದೆ. ಇಡೀದಿನದ ಉಪವಾಸ, ಸಂಜೆಯ ಪ್ರಾರ್ಥನೆ, ಖರ್ಜೂರದೊಂದಿಗೆ ಉಪವಾಸ ಮುರಿಯುವ ವ್ರತಾಚರಣೆ ಒಂದು ಕಡೆ ಭಕ್ತಿ ಶ್ರದ್ಧೆಯಿಂದ ನಡೆಯುತ್ತದೆ. ಇನ್ನೊಂದು ಕಡೆ ಉದ್ದಾನುದ್ದ ರಸ್ತೆಯಲ್ಲಿ ಹುರಿದ ಮಾಂಸ, ಕರಿದ ಮಾಂಸ, ಹೊಟ್ಟೆಗೆ ಹಿತವೆನಿಸುವ ತಂಪು ಪಾನೀಯ, ಬದುಕೆಲ್ಲ ಸಿಹಿಯಾಗಲಿ ಎಂಬಂತೆ ಫಿರ್ನಿ, ಬದುಕು ಮಿದುವಾಗಲಿ ಎಂಬಂಥ ಶಾಹಿ ಟುಕಡ್‌ಗಳು ಎಲ್ಲ ತಿಂಡಿಪೋತರನ್ನೂ ಕೈಬೀಸಿ ಕರೆಯುತ್ತವೆ. ಆಹಾರ ಉತ್ಸವದಂತೆ ಕಾಣುವ ಈ ಸಂಜೆಗಳು, ಸಹಬಾಳ್ವೆಯ ಸವಿಯನ್ನೂ ಉಣಿಸುತ್ತವೆ. ಬೆಂಗಳೂರಿನ ಕೆ.ಆರ್.ಮಾರುಕಟ್ಟೆಯಲ್ಲಿ ಹಬ್ಬದ ಸಂಭ್ರಮವನ್ನೂ, ಕೋರಮಂಗಲದಲ್ಲಿ ಹಬ್ಬದೂಟದ ಸಡಗರವನ್ನು ಪ್ರಜಾವಾಣಿಯ ಫೋಟೊ ಜರ್ನಲಿಸ್ಟ್ ಎಂ.ಎಸ್. ಮಂಜುನಾಥ ಹಾಗೂ ಕಿಶೋರ ಕುಮಾರ್ ಬೋಳಾರ್ ಸೆರೆ ಹಿಡಿದಿದ್ದಾರೆ.







